ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪಂಜಾಬ್ ವಿರುದ್ಧ ಆರ್‌ಸಿಬಿಗೆ ಗೆಲುವು

ಪಂಜಾಬ್ ಕಿಂಗ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಏಳು ವಿಕೆಟ್ ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಮೊದಲು ಆರ್‌ಸಿಬಿ ಬೌಲರ್‌ಗಳ ಸಾಂಘಿಕ ದಾಳಿಗೆ ಕುಸಿದ ಪಂಜಾಬ್ ಆರು ವಿಕೆಟ್ ನಷ್ಟಕ್ಕೆ 157 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಬಳಿಕ ವಿರಾಟ್ ಕೊಹ್ಲಿ (73*) ಹಾಗೂ ದೇವದತ್ತ ಪಡಿಕ್ಕಲ್ ಆಕರ್ಷಕ ಅರ್ಧಶತಕಗಳ (61) ನೆರವಿನಿಂದ ಆರ್‌ಸಿಬಿ 18.5 ಓವರ್‌ಗಳಲ್ಲಿ ಮೂರು ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

ಸೊಂಪಾದ ಪುಟಗಳು

ಇತಿಹಾಸ ಮರೆಯದ ಕೌತುಕದ ಕ್ಷಣಗಳು...

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ವಿಮಾನಯಾನದಲ್ಲಿ ಘನತೆ ಕಾಯ್ದುಕೊಳ್ಳದಿದ್ದರೆ ಹೇಗೆ?!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನೀವು ಅದೆಷ್ಟೇ ಬಾರಿ ಹಿಂದಕ್ಕೆ ಹೋಗಿ, ಆಗಿ ಹೋದ ಘಟನೆಯನ್ನು ಕೆದಕಿದರೂ ಅಲ್ಲಿ ಯಾವ ಹೊಸ ಸಂಗತಿಗಳನ್ನೂ ಕಾಣಲು ಸಾಧ್ಯವಿಲ್ಲ. ಅಲ್ಲಿ ಇದ್ದಷ್ಟು ಹೊತ್ತು ವ್ಯರ್ಥ ಮತ್ತು ನಿರರ್ಥಕವೇ. ನಮಗೆ ಬೇಕಾಗಿದ್ದು ಅಗೆದುಬಿಟ್ಟ ಜಾಗದಲ್ಲಿ ಬೇರೇನೂ ಸಿಗುವುದಿಲ್ಲ.

ವಕ್ರತುಂಡೋಕ್ತಿ

ನಿಮ್ಮ ಮನೆ ನಾಯಿ ತುಂಬಾ ದಪ್ಪವಾಗಿದ್ದರೆ, ನೀವು ದಿನವೂ ವಾಕ್ ಮಾಡುತ್ತಿಲ್ಲ ಎಂದರ್ಥ.

ಎಸ್‌ಎಸ್‌ಸಿ: ಆಧಾರ್ ದೃಢೀಕರಣಕ್ಕೆ ಕ್ರಮ

ದೆಹಲಿ: ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ಅಭ್ಯರ್ಥಿಗಳ ಗುರುತು ಪರಿಶೀಲಿಸಲು ಸ್ವಯಂಪ್ರೇರಿತ ಆಧಾರ್ ಆಧಾರಿತ ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಲು ನಿರ್ಧರಿಸಿದೆ. ಮುಂದಿನ ತಿಂಗಳಿಂದ ನಡೆಯಲಿರುವ ನೇಮಕಾತಿ ಪರೀಕ್ಷೆಗಳಿಗೆ ಈ ಹೊಸ ಕ್ರಮಗಳು ಜಾರಿಗೆ ಬರಲಿವೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

16 ಉಗ್ರರ ಸೆರೆ, ಅಪಾರ ಶಸ್ತ್ರ ವಶ

ಇಂಫಾಲ: ಮಣಿಪುರದಲ್ಲಿ ಕಳೆದೆರಡು ದಿನಗಳಲ್ಲಿ ವಿವಿಧ ನಿಷೇಧಿತ ಸಂಘಟನೆಗಳ ಒಟ್ಟು 16 ಉಗ್ರರನ್ನು ಬಂಧಿಸಿ, ಅಪಾರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರಲ್ಲಿ ನಿಷೇಧಿತ ಯುನೈಟೆಡ್ ನ್ಯಾಷನಲ್ ಲಿಬರೇಶನ್ ಫ್ರಂಟ್‌ನ ಇಬ್ಬರು, ಕಾಂಗ್ಲೀ ಪಾಕ್ ಕಮ್ಯುನಿಸ್ಟ್ ಪಕ್ಷದ ಒಬ್ಬ, ಕೆಸಿಪಿ(ಎಂಎಫ್‌ಎಲ್)ಯ ಇಬ್ಬರು, ಪ್ರೆಪಾಕ್‌ನ (ಪಿಆರ್‌ಒ) ಒಬ್ಬ ಪ್ರಮುಖ ಉಗ್ರರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾತಂದ್ರೆ ಮಾತು

ಜಾತಿಗಳ ನಡುವಿನ ಭೇದವನ್ನು ನಿರ್ಮೂಲನೆ ಮಾಡಬೇಕು. ಒಂದು ದೇವಸ್ಥಾನ, ಒಂದು ಬಾವಿ ಹಾಗೂ ಒಂದು ಸ್ಮಶಾನ ಎಂಬ ತತ್ವ ಅನುಸರಿಸುವ ಮೂಲಕ ಸಾಮಾಜಿಕ ಸಾಮರಸ್ಯಕ್ಕೆ ಹಿಂದೂಗಳು ಶ್ರಮಿಸಬೇಕು.

-ಮೋಹನ ಭಾಗವತ್
ಆರ್‌ಎಸ್‌ಎಸ್ ಮುಖ್ಯಸ್ಥ

ಫನ್‌ತರಂಗ

- ರಘುಪತಿ ಶೃಂಗೇರಿ -

ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿ ವಿವಾದ

ಸುದ್ದಿ



ಕೊಲೆಗೈದ ಪತ್ನಿ ಪಲ್ಲವಿ, ಪುತ್ರಿ ಕೃತಿಯನ್ನು ವಶಕ್ಕೆ ಪಡೆದ ಪೊಲೀಸರು | ತಂಗಿಯ ಹೆಸರಿಗೆ ಆಸ್ತಿ ಮಾಡಿದ್ದಕ್ಕೆ ಕಳೆದ ಒಂದು ವಾರದಿಂದ ಗಲಾಟೆ | ರಕ್ತ ಮಡುವಿನಲ್ಲಿಯೇ ಕಾಲುಗಂಟೆ ಒದ್ದಾಡಿ ಪ್ರಾಣಬಿಟ್ಟ ನಿವೃತ್ತ ಡಿಜಿ

ಪತ್ನಿಯಿಂದಲೇ ನಿವೃತ್ತ ಡಿಜಿ ಕೊಲೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸುಮಾರು ಎರಡು ವರ್ಷಗಳ ಕಾಲ ರಾಜ್ಯ ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದ ವ್ಯಕ್ತಿ ಭಾನುವಾರ ಸಂಜೆ ರಕ್ತದ ಮಡುವಿನಲ್ಲಿ ನರಳಿ ನರಳಿ ಕೊನೆಯುಸಿರೆಳೆದಿದ್ದಾರೆ. ಇಂತಹ ನೂರಾರು ಕೊಲೆಗಳನ್ನು ಬೇಧಿಸಿದ್ದ ಅಧಿಕಾರಿಗೆ ತನ್ನ ಪತ್ನಿಯಿಂದಲೇ ಇಂತಹ ಸ್ಥಿತಿ ಬರಲಿದೆ ಎನ್ನುವುದು ಆ ಕ್ಷಣದವರೆಗೂ ಎನಿಸಿರಲಿಲ್ಲವೇನೋ.

ಹೌದು, 2015ರಿಂದ 2017ರ ವರೆಗೆ ರಾಜ್ಯ ಪೊಲೀಸ್ ಇಲಾಖೆಯ ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಓಂ ಪ್ರಕಾಶ್ (68) ಅವರು ಭಾನುವಾರ ಸಂಜೆ ತಮ್ಮ ಪತ್ನಿ ಪಲ್ಲವಿ ಯಿಂದಲೇ ಕೊಲೆಯಾಗಿದ್ದಾರೆ. ಮುಖದ ಚಹರೆಯೇ ಬದಲಾಗುವಂತಹ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಚಾಕುವಿನಿಂದ ಚುಚ್ಚಿರುವ ತೀವ್ರತೆಗೆ ರಕ್ತ ಮಡುವಿನಲ್ಲಿ ಕೆಲಕಾಲ ಒದ್ದಾಡಿ ಪ್ರಾಣಬಿಟ್ಟಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ, ಬಿಯರ್ ಬಾಟೆಲ್ ಮತ್ತು ಚಾಕುವಿನಿಂದ ಚುಚ್ಚಿರುವ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಪೊಲೀಸರು ಪತ್ನಿ ಹಾಗೂ ಪುತ್ರಿ ಯನ್ನು ಈಗಾಗಲೇ ವಶಕ್ಕೆ ಪಡೆದು, ತನಿಖೆ ತೀವ್ರಗೊಳಿಸಿದ್ದಾರೆ.

ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನ ಐಪಿಎಸ್ ಕಾಲೋನಿಯಲ್ಲಿ ನಡೆದಿರುವ ಈ ಘಟನೆ ರಾಜ್ಯವನ್ನೇ ಬೆಚ್ಚಿಬೀಳಿಸಿದೆ. ಪ್ರಾಥಮಿಕ ತನಿಖೆಯಲ್ಲಿ, ಆಸ್ತಿ ವಿಷಯವೇ ಈ ಘಟನೆಗೆ ಕಾರಣ ಎನ್ನುವುದು ತಿಳಿದುಬಂದಿದೆ. ಆದರೂ, ಆಸ್ತಿ ವಿಷಯ ಬಿಟ್ಟು ಇನ್ಯಾವುದಾದರೂ 'ಸಂಬಂಧ'ದ ವಿಷಯವಿದೆಯೇ ಎನ್ನುವ ಆಯಾಮದಲ್ಲಿಯೂ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ಕೆಲ ಸಿಸಿ ಟಿವಿ ವಿಡಿಯೊ ಹಾಗೂ ಫೋನ್ ಸಂಭಾಷಣೆಗಳು ಪೊಲೀಸರಿಗೆ ಸಿಕ್ಕಿವೆ ಎನ್ನಲಾಗಿದೆ. ಓಂ ಪ್ರಕಾಶ್ ಪತ್ನಿ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರು ಎನ್ನುವ ಮಾತುಗಳೂ ಕೇಳಿಬರುತ್ತಿವೆ. ಆದರೆ ಈ ಎಲ್ಲ ಆಯಾಮದಲ್ಲಿಯೂ ತನಿಖೆ ನಡೆಸಲು ಪೊಲೀಸರಿಗೆ ರಾಜ್ಯ ಸರಕಾರ ಸೂಚನೆ ನೀಡಿದೆ. ಘಟನೆ ಬೆಳಕಿಗೆ ಬರುತ್ತಿದ್ದಂತೆ ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

- ಹರಿಯಾಣ ಮೂಲಕ ಓಂ ಪ್ರಕಾಶ್, ನಿವೃತ್ತಿ ಬಳಿಕ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸ
- ದಾಂಡೇಲಿಯ ಆಸ್ತಿ ವಿಷಯಕ್ಕೆ ಪತ್ನಿ, ಪುತ್ರಿಯೊಂದಿಗೆ ನಿರಂತರ ಜಗಳ
- ತಂಗಿಯ ಹೆಸರಲ್ಲಿ ಆಸ್ತಿ ಬರೆದಿರುವುದಕ್ಕೆ ವಿರೋಧಿಸಿದ್ದ ಕುಟುಂಬ
- ಎಂಟತ್ತು ಬಾರಿ ಚಾಕುವಿನಿಂದ ಚುಚ್ಚಿರುವ ಪತ್ನಿ ಪಲ್ಲವಿ

ರಕ್ತ ಮಡುವಿನಲ್ಲಿ ಒದ್ದಾಡಿದ ಓಂ

ಪಲ್ಲವಿ ಹಾಗೂ ಪುತ್ರಿಯಿಂದ ಹಲ್ಲೆಗೆ ಒಳಗಾದ ಓಂ ಪ್ರಕಾಶ್ ಅವರು ಸುಮಾರು 15 ನಿಮಿಷಗಳ ಕಾಲ ರಕ್ತದ ಮಡುವಿನಲ್ಲಿ ಒದ್ದಾಡಿದ್ದಾರೆ. ಬಿಯರ್ ಬಾಟಲಿಗಳಿಂದ ಹಲ್ಲೆ ಮಾಡಿದ್ದರಿಂದ ಮುಖದ ಮೇಲೆಲ್ಲ ಭಾರಿ ಪ್ರಮಾಣದ ಗಾಯಗಳಾಗಿವೆ. ಪೊಲೀಸರ ಪ್ರಾಥಮಿಕ ವರದಿಯ ಪ್ರಕಾರ, ಸುಮಾರು ಎಂಟರಿಂದ 10 ಬಾರಿ ಎದೆ ಹಾಗೂ ಹೊಟ್ಟೆ ಭಾಗಕ್ಕೆ ಚಾಕುವಿನಿಂದ ಇರಿದಿರುವ ಸಾಧ್ಯತೆಯಿದೆ ಎನ್ನಲಾಗಿದೆ. ಎದೆ, ಹೊಟ್ಟೆ ಹಾಗೂ ಕೈ ಭಾಗಕ್ಕೆ ಚಾಕುವಿನಿಂದ ಇರಿದಿರುವ ಕಾರಣ ಕೆಳ ಮಹಡಿಯ ಹಾಲ್ ತುಂಬಾ ರಕ್ತ ಹರಿದಿದೆ. ಈ ವೇಳೆ ಓಂ ಪ್ರಕಾಶ್ ನರಳಾಡುವುದನ್ನು ಪತ್ನಿ ನೋಡುತ್ತಾ ನಿಂತಿದ್ದಳು ಎನ್ನಲಾಗಿದೆ. ಗಂಡ ಸಾವನ್ನಪ್ಪಿದ ಬಳಿಕ ಐಪಿಎಸ್ ಅಧಿಕಾರಿಯೊಬ್ಬರ ಪತ್ನಿಗೆ ಕರೆ ಮಾಡಿ ವಿಚಾರ ತಿಳಿಸಿದ್ದಾಳೆ ಎಂದು ತಿಳಿದುಬಂದಿದೆ.

ಸಂಜೆ 4:30ರ ಸುಮಾರಿಗೆ ಬಂದ ಮಾಹಿತಿ ಆಧರಿಸಿ ಹೊಯ್ಸಳ ಸಿಬ್ಬಂದಿ ಬಂದು ಗಮನಿಸಿದಾಗ ಹತ್ಯೆಯ ವಿಚಾರ ತಿಳಿದುಬಂದಿದೆ. ಆಯುಧ ಬಳಸಿ ದೈಹಿಕ ಹಲ್ಲೆಗೈದಿರುವುದು ಕಂಡು ಬಂದಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಮತ್ತಷ್ಟು ವಿಚಾರಗಳು ತಿಳಿಯಲಿವೆ. ಮನೆಯಲ್ಲಿ ಓಂ ಪ್ರಕಾಶ್ ಅವರು ಸೇರಿದಂತೆ ಮೂವರು ಇದ್ದರು. ಅದರಲ್ಲಿಯೇ ಒಬ್ಬರು ಹತ್ಯೆಯ ಕುರಿತು ಮಾಹಿತಿ ನೀಡಿದ್ದಾರೆ. ಮನೆಯಲ್ಲಿದ್ದ ಆಯುಧವನ್ನು ಜಪ್ತಿ ಮಾಡಲಾಗಿದೆ. ಅವರ ಮಗನಿಂದ ದೂರು ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

-ವಿಕಾಶ್ ಕುಮಾರ್, ಹೆಚ್ಚುವರಿ ಪೊಲೀಸ್ ಆಯುಕ್ತ

ಪೊಲೀಸರಿಗೆ ಮಾಹಿತಿ ನೀಡಿದ ಪತ್ನಿ?

68 ವರ್ಷದ ಓಂ ಪ್ರಕಾಶ್ ಮೃತಪಟ್ಟಿರುವ ವಿಷಯವನ್ನು ಪೊಲೀಸರಿಗೆ ಯಾರು ತಿಳಿಸಿದರು ಎಂಬ ಬಗ್ಗೆ ಈಗಲೂ ಗೊಂದಲವಿದೆ. ಒಂದು ಮೂಲದ ಪ್ರಕಾರ, ಪಲ್ಲವಿಯೇ ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಇನ್ನೊಂದು ಮೂಲದ ಪ್ರಕಾರ, ಪಲ್ಲವಿ ಸಂದೇಶ ಕಳುಹಿಸಿದ್ದ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರ ಪತ್ನಿ ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಈ ಬಗ್ಗೆ ಪೊಲೀಸರು ಸ್ಪಷ್ಟನೆ ನೀಡಿಲ್ಲ. ಆದರೆ ಪಲ್ಲವಿ ಹಾಗೂ ಪುತ್ರಿಯನ್ನು ಎಚ್‌ಎಸ್‌ಆರ್ ಲೇಔಟ್ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು, ಸೋಕೋ ಟೀಂ, ಎಫ್‌ಎಸ್‌ಎಲ್ ಅಧಿಕಾರಿಗಳು ಭೇಟಿ ನೀಡಿದ್ದಾರೆ. ಪುತ್ರ ಕಾರ್ತಿಕೇಯನ್ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿದ್ದಾರೆ.

ಭಾರತ-ಅಮೆರಿಕ ವಿಮಾನಯಾನ ಅಗ್ಗ

ಮುಂಬೈ: ಈ ಬಾರಿಯ ಬೇಸಿಗೆ ಅವಧಿಯಲ್ಲಿ ಅಮೆರಿಕ-ಭಾರತ ನಡುವಿನ ವಿಮಾನಯಾನದ ಟಿಕೆಟ್ ದರ ಹಲವು ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ವಾಷಿಂಗ್ಟನ್-ದೆಹಲಿ ನಡುವಿನ ವಿಮಾನಯಾನ ಟಿಕೆಟ್ ದರದಲ್ಲಿ ಶೇ.10ರಿಂದ 15ರವರೆಗೂ ಇಳಿಕೆಯಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೊಸ ಆಡಳಿತ ನೀತಿಗಳ ಪರಿಣಾಮ ಇದಾಗಿದೆ ಎಂಬ ವಿಶ್ಲೇಷಣೆಗಳು ಕೇಳಿಬಂದಿವೆ. ಮುಂಬೈ-ನ್ಯೂಯಾರ್ಕ್ ನಗರಗಳ ನಡುವಿನ ಒಂದು ಮಾರ್ಗದ ಪ್ರಯಾಣದ(ಮೇ ತಿಂಗಳ 3ನೇ ವಾರದ ಮುಂಗಡ ಟಿಕೆಟ್) ವಿಮಾನ ಟಿಕೆಟ್ ಶನಿವಾರ 37 ಸಾವಿರ ರು.ಗೆ ದೊರೆತಿದೆ. ಇದು ಇತ್ತೀಚಿನ ವರ್ಷಗಳಲ್ಲಿಯೇ ಬೇಸಿಗೆ ಅವಧಿಯಲ್ಲಿನ ಬಹಳ ಕಡಿಮೆ ದರವಾಗಿದೆ ಎಂದು ಹೇಳಲಾಗಿದೆ.

ಡಿಸಿಎಂ ಡಿ.ಕೆ.ಶಿವಕುಮಾರ್ ಭಾನುವಾರ ಧರ್ಮಸ್ಥಳ ಮಂಜುನಾಥ್ ಸ್ವಾಮಿ ದೇಗುಲದಲ್ಲಿ ಪೂಜೆ ಸಲ್ಲಿಸಿದರು.

ಶಾಸಕ ಮುನಿರತ್ನ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ

ಬೆಂಗಳೂರು: ಜಾತಿನಿಂದನೆ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಜೈಲು ಸೇರಿದ್ದ ಶಾಸಕ ಮುನಿರತ್ನ ವಿರುದ್ಧದ ಪ್ರಕರಣವೊಂದರಲ್ಲಿ ವಿಧಾನ ಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಹನಿಟ್ರ್ಯಾಪ್ ನಡೆಸಲು ಎಚ್‌ಐವಿ ಸೋಂಕಿತ ಮಹಿಳೆಯರನ್ನು

ಬಳಕೆ, ದಲಿತರ ಜಾತಿನಿಂದನೆ ಸೇರಿ ಗಂಭೀರ ಆರೋಪಗಳನ್ನು ಎದುರಿಸುದ್ದ ಮುನಿರತ್ನ, ಪರಪ್ಪನ ಅಗ್ರಹಾರ ಜೈಲು ಸೇರಿ ಜಾಮೀನಿನ ಮೇಲೆ ಹೊರಬಂದಿದ್ದರು. ಜಾತಿನಿಂದನೆ ಆರೋಪ ಸಂಬಂಧ ವೈಯಾಲಿಕಾವಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಸಿಐಡಿಯ ಎಸ್‌ಐಟಿಗೆ ವಹಿಸಲಾಗಿತ್ತು. ತನಿಖೆ ನಡೆಸಿದ್ದ ಎಸ್‌ಐಟಿ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಿತ್ತು. ಮುನಿರತ್ನ ಶಾಸಕರಾಗಿರುವ ಕಾರಣ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಸ್ಪೀಕರ್ ಮೊರೆ ಹೋಗಿತ್ತು. ಇದೀಗ ಸ್ಪಿಕರ್ ಖಾದರ್ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದು, ಕೋರ್ಟ್‌ಗೆ ವಿಚಾರಣೆ ನಡೆಸಲು ಅನುಕೂಲವಾಗಲಿದೆ.

ಯಡಿಯೂರಪ್ಪ ವಿರುದ್ಧದ ಪ್ರಕರಣ: ಇಂದು ತೀರ್ಪು

ದೆಹಲಿ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಸಲ್ಲಿಕೆಯಾಗಿದ್ದ ವಿವಿಧ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂಕೋರ್ಟ್, ಸೋಮವಾರ ತೀರ್ಪು ಪ್ರಕಟಿಸಲಿದೆ. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠ ತೀರ್ಪು ಪ್ರಕಟಿಸಲಿದೆ. ಯಡಿಯೂರಪ್ಪ ಪರ ವಕಾಲತ್ತು ವಹಿಸಿರುವ ಹಿರಿಯ ವಕೀಲ ಸಿದ್ಧಾರ್ಥ ಲುಥಾರಾ ಅವರು, 'ಯಡಿಯೂರಪ್ಪ ವಿರುದ್ಧ ತನಿಖೆಗೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ಹಿಂದೆ ವಜಾ ಮಾಡಿತ್ತು. ಆದರೆ, ಅದನ್ನು ಪ್ರಶ್ನಿಸಲಾಗಿಲ್ಲ. ಇದೇ ಸ್ವರೂಪದ ಮತ್ತೊಂದು ದೂರನ್ನು ಕೆಳ ಹಂತದ ಕೋರ್ಟ್ ತಳ್ಳಿಹಾಕಿತ್ತು. ಆದರೆ, ಈ ಆದೇಶ ಹೈಕೋರ್ಟ್ ತಡೆಹಿಡಿದಿದೆ' ಎಂದು ತಿಳಿಸಿದರು.

ಕಾಶ್ಮೀರದ ಮಳೆಗೆ ಐದು ಜೀವಬಲಿ

ಶ್ರೀನಗರ: ಹಿಮಪಾತಕ್ಕೆ ಹೆಸರಾದ ಜಮ್ಮು-ಕಾಶ್ಮೀರದಲ್ಲಿ ಈಗ ಭಾರೀ ಮಳೆ-ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಶುಕ್ರವಾರ-ಶನಿವಾರದ ಸುರಿದ ಧಾರಾಕಾರ ಮಳೆಯಿಂದಾಗಿ ರಾಜ್ಯದ ಹಲವೆಡೆ ಭೂಕುಸಿತವಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ 2 ದಿನದಲ್ಲಿ 5 ಜೀವಗಳು ಬಲಿಯಾಗಿವೆ. ರಾಜ್ಯದ ವಿವಿಧೆಡೆ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ 200ಕ್ಕೂ ಅಧಿಕ ಜನರನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಕರೆತಂದು ಬಿಡಲಾಗಿದೆ. ರಂಬನ್ ಜಿಲ್ಲೆಯಲ್ಲಿ ಭಾರೀ ಪ್ರಮಾಣದಲ್ಲಿ ಭೂಕುಸಿತವಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಭಾರೀ ಪ್ರಮಾಣದಲ್ಲಿ ಮಳೆ ಸುರಿಯುತ್ತಾ ಇರುವುದರಿಂದ ಪ್ರದೇಶದಲ್ಲಿನ ಹಲವು ಮನೆಗಳಿಗೆ ನೀರು ನುಗ್ಗಿದೆ. ಮಕ್ಕಳು, ವೃದ್ಧರು ಮತ್ತು ರೋಗಿಗಳ ಪರಿಸ್ಥಿತಿ ಚಿಂತಾಜನಕವಾಗಿದೆ.

ಸುಚಿವ್ರತ್‌ಗೆ ಉಚಿತ ಸೀಟ್: ಖಂಡ್ರೆ ಭರವಸೆ

ಬೀದರ: ಜನಿವಾರ ತೆಗೆಯದ ಕಾರಣಕ್ಕಾಗಿ ಸಿಇಟಿ ಗಣಿತ ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿ ಸುಚಿವ್ರತ್‌ಗೆ ಭಾಲ್ಕಿಯ ಭೀಮಣ್ಣ ಖಂಡ್ರೆ ತಾಂತ್ರಿಕ ವಿದ್ಯಾಲಯದಲ್ಲಿ ಉಚಿತ ಪ್ರವೇಶ ನೀಡುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದ್ದಾರೆ. ಸಚಿವ ರಹೀಂಖಾನ್ ಅವರ ಜತೆಯಲ್ಲಿ ಸುಚಿವ್ರತ್ ಕುಲಕರ್ಣಿ ಮನೆಗೆ ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಕುಟುಂಬದ ಸದಸ್ಯರಿಗೆ ಆತ್ಮಸ್ಥೈರ್ಯ ತುಂಬಿದ ಈಶ್ವರ ಖಂಡ್ರೆ, ಖಾಸಗಿ ಕಾಲೇಜಿನ ಸಿಬ್ಬಂದಿಯಿಂದ ಇಂತಹ ಲೋಪವಾಗಿದ್ದು, ಇದು ನೋವಿನ ಸಂಗತಿ. ಇನ್ನು ಮುಂದೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರ ವಹಿಸಲು ಸೂಚಿಸಲಾಗಿದೆ.

ಜಾತಿ ಗಣತಿಯನ್ನು ತಿರಸ್ಕರಿಸಲಿ

ಉತ್ತರ ಕನ್ನಡವೊಂದರಲ್ಲಿಯೇ 2 ಲಕ್ಷ ಬ್ರಾಹ್ಮಣರಿರುವಾಗ 85 ಸಾವಿರ ಹವ್ಯಕರಿದ್ದಾರೆ ಎಂದು ಹೇಳಿರುವುದು ಎಷ್ಟು ಸರಿ? ಸರಕಾರ ನಡೆಸಿರುವ ಈ ಜಾತಿ ಗಣತಿಯೇ ಅವೈಜ್ಞಾನಿಕವಾಗಿದ್ದು, ಕೂಡಲೇ ಇದನ್ನು ತಿರಸ್ಕರಿಸಬೇಕು ಎಂದು ಹವ್ಯಕ ಮಹಾಸಭಾ ಅಧ್ಯಕ್ಷ ಗಿರಿಧರ ಕಜೆ ಆಗ್ರಹಿಸಿದ್ದಾರೆ. 'ವಿಶ್ವವಾಣಿ'ಯೊಂದಿಗೆ ಮಾತನಾಡಿದ ಅವರ ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

ಅಪರ್ಣಾ ಎ.ಎಸ್ ಬೆಂಗಳೂರು

- **ಜಾತಿಗಣತಿಯ ಬಗ್ಗೆ ನಿಮ್ಮ ನಿಲುವೇನು?**

ಸಮಾಜದಲ್ಲಿ ಜಾತಿ ಪದ್ಧತಿ ಮೊದಲಿನಿಂದಲೂ ಬಂದಿದೆ. ಆದರೆ ಅದನ್ನು ಪ್ರತ್ಯೇಕವಾಗಿ ಒಂದೊಂದು ಜಾತಿಯಲ್ಲಿ ಎಷ್ಟೆಷ್ಟು ಜನರಿದ್ದಾರೆ ಎಂದು ಆ ಸಂಖ್ಯೆಯನ್ನು ನಿರ್ಧಾರ ಮಾಡುವ ವಿಚಾರ ಜಾತ್ಯತೀತ ತತ್ವಕ್ಕೆ ವಿರುದ್ಧವಾದದ್ದು. ಈಗ ಮಾಡಿರುವ ಗಣತಿಯಲ್ಲಿ ಬ್ರಾಹ್ಮಣರು ಎನ್ನುವ ಕಾಲಂ, ಇನ್ನೊಂದು ಕಡೆ ಹವ್ಯಕರು ಎಂದು ಇತ್ತು. ಹವ್ಯಕರು ಬ್ರಾಹ್ಮಣರೂ ಹೌದು, ಹವ್ಯಕರೂ ಹೌದು. ಹಾಗಾದರೆ ಅವರು ಯಾವುದರಲ್ಲಿ ಗುರುತು ಮಾಡಬೇಕಾಗಿರುವುದು? ಮುಸ್ಲಿಂರಲ್ಲಿ ಬೇರೆ ಬೇರೆ ಪಂಗಡಗಳಿದ್ದರೂ ಮುಸ್ಲಿಂರು ಎಂದು ಗುರುತು ಮಾಡಲು ಒಂದೇ ಕಾಲಂಗೆ ಅವಕಾಶಕೊಟ್ಟರು. ಅದೇ ರೀತಿಯಲ್ಲಿ ಬ್ರಾಹ್ಮಣರು ಎಂದು ಗುರುತು ಮಾಡಲು ಒಂದೇ ಕಾಲಂ ಕೊಡಬೇಕಲ್ಲವೇ? ಲಿಂಗಾಯತರಲ್ಲೂ ಬೇರೆ ಬೇರೆ ಪಂಗಡವಿದ್ದರೂ ಮೊದಲ ಹೆಡ್ಡಿಂಗ್ ಲಿಂಗಾಯತರು ಎಂದು ಹಾಕಿ ಗುರುತು ಮಾಡಲು ಅವಕಾಶ ನೀಡಿದ್ದರೆ ಆಗ ಸಂಖ್ಯೆ ಸರಿಯಾಗುತ್ತಿತ್ತು. ಆ ರೀತಿಯಲ್ಲಿ ಮಾಡಬಹುದಿತ್ತು. ಈಗ ಬ್ರಾಹ್ಮಣರಲ್ಲೂ ಹೊಯ್ಸಳ ಕರ್ನಾಟಕ, ಬಬ್ಬೂರು ಕಮ್ಮೆ, ಬಡಗನಾಡು ಎಂದು ಬೇರೆ ಬೇರೆ ಇರುವುದನ್ನು ಬ್ರಾಹ್ಮಣರು ಬಡಗನಾಡು ಎಂದು ಮಾಡಬಹುದಿತ್ತು. ಆದರೆ ಕಾಲಂನ್ನೇ ಪ್ರತ್ಯೇಕವಾಗಿ ಮಾಡುವುದು ಮೂಲತಃ ತಪ್ಪು. ಇದು ಅವೈಜ್ಞಾನಿಕವಾಗಿದೆ.

ಜಾತಿಗಣತಿ ಎಲ್ಲರನ್ನೂ ತಲುಪಿಲ್ಲ ಎನ್ನುವುದು ದುರ್ದೈವದ ಸಂಗತಿ. ಜಾತಿಗಣತಿ ನಿಖರವಾಗಿರಬೇಕಾದರೆ ಪ್ರತಿಯೊಂದು ಮನೆಯನ್ನೂ ತಲುಪಿ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳಬೇಕಿತ್ತು. ಹವ್ಯಕರ ಸಂಖ್ಯೆ 85,000 ಎಂದು ಈಗಿನ ದಾಖಲೆಗಳಲ್ಲಿ ಹೇಳಲಾಗಿದೆ. ಉತ್ತರಕನ್ನಡ ಕ್ಷೇತ್ರದಲ್ಲಿ 2 ಲಕ್ಷದಷ್ಟು ಬ್ರಾಹ್ಮಣರು ಇದ್ದಾರೆ. ಇವರು ಮತದಾನದ ಹಕ್ಕು ಪಡೆದವರು, ಇನ್ನು 18 ವರ್ಷದೊಳಗಿನ ಮಕ್ಕಳು ಪ್ರತ್ಯೇಕವಾಗಿದ್ದಾರೆ. 2.50 ಲಕ್ಷದಷ್ಟು ಜನರು ಅಲ್ಲೇ ಇದ್ದಾರೆ. ಹೀಗಿರುವಾಗ 85 ಸಾವಿರ ಎನ್ನಲು ಹೇಗೆ ಸಾಧ್ಯ?

-ಗಿರಿಧರ ಕಜೆ, ಹವ್ಯಕ ಮಹಾಸಭಾ ಅಧ್ಯಕ್ಷ

- **ಸಮುದಾಯವನ್ನು ಕಡಿಮೆ ತೋರಿಸಲಾಗಿದೆ ಎನ್ನುವ ಆರೋಪ ನಿಜವೇ?**

ಹವ್ಯಕರನ್ನು ಕೇವಲ 85 ಸಾವಿರ ಎಂದು ತೋರಿಸಿದ್ದಾರೆ. ಮೊನ್ನೆ ನಡೆದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ 2.25 ಲಕ್ಷಜನ ಹವ್ಯಕರು ಸೇರಿದ್ದಾರೆ. ಅದರಲ್ಲಿ ಬೇರೆಯವರೂ ಬಂದಿದ್ದಾರೆ. ಆದರೂ ಸಮ್ಮೇಳನಕ್ಕೆ ಕನಿಷ್ಠವೆಂದರೂ 2 ಲಕ್ಷ ಜನರು ಬಂದಿದ್ದಾರೆ. ಹಾಗಿರುವಾಗ 85 ಸಾವಿರ ಎಂದು ತೋರಿಸಿರುವುದು ಯಾವ ರೀತಿಯಲ್ಲೂ ಸರಿಯಾಗಿಲ್ಲ. ಸಮುದಾಯವನ್ನು ಚಿಕ್ಕದು ಮಾಡಿ ತೋರಿಸಿದಂತಾಯಿತು. ಬ್ರಾಹ್ಮಣರು 40 ಲಕ್ಷಕ್ಕೂ ಅಧಿಕ ಇದ್ದಾರೆ ಎಂದು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಸಚ್ಚಿದಾನಂದ ಮೂರ್ತಿಯವರು ಹೇಳಿದ್ದಾರೆ. ಆದರೆ ಸರಕಾರದ ಗಣತಿಯಲ್ಲಿ 17ಲಕ್ಷ ಎಂದು ತೋರಿಸಿದ್ದಾರೆ.

ವಿವರಪುಟ→ 4

ಸಮಾಚಾರ ಸಣ್ಣದಲ್ಲ

ರಸ್ತೆ ಅಪಘಾತ: ಇಬ್ಬರ ಸಾವು

ಯಾದಗಿರಿ: ಆಟೋ ಮತ್ತು ಬೈಕ್ ನಡುವೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಮತ್ತು ಆಟೋದಲ್ಲಿದ್ದ ಪ್ರಯಾಣಿಕ ಸೇರಿ ಇಬ್ಬರು ಮೃತಪಟ್ಟಿರುವ ಘಟನೆ ಯಾದಗಿರಿ ಜಿಲ್ಲೆಯ ಮುಂಡರಗಿ ಬಳಿ ನಡೆದಿದೆ. ಮೃತರನ್ನು ಬಸವರಾಜ (55) ಮತ್ತು ಅಂಜಿ (45) ಮೃತ ದುರ್ದೈವಿಗಳಾಗಿದ್ದಾರೆ. ಯಾದಗಿರಿಯಿಂದ ಮುಂಡರಗಿ ಕಡೆ ಚಲಿಸುತ್ತಿದ್ದ ಆಟೋ ಮತ್ತು ಯಾದಗಿರಿ ಕಡೆಗೆ ಹೊರಡುತ್ತಿದ್ದ ಬೈಕ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದಾರೆ ಎನ್ನಲಾಗಿದೆ. ಈ ಕುರಿತು ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಡಿಒ ವಿರುದ್ಧ ಅಟ್ರಾಸಿಟಿ ದಾಖಲು

ಹುಣಸಗಿ: ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಕೆಗೆ ಸ್ವೀಕೃತಿ ಕೊಡಿ ಎಂದಿದ್ದಕ್ಕೆ ಸಂಘಟನೆಯ ಕಾರ್ಯಕರ್ತನ ಮೇಲೆ ಹಲ್ಲೆ ಮಾಡಿದ ಕುರಿತು ಅರಕೇರಾ (ಜೆ) ಗ್ರಾಮ ಪಂಚಾಯಿತಿ ಪಿಡಿಒ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲಾಗಿದೆ. ನಮ್ಮ ಕರ್ನಾಟಕ ಸೇನೆ ತಾಲೂಕು ಅಧ್ಯಕ್ಷ ಭೀಮನಗೌಡ.ಎನ್.ಪೊಲೀಸ್ ಪಾಟೀಲ್ ಕಳೆದ 9 ರಂದು ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅದಕ್ಕಾಗಿ ಸ್ವೀಕೃತಿ ಕೊಡಿ ಎಂದು ಪಿಡಿಒ ಅವರಿಗೆ ಕೇಳಿದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿದಲ್ಲದೇ, ಹಲ್ಲೆಗೆ ಮುಂದಾಗಿದ್ದಾರೆ ಎಂದು ಆರೋಪಿಸಿ ಇದೀಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

6ನೇ ತರಗತಿ ಪ್ರವೇಶ ಪರೀಕ್ಷೆ ಏ.27ಕ್ಕೆ

ಬೀದರ್: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 2025-26ನೇ ಸಾಲಿನಲ್ಲಿ 6ನೇ ತರಗತಿ ಪ್ರವೇಶ ಪಡೆಯಲು ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಏ 27 ರಂದು ಬೆಳಗ್ಗೆ 11ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೆ ಜ್ಞಾನ ಸುಧಾ ವಿದ್ಯಾಲಯ ಮಾಮನಕೇರಿ ಬೀದರ, ಸಿದ್ಧಾರ್ಥ ಸಂಯುಕ್ತ ಪದವಿ ಪೂರ್ವ ಶಿಕ್ಷಣ ಸಂಸ್ಥೆ ಜನವಾಡ ರಸ್ತೆ ಬೀದರ ಹಾಗೂ ವಿದ್ಯಾರಣ್ಯ ಪ್ರೌಢ ಶಾಲೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತ ಜನವಾಡ ರಸ್ತೆ ಶಾಲೆಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತಿದೆ ಎಂದು ಬೀದರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ https://dom.karnataka.gov.in ನಲ್ಲಿ ಆನ್‌ಲೈನ್ ಮೂಲಕ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಜಿಲ್ಲಾ ಕಚೇರಿ ಮತ್ತು ತಾಲೂಕು ಕಚೇರಿಗಳನ್ನು ಅಥವಾ ಬೀದರ ತಾಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿ ಉಮೇಶ ಮೊ. 9448844387, ಹುಮನಾಬಾದ ತಾಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳಾದ ಶಿವಕುಮಾರ ಮೊ. 6361879744ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಮಳೆಗೆ ಭತ್ತ ನಾಶ: ಪರಿಹಾರಕ್ಕೆ ಆಗ್ರಹ

ಶಹಾಪುರ: ತಾಲೂಕಿನ ಸಗರ ಹಾಗೂ ಶಾರದಹಳ್ಳಿ ಗ್ರಾಮದಲ್ಲಿ ಧಾರಕಾರ ಮಳೆಗೆ ಭತ್ತ ಸಂಪೂರ್ಣ ಹಾಳಾಗಿದ್ದು ಸರಕಾರ ಪ್ರತಿ ಎಕರೆಗೆ 25 ಸಾವಿರ ರು.

ಪರಿಹಾರ ನೀಡಬೇಕು ಎಂದು ಬಿಜೆಪಿ ಯುವ ಮುಖಂಡ ಕರಣ ಸುಬೇದಾರ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವ ಅವರು ಕಳೆದ 5 ವರ್ಷಗಳಿಂದಲೂ ಅನ್ನದಾತರು ಸಂಕಷ್ಟವನ್ನು ಎದುರಿಸುತ್ತಿದ್ದಾರೆ. 2 ವರ್ಷ ಕೋವಿಡ್‌ನಿಂದ ತತ್ತರಿಸಿದ್ದು ಇನ್ನೂ 3 ವರ್ಷ ಧಾರಕಾರ ಮಳೆಗೆ ಬೆಲೆ ಹಾಳಾಗಿವೆ. ಸಾಲ ಮಾಡಿ ಬಿತ್ತನೆ ಮಾಡಿದ ಬೆಳೆಗಳು ಕೈಗೆ ಬರುವಷ್ಟರಲ್ಲಿ ಅಕಾಲಿಕ ಮಳೆಗೆ ನೆಲಕಚ್ಚಿವೆ. ಇದರಿಂದ ರೈತರು ತೊಂದರೆ ಅನುಭವಿಸಬೇಕಾಗಿದ್ದು ಕೂಡಲೇ ಸರಕಾರ 25 ಸಾವಿರ ರು. ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಬೀದರ್ ಮತ್ತು ಶಿವಮೊಗ್ಗದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ) ಕೇಂದ್ರದಲ್ಲಿ ಸಿಬ್ಬಂದಿ ವಿದ್ಯಾರ್ಥಿಗಳು ಜನಿವಾರ ತೆಗೆಸಿದ ಘಟನೆ ತಪ್ಪು. ಜನಿವಾರ ಹಾಕಿ ದ್ದಕ್ಕೆ ಪರೀಕ್ಷೆಗೆ ಕೂರಿಸದೇ ಇರುವುದು ಸರಿಯಲ್ಲ. ಈ ಘಟನೆ ಖಂಡನೀಯ ಎಂದು ಬಿಜೆಪಿ ಯುವ ಮುಖಂಡ ಕರಣ ಸುಬೇದಾರ ಹೇಳಿದರು.

ಎಲ್ಲೆಡೆ ವೃದ್ಧಾಶ್ರಮ ಹೆಚ್ಚಳ ಕಳವಳಕಾರಿ ಸಂಗತಿ:ಶ್ರೀಗಳು

ಶ್ರೀರಾಮೋತ್ಸವ ಸೇವಾ ಸಮಿತಿ ಆಯೋಜಿಸಿದ್ದ ರಾಮೋತ್ಸವ ಕಾರ್ಯಕ್ರಮ

ಭಾಲ್ಕಿ: ನಮ್ಮೆಲ್ಲರಲ್ಲಿಯೂ ರಾಷ್ಟ್ರ ಭಕ್ತಿ ಗಟ್ಟಿಯಾಗಿರಬೇಕು. ರಾಷ್ಟ್ರವೇ ಮೊದಲು ನಂತರ ಧರ್ಮ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಗಾಂಧಿ ವೃತ್ತದ ಹತ್ತಿರ ವಿಶ್ವಹಿಂದೂ ಪರಿಷತ್, ಬಜರಂಗದಳ ಹಾಗೂ ಶ್ರೀರಾಮೋತ್ಸವ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ರಾಮೋತ್ಸವ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಜಗತ್ತಿನಲ್ಲಿರುವ ಎಲ್ಲ ರಾಷ್ಟ್ರಗಳಿಗೂ ಭಾರತ ಹೃದಯವಾಗಿದೆ. ಆದರೆ ಇಂದಿನ ದಿನಮಾನಗಳಲ್ಲಿ ಭಾರತದಲ್ಲಿಯೂ ವೃದ್ಧಾಶ್ರಮಗಳು ಹುಟ್ಟಿಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ.

ಉತ್ಸವ ಸಮಿತಿಯ ಅಧ್ಯಕ್ಷ ಶಿವು ಲೋಖಂಡೆ ಮಾತನಾಡಿ, ತಾಯಿ, ತಂದೆಯವರನ್ನು ಗೌರವದಿಂದ ಕಾಣುವ ದೇಶ ನಮ್ಮದು. ತಂದೆ, ತಾಯಿಯ ಮಾತಿಗೆ ಗೌರವ ಕೊಟ್ಟವರು ಶ್ರೀರಾಮಚಂದ್ರರಾಗಿದ್ದರು. ಪ್ರೀತಿ, ವಿಶ್ವಾಸದ ಸಹೋದರತ್ವವನ್ನು ತೋರಿಸಿಕೊಟ್ಟ ದೇಶ ನಮ್ಮದು. ಕಲ್ಯಾಣ ರಾಜ್ಯ ನಿರ್ಮಾಣ ಮಾಡಿದ ಬಸವಣ್ಣನವರು, ಹನ್ನೆರಡನೇ ಶತಮಾನದಲ್ಲಿಯೇ ಅವರು ರಾಮ ರಾಜ್ಯ ಸ್ಥಾಪಿಸಿದ್ದರು. ವಿನಯ ಮೂರ್ತಿಯಾದ ಬಸವಣ್ಣನವರು ವಿನಯ, ಸರಳತೆಯಿಂದ ರಾಜ್ಯ ಭಾರ ಮಾಡಿ ತೋರಿಸಿದರು. ಎಲ್ಲ ಜೀವರಾಶಿಗಳನ್ನು ಪ್ರೀತಿಸಿದ ಬಸವಣ್ಣನವರ ತತ್ವಗಳು ನಮ್ಮೆಲ್ಲರಲ್ಲಿಯೂ ಮೈಗೂಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಇದೇ ವೇಳೆ ಡೆಹರಾಡೋನ ಹಿಂದೂಪರ ಚಿಂತಕಿ ಮೀನಾಕ್ಷಿ ಸೆಹರಾವತ, ಚಿಂತಕ ಶ್ರೀಕಾಂತ ಶೆಟ್ಟಿ, ಮೆಹಕರ ಕಟ್ಟಿಮನಿ ಹಿರೇಮಠ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚಾರ್ಯರು ಹಿಂದೂ ಸಂಘಟನೆಯ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಚೌಡಯ್ಯ ಮಠದ ಕುಮಾರ ಸ್ವಾಮಿ,

ಪಟ್ಟಣದ ಮಹಾತ್ಮಾಗಾಂಧಿ ವೃತ್ತದಲ್ಲಿ ಆಯೋಜಿಸಿದ್ದ ಶ್ರೀರಾಮ ನವಮಿ ಉತ್ಸವ ಕಾರ್ಯಕ್ರಮದಲ್ಲಿ ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಮಾತನಾಡಿದರು.

> **ರಾಷ್ಟ್ರವಿದ್ದರೇ ಧರ್ಮದ ಉಳಿವು, ಹೀಗಾಗಿ ರಾಷ್ಟ್ರಕ್ಕಾಗಿ ಸರ್ವಸ್ವವೂ ತ್ಯಾಗಮಾಡುವ ಗುಣ ನಮ್ಮಲ್ಲಿರಬೇಕು. ರಾಷ್ಟ್ರಭಕ್ತಿ ನಮ್ಮ ಕಣ, ಕಣದಲ್ಲಿಯೂ ತುಂಬಿರಬೇಕು. ಜಗತ್ತಿನಲ್ಲಿಯೇ ವಿವಿಧತೆಯಲ್ಲಿ ಏಕತೆ ಹೊಂದಿರುವ ದೇಶ ಭಾರತವಾಗಿದೆ. ಎಲ್ಲರನ್ನೂ ಗೌರವಿಸುವ ದೇಶ ನಮ್ಮದಾಗಿದೆ. ಭಾರತೀಯ ಸಂಸ್ಕೃತಿ, ಪರಪಂರೆ ಜಗತ್ತಿಗೆ ಮಾದರಿ.**
>
> **-ಶ್ರೀ ಗುರುಬಸವ ಪಟ್ಟದ್ದೇವರು,** ಹಿರೇಮಠ ಸಂಸ್ಥಾನದ ಪೀಠಾಧಿಪತಿ

ಉತ್ಸವ ಸಮಿತಿಯ ಸುನಿತಾ ಕುಡತೆ, ಅಂಜನಾ ರೆಡ್ಡಿ, ಮೀನಾಕ್ಷಿ ಬಿರಾದಾರ, ಚನ್ನಬಸವಣ್ಣ ಬಳತೆ, ಜೈಕಿಶನ ಬಿಯಾನಿ, ಸಂತೋಷ ನಿರ್ಮಉಳೆ, ಬಸವರಾಜ ವಂಕೆ, ವಿಜಯಕುಮಾರ ರಾಜಭವನ, ಸಂತೋಷ ನಿರ್ಮಳೆ, ಭೀಮಣ್ಣ ಸರಳ, ವಿಎಚ್‌ಪಿ ಅಧ್ಯಕ್ಷ ಸಾಗರ ಮಲಾನಿ, ಶೈಲೇಶ ಮಾಲಪಾಣಿ, ಜಗದೀಶ ಖಂಡ್ರೆ, ಡಾ.ವಸಂತ ಪವಾರ, ನಾಮದೇವರಾವ ಪವಾರ, ಶಿವರಾಜ ಗಂದಗೆ, ಶಶಿಧರ ಕೋಸಂಬೆ, ಶಿವಾನಂದ ದಾಡಗೆ, ಸುನಿತಾ ಮೀನಕೇರೆ, ಕವಿತಾ ನಿತಿನ ಪಾಟೀಲ, ಸುರೇಖಾ ರವೆಣೇಶ, ಶುಭಾಂಗಿ ಚನ್ನಬಸವ ಬಳತೆ, ಮಲ್ಲಿಕಾಜುನ ಸ್ವಾಮಿ, ವಿಲಾಸ ಬಕ್ಕಾ, ಜಯರಾಜ ಪಾತ್ರೆ, ಗಂಗಾಧರ ಹೊಸಳ್ಳಿ, ಡಾ.ಅಮಿತ ಅಸ್ಟೂರೆ, ಡಾ. ಸಜ್ಜಲ ಬಳತೆ, ಮಾತೇಶ ದಶಮುಖ, ಸಂಜುಕುಮಾರ ಭಾವಿಕಟ್ಟೆ, ಶೈಲೇಶ ಚಳಕಾಪೂರೆ, ಶಿವಕುಮಕಾರ ರಾಜಭವನ, ಅಮರದೀಪ ಮೋರೆ, ಡಾ.ಶೈಲಜಾ ತಳವಾಡೆ, ರುದ್ರಾಣಿ ಬಕ್ಕಾ, ಅನಿತಾ ಪವಾರ, ಸ್ನೇಹಲತ ಅಷ್ಟೂರೆ, ಡಾ.ಸುವರ್ಣಾ ಪಾಟೀಲ, ನಿರ್ಮಲಾ ಹೆಡಾ, ಜ್ಯೋತಿ ಬಿರಾದಾರ ಇದ್ದರು. ಶಿವಾನಂದ ದಾಡಗೆ ಸ್ವಾಗತಿಸಿದರು.

ದೀಪಕ ಥಮಕೆ ನಿರೂಪಿಸಿದರು. ಜಗದೀಶ ಖಂಡ್ರೆ ವಂದಿಸಿದರು. ಇದಕ್ಕೂ ಮುನ್ನ ಹಳೆ ಪಟ್ಟಣದ ವಿಠಲ ಮಂದಿರದಿಂದ ಗಂಜ್ ಏರಿಯಾದ ಗಾಂಧಿ ವೃತ್ತದವರೆಗೆ ಶ್ರೀರಾಮ ಚಂದ್ರರ ಭವ್ಯ ಶೋಭಾ ಯಾತ್ರೆ ನಡೆಯಿತು.

ಬಸವೇಶ್ವರ ಜಾತ್ರಾ ಮಹೋತ್ಸವಕ್ಕೆ ರಕ್ತದಾನ, ಆರೋಗ್ಯ ಶಿಬಿರ ಯಶಸ್ವಿ

ಬಸವಕಲ್ಯಾಣ: ಶ್ರೀ ಬಸವೇಶ್ವರರ ಜಯಂತಿ ನಿಮಿತ್ತ ಹಾಗೂ ಮಹಾತ್ಮ ಬಸವೇಶ್ವರರ 75ನೇ ಜಾತ್ರಾ ಮಹೋತ್ಸವ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ನಗರದ ಶ್ರೀ ಬಸವೇಶ್ವರ ಪದವಿ ಪೂರ್ವ ಹಾಗೂ ಅಕ್ಕ ಮಹಾದೇವಿ ಮಹಿಳಾ ಮಹಾವಿದ್ಯಾಲಯದಲ್ಲಿ ಯಶ್ವಸಿಯಾಗಿ ಜರುಗಿತು.

ಶ್ರೀ ಅಮೃತಾನಂದ ಸ್ವಾಮಿಜೀಗಳು ಶ್ರೀ ಗುರುದೇವ ಆಶ್ರಮ ಬಾಲವಾವ ವಿಜಯಪುರ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಸವೇಶ್ವರ ದೇವಸ್ಥಾನ ಪಂಚ ಕಮಿಟು ಅಧ್ಯಕ್ಷ ಬಸವರಾಜ ಭೋಜಪ್ಪಾ ಕೋರಕೆ ಅಧ್ಯಕ್ಷತೆಯನ್ನು ವಹಿಸಿದರು.

ಮುಖ್ಯ ಅಥಿತಿಗಳಾಗಿ ಡಾ.ವಿಜಯ ಕುಮಾರ ಅಂತಪ್ಪನವರ ಉಪಸ್ಥಿತರಿದ್ದರು. ಡಾ.ಶರದ ಮಸೂದಿ, ಡಾ.ಗುರುಬಸವ ಲಕ್ಮಾಜಿ, ಡಾ.ಅನೀಲ ಮುದ್ದಾ, ಡಾ. ಸಿದ್ದಲಿಳಗ ಮಠಪತಿ, ಡಾ.ಸದಾನಂದ, ಡಾ.ಪೃತ್ವಿ ಬಿರಾದರ, ಡಾ.ಸಂದೀಪ ರಂಗದಾಳೆ, ಡಾ.ಸಂದೀಪ ದೇಶಮುಖ ಇತರ ಖ್ಯಾತ ವೈದ್ಯಾಧಿಕಾರಿಗಳು ಭಾಗವಹಿಸಿದರು.

ಈ ಸಂದರ್ಭದಲ್ಲಿ ವಿಶ್ವಸ್ಥ ಸಮಿತ ಅಧ್ಯಕ್ಷ ಶಶಿಕಾಂತ ದುರ್ಗೆ, ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಚಿರಡೆ, ರಾಜಕುಮಾರ ಹೊಳಕುಂದೆ, ಶ್ರೀಕಾಂತ ಬಡದಾಳೆ, ಅನೀಲ ರಗಟೆ, ವೀರಣ್ಣ ಹಲ್ಲಶೆಟ್ಟೆ, ಜಗನಾಥ ಖೂಬಾ, ಮಲ್ಲಯ್ಯ ಸ್ವಾಮಿ, ಸೋಮಶೇಖರ ವಸ್ರದ, ಡಾ.ಜಿ.ಎಸ್.ಬೂರಾಳೆ, ವಿವೇಕ ಹೂದಲೂರೆ, ಭದ್ರಿನಾಥ ಪಾಟೀಲ, ರೇವಣ್ಣಪ್ಪಾ ರಾಯವಾಡೆ, ಸುಭಾಸ ಹೊಳಕುಂದೆ, ಅಶೋಕ ನಾಗರಾಳೆ, ಮಲ್ಲಿನಾಥ ಮಂಠಾಳೆ, ವಿಜಯಲಕ್ಷ್ಮಿ ಗಡೆ ಇದ್ದರು.

ಪ್ರಮುಖರಾದ ರವಿ ಕೊಳಕುರ, ಶಿವ ಕುಮಾರ ಬಿರಾದರ, ಲಕ್ಷ್ಮಿಪುತ್ರ ನಿಂಬಾಳಕರ, ಶಿವಕುಮಾರ ಅಗ್ರೆ, ಬಸವರಾಜ ಬಾಲಕಿಲ, ಸಿ.ಬಿ.ಪರ್ತಾಪೂರೆ ಸೇರಿದಂತೆ ದೇವಸ್ಥಾನದ ಸಿಬ್ಬಂದಿ ವರ್ಗದವರು ಭಾಗವಹಿಸಿದರು.

> ಬಸವೇಶ್ವರ ದೇವಸ್ಥಾನದವರು ಜಾತ್ರಾ ನಿಮಿತ್ತ ಜನರಿಗಾಗಿಯೇ ಒಳ್ಳೆಒಳ್ಳೆಯ ಕೆಲಸ ಕಾರ್ಯಗಳು ಹಮ್ಮಿಕೊಂಡು ಬರುತ್ತಿರುವುದು ಶ್ಲಾಘನೀಯವಾಗಿದೆ ಮುಂದೆ ಸಹ ಇಂತಹ ಉತ್ತಮ ಕೆಲಸಗಳು ಅವರಿಂದ ನಡೆಯಲಿ.
>
> **-ಬಸವರಾಜ ಭೋಜಪ್ಪಾ,** ಪಂಚ ಕಮಿಟಿ ಅಧ್ಯಕರು

ಶ್ರೀಬಸವೇಶ್ವರರ ಜಯಂತಿ ನಿಮಿತ್ತ ಹಾಗೂ ಮಹಾತ್ಮ ಬಸವೇಶ್ವರರ 75 ನೇಯ ಜಾತ್ರಾ ಮಹೋತ್ಸವ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಶ್ರೀ ಅಮೃತಾನಂದ ಸ್ವಾಮಿಜೀಗಳು ಉದ್ಘಾಟಿಸಿದರು.

ಅಕಾಲಿಕ ಮಳೆಗೆ ಬೆಳೆ ಹಾನಿ: ರೈತರಿಂದ ಮಾಹಿತಿ ಪಡೆದ ಸಚಿವ ದರ್ಶನಾಪುರ

ಶಹಾಪುರ: ಅಕಾಲಿಕ ಗಾಳಿ, ಗುಡುಗು ಸಹಿತ ಮಳೆಗೆ ಅಪಾರ ಪ್ರಮಾಣದ ಬೆಳೆಗಳು ಮನೆಗಳು, ಹಾನಿಯಾದ ಹಿನ್ನೆಲೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಅವರು ಮತ್ತು ಅಧಿಕಾರಿಗಳ ತಂಡ ಶಾರದಹ್ಳಿ, ಕೊಂಗಂಡಿ, ಮಂಡಗಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ಗದ್ದೆಗಿಳಿದು ಪರಿಶೀಲಿಸಿ ರೈತರಿಂದ ಮಾಹಿತಿ ಪಡೆದರು.

ಹಾನಿಗೊಂಡ ಮನೆಗಳಿಗೆ ಮತ್ತು ಬೆಳೆ ಮತ್ತು ಜಾನುವಾರು ಕಳೆದುಕೊಂಡ ರೈತರಿಗೆ ಪರಿಹಾರ ಒದಗಿಸಲು ತಹಸೀಲ್ದಾರ್‌ಗೆ ಸೂಚಿಸಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊಂಗಂಡಿ, ಶಾರದಳ್ಳಿ, ಮಂಡಗಳ್ಳಿ ಗ್ರಾಮದಲ್ಲಿ 180 ರೈತರು ಬೆಳೆಗಳನ್ನು ಕಳೆದುಕೊಂಡಿದ್ದಾರೆ. 26 ಜಾನುವಾರುಗಳು ಮತ್ತು ಕೊಂಗಂಡಿಯಲ್ಲಿ 14, ಮಂಡಗಳ್ಳಿಯಲ್ಲಿ 6, ಶಾರದಳ್ಳಿ ಗ್ರಾಮದಲ್ಲಿ 4 ಮನೆಗಳು ಒಟ್ಟು 24 ಮನೆಗಳು ಮಳೆಗೆ ಹಾನಿಯಾಗಿದ್ದು, ಪ್ರತಿ ಮನೆಗೆ ವೈಯಕ್ತಿಕವಾಗಿ 10 ಸಾವಿರ ರು. ನೀಡಲಾಗುವುದು ಮತ್ತು ಮನೆಯ ಪತ್ರೆ ಹಾರಿ ಇಬ್ಬರು ಆಸ್ಪತ್ರೆಯಲ್ಲಿದ್ದು ಅವರ ಚಿಕಿತ್ಸೆಗೆ ವೈಯಕ್ತಿಕವಾಗಿ ತಲಾ 10 ಸಾವಿರ ರು. ಪರಿಹಾರ ನೀಡಲಾಗುವುದು. 300 ಎಕರೆ ಭತ್ತ ನಾಶವಾಗಿವೆ. 200 ವಿದ್ಯುತ್ ಕಂಬಗಳು ಸಹ ಹಾನಿಯಾಗಿದ್ದು ಹಗಲು ರಾತ್ರಿ ಎನ್ನದೇ ಅವರು ಸಹ ಕೆಲಸ ನಿರ್ವಹಿಸುತ್ತಿದ್ದಾರೆ. ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಮಾಹಂತ ಚಂದಾಪುರ, ತಹಸೀಲ್ದಾರ್ ಉಮಾಕಾಂತ ಹಳ್ಳೆ, ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಮಹಾಮಂಡಳಿ ರಾಜ್ಯ ನಿರ್ದೇಶಕ ಶಾಂತಗೌಡ ನಾಗನಟಗಿ, ಎಇಇ ಮರೆಪ್ಪ, ಕೆಇಬಿ ಜಿಲ್ಲಾ ಇಇ ರಾಜಶೇಖರ ಬಿಳವಾರ, ಗ್ರಾಪಂ ಅಭಿವೃದ್ಧಿ ಅಧಿಕಾರಿ, ವಿವಿಧ ಅಧಿಕಾರಿಗಳು ಸೇರಿದಂತೆ ಗ್ರಾಮಸ್ಥರು ಇದ್ದರು.

ಮಳೆಗೆ ಅಪಾರ ಪ್ರಮಾಣದ ಬೆಳೆಗಳು ಮನೆಗಳು, ಹಾನಿಯಾದ ಹಿನ್ನೆಲೆ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಪರಿಶೀಲಿಸಿದರು.

ಗ್ರಾಮೀಣ ಭಾಗದ ರಸ್ತೆಗಳಿಗೆ ಆದ್ಯತೆ

ಗ್ರಾಮೀಣ ಭಾಗಗಳ ರಸ್ತೆಗಳ ಅಭಿವೃದ್ಧಿ ಕೋಟ್ಯಾಂತರ ಅನುದಾನ ಒದಗಿಸಲಾಗುತ್ತಿದ್ದು, ಈಗಾಗಲೇ ವಿವಿಧ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ. ರಸ್ತಾಪುರ ದಿಂದ ಶಾರದಳ್ಳಿ ಗ್ರಾಮದ ವರೆಗೆ 3.8 ಕಿ.ಮೀ ರಸ್ತೆ ಹದಗೆಟ್ಟಿದ್ದು ಸುಗಮ ಸಂಚಾರಕ್ಕೆ ರಸ್ತೆ ನಿರ್ಮಾಣಕ್ಕೆ ಟೆಂಡರ್ ಆಗಿ ಕೆಲಸ ಪ್ರಾರಂಭವಾಗಿದ್ದು ಜನರಿಗೆ ಅನುಕೂಲವಾಗಲಿದೆ ಎಂದರು.

ಜಾತಿಗಣತಿ ಅಲ್ಲ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕತೆ ಸಮೀಕ್ಷೆ

ಶಹಾಪುರ: ಜಾತಿಗಣತಿ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಸ್ಪಷ್ಟವಾಗಿದ್ದು, ಇದೊಂದು ಸಾಮಾಜಿಕ ಮತ್ತು ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯ ಗಣತಿ. ಇದರಲ್ಲಿ 54 ಕಾಲಂಗಳಿದ್ದು. ಕೆಲ ಜಾತಿಗಳ ಸಂಖ್ಯೆ ಕಡಿಮೆ ನಮೂದಾಗಿದೆ. ವಾಸ್ತವದಲ್ಲಿ ಹೆಚ್ಚಿದೆ ಎನ್ನುವುದು ಅವರ ವಾದ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ಜಾತಿಗಣತಿಯ ಕುರಿತು ಪರ-ವಿರೋಧ ಚರ್ಚೆಗಳು ನಡೆಯುತ್ತಿರುವ ಕುರಿತು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾವುದೇ ಗ್ರಾಮಕ್ಕೆ ಬಂದು ಲೆಕ್ಕಾಚಾರ ಮಾಡಿಲ್ಲ ಎನ್ನುವುದು ಕೇಲವರ ವಾದವಾಗಿದೆ. ಜಾತಿಗಣತಿಯ ಬಗ್ಗೆ ಬಿಜೆಪಿಯವರು ಇಲ್ಲದ ಕ್ಯಾತೆ ತೆಗೆಯುತ್ತಿದ್ದಾರೆ. ಮುಖ್ಯಮಂತ್ರಿಗಳು ಮುಕ್ತವಾಗಿ ಅಭಿಪ್ರಾಯ ತಿಳಿಸಿದ್ದಾರೆ.

ಶೇ.94 ರಷ್ಟು ಮಂದಿ 1 ಕೋಟಿ 36 ಸಾವಿರ ಕುಟುಂಬದವರು ಸಹಿಯನ್ನು ಮಾಡಿದ್ದಾರೆ. ಆರ್ಥಿಕ ,ಶೈಕ್ಷಣಿಕ ನಿಟ್ಟಿನಲ್ಲಿ ಜಾತಿಗಣತಿ ಮಾಡಿದ್ದು, ಸರ್ಕಾರ ಈ ವರೆಗೆ ಎಷ್ಟು ಪ್ರಗತಿಯನ್ನು ಮಾಡಿದೆ ಎನ್ನುವ ನಿಟ್ಟಿನಲ್ಲಿ ವರದಿಯಾಗಿದ್ದು. ಇದು ಕೇವಲ ಜಾತಿಗಣತಿ ಎನ್ನುವ ಕುರಿತು ಮಾತ್ರ ಪ್ರಶ್ನಿಸುತ್ತಿದ್ದಾರೆ. ಸಾಮಾಜಿಕ ನ್ಯಾಯಕ್ಕೆ ಸಂಭಂಧಿಸಿದ ಎಲ್ಲ ಯೋಜನೆಗಳನ್ನು ಕಾಂಗ್ರೆಸ್ ಯಶಸ್ವಿಯಾಗಿ ಜಾರಿಗೊಳಿಸಿದೆ.

ಜಾತಿ ಗಣತಿ ವರದಿಯ ಬಗ್ಗೆ ಬಿಜೆಪಿಯವರು ಹೇಳಿಕೆ ನೀಡುತ್ತಿದ್ದು ಅವರು ಜನರ ಕೈಯಲ್ಲಿ ಜೋಂಬನ್ನು ನೀಡಿದ್ದಾರೆ. ಜನರಿಗೆ ತಲುಪಿಸುವ ಯೋಜನೆಗಳಲ್ಲಿ ರಾಜಕೀಯ ಮಾಡಬಾರದು.

ಕೊಟ್ಟ ಮಾತಂತೆ ನಡೆದುಕೊಳ್ಳುತ್ತೇವೆ: ಸಚಿವ ದರ್ಶನಾಪುರ

ವರ್ಷಕ್ಕೆ 60 ಸಾವಿರ ಕೋಟಿ ರು. ಹಣ ಗ್ಯಾರಂಟಿಗಳಿಗೆ ವೆಚ್ಚವಾಗಲಿದ್ದು, ಇದಕ್ಕಾಗಿಯೇ ತೆಲಂಗಾಣ ಸರಕಾರ ಗ್ಯಾರಂಟಿ ಕೈಬಿಟ್ಟಿದ್ದಾರೆ. ಆದರೆ ನಾವು 2 ವರ್ಷಗಳಿಂದ ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ. ಯಾವುದೇ ಗ್ಯಾರಂಟಿಗಳು ನಿಲ್ಲಲ್ಲ, ಎರಡು ತಿಂಗಳು ತಡವಾದರು ಸಹ ನಾವು ಕೊಟ್ಟ ಮಾತಂತೆ ನಡೆದುಕೊಳ್ಳುತ್ತೇವೆ ಎಂದು ಸಚಿವ ದರ್ಶನಾಪುರ ತಿಳಿಸಿದರು.

ಸರಕಾರಿ ಸೌಲಭ್ಯ ಅಲೆಮಾರಿ ಜನರಿಗೆ ತಲುಪಿಸಿ

ಬೀದರ : ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಅಲೆಮಾರಿ ಜನರಿಗೆ ತಲುಪಿಸಬೇಕೆಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ ಹಾಗೂ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಬೀದರ ಜಿಲ್ಲೆಯಲ್ಲಿ ಮೂರು ದಿವಸ ಪ್ರವಾಸಕೈಗೊಂಡ ಅವರು ಹುಮನಾಬಾದ, ಬಸವಕಲ್ಯಾಣ, ಭಾಲ್ಕಿ, ಔರಾದ ಮತ್ತು ಬೀದರನ ಅಲೆಮಾರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ನಿವಾಸಿಗಳೊಂದಿಗೆ ಮಾತನಾಡಿ, ಸಮಸ್ಯೆಗಳನ್ನು ತಿಳಿದುಕೊಳ್ಳಲಾಯಿತು. ನಿಗಮ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಪೂರಕವಾಗಿದೆ. ಪ್ರತಿ ಜಿಲ್ಲೆಯಲ್ಲೂ ಪ್ರವಾಸ ಮಾಡಿ ಅಲೆಮಾರಿಗಳ ಸ್ಥಿತಿಗತಿ, ಸಮಸ್ಯೆಗಳಲ್ಲಿ ಪರಿಶೀಲಿಸಿ ಸರಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

ನಿಗಮದ ಕಾರ್ಯದರ್ಶಿ ಆನಂದ್, ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಸಿಂಧು ರಘು ಹಚ್.ಎಸ್, ಬೀದರನ ತಹಸೀಲ್ದಾರ ಟಿ.ಮೆಹತ್, ಡಿ.ವಾಯ್.ಎಸ್.ಪಿ.ಶಿವನಗೊಡ ಪಾಟೀಲ್, ಎಲ್ಲ ತಾಲೂಕಿನ ಸಮಾಜ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಅಲೆಮಾರಿ ಅನುಷ್ಠಾನ ಸಮಿತಿ ಸದಸ್ಯರುಗಳು, ಅಲೆಮಾರಿ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಮಾತನಾಡಿದರು.

> ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ಪಾಲಕರು ಆದ್ಯತೆ ನೀಡಬೇಕು. ಅಲೆಮಾರಿಗಳು ಮನೆ, ಸ್ವಯಂ ಉದ್ಯೋಗ, ಒಟ್ಟಾರೆಯಾಗಿ ಜೀವನದಲ್ಲಿ ಭದ್ರತೆ ದೊರೆತು ಸಮಾಜದ ಮುಖ್ಯವಾಹಿನಿಗೆ ಬರಬೇಕು. ಪ್ರತಿ ಹಂತದಲ್ಲಿ ಸರಕಾರ ಸವಲತ್ತುಗಳನ್ನು ಒದಗಿಸುತ್ತಿದೆ.
>
> **-ಪಲ್ಲವಿ ಜಿ.,** ಅಲೆಮಾರಿ ನಿಗಮದ ಅಧ್ಯಕ್ಷೆ

ಕಪ್ಪುಪಟ್ಟಿ ಧರಿಸಿ ನೌಕರರಿಂದ ಪ್ರತಿಭಟನೆ

ಔರಾದ್: ತಮ್ಮನ್ನು ಸರಕಾರಿ ನೌಕರರು ಎಂದು ಪರಿಗಣಿಸುವುದು, ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘವು, ತೋಳಿಗೆ ಕಪ್ಪುಪಟ್ಟಿ ಧರಿಸಿ ಕೆಲಸ ಮಾಡುವ ಮೂಲಕ ಸಾಂಕೇತಿಕ ಪ್ರತಿಭಟನೆ ಆರಂಭಿಸಿದೆ. ರಾಜ್ಯ ಪರಿಷತ್ತಿನ ಕಾರ್ಯಕಾರಣಿ ಸಭೆ ನಡೆಸಿದ್ದ ಸಂಘವು, ಬೇಡಿಕೆ ಈಡೇರಿಕೆಗಾಗಿ ಗಡುವು ಕೊಟ್ಟಿದೆ. ಈ ಅವಧಿಯಲ್ಲಿ ಕಪ್ಪುಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸುವುದು, ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಕೆ ಸೇರಿದಂತೆ ವಿವಿಧ ರೀತಿಯ ಪ್ರತಿಭಟನೆ ಮೂಲಕ ಸರಕಾರದ ಗಮನ ಸೆಳೆಯಲು ನೌಕರರಿಗೆ ಸೂಚನೆ ನೀಡಿದೆ. ಅದರಂತೆ ಔರಾದ್ ಪಟ್ಟಣದಲ್ಲಿಯೂ ಪೌರ ನೌಕರರು ಸಾಂಕೇತಿಕ ಪ್ರತಿಭಟನೆ ಆರಂಭಿಸಿದೆ ಎಂದು ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೈಯದ್ ಖಾನ್ ತಿಳಿಸಿದರು.

ನಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವಂತೆ ಪೌರಾಡಳಿತ ಸಚಿವರು ಮತ್ತು ಉನ್ನತ ಅಧಿಕಾರಿಗಳಿಗೆ ಹಲವು ವರ್ಷಗಳಿಂದ ಒತ್ತಾಯಿಸುತ್ತಲೇ ಬಂದಿದ್ದೇವೆ. ಲೆಕ್ಕವಿಲ್ಲದಷ್ಟು ಸಲ ಮನವಿ ಸಲ್ಲಿಸಿದ್ದೇವೆ. ಆದರೂ, ಸರಕಾರ ಸ್ಪಂದಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೀರು ಸರಬರಾಜು ಸಹಾಯಕರು ವಾಹನ ಚಾಲಕರು ಬೀದಿದೀಪ ನಿರ್ವಹಣೆಗಾರರು ಲೋಡರ್ಸ್ ಉದ್ಯಾನ ನಿರ್ವಹಣೆಗಾರರು ಕಾವಲುಗಾರರು ಸ್ಯಾನಿಟರಿ ಮೇಲ್ವಿಚಾರಕರು ದಿನಗೂಲಿ ಮತ್ತು ಕ್ಷೇಮಾಭಿವೃದ್ಧಿ ನೌಕರರು ಸೇರಿದಂತೆ ವಿವಿಧ ವೃಂದಗಳಲ್ಲಿ ಇರುವವರನ್ನು ಖಾಯಂ ಮಾಡಬೇಕು. ನೌಕರರಿಗೆ ಸರಕಾರದ ಎಸ್‌ಎಫ್‌ಸಿ (ರಾಜ್ಯ ಹಣಕಾಸು ಆಯೋಗ) ಮುಕ್ತನಿಧಿಯಿಂದ ವೇತನ ಪಾವತಿಸಬೇಕು. ಐ.ಪಿ.ಡಿ ಸಾಲಪ್ಪ ವರದಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಪಪಂ ಮುಖ್ಯಾಧಿಕಾರಿ ಸ್ವಾಮಿದಾಸ ಅಣದೂರೆ ಅವರಿಗೆ ಮನವಿ ಸಲ್ಲಿಸಿದರು. ಪ್ರಮುಖರಾದ ಪೌರ ನೌಕರರ ಸಂಘದ ಶಾಖಾ ಅಧ್ಯಕ್ಷ ಎಂ.ಡಿ ಸಮೀ, ಸ್ವಾಮಿದಾಸ ಮಸಕೆ, ತಿಪ್ಪಣ್ಣ, ರೋಹಿದಾಸ, ನರಸಿಂಗ, ಸಂಜು, ಲಕ್ಷ್ಮೀಬಾಯಿ, ಸೋನಮ್ಮ, ಮೊಗಲಮ್ಮ, ಸರಸ್ವತಿ ಅನೇಕರಿದ್ದರು.

Muthoot Money

ಚಿನ್ನದ ಹರಾಜಿನ ಸೂಚನಾ ಪತ್ರ

GSTN - 29AABCM5816A1ZR

Registered Office: Muthoot Money Limited, Corporate office, #3-6-2/1/1, 3rd Floor, Grandpa's Royal Mansion, Hyderabad, Telangana 500029

ಈ ಮೂಲಕ ಎಚ್ಚರಿಕೆ ಮಾಹಿತಿಯನ್ನು ನೀಡುತ್ತಿದ್ದು ನೀವು ನಿಮ್ಮ ಚಿನ್ನಾಭರಣವನ್ನು ಈ ಕೆಳಕಂಡ ಶಾಖೆಗಳಲ್ಲಿ ಗಿರಿವಿ ಇಟ್ಟಿದ್ದು, ಪುನರಾವರ್ತಿತ ಪ್ರಕಟಣೆಗಳನ್ನು ನೀಡಿದ್ದರೂ ಸಹ ಪಡೆದುಕೊಂಡ ಬಾಕಿ ಮೊತ್ತವನ್ನು ನೀಡಲು ವಿಫಲರಾಗಿದ್ದಿರಿ. ಆದ್ದರಿಂದ ಕಂಪನಿಯು ಸಂಬಂಧಪಟ್ಟ ಶಾಖೆಗಳಲ್ಲಿ ದಿನಾಂಕ **28.04.2025** ರಂದು ಬೆಳಿಗ್ಗೆ **10.00** ಗಂಟೆಗೆ ಹರಾಜು ಮಾಡಲು ನಿರ್ಧರಿಸಿರುತ್ತಾರೆ. ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದ ಹರಾಜು ನಡೆಯದಿದ್ದರೆ, ಹರಾಜುಗಾರರು ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಹಕ್ಕನ್ನು ಹೊಂದಿರುತ್ತಾರೆ ಹಾಗೂ ಯಾವುದೇ ಸೂಚನಾ ಪತ್ರ ನೀಡದೆ ಎರಡನೇ ಹರಾಜಿನ ದಿನಾಂಕದಂದು ಅಥವಾ ಅನಂತರದ ದಿನಾಂಕಗಳಂದು ಹರಾಜು ಪ್ರಕ್ರಿಯೆಯನ್ನು ಈ ಕೆಳಗೆ ನೀಡಿರುವ ವಿಳಾಸದಲ್ಲಿ ನಡೆಸಲಾಗುತ್ತಾದೆ. ಹಾರಾಜು ಹಾಕುವ ದಿನಾಂಕದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ,ಬದಲಾದ ದಿನಾಂಕವನ್ನು ಹರಾಜು ನಡೆಯುವ ಸ್ಥಳದಲ್ಲಿ, ಸೂಚಿಸಲಾಗುವುದು.

ಎರಡನೇ ಹರಾಜು ದಿನಾಂಕ : **05.05.2025, 02:00 PM,** ಹರಾಜು ಕೇಂದ್ರ : **MUTHOOT MONEY LTD,SANAMESHWAR COMPLEX MAIN ROAD,CHITRA CORNER,OLD CITY BIDAR - 585 403,KARNATAKA**
Spurious and Low quality ornaments: BIDAR-OLD CITY MAIN ROAD(0115) : MSL-860

ಎರಡನೇ ಹರಾಜು ದಿನಾಂಕ : **05.05.2025, 02:00 PM,** ಹರಾಜು ಕೇಂದ್ರ : **MUTHOOT MONEY LTD,# 20, First floor Hemareddy Mallamma Complex,Hunasagi Road,Kembhavi Taluka,Shorapur Dist, Gulbarga-585216**
Spurious and Low quality ornaments: KEMBHAVI(0397) : MSL-29,MSL-39,MSL-116

ಎರಡನೇ ಹರಾಜು ದಿನಾಂಕ : **05.05.2025, 02:00 PM,** ಹರಾಜು ಕೇಂದ್ರ : **MUTHOOT MONEY LTD,GROUND FLOOR,BEHIND KSRTC BUS STAND,DEVARHIPPARGI,VIJAYAPUR,KARANATAKA-586115**
Spurious and Low quality ornaments: DEVARHIPPARGI(0554) : MSL-107, NIDAGUBNDI(0555) : MSL-98

Note: Customers can release the gold ornaments before the auction date (28.04.2025).
Note: Bidders are requested to produce Identity Card / Pan Card No./ GST Certificate. (Incase Registered Dealers) Successful bidders should transfer the full auction amount by RTGS

For Muthoot Money,
Mr. Sam George, Advocate, No 313, # 3 in 2nd Floor, Bhaskar Arcade, Opp.Durgaparameshwari Temple Arch, Narasipura Layout, Vidyaranyapura Main Road, Vidyaranyapura, Bengaluru - 560097

Place : GULBURGA
Date : 21.04.2025

ಜನಿವಾರ ಘಟನೆ ಅಕ್ಷಮ್ಯ ಅಪರಾಧ: ಖಂಡನೆ

ಪಟ್ಟಣದ ತಹಸೀಲ್ ಕಾರ್ಯಾಲಯದಲ್ಲಿ ತಹಸೀಲ್ದಾರ ಬಸಲಿಂಗಪ್ಪ ನೈಕೋಡಿ ಅವರಿಗೆ ವಿಪ್ರ ಸಮಾಜದಿಂದ ಮನವಿ ಸಲ್ಲಿಸಲಾಯಿತು.

ಹುಣಸಗಿ: ಬೀದರ್ ಮತ್ತು ಶಿವಮೊಗ್ಗದಲ್ಲಿ ನಡೆದ ಸಿಇಟಿ ಪರೀಕ್ಷೆ ಬರೆಯುವಾಗ ತಪಾಸಣೆ ನೆಪದಲ್ಲಿ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಯ ಜನಿವಾರ ತೆಗೆಸಿದ ಅಧಿಕಾರಿಗಳ ನಡೆ ಅಕ್ಷಮ್ಯ ಅಪರಾಧವಾಗಿದೆ ಎಂದು ತಾಲೂಕು ವಿಪ್ರ ಸಮಾಜ ಮುಖಂಡ ರವಿ ಕುಲಕರ್ಣಿ ತೀವ್ರವಾಗಿ ಖಂಡಿಸಿದ್ದಾರೆ.

ಪಟ್ಟಣದ ತಹಸೀಲ್ದಾರ ಕಾರ್ಯಾಲಯ ಆವರಣದಲ್ಲಿ ತಹಸೀಲ್ದಾರ ಬಸಲಿಂಗಪ್ಪ ನೈಕೋಡಿ ಅವರಿಗೆ ರಾಜ್ಯ ಪಾಲರಿಗೆ ಬರೆದ ಮನವಿ ಪತ್ರವನ್ನು ಸಲ್ಲಿಸಿ ಮಾತನಾಡಿದ ಅವರು, ಸಿಇಟಿ ಬರೆಯುವಾಗ ವಿದ್ಯಾರ್ಥಿಗಳ ತಪಾಸಣೆ ಮಾಡಬೇಕು. ಆದರೆ ಭಾವನೆಗಳಿಗೆ ಧಕ್ಕೆ ಬರುವಂತೆ ಹಾಗೂ ಒಂದು ಸಮುದಾಯದ ಜೀವನ, ಶೈಲಿ ಪದ್ಧತಿ ವಿರುದ್ಧದ ರೀತಿಯಲ್ಲಿ ಜನಿವಾರ ತೆಗೆಸಿದ್ದು ಉದ್ದೇಶ ಪೂರ್ವಕವಾಗಿಯೇ ಇದೊಂದು ಷಡ್ಯಂತ್ರವಾಗಿದೆ ಎಂದು ಆಗ್ರಹಿಸಿದರು.

ತಪಾಸಣೆಗೆ ಕೆಲ ಮಾನದಂಡಗಳೇ ಅನುಸರಿಸಬೇಕು. ಇವುಗಳ ಮೀರಿ ಮೀರಿ ಜನಿವಾರ ತೆಗೆಸಿದ್ದು ವಿಪ್ರ ಸಮಾಜಕ್ಕೆ ಮಾಡಿದ ಅಪಮಾ ನವಾಗಿದೆ. ಕೂಡಲೇ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಚ್ಚರಿಸಿದರು.

ವಿಪ್ರ ಸಮಾಜದ ಹಿರಿಯರಾದ ಚಂದ್ರಕಾಂತ ದೇಶ ಪಾಂಡೆ, ರಾಘವೇಂದ್ರಚಾರ್ಯ ಜೋಶಿ, ಮಾರ್ತಂಡರಾವ್ ಕುಲಕರ್ಣಿ, ಮಾಧವರಾವ್ ದೇಶಪಾಂಡೆ, ಸಚಿನ್ ಆದೋನಿ, ವಿನಯ್ ಜೋಶಿ, ಜಗನ್ನಾಥ ಆಚಾರ್ಯ, ಸಂತೋಷ ಅಹಂಕಾರಿ, ಶಾಮಸುಂದರ್ ದೇಶಪಾಂಡೆ, ಗಂಗಾಧರ ಜಹಾಗೀರದಾರ್, ವೆಂಕಟೇಶ್ ಜೋಶಿ, ಕೊಡೇಕಲ್, ನರಸಿಂಹರಾವ್ ಜಹಾಗೀರದಾರ್, ಭೀಮಸೇನರಾವ್ ಕುಲಕರ್ಣಿ, ಶ್ರೀನಿವಾಸ್ ಕುಲಕರ್ಣಿ, ಪ್ರಾಣೇಶ್ ದೇಶಪಾಂಡೆ, ವಿನಾಯಕ ದೇಶಪಾಂಡೆ, ಹರೀಶ ಜೋಶಿ ಇದ್ದರು.

ದೀಪಾಲಂಕೃತಗೊಂಡ ಬಸವೇಶ್ವರ ದೇವಸ್ಥಾನ

ಕೆಂಭಾವಿ: ಪಟ್ಟಣದ ಸಮೀಪ ನಗನೂ ಗ್ರಾಮದ ಆರಾಧ್ಯ ದೈವ ಶ್ರೀ ಶರಣಬಸವೇಶ್ವರರ 178ನೇ ಜಾತ್ರಾ ಮಹೋತ್ಸವ ನಿಮಿತ್ತ 23 ನೇ ವರ್ಷದ ಸರಳ ಸಾಮೂಹಿಕ ವಿವಾಹ ಮಹೋತ್ಸವ ಹಾಗೂ ಜಂಗಮ ಗಣಾರಾಧನೆಯ ನಿಮಿತ್ತ ಏ.22 ರಂದು ಧರ್ಮಸಭೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪೀಠಾಧಿಪತಿ ಶ್ರೀ ಶರಣಪ್ಪ ಶರಣರು ತಿಳಿಸಿದ್ದಾರೆ. ಮಂಗಳವಾರ ನಡೆಯುವ ಧರ್ಮ ಸಭೆಯ ಸಾನಿಧ್ಯವನ್ನು ಷ.ಬ್ರ.ಮರುಳಾರಾಧ್ಯ ಶಿವಾಚಾ ರ್ಯರು, ಷ.ಬ್ರ.ಸೂಗೂರೇಶ್ವರ ಶಿವಾಚಾರ್ಯರು, ಮ.ನಿ.ಪ್ರ. ಗುರುಲಿಂಗ ದೇವರು, ಶ್ರೀ ಬಸವಯ್ಯಸ್ವಾಮಿಗಳು, ವೇ.ಬಸವ ರಾಜ ಸ್ವಾಮಿಗಳು ಸ್ಥಾವರಮಠ, ವೇ.ಅಮರಯ್ಯಸ್ವಾಮಿ ಜಾಲಿ ಬೆಂಚಿ, ಶ್ರೀ ಖಂಡಪ್ಪ ತಾತಾ, ಶ್ರೀದೊಡ್ಡಪ್ಪ ತಾತಾ ವಹಿಸುವರು. ಸಚಿವ ಶರಣ ಬಸಪ್ಪಗೌಡ ದರ್ಶನಾಪೂರ ಉದ್ಘಾಟನೆ ನೆರವೇರಿ ಸುವರು. ಶಾಸಕ ಅಲ್ಲಮ ಪ್ರಭು ಪಾಟೀಲ, ರಾಜಾ ವೇಣು ಗೋಪಾಲ ನಾಯಕ, ಮುಖಂಡ ಗುರುಪಾಟೀಲ ಶಿರವಾಳ, ಅಮೀನರೆಡ್ಡಿ ಪಾಟೀಲ ಯಾಳಗಿ, ಡಾ.ಶಂಕ್ರಣ್ಣ ಎಲ್.ವಣಿಕ್ಯಾಳ ಕುಲಸಚಿವರು ರಾಯಚೂರ ವಿವಿ, ದೇವಿಂದ್ರಪ್ಪಗೌಡ ಗೌಡಗೇರಿ ಭಾಗವಹಿಸಲಿದ್ದಾರೆ.

ಸಮಾಚಾರ ಸಣ್ಣದಲ್ಲ

ಜನಿವಾರ ತೆಗೆದಿದ್ದು ತಪ್ಪು: ಬಾಲರಾಜ್

ಕಲಬುರಗಿ: ಬೀದರ್ ಮತ್ತು ಶಿವಮೊಗ್ಗದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಇಉಖ) ಕೇಂದ್ರದಲ್ಲಿ ಸಿಬ್ಬಂದಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ ತಪ್ಪು ಎಂದು

ಜೆಡಿಎಸ್ ಜಿಲ್ಲಾಧ್ಯಕ್ಷ ಬಾಲ ರಾಜ್ ಗುತ್ತೇದಾರ ಅವರು ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರತಿ ಜಾತಿ ಧರ್ಮದ ನಂಬಿಕೆ ಗೌರವಿಸುವುದನ್ನು ಕಲಿಯಬೇಕು. ಜನಿವಾರ ಹಾಕಿದ್ದಕ್ಕೆ ಪರೀಕ್ಷೆಗೆ ಕೂರಿಸದೇ ಇರುವುದು ಸರಿಯಲ್ಲ. ಈ ಘಟನೆಯನ್ನು ನಾನು ಖಂಡಿಸುತ್ತೇನೆ. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದರು. ಜನಿವಾರ ಹಾಕಿಕೊಂಡು ಕಾಪಿ ಹೊಡೆಯೋಕೆ ಆಗುತ್ತಾ? ಜನಿವಾರದಲ್ಲಿ ಕಾಪಿ ಚೀಟಿ ಇಟ್ಟುಕೊಂಡು ಹೋಗೋಕೆ ಆಗುತ್ತಾ? ಜನಿವಾರ ಇದ್ದರೆ ಏನು ಸಮಸ್ಯೆ? ಸ್ಮಾರ್ಟ್‌ವಾಚ್ ಕಟ್ಟಿಕೊಂಡು ಬಂದರೆ ನೀವು ತೆಗೆಸಬೇಕು ಎನ್ನುವುದು ಸರಿ. ಆದರೆ ಜನಿವಾರ ತೆಗೆದು ಒಂದು ಸಮುದಾಯಕ್ಕೆ ಅವಮಾನ ಮಾಡೋದು ಸರಿಯಲ್ಲ. ಈ ಘಟನೆ ಬಗ್ಗೆ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಬುದ್ಧಿವಾದ ಹೇಳಬೇಕು. ಮುಂದೆ ಇಂತಹ ಘಟನೆ ಆಗದಂತೆ ಕ್ರಮ ವಹಿಸಬೇಕು ಎಂದು ಬಾಲರಾಜ್ ಗುತ್ತೇದಾರ ತಿಳಿಸಿದರು.

ಮೇ 14ರಿಂದ ರಾಷ್ಟ್ರೀಯ ಸಮ್ಮೇಳನ

ಕಲಬುರಗಿ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಆಂಟಿಮೈಕ್ರೋಬಿಯಲ್ ರೆಸಿಸ್ಟನ್ಸ್: ಸ್ಟ್ರಾಟೆಜಿಎಸ್ ಫಾರ್ ಪ್ರಿವೆನ್‌ಶನ್ ಅಂಡ್ ಆಲ್ಟನೇಟಿವ್ಸ್ (Antimicrobial Resistance: Strate gies for Prevention and Alternatives ವಿಷಯದ ಕುರಿತು ಮೇ14 ರಿಂದ 16 ರವರೆಗೆ ಮೂರು ದಿನಗಳ ಕಾಲ ಅಕಾಡೆಮಿಯ ಕಚೇರಿಯಲ್ಲಿ ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ. ಈ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸ ನೀಡಲಿದ್ದಾರೆ. ಈ ಸಮ್ಮೇಳನದಲ್ಲಿ ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು Research Paper presentation ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ Research Paper ಗಳಿಗೆ ನಗದು ಬಹುಮಾನ ನೀಡಲಾಗುತ್ತದೆ. ಆಸಕ್ತ ಪ್ರತಿನಿಧಿಗಳು ಮೇ 6 ರೊಳಗಾಗಿ Google form-https://forms.gle/nphLXewAESvuPP5Y8ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ. 9845258894 ಹಾಗೂ https//: kstacademy.in ವೆಬ್‌ಸೈಟ್‌ನ್ನು ವೀಕ್ಷಿಸಬಹುದಾಗಿದೆ.

ಜಿಲ್ಲೆಯಲ್ಲಿ ಸಖತ್ ಬಿಸಿಲಿನ ಝಳ, ತತ್ತರಿಸಿದ ಜನ

ರಣ ಬಿಸಿಲಿಗೆ ಜನ ಹೈರಾಣು | ತಂಪು ಪಾನೀಯ, ನೆರಳಿನ ಆಸರೆಯ ಮೊರೆ | ಮುಂದಿನ ಒಂದು ವಾರದವರೆಗೂ ಭಾಸ್ಕರನ ಅಬ್ಬರ

ದೇವೇಂದ್ರ ಜಾಡಿ ಕಲಬುರಗಿ

ಜಿಲ್ಲೆಯಲ್ಲಿ ಕಳೆದ ಕೆಲ ದಿನಗಳಿಂದ ಬಿಸಿಲಿನ ಧಗೆ ಏರಿಕೆ ಕಂಡಿದ್ದು, ಜನ ತತ್ತರಿಸಿ ಹೋಗಿದ್ದಾರೆ. ಕಳೆದ ಮೂರು ದಿನಗಳಿಂದ ಜಿಲ್ಲೆಯಲ್ಲಿ ತಾಪಮಾನ 43 ಡಿಗ್ರಿ, ಸೆಲ್ಸಿಯಸ್‌ಗೆ ಏರಿಕೆಯಾಗಿದ್ದು, ಜನರು ಬಿಸಿಲಿನ ಝಳಕ್ಕೆ ಬಸವಳಿದು ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ.

ಮುಂದಿನ ವಾರವೂ ಬಿಸಿಲಿನ ಅಬ್ಬರ

ಕಲಬುರಗಿಯಲ್ಲಿ ಕಳೆದ ಮೂರು ದಿನಗಳಿಂದ 43 ಡಿಗ್ರಿ ಸೆಲ್ಸಿಯಸ್ ಬಿಸಿಲಿ ಹೊಡೆಯುತ್ತಿದೆ. ಶುಕ್ರವಾರ, ಶನಿವಾರ ಹಾಗೂ ಭಾನುವಾರ ನಿರಂತರ ಬಿಸಿಲಿನ ಝಳಕ್ಕೆ ಜನ ಸಂಪೂರ್ಣ ತತ್ತರಿಸಿದ್ದಾರೆ. ಇನ್ನೂ, ಮುಂದಿನ ಸೋಮವಾರ, ಮಂಗಳವಾರ, ಬುಧವಾರ ಹಾಗೂ ಗುರುವಾರದವರೆಗೂ ಜಿಲ್ಲೆಯಲ್ಲಿ 41ರ ಅಸುಪಾಸಿನಲ್ಲಿ ತಾಪಮಾನ ಇರಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ತಾಪಮಾನ ಏರಿಕೆ ಆಗುವ ಹೆಚ್ಚಿನ ಸಾಧ್ಯತೆ ಹಿನ್ನೆಲೆ ನೀರಿನಾಂಶ ಕಾಯ್ದುಕೊಳ್ಳಲು ವೈದ್ಯರು ಸಲಹೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಏರಿಕೆಯಾಗುತ್ತಿರುವ ಬಿಸಿಲಿನ ತಾಪಮಾನ ತಾಳದೇ ಛತ್ರಿ, ಮೊರೆ ಹೋದ ಜನ.

ದಿನೇ ದಿನೇ ಬಿಸಿಲಿನ ಉಷ್ಣತೆ ಏರಿಕೆ ಕಾಣುತ್ತಲೇ ಇದ್ದು, ಬೀದಿಗಿಳಿಯುವವರಿಗೆ ತೀವ್ರ ತೊಂದರೆಯಾಗಿದೆ. ಬಿಸಿಲಿನಿಂದ ರಕ್ಷಣೆಗಾಗಿ ಜನರು ತಂಪು ಪಾನೀಯಗಳಿಗೆ ಮೊರೆ ಹೋಗುತ್ತಿದ್ದಾರೆ. ರಸ್ತೆಬದಿಯ ಜ್ಯೂಸ್ ಸೆಂಟರ್, ತಂಪು ಪಾನೀಯದಂಗಡಿಗಳಲ್ಲಿ ಗಿರಾಕಿಗಳ ದಟ್ಟಣೆ ಕಾಣುತ್ತಿದೆ. ಲಿಂಬೂ ಶರಬತ್, ಕಬ್ಬಿನ ರಸ, ಎಳನೀರು ಮತ್ತು ಐಸ್‌ಕ್ರೀಂಗಳ ಬೇಡಿಕೆ ಹೆಚ್ಚಾಗಿದೆ.

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ನೆರಳು ಇಲ್ಲದೇ ಇರುವುದರಿಂದ ವಾಹನ ಸವಾರರು ನೆರಳಿಗಾಗಿ ಪರದಾಟ ನಡೆಸುತ್ತಿದ್ದು, ಮರದ ನೆರಳು, ಬಸ್ ತಂಗುದಾಣದ ಶೆಡ್‌ಗಳು ಮತ್ತು ದೊಡ್ಡ ಕಟ್ಟಡಗಳ ಛಾಯೆಯಲ್ಲಿ ಜನರು ಆಶ್ರಯ ಪಡೆಯುತ್ತಿರುವ ದೃಶ್ಯಗಳು ಕಂಡುಬರುತ್ತಿವೆ. ಬಿಸಿಲಿನ ತೀವ್ರತೆಯಿಂದ ರಸ್ತೆಯಲ್ಲಿ ನಿಲ್ಲಲು ಕಷ್ಟವಾಗಿದೆ. ನೆರಳು ಸಿಗದಿದ್ದರೆ ತಲೆಸುತ್ತು, ಮೂರ್ಛೆ ಹೋಗುವ ಸಾಧ್ಯತೆಗಳು ಅಧಿಕವಾಗಿವೆ.

ಬಿಸಿಲಿನ ಝಳಕ್ಕೆ ರಸ್ತೆಯಲ್ಲಿ ನಿಲ್ಲಲಾಗುತ್ತಿಲ್ಲ. ತಂಪು ಪಾನೀಯಗಳು ಮತ್ತು ನೆರಳಿನ ಆಸರೆಯೇ ಜೀವಕ್ಕೆ ಆಧಾರವಾಗಿವೆ. ಜಿಲ್ಲಾಡಳಿತ ವತಿಯಿಂದ ಯಾವುದೇ ಸೌಕರ್ಯ ಮಾಡಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಟ್ರಾಫಿಕ್‌ನಲ್ಲಿ ನೆರಳು ಇಲ್ಲದೇ ಪರದಾಟ ನಡೆಸುವಂತೆ ಆಗಿದೆ. ಟ್ರಾಫಿಕ್‌ನಲ್ಲಿ ಹಸಿರು ಹೊದಿಕೆ ಹಾಕಿಸಬೇಕು.

– ಸೂರಿ ಪಾಟೀಲ್ ಮಂದೇವಾಲ್, ನಿವಾಸಿ

ಹಸಿರು ಹೊದಿಕೆಗೆ ಹೆಚ್ಚಿದ ಬೇಡಿಕೆ

ನಗರದ ಪ್ರಮುಖ ಸಿಗ್ನಲ್‌ಗಳಲ್ಲಿ ಒಂದರಿಂದ ಒಂದೂವರೆ ನಿಮಿಷ ಕಾಯುವ ಸಮಯದಲ್ಲಿ ಸೂರ್ಯನ ಕಿರಣಗಳು ವಾಹನ ಸವಾರರನ್ನು ಹೈರಾಣುಗೊಳಿಸುತ್ತಿವೆ. ಇದನ್ನು ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ, ಜಗತ್ ಸರ್ಕಲ್, ಖರ್ಗೆ ಪೆಟ್ರೋಲ್ ಪಂಪ್, ರಾಮಮಂದಿರ ವೃತ್ತ ಹಾಗೂ ಹುಮನಾಬಾದ್ ರಿಂಗ್ ರೋಡ್ ಬಳಿ ಹೆಚ್ಚಿನ ದಟ್ಟಣೆ ಇರುತ್ತದೆ. ಹೀಗಾಗಿ, ಮಹಾನಗರ ಪಾಲಿಕೆಯು ಸಾರ್ವಜನಿಕರ ಹಿತದೃಷ್ಟಿಯಿಂದ ನೆರಳಿನ ಪರದೆಯ ವ್ಯವಸ್ಥೆಯನ್ನು ಮಾಡುವಂತೆ ಸಾರ್ವಜನಿಕರು ಒತ್ತಡ ಹೇರುತ್ತಿದ್ದಾರೆ.

ಮುಂದಿನ ಕೆಲವು ದಿನಗಳಲ್ಲಿ ತಾಪಮಾನ ಇನ್ನಷ್ಟು ಏರಿಕೆಯಾಗುವ ಸಾಧ್ಯತೆಯಿದೆ. ಜನರಿಗೆ ಬೆಳಗ್ಗಿನ ವೇಳೆಯಲ್ಲಿ ಅಗತ್ಯ ಕೆಲಸಗಳನ್ನು ಮುಗಿಸಿ, ಮಧ್ಯಾಹ್ನದ ಬಿಸಿಲಿನಿಂದ ದೂರವಿರುವಂತೆ ಹವಾಮಾನ ಇಲಾಖೆ ಸೂಚಿಸಿದೆ. ಜತೆಗೆ, ದೇಹದಲ್ಲಿ ನೀರಿನಾಂಶ ಕಾಪಾಡಿಕೊಳ್ಳಲು ಆಗಾಗ ನೀರು, ತಂಪು ಪಾನೀಯಗಳನ್ನು ಸೇವಿಸುವಂತೆ ವೈದ್ಯರು ತಿಳಿಸಿದ್ದಾರೆ.

ಆದರೆ, ಕೆಲವೆಡೆ ಜಿಲ್ಲಾಡಳಿತ ವತಿಯಿಂದ ಉಚಿತ ಕುಡಿಯುವ ನೀರಿನ ವ್ಯವಸ್ಥೆ, ಸೂಕ್ತ ನೆರಳಿನ ವ್ಯವಸ್ಥೆಗಾಗಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಬೇಕು ಎನ್ನುವುದರ ಜತೆಗೆ ಜನರು ಇನ್ನಷ್ಟು ಸೌಲಭ್ಯಗಳನ್ನು ಒದಗಿಸುವಂತೆ ಜಿಲ್ಲಾಡಳಿತಕ್ಕೆ ಜನರು ಒತ್ತಾಯಿ ಸುತ್ತಿದ್ದಾರೆ.

ಲಿಂಗ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ

ಆಳಂದ: ಪಡಸಾವಳಿ ಗ್ರಾಮದ ಶ್ರೀ ಧರ್ಮರಾಯ ಭಕ್ತರನ್ನು ಸಂಕಟ ದೂರ ಮಾಡುವುದರ ಜತೆಗೆ ಬೇಡಿದ ವರ ಕೊಡುವ ದೇವರು ಆಗಿದ್ದಾರೆಂದು ಜಿಡಗಾ-ಮುಗಳಖೋಡ ಮಠದ ಪೀಠಾಧಿಪತಿ ಡಾ.ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ನುಡಿದರು.

ತಾಲೂಕಿನ ಪಡಾವಳಿ ಗ್ರಾಮದಲ್ಲಿ ಶ್ರೀ ಧರ್ಮರಾಯ ಮಂದಿರದಲ್ಲಿ ಲಿಂಗ ಪ್ರಾಣ ಪ್ರತಿಷ್ಠಾಪನಾ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಭಕ್ತರಿಂದ ತುಲಾಭಾರ ಸೇವೆ ಸ್ವೀಕರಿಸಿ ಆರ್ಶೀವಚನ ನೀಡಿದರು.

ನಂದಗಾಂವ ಶ್ರೀ ರಾಜಶೇಖರ ಮಹಾಸ್ವಾಮಿಗಳು ಹಾಗೂ ಅಕ್ಕಲಕೋಟದ ಬಸವಲಿಂಗ ಮಹಾಸ್ವಾಮಿಗಳು ಭಕ್ತರಿಗೆ ಆರ್ಶೀವಚನ ನೀಡಿದರು.

ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಹಿರೇಮಠದಲ್ಲಿ ಪಡಸಾವಳಿ-ಡೋಣಗಾಂವದ ಮಠಧ ಶ್ರೀ ಶಂಭುಲಿಂಗ ಶಿವಾಚಾರ್ಯರು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಹಿರೇಮಠ ಶ್ರೀಮಠದಿಂದ ಹನುಮಾನ್ ಮಂದಿರ ಮಾರ್ಗದಲ್ಲಿ ಶ್ರೀ ಷಡಕ್ಷರಿ ಶಿವಯೋಗಿ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳನ್ನು ಭವ್ಯ ರಥದಲ್ಲಿ ಗ್ರಾಮದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಸಾಗಿ ಶ್ರೀ ಧರ್ಮರಾಯ ದೇವಾಲಯ ತಲುಪಿದರು, ನಂತರ ಶ್ರೀ ಧರ್ಮರಾಯ ಮಂದಿರದಲ್ಲಿ ಲಿಂಗಪ್ರಾಣ ಪ್ರತಿಷ್ಠಾಪನೆ, ಮುತ್ತೈದರಿಗೆ ತಾಯಂದಿರಿಗೆ ಉಡಿತುಂಬಿದರು. ಮಹಾಪ್ರಸಾದ ವ್ಯವಸ್ಥೆಯನ್ನು ಜಿಡಗಾ ಮಠದಿಂದ ವಿಶೇಷವಾಗಿ ಹಾಲು ಹುಗ್ಗಿ ಮಾಡಿಸಲಾಯಿತು.

ಶ್ರೀ ಧರ್ಮರಾಯ ಮಂದಿರದಲ್ಲಿ ಲಿಂಗ ಪ್ರಾಣ ಪ್ರತಿಷ್ಠಾಪನಾ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಡಾ.ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿ ಭಕ್ತರಿಂದ ತುಲಾಭಾರ ಸೇವೆ ಸ್ವೀಕರಿಸಿ ಆರ್ಶೀವಚನ ನೀಡಿದರು.

ಗ್ರಾಮೀಣ ಭಾಗದಲ್ಲಿಯೇ ಭಕ್ತಿ, ಸಂಸ್ಕಾರ ಉಳಿದಿದೆ. ಇಂತಹ ಕಾರ್ಯಕ್ರಮಗಳು ನೋಡಿದರೆ ಡಾ. ಶ್ರೀ ಶಂಭುಲಿಂಗ ಶಿವಾಚಾರ್ಯ ಮಾಡುವ ಧರ್ಮ ಕಾರ್ಯಗಳು ಮೆಚ್ಚುವಂತಹದು, ಸಮಾಜ ಉಳಿತಿಗಾಗಿ ಹಗಲು ಇರುಳು ಶ್ರಮಿಸುವ ಶ್ರೀಗಳು ಅಂದರೆ ಡಾ.ಶಂಭುಲಿಂಗ ಶ್ರೀಗಳು.

-ಡಾ.ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿ, ಪೀಠಾಧಿಪತಿ

ಆಂದೋಲದ ಸಿದ್ದಲಿಂಗ ಸ್ವಾಮಿ ಬಿಜೆಪಿ ಏಜೆಂಟ್

ಚಿಂಚೋಳಿ: ಕಾವಿ ಹಾಕಿಕೊಂಡ ಮಾತ್ರಕ್ಕೆ ಎಲ್ಲರೂ ಸ್ವಾಮೀಜಿ ಆಗಲು ಸಾಧ್ಯವಿಲ್ಲ. ಅದೇ ರೀತಿ ಆಂದೋಲದ ಸಿದ್ದಲಿಂಗ ಸ್ವಾಮಿ, ಸ್ವಾಮಿ ಅಲ್ಲ. ಅವರೊಬ್ಬ ಬಿಜೆಪಿ ಏಜೆಂಟ್ ಎಂದು ಕಾಂಗ್ರೆಸ್ ಆರೋಪಿಸಿದೆ.

ಚಿಂಚೋಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಲಿ, ಲಕ್ಷ್ಮಣ ಆವಂಟಿ, ಆನಂದಕುಮಾರ ಟೈಗರ್, ಅಬ್ದುಲ್ ಬಾಶೀದ್, ಮಹೇಮೂದ್ ಪಟೇಲ್, ಜಗನ್ನಾಥ ಕಲ್ಲೂರ್, ಸೈಯದ್ ಶಬ್ಬೀರ್, ಸುಭಾಶ್ಚಂದ್ರ ಪಾಟೀಲ್, ಸಂತೋಷ ಗುತ್ತೇದಾರ, ನಾಗೇಶ ಗುಣಾಜಿ, ಖಲಿಲ್ ಪಟೇಲ್, ರಘು ಮೆಂದಾ ಅವರುಗಳು ಪತ್ರಿಕಾ ಪ್ರಕಟಣೆ ನೀಡಿ ಆಕ್ರೋಶ ವ್ಯಕ್ತಿ ಪಡಿಸಿದ್ದಾರೆ.

ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಆಂದೋಲ ಸಿದ್ದಲಿಂಗ ಸ್ವಾಮಿ ಅವರು ಮಾಡುತ್ತಿದಾರೆ ಎಂದು ಆರೋಪಿಸಿದ್ದು, ಸ್ವಾಮೀಜಿ ಆದವರು ಸನಾತನ ಧರ್ಮದ ಬಗ್ಗೆ ಮಾತನಾಡುವವರು, 'ಸನಾತನ ಧರ್ಮದ ವಸುದೈವ ಕುಟುಂಬಕಂ' ಎನ್ನುವ ತತ್ವದ ಮೇಲೆ ನಡೆಯುತ್ತಾರೆಯೇ ವಿನಹಃ ಈ ತರಹ ಧರ್ಮ- ಧರ್ಮಗಳ ಮಧ್ಯೆ ದ್ವೇಷ ಬಿತ್ತುವ ಕೆಲಸ ಮಾಡುವುದಿಲ್ಲ.

ಹಿಂದೂ ಧರ್ಮದ ಬಗ್ಗೆ ಮಾತನಾಡಿದ ಅವರು ಟೀಕಿಸುತ್ತಿರುವ ರಾಜಕಾರಣಿಗಳು ಹಿಂದೂಗಳಲ್ಲವೇ. ಸ್ವಾಮೀಜಿಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಿಗೂ ಏನು ಸಂಬಂಧ?, ಸಚಿವ ಶಾಮನೂರು ಮಲ್ಲಿಕಾರ್ಜುನ ಅವರ ಮನೆತನದ ಇತಿಹಾಸ, ಸಮಾಜಕ್ಕೆ ಶಾಮನೂರು ಕೊಡುಗೆ ಅಪಾರ. ಅವರ ಬಗ್ಗೆ ಮಾತನಾಡಲು ಸ್ವಾಮಿಜಿಯವರಿಗೆ ಏನು ಯೋಗ್ಯತೆ ಇದೆ? ಸಿದ್ದಲಿಂಗ ಸ್ವಾಮೀಯ ಪ್ರಕಾರ ಬಿಜೆಪಿಯಲ್ಲಿ ಇರುವವರು ಮಾತ್ರ ಹಿಂದೂಗಳು. ಅನ್ಯ ಪಕ್ಷದ ರಾಜಕಾರಣಿಗಳು ಹಿಂದೂಗಳು ಅಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಕಾವಿ ತೊಟ್ಟಿದವರ ಹೆಸರಿಗೆ ಕಳಂಕವಾಗಿದ್ದಾರೆ ಎಂದ ಅವರು, ಯಾವ ಸ್ವಾಮೀಜಿಯೂ ರಾಜಕಾರಣದ ಬಗ್ಗೆ ಮಾತನಾಡುವುದಿಲ್ಲ. ಆದರೆ ಸಿದ್ದಲಿಂಗ ಸ್ವಾಮಿ ಮಾಡುತ್ತಿರುವುದು ಕೆಲಸ ಏನು? ಸಮಾಜದಲ್ಲಿ ದ್ವೇಷ ಬಿತ್ತುತ್ತಿದ್ದಾರೆ.

ಈ ಕೆಲಸ ಮಾಡುವುದೇ ಆದರೆ, ಸಿದ್ದಲಿಂಗ ಸ್ವಾಮಿ ಅವರು ಕಾವಿ ಬಿಚ್ಚಿ, ಬಿಜೆಪಿ ಪಕ್ಷ ಸೇರಿಕೊಂಡು ಪ್ರಚಾರ ಮಾಡಲಿ ಎಂದು ಸವಾಲ್ ಹಾಕಿದರು.

ಮಠ ಕಟ್ಟಿದವರು ಸ್ವಾಮಿಯಾಗಲು ಸಾಧ್ಯ

ಸಿದ್ದಲಿಂಗ ಸ್ವಾಮಿ ಒಬ್ಬ ಮಾನಸಿಕ ರೋಗಿಯಾಗಿದ್ದು, ಅವರಿಗೆ ಚಿಕಿತ್ಸೆಯ ಅವಶ್ಯಕತೆ ಇದೆ. ತಲೆಗೆ ಮತ್ತೇರಿದ ಹಾಗೆ, ಮಿದುಳಿಗೂ ನಾಲಿಗೆಗೂ ಕನೆಕ್ಷನ್ ಇಲ್ಲದ ಹಾಗೆ, ಬೇಕಾಬಿಟ್ಟಿ ಹೇಳಿಕೆ ಕೊಡುವುದು ಯಾವ ಹಿಂದೂ ಧರ್ಮದಲ್ಲಿ ಉಲ್ಲೇಖಿತವಾಗಿದೆ? ಕಾವಿ ಹಾಕಿ ಕಲ್ಲು, ಮಣ್ಣುಗಳಿಂದ ಮಠ ಕಟ್ಟಿ ಯಾರು ಸ್ವಾಮಿ ಆಗಲ್ಲ. ಜಾತಿ-ಜಾತಿಗಳು, ಮನುಷ್ಯ-ಮನುಷ್ಯರ ಭಾವನೆಗಳು, ಮನಸ್ಸು-ಮನಸ್ಸುಗಳನ್ನು ಬೆಸೆದು ಮಠ ಕಟ್ಟಿದವರು ಮಾತ್ರ ನಿಜವಾದ ಸ್ವಾಮಿಯಾಗಲು ಸಾಧ್ಯ.

ಮಂದಿರಗಳ ಮೇಲಿನ ಕಳಸಗಳು ಧರ್ಮದ ಸಂಕೇತ

ಆಳಂದ: ಶಿಲಾ ಮಂಟಪಗಳಿಗೆ ಹೆಚ್ಚು ಆಯುಷ್ಯ ಇರುತ್ತದೆ, ಶ್ರೀಧರ್ಮರಾಯ ನಿರ್ಮಾಣ ಮಾಡಿದ್ದು ಸಂತಸ ತಂದಿದೆ, ಇದರ ಲಾಭ ಭಕ್ತರಿಗೆ ಸಿಗಲಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ.ಶ್ರೀ ಚನ್ನಸಿದ್ಧರಾಮ ಪಂಡಿತರಾಧ್ಯ ಶಿವಾಚಾರ್ಯರು ನುಡಿದರು.

ಭಾನುವಾರ ತಾಲೂಕಿನ ಪಡಸಾವಳಿ ಶ್ರೀಧರ್ಮರಾಯ ಮಂದಿರದ ಕಳಸಾರೋಹಣ ಮಹೋತವದ ಧರ್ಮಸಭೆಯ, ಮಂದಿರದ ಗೋಪುರಕ್ಕೆ ಕಳಸಾರೋಹಣ ನೆರವೇರಿಸಿ ಆರ್ಶೀವಚನ ನೀಡಿದ ಅವರು, ಡಾ. ಶಂಭುಲಿಂಗ ಶಿವಾಚಾರ್ಯರು ಮಠಗಳ ಕಟ್ಟುವದಕ್ಕಿಂತ ಭಕ್ತರೇ ಆಸ್ತಿಗಳನ್ನಾಗಿ ಗಳಿಸಿದ್ದಾರೆ, ಗುಡಿ ಕಟ್ಟಿದರೆ, ದೇವರು ತಂದು ಕೂಡಿಸಿದರೆ ಅದು ಪೂರ್ಣವಾಗುವುದಿಲ್ಲ. ಯಾವಾಗ ಶಿಖರದ ಮೇಲೆ ಕಳಸಾರೋಹಣ ನೆರವೇರಿಸಿದಾಗ ಮಾತ್ರ ಶಿಲಾ ಮಂಟಪ ಪೂರ್ಣಗೊಳುತ್ತದೆ ಎಂದರು.

ಕಾಶಿ ಪೀಠದ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಭಕ್ತರನ್ನು ಉದ್ದೇಶಿಸಿ ಆರ್ಶೀವಚನ ನೀಡಿದ ಅವರು, ಪಡಸಾವಳಿ ಗ್ರಾಮದ ಭಕ್ತರು ದೈವ ಆರಾಧಕರು, ಭಕ್ತರನ್ನು ಸಲ್ಲಿಸುವ ಸೇವೆ ಫಲಾಅಪೇಕ್ಷೆ ಇಲ್ಲದೇ ಸೇವೆ ಸಲ್ಲಿಸಬೇಕು ಎಂದರು.

ಅಕ್ಕಲಕೋಟದ ಶ್ರೀ ಬಸವಲಿಂಗ ಮಹಾಸ್ವಾಮಿಗಳು, ಶ್ರೀ ಜಯಶಾಂತಲಿಂಗ, ಶ್ರೀ ಕಾಶಿನಾಥ ಮಹಾಸ್ವಾಮಿಗಳು, ಶ್ರೀ ಶಿವಾನಂದ ದೇವರು, ಶ್ರೀಕಂಠ ಶಿವಾಚಾರ್ಯರು ನಾಗಣಸೂರ, ಪಾಳಾ ಗುರುಮೂರ್ತಿ ಶಿವಾಚಾರ್ಯರು, ಮೈಂದರ್ಗಿ ನೀಲಕಂಠ ಶಿವಾಚಾರ್ಯರು ಸೇರಿದಂತೆ ಅನೇಕ ಮಠದ ಮಠಾಧೀಶರು ಧರ್ಮಸಭೆಯಲ್ಲಿ ಉಪಸ್ಥಿತರಿದ್ದರು

ಬೆಳಗ್ಗೆ 9 ಗಂಟೆಗೆ ಕುಂಭ ಹೊತ್ತು ಮಹಿಳೆಯರು ಕಳಸದ, ಜಗದ್ಗುರು ಭವ್ಯ ಮೆರವಣಿಗೆಯನ್ನು ಪ್ರಮುಖ ಬೀದಿಗಳಿಂದ ಶ್ರೀ ಧರ್ಮರಾಯ ಮಂದಿರಕ್ಕೆ ತರಲಾಯಿತು.

ಪಡಸಾವಳಿ ಶ್ರೀಧರ್ಮರಾಯ ಮಂದಿರದ ಕಳಸಾರೋಹಣ ಮಹೋತ್ಸವದ ಧರ್ಮಸಭೆಯ, ಮಂದಿರದ ಗೋಪುರ ಕಳಸಾರೋಹಣ ಕಾರ್ಯ ಡಾ.ಶ್ರೀ ಚನ್ನಸಿದ್ಧರಾಮ ಪಂಡಿತರಾಧ್ಯ ಶ್ರೀ ನೆರವೇರಿಸಿದರು.

ಕಳಸ ದೇವತಾಸ್ವರೂಪ ಅದರಲ್ಲಿ ಪಂಚ ಲೋಹದಿಂದ ಕೂಡಿದ ಅಧ್ಭುತ ಶಕ್ತಿ ಇರುತ್ತದೆ. ಲೋಹಗಳನ್ನು ಶೀಘ್ರವಾಹಕ ಎಂದು ಕರೆಯುತ್ತಾರ ವಿಜ್ಞಾನಿಗಳು ಇವುಗಳನ್ನು ಭಕ್ತರ ಭಾವನೆಗಳನ್ನು ಪರಮಾತ್ಮನಿಗೆ ಮುಟ್ಟಿಸುವ ಕೆಲಸ ಮಾಡುತ್ತವೆ, ಕಳಸಗಳು ಧರ್ಮದ ಆಧ್ಯಾತ್ಮದ ಸಂಕೇತ.

-ಡಾ.ಶ್ರೀ ಚನ್ನಸಿದ್ಧರಾಮ ಪಂಡಿತರಾಧ್ಯ, ಶ್ರೀಗಳು

371-ಜೆ ಅನುಷ್ಠಾನಕ್ಕೆ ಒಗ್ಗಟ್ಟಿನ ಹೋರಾಟ

ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯಿಂದ ದಶಮಾನೋತ್ಸವ ಆಚರಣೆ
ಹೋರಾಟಕ್ಕೆ ಖಾಜಾ ಬಂದಾ ನವಾಜ್ ದರ್ಗಾದ ಸಜ್ಜಾದ್ ನಶೀನ್ ಬೆಂಬಲ

ಕಲಬುರಗಿ: 371(ಜೆ) ವಿಧಿಯ ಪ್ರಯೋಜನಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಕಲ್ಯಾಣ ಕರ್ನಾಟಕ ಹಿಂದುಳಿದ ಪ್ರದೇಶ ಎನ್ನುವುದನ್ನು ನಿವಾರಿಸುವ ನಿಟ್ಟನಲ್ಲಿ ವಿಧಿಯ ಅನುಷ್ಠಾನದಲ್ಲಿನ ಎಲ್ಲ ವೈಪರೀತ್ಯ ಸರಿಪಡಿಸಲು ಸರಕಾರದ ಮೇಲೆ ಒತ್ತಾಯಿಸಲು ಸಮಾಜದ ಎಲ್ಲ ವರ್ಗಗಳು ಒಗ್ಗಟ್ಟಿನ ಹೋರಾಟಕ್ಕೆ ಮುಂದಾಗಬೇಕು ಎಂದು ಖ್ವಾಜಾ ಬಂದಾನವಾಜ್ ದರ್ಗಾದ ಸಜ್ಜಾದ್ ನಶೀನ್ ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೇನಿ ಅವರು ಕರೆ ನೀಡಿದರು.

ನಶೀನ್ ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೇನಿ ಅವರು ದರ್ಗಾದ ಸಜ್ಜಾದ್ ನಶೀನ್‌ರಾಗಿ ಅಧಿಕಾರ ಸ್ವೀಕಾರ ಹಾಗೂ ಕರ್ನಾಟಕ ವಕ್ಫ್ ಮಂಡಳಿಯ ಅಧ್ಯಕ್ಷರಾಗಿ ನೇಮಕವಾದ ನಿಮಿತ್ತ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭಕ್ಕೆ ಭಾಗವಹಿಸಿದರು.

ನಂತರ ಮಾತನಾಡಿದ ಅವರು, 371(ಜೆ) ವಿಧಿಯ ಗಂಭೀರ ಆತಂಕಗಳನ್ನು ಗಮನಿಸಿ, ಸಮಾಜದ ಎಲ್ಲ ವರ್ಗಗಳ ಒಗ್ಗಟ್ಟಿನ ಹೋರಾಟದ ಮೂಲಕ ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದು.

ವಿವಿಧ ಶಿಕ್ಷಣ ಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಒಂದೇ ಸೂರಿನಡಿ ಸೇರಿ 371 (ಜೆ) ವಿಧಿಯ ನಿಬಂಧನೆಗಳ ಅನುಷ್ಠಾನದಲ್ಲಿನ ಅಸಮಾನತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು. ಸಮಿತಿ ಆಯೋಜಿಸಲು ನಿರ್ಧರಿಸಿರುವ ದಶಮಾನೋತ್ಸವಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಹ್ವಾನಿಸಬೇಕು ಎಂದು ಸಲಹೆ ನೀಡಿದರು.

ನಶೀನ್ ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೇನಿ ಅವರು ದರ್ಗಾದ ಸಜ್ಜಾದ್ ನಶೀನ್‌ರಾಗಿ ಅಧಿಕಾರ ಸ್ವೀಕಾರಿಸಿದರು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಈ ಪ್ರದೇಶವು ನಿರ್ಲಕ್ಷ್ಯಕ್ಕೆ ಒಳಗಾಗುತ್ತಲೇ ಇದೆ. ಅನೇಕ ಶಾಲೆಗಳು, ಕಾಲೇಜುಗಳು ಅಗತ್ಯ ಶಿಕ್ಷಕರ ಕೊರತೆಯನ್ನು ಎದುರಿಸುತ್ತಿವೆ. ಆಸ್ಪತ್ರೆಗಳು ಸಹ ಅದೇ ಸಮಸ್ಯೆಯನ್ನು ಎದುರಿಸುತ್ತಿವೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಶೇಕಡಾ 40ಕ್ಕೂ ಹೆಚ್ಚು ಹುದ್ದೆಗಳು ಖಾಲಿಯಾಗಿವೆ. ಅವುಗಳನ್ನು ಭರ್ತಿ ಮಾಡುವ ಕಡೆಗೆ ಸರಕಾರಗಳು ಗಮನ ಹರಿಸಬೇಕು.

– ಬಸವರಾಜ್ ದೇಶಮುಖ,
ಕಕ ಹೋರಾಟ ಸಮಿತಿ ಗೌರವಾಧ್ಯಕ್ಷ

ಮೀಸಲಾತಿ ಷರತ್ತನ್ನು ವಿಭಾಗೀಕರಿಸುವ ಮೂಲಕ ರಾಜ್ಯ ಸರಕಾರವು 371 (ಜೆ) ವಿಧಿಯ ನಿಬಂಧನೆಗಳ ಅನುಷ್ಠಾನಕ್ಕಾಗಿ ನಿಯಮಗಳನ್ನು ರೂಪಿಸುವಲ್ಲಿ ತಪ್ಪು ಮಾಡಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಜನರಿಗೆ ಮೀಸಲಾತಿಯನ್ನು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರಿಗೆ ವಿಸ್ತರಿಸುವಂತೆಯೇ ಸರಕಾರ ಮೀಸಲಾತಿಯನ್ನು ವಿಸ್ತರಿಸಬೇಕು. ಮೊದಲು ಖಾಲಿ ಹುದ್ದೆಗಳ ಸಾಮಾನ್ಯ ವರ್ಗದ ಪ್ರಯೋಜನಗಳನ್ನು ಪಡೆಯಲು ಮತ್ತು ನಂತರ ಅವರಿಗೆ ಸಲ್ಲಬೇಕಾದ ಮೀಸಲಾತಿ ಪಡೆಯಲು ಅವಕಾಶ ನೀಡಬೇಕು.

– ಶಶೀಲ್ ನಮೋಶಿ, ಎಚ್.ಕೆ.ಇ ಸಂಸ್ಥೆ, ಅಧ್ಯಕ್ಷ

ಸಮಿತಿಯ ಗೌರವಾಧ್ಯಕ್ಷ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ್ ಮಾತನಾಡಿ, ದಶಮಾನೋತ್ಸವದ ಭಾಗವಾಗಿ ಸಮಿತಿಯು ಎಲ್ಲ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಸಕ್ರಿಯ ಸಹಕಾರದೊಂದಿಗೆ ಎಲ್ಲ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಜಾಗೃತಿ ಕಾರ್ಯಕ್ರಮಗಳ ಸರಣಿಯನ್ನು ನಡೆಸಲಿದೆ.

ಈ ವೇಳೆ ಎಂಎಲ್‌ಸಿ ಬಿ.ಜಿ ಪಾಟೀಲ್, ಕಲ್ಯಾಣ ಕರ್ನಾಟಕ ವಾಣಿಜ್ಯ ಮಂಡಳಿಯ ಅಧ್ಯಕ್ಷ ಶರಣು ಪಪ್ಪಾ, ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲ್‌ಕುಮಾರ್ ಜಿ ಬಿಡವೆ, ಗುಲ್ಬರ್ಗ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಪ್ರೊ. ದಯಾನಂದ ಅಗಸರ್ ಉಪಸ್ಥಿತರಿದ್ದರು. ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಎಸ್.ಜಿ. ಡೊಳ್ಳೆಗೌಡರ ವಂದಿಸಿದರು.

ಟ್ವೀಟಾ-ಖಾರಾ

ಕರ್ನಾಟಕ ಕಾಂಗ್ರೆಸ್

ಶಿಕ್ಷಣ ವ್ಯವಸ್ಥೆಯಲ್ಲಿ ಜಾತಿ ಆಧಾರದಲ್ಲಿ ತಾರತಮ್ಯ ತಡೆಗಟ್ಟುವ ರೋಹಿತ್ ವೇಮುಲಾ ಕಾಯ್ದೆ ಕರ್ನಾಟಕದಲ್ಲಿ ಜಾರಿ ಸಂಬಂಧಿಸಿದಂತೆ ಕರಡು ರಚನೆಯನ್ನು ಪ್ರಾರಂಭಿಸಲು ಕಾನೂನು ತಂಡಕ್ಕೆ ಮುಖ್ಯಮಂತ್ರಿ siddaramaiah ಅವರು ನಿರ್ದೇಶನ ನೀಡಿದ್ದಾರೆ. ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಯಾರೊಬ್ಬರೂ ಜಾತಿ ಆಧಾರದಲ್ಲಿ ತಾರತಮ್ಯ ಎದುರಿಸಬಾರದು. ಅದಕ್ಕಾಗಿ ರೋಹಿತ್ ವೇಮುಲಾ ಕಾಯ್ದೆಯನ್ನು ರಾಜ್ಯದಲ್ಲಿ ರೂಪಿಸುವಂತೆ ಲೋಕಸಭೆಯ ವಿಪಕ್ಷ ನಾಯಕರಾದ RahulGandhi ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದರು.

ಕೆ.ಪುಟ್ಟಸ್ವಾಮಿ

ರೋಹಿತ್ ವೇಮುಲ ಘಟನೆಯ ಬಗ್ಗೆ ನಮಗೂ ದುಃಖವಿದೆ, ಆದ್ರೆ ನೀವೇಕೆ ಆಂಧ್ರದ ವ್ಯಕ್ತಿಯೊಬ್ಬರ ಹೆಸರಿನಲ್ಲಿ ಕಾಯ್ದೆ ಮಾಡಲು ಹೊರಟ್ಟಿದ್ದೀರಿ. ಕನ್ನಡಿಗರ ಯಾವುದೇ ಹೆಸರು ನಿಮಗೆ ತೋರಲಿಲ್ಲವೇ ಮಾನ್ಯ ಮುಖ್ಯಮಂತ್ರಿಗಳೇ?

ವಿಶ್ವವಾಣಿ ಕ್ಲಬ್ ಹೌಸ್
21.04.2025
ಸಂಜೆ: 06.55 ರಿಂದ 08.05 ರವರೆಗೆ



?

ಸಮಾಚಾರ ಸಣ್ಣದಲ್ಲ

ಜನಿವಾರ ಪ್ರಕರಣ: ಮಂತ್ರಾಲಯ ಶ್ರೀ ಖಂಡನೆ

ರಾಯಚೂರು: ಶಿವಮೊಗ್ಗ ಹಾಗೂ ಬೀದರ್‌ನಲ್ಲಿ ಸಿಇಟಿ ಪರೀಕ್ಷೆ ವೇಳೆ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣವನ್ನು ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ತೀವ್ರವಾಗಿ ಖಂಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ದೇಶದ ಸಂವಿಧಾನದಲ್ಲಿ ಪರಿಷ್ಕರಣೆಯ ಸ್ವಾತಂತ್ರ್ಯದ ಅಡಿಯಲ್ಲಿ ಯಾವುದೇ ವ್ಯಕ್ತಿಯು ತಮ್ಮದೆ ಧರ್ಮದ ಆಚರಣೆ ಮಾಡಬಹುದೆಂದು ಸಂವಿಧಾನದಲ್ಲಿ ಅವಕಾಶ ನೀಡಲಾಗಿದೆ. ಆದರೆ ಧರ್ಮ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿರುವುದು ಖಂಡನೀಯವಾಗಿದೆ. ಇದು ಕೇವಲ ವಿಪ್ರ ಸಮುದಾಯದ ಕುರಿತು ನಾವು ಮಾತನಾಡುತ್ತಿಲ್ಲ. ಯಾವುದೇ ಸಮಾಜ, ಧರ್ಮದ ಕುರಿತು ವಿರೋಧಿ ಚಟುವಟಿಕೆಗಳು ನಡೆದರೆ ಅತ್ಯಂತ ಹೇಯವಾಗಿ ರುವಂತದ್ದು, ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ. ರಾಜ್ಯದ ಸಚಿವರು ನೊಂದ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರ ಒದಗಿಸಿ, ಮುಂದೆ ಈ ರೀತಿಯ ಧರ್ಮ ವಿರೋಧಿ ಘಟನೆಗಳು ಮರುಕಳಿಸದಂತೆ ಸರಕಾರ ಎಚ್ಚೆತ್ತುಗೊಳ್ಳಬೇಕು. ಇಲ್ಲದಿದ್ದರೆ ಸಮಸ್ತ ಹಿಂದೂ ಧರ್ಮದವರು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಚಾಕು ಇರಿದು ನಗರಸಭೆ ಮಾಜಿ ಸದಸ್ಯ ಹತ್ಯೆ

ಕಾರವಾರ: ವಾಯುವಿಹಾರಕ್ಕೆ ಹೋಗುತ್ತಿದ್ದ ನಗರ ಸಭೆಯ ಮಾಜಿ ಸದಸ್ಯನಿಗೆ ಚಾಕು ಇರಿದು ಹತ್ಯೆ ಮಾಡಿರುವ ಘಟನೆ ಇಂದು ಬೆಳಗ್ಗೆ ನಗರದ ಬಿಎಸ್‌ಎನ್‌ಎಲ್ ಕಚೇರಿ ಸಮೀಪದಲ್ಲಿ ನಡೆದಿದೆ. ಸತೀಶ್ ಕೋಳಂಕರ್ ಕೊಲೆಯಾದ ನಗರಸಭೆಯ ಮಾಜಿ ಸದಸ್ಯರಾಗಿದ್ದಾರೆ. ಇವರು ಭಾನುವಾರ ಬೆಳಗ್ಗೆ ವಾಯುವಿಹಾರಕ್ಕೆ ಮುಗಿಸಿ ವಾಪಸ್ ಬೈಕ್ ಮೇಲೆ ಮನೆಗೆ ಹೋಗುತ್ತಿದ್ದ ವೇಳೆ ದುಷ್ಕರ್ಮಿಗಳು ಚಾಕು ಇರಿದಿದ್ದಾರೆನ್ನಲಾಗಿದೆ. ಇದರಿಂದ ಅವರು ಬೈಕ್‌ನಿಂದ ಕೆಳಗೆ ಬಿದ್ದಿದ್ದು, ತಕ್ಷಣ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಆದರೆ ಚಿಕಿತ್ಸೆ ನೀಡುವ ಮೊದಲೇ ಸತೀಶ್ ಕೋಳಂಕರ್ ಕೊನೆಯುಸಿರೆಳೆದಿದ್ದಾರೆ. ವೈಯಕ್ತಿಕ ದ್ವೇಷಕ್ಕೆ ಕೊಲೆಯಾಗಿರಬಹುದು ಎಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಡಿವೈಎಸ್ಪಿ ಹಾಗೂ ಕಾರವಾರ ನಗರ ಠಾಣಾ ಪೊಲೀಸರು ಭೇಟಿ, ಪರಿಶೀಲನೆ ನಡೆಸುತ್ತಿದ್ದಾರೆ.

ಯಾರು ಯಾವ ಅಧಿಕಾರಕ್ಕೆ ಆಸೆಪಟ್ಟರೂ ತಪ್ಪಿಲ್ಲ

ಚಿಕ್ಕಮಗಳೂರು: ಸಿಎಂ ಸ್ಥಾನಕ್ಕೆ ದಲಿತರಿಗೆ ಅವಕಾಶ ನೀಡಬೇಕು ಎಂಬ ಸಚಿವ ಮುನಿಯಪ್ಪ ಹೇಳಿಕೆಗೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಧ್ವನಿಗೂಡಿಸಿ ದ್ದಾರೆ. ಯಾರಾದರೂ ಆಯ್ತು ಏಕೆ ಆಗಬಾರದು ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಯಾವ ಅಧಿಕಾರಕ್ಕೆ ಆಸೆಪಟ್ಟರೂ ತಪ್ಪಿಲ್ಲ. ಕೇಳಲು ಎಲ್ಲರಿಗೂ ಅರ್ಹತೆ ಇದೆ. ಏನೇ ಆದರೂ ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಒಂದು ಪೈಸೆಯನ್ನೂ ಕೊಟ್ಟಿಲ್ಲ | ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಕಿಡಿ

ಕೇಂದ್ರ ಅನುಮತಿ ಕೊಟ್ಟರೆ ಮಹದಾಯಿ ಕೆಲಸ ಆರಂಭ

ಬೆಳಗಾವಿ: ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮಧ್ಯಸ್ಥಿಕೆ ವಹಿಸಿ ನೀರಾವರಿ ಯೋಜನೆ ಅನುಷ್ಠಾನಕ್ಕೆ ಸಹಕರಿಸಬೇಕು. ಮಹದಾಯಿ ಯೋಜನೆಗೆ ಅರಣ್ಯ ಇಲಾಖೆಯ ಅನುಮತಿ ದೊರಕಿಲ್ಲ. ಕೇಂದ್ರ ಅನುಮತಿ ಕೊಟ್ಟರೆ ನಾಳೆಯೇ ಕೆಲಸ ಆರಂಭಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ನಗರದ ಸುವರ್ಣಸೌಧದಲ್ಲಿ ಕೃಷಿ ಇಲಾಖೆ ವತಿಯಿಂದ 400 ಕೋಟಿ ರು. ವೆಚ್ಚದ ಕೃಷಿ ಉಪಕರಣ ವಿತರಣಾ ಸಮಾರಂಭ ಉದ್ದೇಶಿಸಿ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆ ಸೇರಿದಂತೆ ಎಲ್ಲ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರಕಾರ ಸಿದ್ಧವಿದೆ. ನೀರಾವರಿ ಯೋಜನೆಗೆ ನಮ್ಮ ಸರಕಾರ 23 ಸಾವಿರ ಕೋಟಿ ರು. ಖರ್ಚು ಮಾಡುತ್ತಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಒಂದು ಪೈಸೆಯನ್ನೂ ಕೊಟ್ಟಿಲ್ಲ ಎಂದು ಆರೋಪಿಸಿದರು.

25,000 ಕ್ಕೂ ಹೆಚ್ಚು ಕೃಷಿ ಹೊಂಡ ನಿರ್ಮಾಣ

ಕೃಷಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿರುವುದರಿಂದ ಬೇಸಾಯ ಕಷ್ಟಕರವಾಗಿದೆ. ಆದ್ದರಿಂದ ಕೃಷಿ ಯಂತ್ರೋಪಕರಣಗಳನ್ನು ಸರಕಾರದ ವತಿಯಿಂದ ವಿತರಿಸಲಾಗುತ್ತಿದೆ. ಕೃಷಿ ಇಲಾಖೆಯ ಸಹಾಯಧನ ಅಡಿಯಲ್ಲಿ ವಿವಿಧ ಬಗೆಯ ಸವಲತ್ತುಗಳನ್ನು ನೀಡಲಾಗಿದೆ. ಒಣ ಬೇಸಾಯಗಾರರಿಗೆ ಅನುಕೂಲ ಕಲ್ಪಿಸಲು ಕೃಷಿ ಭಾಗ್ಯ ಜಾರಿಗೆ ತರಲಾಗಿದ್ದು, 200 ಕೋಟಿ ರು. ಮೀಸಲಿಡಲಾಗಿದೆ. ರಾಜ್ಯದಲ್ಲಿ ಕಳೆದ ವರ್ಷ 25,000 ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಕೃಷಿಯಲ್ಲಿ ಅಭಿವೃದ್ಧಿ ಸಾಧಿಸಿ:

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ರೈತರ ಹಿತರಕ್ಷಣೆಗಾಗಿ ಕಟಿಬದ್ಧರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾವಿರಾರು ಕೋಟಿ ರು. ವೆಚ್ಚದಲ್ಲಿ ಕೃಷಿ ಸಲಕರಣೆ, ಯಂತ್ರೋಪ ಕರಣಗಳನ್ನು ಕೃಷಿ ಇಲಾಖೆಯ ಮೂಲಕ ನೀಡಿದ್ದಾರೆ. ಈ ಯಂತ್ರೋಪರಣಗಳನ್ನು ರೈತರು ಸದ್ಬಳಕೆ ಮಾಡಿಕೊಂಡು ಕೃಷಿಯಲ್ಲಿ ಅಭಿವೃದ್ಧಿ ಸಾಧಿಸಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕರಾದ ರಾಜು ಸೇಠ್, ಅಶೋಕ್ ಪಟ್ಟಣ, ಎನ್.ಹೆಚ್. ಕೋನರಡ್ಡಿ, ಬಾಬಾಸಾಹೇಬ್ ಪಾಟೀಲ್, ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಭಾನುವಾರ ನಗರದ ಸುವರ್ಣಸೌಧದಲ್ಲಿ ಕೃಷಿ ಇಲಾಖೆ ವತಿಯಿಂದ 400 ಕೋಟಿ ರು. ವೆಚ್ಚದ ಕೃಷಿ ಉಪಕರಣಗಳನ್ನುಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಿದರು.

> ಕೃಷಿ ಪ್ರಧಾನವಾಗಿರುವ ದೇಶದಲ್ಲಿ ರೈತರಿಗೆ ಸಹಾಯ ಮಾಡಬೇಕಾಗಿರುವುದು ಸರಕಾರದ ಜವಾಬ್ದಾರಿಯಾಗಿದೆ. ಆದ್ದರಿಂದ ಸರಕಾರ ರೈತರ ಹಿತರಕ್ಷಣೆಗೆ ಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ನೀರಾವರಿಗೆ ಒತ್ತು ನೀಡಲಾಗುತ್ತಿದ್ದು, ಬೆಳಗಾವಿ ವಿಭಾಗದಲ್ಲಿ ಕಬ್ಬು ಬೆಳೆಗಾರರ ಸಂಖ್ಯೆ ಹೆಚ್ಚಾಗಿರುವುದರಿಂದ ಸಾಮಾನ್ಯ ವರ್ಗದ ರೈತರಿಗೆ ಶೇ.40 ಮತ್ತು ಪರಿಶಿಷ್ಟ ವರ್ಗದ ರೈತರಿಗೆ ಶೇ.50 ಸಹಾಯಧನದಲ್ಲಿ ಅತ್ಯಾಧುನಿಕ ಕಬ್ಬು ಕಟಾವು ಯಂತ್ರ ನೀಡಲಾಗುತ್ತಿದೆ.
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಸರಕಾರವು ರೈತರ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಕಬ್ಬು ಕಟಾವು ಮಾಡುವ ಅತ್ಯಾಧುನಿಕ ಯಂತ್ರ ಖರೀದಿಸುವ ಸಾಮಾನ್ಯ ವರ್ಗದ ಜನರಿಗೆ 40 ಲಕ್ಷ ಹಾಗೂ ಪರಿಶಿಷ್ಟ ಜಾತಿ, ವರ್ಗದವರಿಗೆ 50 ಲಕ್ಷ ಸಬ್ಸಿಡಿ ನೀಡಿರುವುದು ಸ್ವತಂತ್ರ ಭಾರತದಲ್ಲಿ ಇದೇ ಮೊದಲು. ರಾಜ್ಯದಲ್ಲಿ ಒಟ್ಟಾರೆ 240 ಕಟಾವು ಯಂತ್ರಗಳನ್ನು ವಿತರಿಸಲಾಗುತ್ತಿದೆ. ಇದರಿಂದ ಈ ಭಾಗದ ರೈತರಿಗೆ ಅನುಕೂಲವಾಗಲಿದೆ.
>
> **ಚಲುವರಾಯಸ್ವಾಮಿ**, ಕೃಷಿ ಸಚಿವ

ಕಲಾ ಮಂದಿರ ಲೋಕಾರ್ಪಣೆ

ಬೆಳಗಾವಿ: ಸ್ಮಾರ್ಟ್ ಸಿಟಿ ಅನುದಾನದ ಅಡಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಬೆಳಗಾವಿಯ ಟಿಳಕವಾಡಿಯಲ್ಲಿ ಆಧುನಿಕ ಸೌಲಭ್ಯಗಳುಳ್ಳ ಬಹುಮಹಡಿ ಕಲಾ ಮಂದಿರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಸ್ಮಾರ್ಟ್ ಸಿಟಿ ಯೋಜನೆಯಡಿ ಬಹುಪಯುಕ್ತವಾದ ಕಲಾಮಂದಿರ ಮತ್ತು ವಾಣಿಜ್ಯ ಮಳಿಗೆಯನ್ನು ಲೋಕಾರ್ಪಣೆಗೊಳಿಸಲಾಗಿದೆ. ಇದರಿಂದ ಉದ್ಯೋಗ ಸೃಷ್ಟಿಯ ಜತೆ ಆದಾಯ ಕೂಡ ಬರಲಿದೆ. ಈ ಆದಾಯವನ್ನು ನಗರದ ಅಭಿವೃದ್ಧಿಗೆ ಬಳಕೆ ಮಾಡಲಾಗುವುದು. ಹಿಂದಿನ ಸರಕಾರದ ಅವಧಿಯಲ್ಲಿಯೇ ಪೌರಕಾರ್ಮಿಕರನ್ನು ಖಾಯಂ ಮಾಡಲು ನಿರ್ಧರಿಸಲಾಗಿತ್ತು. ಗುತ್ತಿಗೆದಾರರ ಬದಲಾಗಿ ನೇರ ನೇಮಕಾತಿ ಮೂಲಕ ಕನಿಷ್ಠ 17 ಸಾವಿರ ರು. ವೇತನ ನೀಡಲಾಗುತ್ತಿದೆ. ಪೌರಕಾರ್ಮಿಕರ ಖಾಯಂ ಗೊಳಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಇದಲ್ಲದೇ ಚಾಲಕರು, ನಿರ್ವಾಹಕರಿಗೂ ಕನಿಷ್ಠ ವೇತನ ನೀಡಲು ಕ್ರಮ ಕೈಗೊಳ್ಳಲಾಗಿದೆ. ಎಲ್ಲ ವಿಶೇಷಚೇತನರಿಗೆ ತ್ರಿಚಕ್ರ ವಾಹನ ನೀಡಲು ನಿರ್ಧರಿಸಲಾಗಿದೆ ಎಂದರು.

ಸ್ಮಾರ್ಟ್ ಸಿಟಿ ಅನುದಾನದ ಅಡಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕಲಾ ಮಂದಿರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿದರು.

ತುಳಿತಕ್ಕೆ ಒಳಗಾದವರಿಗೆ ಶಕ್ತಿ ತುಂಬುವುದು ಪ್ರಮುಖ ಉದ್ದೇಶ: ಡಿ.ಕೆ.ಶಿವಕುಮಾರ್

ಜಾತಿ ಗಣತಿ ಜಾರಿ ವಿಚಾರದಲ್ಲಿ ಆತುರದ ನಿರ್ಧಾರ ಇಲ್ಲ

ಮಂಗಳೂರು: 'ತುಳಿತಕ್ಕೆ ಒಳಗಾದವರಿಗೆ ಶಕ್ತಿ ತುಂಬಿ, ಎಲ್ಲರಿಗೂ ನ್ಯಾಯ ಒದಗಿಸಿಕೊಡಲಾ ಗುವುದು. ಜಾತಿ ಗಣತಿ ಜಾರಿ ವಿಚಾರದಲ್ಲಿ ಯಾವುದೇ ಆತುರದ ನಿರ್ಧಾರ ಇರುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಎಲ್ಲ ಸಮುದಾಯಗಳನ್ನು ಸರಿಸಮನಾಗಿ ತೆಗೆದು ಕೊಂಡು ಹೋಗಲು ಬದ್ಧವಾಗಿದೆ. ಎಲ್ಲರಿಗೂ ನ್ಯಾಯ ಒದಗಿಸುವ ಉದ್ದೇಶವಿದೆ. ಯಾರಿಗಾದರೂ ಅನ್ಯಾಯ ಮಾಡಬೇಕು ಎಂದು ಎಲ್ಲಿಯೂ ಹೇಳಿಲ್ಲ. ತುಳಿತಕ್ಕೆ ಒಳಗಾದವರಿಗೆ ಶಕ್ತಿ ತುಂಬುವುದು ಪ್ರಮುಖ ಉದ್ದೇಶ. ಜೈನರು, ಒಕ್ಕಲಿಗರು, ಲಿಂಗಾಯತರು ಸೇರಿದಂತೆ ಎಲ್ಲಾ ಸಮುದಾಯದಲ್ಲೂ ಬಡವರಿದ್ದಾರೆ. ಎಲ್ಲರಿಗೂ ನ್ಯಾಯ ಒದಗಿಸಿಕೊಡಲಾಗುವುದು' ಎಂದು ಹೇಳಿದರು. ವರದಿ ಅವೈಜ್ಞಾನಿಕ ಎಂಬ ಆರೋಪದ ಬಗ್ಗೆ ಕೇಳಿದಾಗ, ಈ ಸಮೀಕ್ಷೆಯಲ್ಲಿ ಶೇ.90ರಷ್ಟು ಜನರಿಂದ ಮಾಹಿತಿ ಪಡೆದಿದ್ದಾರೆ. ನಾವು ಈಗ ವರದಿಯ ಅಧ್ಯಯನ ಆರಂಭಿಸಿದ್ದೇವೆ. ಇದಕ್ಕೆ ಸಮಯ ಬೇಕು. ಈ ವಿಚಾರದಲ್ಲಿ ಯಾವುದೇ ಆತುರದ ತೀರ್ಮಾನವಿಲ್ಲ ಎಂದು ತಿಳಿಸಿದರು.

ಭಾವನೆಗಿಂತ ಬದುಕು ಮುಖ್ಯ: ಭಾವನೆಗಿಂತ ಬದುಕು ಮುಖ್ಯ. ಕರಾವಳಿ ಭಾಗದಲ್ಲಿ ನಮ್ಮ ಪಕ್ಷದಿಂದ ಕೇವಲ ಇಬ್ಬರು ಶಾಸಕರು ಗೆದ್ದಿದ್ದಾರೆ. ಈ ಭಾಗದಲ್ಲಿ ಎಲ್ಲರಿಗೂ ಒಳ್ಳೆಯದಾಗಬೇಕು. ರಾಜ್ಯದಲ್ಲಿ ಬಲಿಷ್ಠ ಸರಕಾರ ಆಡಳಿತದಲ್ಲಿದೆ. ಇಲ್ಲಿ ನಮ್ಮ ಪ್ರತಿನಿಧಿಗಳು ಬೇಕು. ಈ ಭಾಗದಲ್ಲಿ ಜನ ಬಿಜೆಪಿ ಗೆಲ್ಲಿಸಿದರು. ಆದರೂ ಈ ಭಾಗದ ಕುಟುಂಬಗಳಿಗೆ ಕಾಂಗ್ರೆಸ್ನಿಂದ ಸಹಾಯವಾಗುತ್ತಿದೆಯೇ ಹೊರತು ಬಿಜೆಪಿಯಿಂದಲ್ಲ. ಇದನ್ನು ಜನರಿಗೆ ಮನದಟ್ಟು ಮಾಡಬೇಕು' ಎಂದು ಪಕ್ಷದ ಕಾರ್ಯಕರ್ತರು, ನಾಯಕರಿಗೆ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಗೌಡರ ಯಾನೆ ಒಕ್ಕಲಿಗರ ಸೇವಾ ಸಂಘ ಹಾಗೂ ವಾಣಿ ಶಿಕ್ಷಣ ಸಂಸ್ಥೆಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ, ಒಕ್ಕಲಿಗರ ಸೇವಾ ಸಂಘದ ಕುಶಾಲಪ್ಪಗೌಡ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿದ ಮಾತ್ರ ದೇಶದ ಸಮಗ್ರ ಪ್ರಗತಿ ಸಾಧ್ಯ

ಬೆಳ್ತಂಗಡಿ: ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ ವಾಪ್ತಿಯ ಗುರುವಾಯನಕೆರೆ ಶಕ್ತಿ ನಗರ ಮೈದಾನದಲ್ಲಿ ರವಿವಾರ ಹಮ್ಮಿಕೊಳ್ಳಲಾದ ಸರಕಾರದ ನಡೆ ಕಾರ್ಯಕರ್ತರ ಕಡೆ' ಸಮಾವೇಶವನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಕಾರ್ಯಕರ್ತರೇ ಕಾಂಗ್ರೆಸ್ ಪಕ್ಷದ ಶಕ್ತಿ. ರಾಜ್ಯ ಸರಕಾರದ ಪಂಚ ಗ್ಯಾರಂಟಿಗಳನ್ನು ಇನ್ನಷ್ಟುಹೆಚ್ಚಿನ ರೀತಿಯಲ್ಲಿ ಜನರಿಗೆ ತಲುಪಿಸಲು ಪ್ರಯತ್ನ ಮಾಡಬೇಕು. ಕಾಂಗ್ರೆಸ್ ಪಕ್ಷದಿಂದ ಮಾತ್ರ ದೇಶದ ಸಮಗ್ರ ಪ್ರಗತಿ ಸಾಧ್ಯ. ಮುಂದಿನ ಚುನಾವಣೆಯಲ್ಲಿ ಕರಾವಳಿಯಿಂದ ಕನಿಷ್ಠ 10 ಮಂದಿ ಆಯ್ಕೆಯಾಗಿ ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ. ಕರಾವಳಿಯಲ್ಲಿ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲೆಗೆ ಭೇಟಿ ನೀಡಿ ಸಭೆ ನಡೆಸಲಾಗುವುದು ಎಂದರು.

ಪರೀಕ್ಷೆಯಿಂದ ವಂಚಿತರಾದ ವಿದ್ಯಾರ್ಥಿಗೆ ಉಚಿತ ಸೀಟ್ ಭರವಸೆ

ಸುಚಿವ್ರತ್ ಕುಲಕರ್ಣಿ ಮನೆಗೆ ಸಚಿವ ಈಶ್ವರ ಖಂಡ್ರೆ ಭೇಟಿ

ಬೀದರ್: ಜನಿವಾರ ತೆಗೆಯದ ಕಾರಣಕ್ಕೆ ಕೆಸಿಇಟಿ ಗಣಿತ ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿ ಸುಚಿವ್ರತ್ ಗೆ ಭಾಲ್ಕಿಯ ಭೀಮಣ್ಣ ಖಂಡ್ರೆ ತಾಂತ್ರಿಕ ವಿದ್ಯಾಲಯದಲ್ಲಿ ಉಚಿತ ಪ್ರವೇಶ ನೀಡುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಭರವಸೆ ನೀಡಿದ್ದಾರೆ.

ಭಾನುವಾರ ಸಚಿವ ರಹೀಂಖಾನ್ ಅವರ ಜತೆಯಲ್ಲಿ ಸುಚಿವ್ರತ್ ಕುಲಕರ್ಣಿ ಮನೆಗೆ ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಕುಟುಂಬದ ಸದಸ್ಯರಿಗೆ ಆತ್ಮಸ್ಥೈರ್ಯವನ್ನು ಸಚಿವರು ತುಂಬಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಖಾಸಗಿ ಕಾಲೇಜಿನ ಸಿಬ್ಬಂದಿಯಿಂದ ಇಂತಹ ಲೋಪವಾಗಿದ್ದು, ಇದು ನೋವಿನ ಸಂಗತಿ. ಇನ್ನು ಮುಂದೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರ ವಹಿಸಲು ಸೂಚಿಸಲಾಗಿದೆ. ಈ ಘಟನೆ ನಡೆಯಬಾರದಾಗಿತ್ತು. ಈ ಬಗ್ಗೆ ತಮ್ಮ ಗಮನಕ್ಕೆ ಬಂದ ಕೂಡಲೇ ತನಿಖೆ ನಡೆಸಿ 24 ಗಂಟೆಯೊಳಗೆ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೆ. ವರದಿ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮವೂ ಆಗಿದೆ ಎಂದರು.

ಬಿಕೆಐಟಿಯಲ್ಲಿ ಉಚಿತ ಸೀಟ್ ಭರವಸೆ

ವಿದ್ಯಾ ರ್ಥಿಯ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆ ಆಗಬಾರದು ಎಂಬುದು ಎಲ್ಲರ ಭಾವನೆ, ಹೀಗಾಗಿ ಭಾಲ್ಕಿಯ ತಮ್ಮ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಚಿತ ಸೀಟ್ ನೀಡುವುದಾಗಿ ಭರವಸೆ ನೀಡಿದರು. ಸುಚಿವ್ರತ್ ಗೆ ಪ್ರತ್ಯೇಕವಾಗಿ ಪರೀಕ್ಷೆ ನಡೆಸಲು ಅವಕಾಶವಿದೆಯೇ ಎಂಬ ಸಾಧ್ಯತೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಉನ್ನತ ಶಿಕ್ಷಣ ಸಚಿವರೊಂದಿಗೆ ಮಾತನಾಡಿರುವುದಾಗಿ ತಿಳಿಸಿದ ಈಶ್ವರ್ ಖಂಡ್ರೆ ವಿದ್ಯಾರ್ಥಿಗೆ ಕಾಮೆಡ್ ಕೆ ಪರೀಕ್ಷೆ ಬರೆಯಲೂ ವಿದ್ಯಾರ್ಥಿಗೆ ಅವಕಾಶವಿದೆ. ಆ ಸೀಟು ಲಭಿಸಿದರೂ ನೆರವು ನೀಡಲಾಗುವುದು, ಸರಕಾರ ನೊಂದ ವಿದ್ಯಾರ್ಥಿ ಮತ್ತು ಕುಟುಂಬದ ಸದಸ್ಯರೊಂದಿಗಿದೆ ಎಂದು ಸಚಿವ ಖಂಡ್ರೆ ಅಭಯ ನೀಡಿದರು.

ಭಾನುವಾರ ಸಚಿವ ರಹೀಂಖಾನ್ ಅವರ ಜತೆಯಲ್ಲಿ ಸುಚಿವ್ರತ್ ಕುಲಕರ್ಣಿ ಮನೆಗೆ ಭೇಟಿ ಸಚಿವರು ನೀಡಿ, ವಿದ್ಯಾರ್ಥಿ ಹಾಗೂ ಕುಟುಂಬದ ಸದಸ್ಯರಿಗೆ ಆತ್ಮಸ್ಥೈರ್ಯವನ್ನು ತುಂಬಿದರು.

ಇಡೀ ಬೆಳವಣಿಗೆ ಕುರಿತು ವರಿಷ್ಠರ ಗಮನಕ್ಕೆ ತರಲು ಸಿಎಂ ತಯಾರಿ

ಜಾತಿಗಣತಿಯ ಚೆಂಡು ಹೈಕಮಾಂಡ್ ಅಂಗಳಕ್ಕೆ?

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ವಿವಾದ ಸೃಷ್ಟಿಸಿರುವ ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆಗೆ ಸಚಿವ ಸಂಪುಟದಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ, ಇಡೀ ಬೆಳವಣಿಗೆಯ ಕುರಿತು ಪಕ್ಷದ ಹೈಕಮಾಂಡ್ ಗಮನಕ್ಕೆ ತರಲು ಸಿಎಂ ಸಿದ್ದರಾಮಯ್ಯ ಮುಂದಾಗಿದ್ದಾರೆ ಎನ್ನಲಾಗಿದೆ.

ಕಳೆದ ವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಸಚಿವರು ಜಾತಿ ಗಣತಿಗೆ ಆಕ್ಷೇಪಿಸಿ ಸಂಪುಟದಲ್ಲಿ ಧ್ವನಿ ಎತ್ತಿದ್ದಾರೆ. ಹಿಂದುಳಿದ, ಅಲ್ಪಸಂಖ್ಯಾತ, ದಲಿತ ಸಮುದಾಯದ ಸಚಿವರು ವರದಿ ಪರ ಮಾತನಾಡಿದ್ದಾರೆ. ಕೆಲ ಸಚಿವರು ತಟಸ್ಥ ನಿಲುವು ತಳೆದಿದ್ದಾರೆ ಎನ್ನುವ ಅಂಶವನ್ನು ಹೈಕಮಾಂಡ್‌ಗೆ ಮಾಹಿತಿ ನೀಡಲಿದ್ದಾರೆ ಎನ್ನಲಾಗಿದೆ. ಅದರಲ್ಲಿಯೂ ಜಾತಿಗಣತಿ ಬಗ್ಗೆ ಸಕಾರಾತ್ಮಕವಾಗಿ ಮಾತ ನಾಡಿದ್ದ ರಾಹುಲ್ ಗಾಂಧಿ ಅವರ ಗಮನಕ್ಕೆ ಈ ವಿಷಯವನ್ನು ತಂದು, ಮುಂದೇನು ಮಾಡಬೇಕು ಎನ್ನುವ ಬಗ್ಗೆ ಚರ್ಚಿಸಲು ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರಿಗೆ ಜಾತಿಗಣತಿ ಜಾರಿಗೆ ಸಂಬಂಧಿಸಿದಂತೆ ಪತ್ರ ಬರೆದಿದ್ದಾರೆ ಎನ್ನಲಾಗಿದ್ದು, ಇನ್ನಷ್ಟು ಕುತೂಹಲಕ್ಕೆ ಕಾರಣವಾಗಿದೆ. ಆದರೆ ಪತ್ರ ಬರೆದಿರುವ ವಿಷಯವನ್ನು ಸಿದ್ದರಾಮಯ್ಯ ಸ್ಪಷ್ಟವಾಗಿ ನಿರಾಕರಿಸಿದ್ದರೂ, 'ರಾಹುಲ್ ಗಾಂಧಿ ಅವರ ಒಪ್ಪಿಗೆಯ ಮೇರೆಗೆ' ಜಾತಿಗಣತಿ ಮಂಡಿಸಲಾಗಿದೆ ಎನ್ನುವ ಮೂಲಕ ವಿರೋಧಿಸುತ್ತಿರುವ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡಿದ್ದಾರೆ.

ವರದಿ ನಾಪತ್ತೆಯ ಆರೋಪ: ಈ ನಡುವೆ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿಯನ್ನೇ ಪ್ರತಿಪಕ್ಷ ಬಿಜೆಪಿ ಅನುಮಾನಿಸಿದ್ದು, ಕಾಂತರಾಜ್ ಅವರು ನೀಡಿರುವ ಮೂಲ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದಲ್ಲಿಟ್ಟು, ನಕಲಿ ವರದಿಯನ್ನು ವಿಧಾನಸೌಧದಲ್ಲಿ ಮಂಡಿಸಲಾಗಿದೆ ಎನ್ನುವ ಗಂಭೀರ ಆರೋಪ ಮಾಡಿದೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, 2021ರ ಅಕ್ಟೋಬರ್‌ನಲ್ಲಿ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆಯವರು ಸರಕಾರಕ್ಕೆ ಪತ್ರ ಬರೆದು ಜಾತಿಗಣತಿ ವರದಿ ಕಾಣೆಯಾಗಿದೆ ಎಂದು ಹೇಳಿದ್ದಾರೆ. ಸೀಲ್ಡ್ ಬಾಕ್ಸ್ ತೆರೆದಾಗ ಮುದ್ರಿತ ವರದಿಯಲ್ಲಿ ಆಯೋಗದ ಸದಸ್ಯ ಕಾರ್ಯದರ್ಶಿ ಸಹಿ ಇಲ್ಲ. ಇದರ ಜತೆಗೆ ಮೂಲ ಹಸ್ತಪ್ರತಿ ಇರಲಿಲ್ಲ. ಹೀಗಿರುವಾಗ ಸರಕಾರ ತೋರಿಸುತ್ತಿರುವ ಈ ಜಾತಿಗಣತಿ ಮೂಲವೇ? ಮೂಲ ವರದಿಯ ಹಸ್ತಪ್ರತಿಯೇ ಎಂದರೆ ಅದನ್ನು ಒಪ್ಪಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಡಳಿತ ವೈಫಲ್ಯವನ್ನು ಮುಚ್ಚಿಕೊಳ್ಳಲು ಜಾತಿಗಣತಿ ವಿಚಾರವನ್ನು ಹೊರಗೆ ತಂದರು. ಅವರು ಯಾವಾಗ ಬೇಕೋ ಆಗ ವರದಿ ನೀಡುತ್ತಾರೆ. ಇದಕ್ಕೆ ತಮ್ಮೊಂದಿಗೆ ನಾಟಕ ಕಂಪನಿಯನ್ನು ಇಟ್ಟುಕೊಂಡಿದ್ದಾರೆ. ಆಯೋಗದ ಅಧ್ಯಕ್ಷರೇ ವರದಿಯ ಮೂಲಪ್ರತಿ ಇಲ್ಲ ಎಂದಿದ್ದಾರೆ. ಅವರು ಸಮೀಕ್ಷೆ ಮಾಡಿದ್ದು 6 ಕೋಟಿ ಜನರನ್ನು. ಉಳಿದ ಒಂದು ಕೋಟಿ ಜನರಿಗೆ ನಾಮವೇ? ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ಮುಸಲ್ಮಾನರಿಗೆ, ಹಿಂದುಳಿದವರಿಗೆ ಮಾತ್ರವಲ್ಲದೆ, ಎಲ್ಲ ಧರ್ಮದ, ಎಲ್ಲ ಜಾತಿಯ ಬಡವರಿಗೆ ಶಿಕ್ಷಣ ಸಿಗಬೇಕು, ಸಾಮಾಜಿಕ, ಆರ್ಥಿಕ ಶಕ್ತಿ ತುಂಬಬೇಕು. ಇದೇ ನಮ ಗುರಿ. ಆಶೋಕ ಅವರು ಎಂದಾದರೂ ಸತ್ಯ ಹೇಳಿದ್ದಾರಾ? ಮೂಲ ಪ್ರತಿ ನನ್ನ ಬಳಿಯಿರಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದ್ದಾರೆ.

> ಜಾತಿಗಣತಿ ವರದಿ ಅನುಷ್ಠಾನಕ್ಕೆ ರಾಹುಲ್ ಗಾಂಧಿ ಯಾವುದೇ ಪತ್ರ ಬರೆದಿಲ್ಲ. ಆದರೆ ಅವರ ಜತೆ ನಾನು ಈ ವರದಿ ಜಾರಿ ಬಗ್ಗೆ ಚರ್ಚೆ ಮಾಡಿದ್ದೇನೆ. ಅವರ ಒಪ್ಪಿಗೆ ಪಡೆದೇ ಸಚಿವ ಸಂಪುಟ ಸಭೆಯಲ್ಲಿ ವರದಿ ಮಂಡನೆ ಮಾಡಲಾಗಿದೆ. ಅವರ ಒಪ್ಪಿಗೆ ಇಲ್ಲದೆ ವರದಿ ಮಂಡನೆ ಮಾಡಲು ಸಾಧ್ಯವೇ?
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ತುಳಿತಕ್ಕೆ ಒಳಗಾದ ವರಿಗೆ ಶಕ್ತಿ ತುಂಬಿ, ಎಲ್ಲರಿಗೂ ನ್ಯಾಯ ಒದಗಿಸಿಕೊಡಲಾಗು ವುದು. ಜಾತಿಗಣತಿ ಶೀಘ್ರ ಜಾರಿಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಅವರು ಪತ್ರ ಬರೆದಿರುವ ಬಗ್ಗೆ ಮಾಹಿತಿಯಿಲ್ಲ. ಕಾಂಗ್ರೆಸ್ ಎಲ್ಲ ಸಮುದಾಯವನ್ನು ಸರಿಸಮನಾಗಿ ತೆಗೆದುಕೊಂಡು ಹೋಗಲು ಬದ್ಧವಾಗಿದೆ.
>
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಜಾತಿಗಣತಿಯನ್ನು ತಿರಸ್ಕರಿಸಲಿ

← ಮೊದಲಪುಟದಿಂದ

- **ಹವ್ಯಕ ಮಹಾಸಭಾದ ಮುಂದಿನ ದಾರಿ ಏನು?**

ಸರಕಾರಕ್ಕೆ ನೇರವಾಗಿ ಈ ವರದಿಯನ್ನು ತಿರಸ್ಕಾರ ಮಾಡಬೇಕೆಂದು ಆಗ್ರಹಿಸುತ್ತೇವೆ. ಜಾತಿಗಣತಿ ನಡೆಸುವುದಿದ್ದರೆ ನಾವೆಲ್ಲವನ್ನೂ ಜಾತ್ಯಾತೀತ ಎಂದು ಹೇಳ್ತಾ ಜಾತಿಗೆ ಅತೀತವಾಗಿ ಜಾತಿಯನ್ನು ದಾಟಿ ಎಲ್ಲವನ್ನೂ ಮಾಡುವುದು ಎಂದು ಹೇಳಿದ ಮೇಲೆ ಸಮಾಜವನ್ನು ಜಾತಿಯ ನೆಲೆಯಲ್ಲಿ ಒಡೆಯುವ ಕಾರ್ಯ ಮಾಡಬಾರದು. ಎಲ್ಲ ಜಾತಿಗಳೂ ಅವರ ವರ ಸಂಬಂಧಕ್ಕೆ, ಧಾರ್ಮಿಕ ಕಾರ್ಯಕ್ಕೆ, ಅವರ ಮನೆಗೆ, ಕುಟುಂಬಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಆ ಜಾತಿಯಿರುತ್ತದೆ. ಮದುವೆ, ಶುಭ ಸಮಾರಂಭ, ಉಪನಯನ ಎನ್ನುವ ಕಾರ್ಯಕ್ರಮಗಳಿಗೆ ಬೇಕು. ಯಾವುದೇ ಸರಕಾರದ ಅರ್ಜಿಗಳಲ್ಲಿ ಯಾವ ಜಾತಿ ಎಂದು ಕೇಳುವಂತಹದ್ದೇ ತಪ್ಪು. ಜಾತ್ಯತೀತ ಎಂದು ಹೇಳಿದ ಮೇಲೆ ಸರಕಾರದ ಯಾವುದೇ ಅರ್ಜಿಗಳಲ್ಲಿ ಯಾವ ಜಾತಿ ಎಂದು ಕೇಳುವಂತಹದ್ದು ತಪ್ಪು. ಅದರ ಮುಂದಿನ ಹಂತ ಈ ರೀತಿ ಜಾತಿಗಣತಿ ಮಾಡುತ್ತಿರುವಂತಹದ್ದು.

- **ಮೀಸಲು ಹೆಚ್ಚಿಸಲು ಮಾಡಿರುವ ಶಿಫಾರಸು ಸರಿಯೇ?**

ಹಿಂದೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಒಂದು ಮಾತು ಹೇಳಿದ್ದರು. ಹವ್ಯಕರು ಮೀಸಲಾತಿ ಕೇಳಬೇಕಾದ ಅಗತ್ಯವಿಲ್ಲ. ಏಕೆಂದರೆ ಎಲ್ಲರಿಗೂ ಮೀಸಲಾತಿ ಕೊಡುತ್ತಾ ಕೊನೆಗೆ ಮೀಸಲಾತಿ ಇಲ್ಲದವರು ಹವ್ಯಕ ಅಥವಾ ಬ್ರಾಹ್ಮಣರು ಮಾತ್ರ ಎಂದಾಗಿದೆ. ಹಾಗಾಗಿ ಉಳಿದದ್ದಷ್ಟು ಬ್ರಾಹ್ಮಣರಿಗೆ ಇದ್ದ ಮೀಸಲಾತಿ ಹಾಗೇ ಅನ್ನಿಸುತ್ತದೆ ಎಂದು ಲೇವಡಿ ಮಾಡಿದ್ದರು. ಅಂದರೆ ಮೀಸಲಾತಿ ಯಾವ ರೀತಿ ತಪ್ಪಾಗಿ ಹೋಗುತ್ತದೆ ಎನ್ನುವುದನ್ನು ಅವರು ತೋರಿಸಿದ್ದರು. ಆರ್ಥಿಕವಾಗಿ ಯಾರು ದುರ್ಬಲರಾಗಿದ್ದಾರೆ ಅವರಿಗೆ ಮೀಸಲಾತಿ ಕೊಡುವಂತಹದ್ದು ಸರಿ. ಅದು ಬಿಟ್ಟು ಜಾತಿ ಆಧಾರದಲ್ಲಿ ಕೊಡುವಂತಹದ್ದು, ಅದನ್ನೂ ಮೀರಿ ಧರ್ಮದ ಆಧಾರದಲ್ಲಿ ಮೀಸಲಾತಿ ಕೊಡಲು ಹೊರಟಿದ್ದಾರೆ. ಇದು ಶುದ್ಧ ತಪ್ಪು. ಈ ಮೀಸಲಾತಿಯನ್ನೇ ಮಾಡುತ್ತಾ ಹೋದರೆ ಸಮಾಜದ ಒಟ್ಟಾರೆ ಕಾರ್ಯಕ್ಷಮತೆ ಅದು ತುಂಬಾ ಕಡಿಮೆಯಾಗುತ್ತಾ ಹೋಗುತ್ತದೆ. ಎಲ್ಲ ವರ್ಗಗಳಲ್ಲಿ ಆರ್ಥಿಕವಾಗಿ ಕಷ್ಟದಲ್ಲಿರುವವರು ಇದ್ದಾರೆ. ಅವರಿಗಾದರೂ ಆರ್ಥಿಕ ಸಹಾಯ ಮಾಡಬೇಕು. ಅಲ್ಲಿ ಮೀಸಲಾತಿಯನ್ನೇ ಕೊಡಬೇಕು ಎಂದಲ್ಲ. ಆ ಮೂಲಕ ಪ್ರತ್ಯೇಕ ಸಮಾಜವನ್ನು, ಸಮುದಾಯವನ್ನು ಸರಕಾರ ಮುಂದೆ ತರಲು ಸಾಧ್ಯವಿದೆ. ಅದನ್ನು ಬಿಟ್ಟು ಕೇವಲ ಮೀಸಲಾತಿಯನ್ನೇ ಕೊಡುವಂತಹದ್ದಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾಯಿತು, ಇನ್ನೂ ಮೀಸಲಾತಿಯನ್ನೇ ಮುಂದುವರಿಸುತ್ತಾ ಇದ್ದರೆ ದೇಶದ ಬೆಳವಣಿಗೆ ಖಂಡಿತವಾಗಿ ನಿಧಾನಗತಿಯಲ್ಲಿ ಸಾಗುತ್ತದೆ. ಅದನ್ನು ಬಿಟ್ಟು ಮೀಸಲಾತಿ ಬೇಡ ಅದಿಲ್ಲದೆ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಸಿದ್ಧರಿದ್ದೇವೆ ಎಂದು ಜನರು ಹೇಳಲು ತಯಾರಾಗಬೇಕು. ಹಾಗಾದಾಗ ಮಾತ್ರ ಸಮಾಜ ತುಂಬಾ ಚೆನ್ನಾಗಿ ಬೆಳೆಯಲು ಸಾಧ್ಯವಿದೆ.

- **ಜನಿವಾರ ತೆಗೆಸಿದ ವಿವಾದಕ್ಕೆ ನಿಮ್ಮ ಅಭಿಪ್ರಾಯವೇನು?**

ಮೊದಲನೇಯದು ಕಾನೂನಿನ ಪ್ರಕಾರ ಇದು ಶುದ್ಧ ತಪ್ಪು. ಇದನ್ನು ಸಿಇಟಿ ಸೆಲ್‌ನವರು ಒಪ್ಪಿಕೊಂಡಿದ್ದಾರೆ, ಮಂತ್ರಿಗಳು ಕೂಡ ಒಪ್ಪಿಕೊಂಡಿದ್ದಾರೆ. ಸರಕಾರವೂ ಒಪ್ಪಿಕೊಂಡಿದೆ. ಇದನ್ನು ಯಾವುದೇ ರೀತಿಯಲ್ಲಿ ಯಾರೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಕಾನೂನು ರೀತಿ ಇದು ತಪ್ಪಾದ ಕ್ರಮ. ಸಿಇಟಿಯ ಯಾವುದೇ ನೀತಿ ನಿಯಮಗಳಲ್ಲಿ ಜನಿವಾರವನ್ನು ತೆಗೆಯಬೇಕು, ಜನಿವಾರವನ್ನು ಹಾಕುವಂತಿಲ್ಲ ಎಂಬ ಪ್ರಶ್ನೆಯೇ ಬಂದಿಲ್ಲ. ಹಾಗಾಗಿ ಕಾನೂನು ರೀತಿ ತಪ್ಪು. ಎರಡನೇಯದು ಸಭ್ಯತೆ. ಶಿಷ್ಟಾ ಚಾರ ಮತ್ತು ಸಭ್ಯತೆ ಎನ್ನುವಂತಹದ್ದು ಒಬ್ಬ ಮನುಷ್ಯನಿಗೆ ಬೇಕು. ಇದೆಲ್ಲರಿಗೂ ಗೊತ್ತಿದೆ. ಸಮಾಜದಲ್ಲಿ ಪರಂಪರೆಯಿಂದಲೇ ಬಂದಿರುವಂತಹ ಸಂಪ್ರದಾಯ, ಇದನ್ನು ಗೌರವಿಸಬೇಕು, ಸಮಾಜದಲ್ಲಿ ಬೇರೆ ಬೇರೆ ರೀತಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಸಂಪ್ರದಾಯ ಅನುಸರಿಸುತ್ತಾರೆ. ಲಿಂಗಾಯತರು ಲಿಂಗಧಾರಣೆ ಮಾಡುತ್ತಾರೆ. ಬ್ರಾಹ್ಮಣರು, ಕ್ಷತ್ರಿಯರು, ವಿಶ್ವಕರ್ಮರು, ವೈಶ್ಯರಲ್ಲಿ ಅನೇಕರು ಜನಿವಾರ ಹಾಕುತ್ತಾರೆ. ಹೀಗೆ ಅನೇಕ ಸಮುದಾಯದಲ್ಲಿ ಜನಿವಾರ ಹಾಕುವಂತಹ, ಯಜ್ಞೋಪವೀತವನ್ನು ಧಾರಣೆ ಮಾಡುವಂತಹ ಪದ್ಧತಿಯಿದೆ. ಸಂಪ್ರದಾಯದಿಂದಲೇ ಬಂದಿರುವುದರಿಂದ ಅದನ್ನು ಗೌರವಿಸಬೇಕು. ಇನ್ನು ಜನಿವಾರವನ್ನಿಟ್ಟುಕೊಂಡು ನೇಣು ಹಾಕಿದರೆ ಎಂದು ಹೇಳಬೇಕಾದರೆ ಅವರ ಸಾಮಾನ್ಯ ಜ್ಞಾನ ಎಷ್ಟು ಕಳಪೆ ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ. ಅದು ಈ ಮೀಸಲಾತಿಯ ಪ್ರಭಾವದಿಂದಲೇ ಈ ರೀತಿ ಆಗುವಂತಹದ್ದು. ಯಾಕೆಂದರೆ ಮನುಷ್ಯನ ದೇಹದ ತೂಕ ಎಷ್ಟಿರುತ್ತದೆ ಅದನ್ನು ಒಂದು ಜನಿವಾರದಲ್ಲಿ ನೇಣು ಹಾಕಲು ಸಾಧ್ಯವಿದೆಯಾ ಎಂದು ಆಲೋಚಿಸಲು ಸಾಧ್ಯವಿಲ್ಲದಷ್ಟು ಆ ವ್ಯಕ್ತಿಗೆ, ಅಧಿಕಾರಿಗೆ ಆ ರೀತಿಯ ಜ್ಞಾನವಿಲ್ಲ, ಸಭ್ಯತೆಯಿಲ್ಲ ಎನ್ನುವುದನ್ನೂ ತೋರಿಸುತ್ತದೆ.

- **ಈ ಬಗ್ಗೆ ಮುಂದೆ ಯಾವ ರೀತಿಯ ಹೋರಾಟ ಮಾಡುವಿರಿ?**

ಸರಕಾರ ಈಗಾಗಲೇ ಕ್ರಮ ಕೈಗೊಳ್ಳುತ್ತದೆ ಎಂದು ಹೇಳಿದೆ. ತಪ್ಪು ನಡೆ ಎಂದು ಹೇಳಿದೆ. ಆ ವಿದ್ಯಾರ್ಥಿಗೆ ಯಾವ ರೀತಿ ಪರಿಹಾರ ನೀಡುತ್ತದೆ ಎಂದು ನಾವು ಗಮನಿಸುತ್ತೇವೆ. ಸರಕಾರ ಕ್ರಮ ಕೈಗೊಳ್ಳಲಿಲ್ಲ ಎಂದಾದರೆ, ಸರಕಾರ ಈಗಾಗಲೇ ಒಂದು ಹೆಜ್ಜೆ ಎಡವಿದೆ, ಮತ್ತೆ ಮತ್ತೆ ಎಡವುತ್ತಾ ಹೋದರೆ ತುಂಬಾ ಕಷ್ಟವಾಗುತ್ತದೆ. ಹಾಗಾಗಿ ಪರಿಹಾರ ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ಬರುವವರೆಗೂ ಹೋರಾಟವನ್ನು ನಿರಂತರವಾಗಿ ಹಾಗೂ ಪ್ರಯತ್ನವನ್ನು ನಿರಂತರವಾಗಿ ಮುಂದುವರಿಸುತ್ತೇವೆ. ಅದಕ್ಕಿಂತಲೂ ಹೆಚ್ಚು ಇಲ್ಲಿ ಆ ತಪ್ಪಿತಸ್ಥರಿಗೆ ಶಿಕ್ಷೆ ಮಾತ್ರವಲ್ಲ, ಅಂತಹ ಉತ್ತಮ ವಾತಾವರಣವನ್ನು ಸರಕಾರ ಸಮಾಜದಲ್ಲಿ ನೀಡುವಂತಹದ್ದು ಕರ್ತವ್ಯ. ಆ ಸೌಹಾರ್ದತೆಯ ವಾತಾವರಣ ನಿರ್ಮಿಸದಿದ್ದರೆ ಹೀಗೆ ತಪ್ಪು ಕೆಲಸಕ್ಕೆ ಕೈ ಹಾಕುವಂತಹದ್ದು ಆಗುತ್ತದೆ. ಕಾನೂನನ್ನು ಮೀರಿ, ಮೂಲಭೂತ ಹಕ್ಕುಗಳನ್ನು ಮೀರಿ, ಸಭ್ಯತೆಯನ್ನು ಮೀರಿ, ಶಿಷ್ಟಾಚಾರವನ್ನು ಬದಿಗೊತ್ತಿ, ಸಂಸ್ಕಾರವಿಲ್ಲದೆ ಇಂತಹ ಕೆಲಸ ಮಾಡುವುದನ್ನು ತಡೆಯಲು ಸರಕಾರ ಮುಂದಾಗಬೇಕು. ಅಲ್ಲಿಯವರೆಗೆ ನಮ್ಮ ಪ್ರಯತ್ನವನ್ನು, ನಮ್ಮ ಸಂಘಟನೆಯ ಮೂಲಕ, ಸಮಾಜದ ಮೂಲಕ ನಾವು ಮಾಡಲು ಮುಂದಾಗುತ್ತೇವೆ.

ಒಕ್ಕಲಿಗ ಸಮುದಾಯ ಉಪಜಾತಿಗಳಾಗಿ ಒಡೆದು ಸಂಖ್ಯೆ ಕಡಿಮೆ ಮಾಡುವ ಸಂಚು

ನಮ್ಮನ್ನು ಒಡೆಯುವ ಪ್ರಯತ್ನಕ್ಕೆ ಕೈಹಾಕಿದ್ದಾರೆ

ವರದಿಯ ಅಂಕಿ ಅಂಶಕ್ಕೂ, ನೈಜ ಸಂಖ್ಯೆಗೂ ವ್ಯತ್ಯಾಸವಿದೆಯೇ?

ಕರ್ನಾಟಕದಲ್ಲಿ ಒಂದು ಕೋಟಿಗೂ ಅಧಿಕ ಒಕ್ಕಲಿಗರಿದ್ದಾರೆ. ಆದರೆ ಈ ವರದಿಯಲ್ಲಿ 60 ಲಕ್ಷ ಎಂದು ತೋರಿಸಲಾಗಿದೆ. ಬೇರೆ ಸಮುದಾಯಗಳ ಸಂಖ್ಯೆ ಅದಕ್ಕಿಂತ ಹೆಚ್ಚಿದ್ದರೂ ಪರವಾಗಿಲ್ಲ ಆದರೆ ನೈಜ ಸಂಖ್ಯೆ ನೀಡಿ ಸರಕಾರ ಆ ಜನ ಸಂಖ್ಯೆಗಳ ಆಧಾರದಲ್ಲಿ ಸೌಲಭ್ಯಗಳನ್ನು ನೀಡಲಿ. ಈ ಹಿಂದೆ ವರದಿ ತಯಾರಿಸುವ ಸಂದರ್ಭದಲ್ಲಿ ಅವರಿಗೆ ಹೇಗೆ ಬೇಕೋ ಹಾಗೆ ಬರೆಸಿಕೊಂಡಿದ್ದಾರೆ. ಒಕ್ಕಲಿಗ ಜಾತಿಯವರನ್ನೂ ಬೇರೆ ಬೇರೆ ಜಾತಿಗಳಿಗೆ ಸೇರಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಸುಮಾರು ಏಳು ಕೋಟಿ ಜನರಿದ್ದಾರೆ ಎಂಬುದು ನಮಗೆ ತಿಳಿದಿರುವ ವಿಷಯ, ಆದರೆ ಈ ವರದಿಯಲ್ಲಿ ಸುಮಾರು 5 ಕೋಟಿ 95 ಲಕ್ಷ ಜನರು ಎಂದು ತೋರಿಸಿದ್ದಾರೆ. ಹಾಗಾದರೆ ಇನ್ನುಳಿದ 1 ಕೋಟಿ ಜನರ ಕಥೆಯೇನು ಅವರನ್ನು ಎಲ್ಲಿಗೆ ಸೇರಿಸುತ್ತಾರೆ. ಹಾಗೆ ನೋಡಿದರೆ ಒಕ್ಕಲಿಗರಲ್ಲಿ ಮರಸು ಒಕ್ಕಲಿಗ ಎಂಬ ಉಪ ಜಾತಿಯಿದೆ. ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ ಭಾಗದಲ್ಲಿ ಈ ಉಪ ಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಈ ಕಾಂತರಾಜ್ ಆಯೋಗ ಸಲ್ಲಿಸಿರುವ ವರದಿಯಲ್ಲಿ ಮರಸು ಒಕ್ಕಲಿಗ ಸಂಖ್ಯೆ 3800 ಎಂದು ತೋರಿಸಲಾಗಿದೆ. ಆದರೆ ನಮ್ಮ ಒಕ್ಕಲಿಗರ ಸಂಘದಲ್ಲಿ ಹೊಸಕೋಟೆ ಭಾಗದ 10 ಸಾವಿರ ಜನ ಸದಸ್ಯರಿದ್ದಾರೆ, ಅಲ್ಲಿ ಮರಸು ಒಕ್ಕಲಿಗ ಬಿಟ್ಟರೆ ಬೇರೆ ಒಕ್ಕಲಿಗರಿಲ್ಲ ಹಾಗಾದರೆ ಈ ಸಂಖ್ಯೆ ಹೇಗೆ ಬಂತು, ಎಷ್ಟರ ಮಟ್ಟಿಗೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆದಿದೆ.

ವಿಶ್ವವಾಣಿ ಸಂದರ್ಶನ
ಜಯಂತ್ ಬಸವರಾಜ್

ಒಕ್ಕಲಿಗರನ್ನು ನೇರವಾಗಿ ವಿರೋಧಿಸಿದರೆ ಸಮಸ್ಯೆಯಾಗುತ್ತದೆ ಎನ್ನುವ ಕಾರಣಕ್ಕೆ, ಒಡೆದು ಆಳುವ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ ಆಗ್ರಹಿಸಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ವಿಶ್ವವಾಣಿಯೊಂದಿಗೆ ಮಾತನಾಡಿರುವ ಅವರು, ಜಾತಿ ಗಣತಿಗೆ ವಿರೋಧಿಸುತ್ತಿರುವುದಕ್ಕೆ ಕಾರಣ, ಉಪಜಾತಿಗಳ ಲೆಕ್ಕಾಚಾರ, ಜನಸಂಖ್ಯೆಯಲ್ಲಿನ ವ್ಯತ್ಯಾಸ ಸೇರಿದಂತೆ ಹಲವು ವಿಷಯದ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

● ಕಾಂತರಾಜ್ ಸಮಿತಿ ವರದಿ ಮಂಡನೆಗೆ ಒಕ್ಕಲಿಗ ಸಮುದಾಯದ ವಿರೋಧವೇಕೆ?

ಒಕ್ಕಲಿಗ ಸಮುದಾಯ ಮಾತ್ರ ಈ ವರದಿಯನ್ನು ವಿರೋಧಿಸುತ್ತಿಲ್ಲ, ಇದನ್ನು ಎಲ್ಲಾ ಸಮುದಾಯಗಳು ವಿರೋಧಿಸುತ್ತಿವೆ. ಇದಕ್ಕೆ ಕಾರಣ ಎಂದರೆ ಕಾಂತರಾಜ್ ಆಯೋಗ ವೈಜ್ಞಾನಿಕವಾಗಿ ಜಾತಿ ಗಣತಿ ನಡೆಸಿಲ್ಲ. ಮೊದಲನೆಯದಾಗಿ ಸಮಿತಿ ಯಾವಾಗ ರಚನೆಯಾಯಿತು, ಯಾವಾಗ ಮತ್ತು ಯಾವ ರೀತಿ ಸಮೀಕ್ಷೆ ನಡೆಸಿದ್ದಾರೆ ಎಂಬ ಮಾಹಿತಿ ನಮಗಂತೂ ಇಲ್ಲ. ಆದರೆ ಸರಕಾರ ಹೇಳುತ್ತದೆ 2014ರಲ್ಲಿ ಕಾಂತರಾಜ್ ಆಯೋಗ ಸಮಿತಿ ರಚಿಸಿ ಪ್ರತಿ ಮನೆಗಳಿಗೂ ತೆರಳಿ ಸಮೀಕ್ಷೆ ನಡೆಸಲಾಗಿದೆ ಎಂದು. ಆದರೆ ನನಗಂತೂ ನೆನಪಿಲ್ಲ ನಮ್ಮ ಮನೆ ಬಳಿ ಬಂದು ಮಾಹಿತಿ ಪಡೆದಿರುವುದು. ಹೀಗಿರುವಾಗ ಸುಮಾರು 10 ವರ್ಷಗಳ ಬಳಿಕ ಇದರ ಮಂಡನೆಗೆ ಸರಕಾರ ಮುಂದಾಗಿದೆ. ನಮಗೆ ಈಗ ಮೂಡುವ ಪ್ರಶ್ನೆ ಏನೆಂದರೆ ಇಷ್ಟು ವಿರೋಧಗಳಿದ್ದರು, ಸರಕಾರ ಮರು ಸಮೀಕ್ಷೆ ನಡೆಸದೆ ಆತುರದಿಂದ ವರದಿ ಮಂಡನೆಗೆ ಮುಂದಾಗಿದೆ?. ಯಾವ ಸಮುದಾಯವನ್ನು ಓಲೈಸಲು ಮುಂದಾಗಿದೆ ಎಂಬುದು ಆದ್ದರಿಂದ ಕಾಂತರಾಜ್ ಆಯೋಗ ಸಲ್ಲಿಸಿರುವ ಈ ವರದಿ ಮಂಡನೆಗೆ ನಮ್ಮ ಸಂಪೂರ್ಣ ವಿರೋಧವಿದೆ.

> ವಿರೋಧಗಳ ನಡುವೆಯೂ ರಾಜ್ಯ ಸರಕಾರ ವರದಿ ಮಂಡನೆಗೆ ಮುಂದಾ ದರೆ, ನಮ್ಮ ಅನು ಪಂಗಡಗಳಾದ ಲಿಂಗಾಯತ, ಬ್ರಾಹ್ಮಣ ಸಮುದಾಯ ಸೇರಿದಂತೆ ಎಲ್ಲರನ್ನೂ ಒಗ್ಗೂಡಿಸಿ ಪ್ರತಿಭಟನೆ ನಡೆಸುತ್ತೇವೆ. ಅದಕ್ಕೂ ಸರಕಾರ ಮಣಿಯದಿದ್ದರೆ ನಾವು ನ್ಯಾಯಾಲ ಯದ ಮೆಟ್ಟಿಲು ಏರುತ್ತೇವೆ, ನಮಗೆ ನ್ಯಾಯ ಸಿಗುವವರೆಗೂ ಕಾನೂನಿನ ರೀತಿಯಲ್ಲಿ ಹೋರಾಡುತ್ತೇವೆ.
>
> – ಬಿ. ಕೆಂಚಪ್ಪಗೌಡ, ಅಧ್ಯಕ್ಷರು, ರಾಜ್ಯ ಒಕ್ಕಲಿಗ ಸಂಘ

● ಒಕ್ಕಲಿಗರನ್ನು ಉಪಜಾತಿಗಳಾಗಿ ವಿಂಗಡನೆ ಮಾಡಿದ್ದಕ್ಕೆ ನಿಮ್ಮ ಅಭಿಪ್ರಾಯವೇನು?

ಕರ್ನಾಟಕದಲ್ಲಿ ಪ್ರಬಲ ಜಾತಿಗಳಲ್ಲಿ ಒಂದಾದ ಒಕ್ಕಲಿಗ ಜಾತಿ ಸಂಖ್ಯೆ ಕಡಿಮೆ ಮಾಡಬೇಕು ಎಂದೇ ಕೆಲವರೂ ಈ ರೀತಿ ಉಪಜಾತಿಗಳಾಗಿ ವಿಂಗಡನೆ ಮಾಡಿದೆ. ಒಕ್ಕಲಿಗರಲ್ಲಿ ಒಟ್ಟು 114 ಉಪ ಪಂಗಡಗಳಿವೆ. ಸಮೀಕ್ಷೆಯಲ್ಲಿ ಇವರ ವಿವರ ಪಡೆಯುವಾಗ ಉಪಜಾತಿಗಳ ಮುಂದೆ ಒಕ್ಕಲಿಗ ಎಂದು ಸೇರಿಸಿ ಬರೆಯಬೇಕು. ಆದರೆ ಸಮೀಕ್ಷೆ ನಡೆಸಿದವರು ಬರೀ ಉಪಜಾತಿಗಳನ್ನು ಬರೆದುಕೊಂಡು ಅದನ್ನು ಒಂದು ಜಾತಿ ಎಂದು ಸೇರಿಸಿದ್ದಾರೆ. ಹೀಗಾಗಿ ಪ್ರಬಲ ಸಂಖ್ಯೆ ಹೊಂದಿರುವ ಒಕ್ಕಲಿಗ ಸಮುದಾಯವನ್ನು ಉಪಜಾತಿಗಳಾಗಿ ಒಡೆದು ಸಂಖ್ಯೆ ಕಡಿಮೆ ಮಾಡುವ ಸಂಚು ರೂಪಿಸಲಾಗಿದೆ. ಮುಸ್ಲಿಂ ಸಮುದಾಯದಲ್ಲೂ ಉಪಜಾತಿಗಳಿವೆ ಆದರೆ ಏಕೆ ಅದನ್ನು ತೋರಿಸಲಾಗಿಲ್ಲ ಈ ರೀತಿಯ ತುಷ್ಟೀಕರಣಕ್ಕಾಗಿ ನಡೆಸಿರುವ ಸಮೀಕ್ಷೆಗೆ ನಮ್ಮ ವಿರೋಧವಿದೆ.

● ವರದಿಯಲ್ಲಿ ಯಾವ ಬದಲಾವಣೆಗಳನ್ನು ನೀವು ಬಯಸುತ್ತೀರಾ?

ಕಾಂತರಾಜ್ ಆಯೋಗ ಸಮಿತಿ ರಚನೆಯೇ ಸೂಕ್ತವಲ್ಲ. ಕಾಂತರಾಜು ರಾಜ್ಯದವರು ಯಾವುದೋ ಒಂದು ಜಾತಿಗೆ ಸೇರಿದವರು, ಅವರು ಹೇಗೆ ನಿಷ್ಪಕ್ಷಪಾತವಾಗಿ ವರದಿ ನೀಡುವರು. ಸರಕಾರ ಬೇರೆ ರಾಜ್ಯದಿಂದ ಸಮಿತಿ ಕರೆಸಿ ಹೊಸತಾಗಿ ಡಿಜಿಟಲ್ ಸಮೀಕ್ಷೆ ನಡೆಸಲಿ. ಅಥವಾ ಸಮೀಕ್ಷೆ ನಡೆಸಲು ಎಲ್ಲಾ ಸಮುದಾಯ ಗಳಿಗೂ ತಿಳಿಸಲಿ. ನಾವೇ ಡಿಜಿಟಲ್ ಸಮೀಕ್ಷೆ ನಡೆಸಿ ಮಾಹಿತಿಯನ್ನು ಸರಕಾರಕ್ಕೆ ನೀಡುತ್ತೇವೆ. ಅನುಮಾನವಿದ್ದಲ್ಲಿ ಸರಕಾರ ಅದನ್ನು ಮರು ಪರಿಶೀಲಿಸಿ ಸರಿಪಡಿಸಿಕೊಳ್ಳಲಿ.

● ಸರಕಾರ ಒಕ್ಕಲಿಗರನ್ನು ಕಡೆಗಣಿಸದೆಯೂ?

ರಾಜ್ಯದಲ್ಲಿ ಒಕ್ಕಲಿಗರನ್ನು ಕಡೆಗಣಿಸಲು ಸಾಧ್ಯವಿಲ್ಲ, ಒಕ್ಕಲಿಗರೆಂದರೆ ರೈತಾಪಿ ಜನ ನಾವು ತಿರುಗಿ ಬಿದ್ದರೆ ಏನು ಬೇಕಾದರೂ ಮಾಡಲು ನಮ್ಮಿಂದ ಸಾಧ್ಯ. ಅದಕ್ಕೆಂದು ಸರಕಾರ ಈ ರೀತಿ ಯುಕ್ತಿಯಿಂದ ನಮ್ಮ ಸಂಖ್ಯೆ ಒಡೆದು ನಮ್ಮಿಂದ ಸೌಲಭ್ಯ ಕಸಿದುಕೊಳ್ಳಲು ಪ್ರಯತ್ನಿಸುತ್ತಿದೆ. ಇತಿಹಾಸದಿಂದಲೂ ಒಕ್ಕಲಿಗ ಸಮುದಾಯ ಎಲ್ಲಾ ಕ್ಷೇತ್ರಗಳಲ್ಲೂ ಪ್ರಬಲವಾಗಿದೆ. ರಾಜಕೀಯದಲ್ಲೂ ಅಷ್ಟೇ ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರನ್ನು ಮಣಿಸುವ ಸಲುವಾಗಿ ಹಾಗೂ ಕೆಲ ಸಮುದಾಯಗಳನ್ನು ಓಲೈಸಿ ಓಟ್ ಬ್ಯಾಂಕ್ ಖಾತ್ರಿಗೊಳಿಸಲು ಸರಕಾರ ಈ ರೀತಿ ಮಾಡುತ್ತಿದೆ.

● ಕೈ ನಾಯಕರಿಂದ ನೀವು ಬಯಸುವುದೇನು?

ಕಾಂಗ್ರೆಸ್‌ನಲ್ಲಿ ಈ ರೀತಿ ಅವೈಜ್ಞಾನಿಕ ವರದಿ ಮಂಡನೆ ಅವರ ಹೈಕಮಾಂಡ್ ಸೂಚನೆಯಾಗಿದೆ. ಕಾಂಗ್ರೆಸ್‌ನಲ್ಲಿರುವ ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರು ಹೈಕಮಾಂಡ್‌ಗೆ ಹೆದರಿ ಪ್ರತಿಭಟಿಸುತ್ತಿಲ್ಲ, ಅವರೆಲ್ಲರು ಅಸಹಾಯಕರಾಗಿದ್ದಾರೆ. ಯಾರೋ ನೀಡಿದ ಆದೇಶಗಳನ್ನು ಏಕೆ ಕುರುಡರಂತೆ ಜಾರಿಗೊಳಿಸಬೇಕು ಕೂತು ವಿಮರ್ಶಿಸಲಿ ದೋಷಗಳಿದ್ದರೆ ಪ್ರಶ್ನಿಸಲಿ. ನ್ಯಾಯ ಕೇಳುವುದರಲ್ಲಿ ತಪ್ಪೇನಿದೆ.

ಹೊಸದಾಗಿ ಸಮೀಕ್ಷೆ ನಡೆಸಲು ಅಧಿವೇಶನಗಳಲ್ಲಿ ಚರ್ಚಿಸಿ ಗಮನ ಸೆಳೆಯಲಿ

ವೈಜ್ಞಾನಿಕ ಸಮೀಕ್ಷೆ ನಡೆಸಲಿ



ಜನಿವಾರ ಕತ್ತರಿಸಿದ ಘಟನೆಯ ಬಗ್ಗೆ ನಿಮ್ಮ ಅಭಿಪ್ರಾಯ

ಸಿಇಟಿ ಪರೀಕ್ಷೆಯ ನಿಯಮಾವಳಿಗಳಲ್ಲಿ ಎಲ್ಲಿಯೂ ಜನಿವಾರ ಧರಿಸಬಾರದು ಎಂದು ತಿಳಿಸಿಲ್ಲ. ಸಿಇಟಿ ಎಂಬುದು ವಿದ್ಯಾರ್ಥಿ ಜೀವನದಲ್ಲಿ ಅತೀ ಮುಖ್ಯ ಹಂತ, ಇದರೊಂದಿಗೆ ಅಧಿಕಾರಿಗಳು ಆಟವಾಡಬಾರದು. ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯಕ್ಕಾಗಿ ಸಿಇಟಿ ಬರೆಯಲು ಮಾನಸಿಕವಾಗಿ ತಯಾರಿ ಮಾಡಿಕೊಂಡು ಬಂದಿರುತ್ತಾರೆ. ಈ ರೀತಿಯ ಘಟನೆಗಳಿಂದಾಗಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವುದಲ್ಲದೆ, ಬ್ರಾಹ್ಮಣ ಸಮುದಾಯದ ಭಾವನೆಗೆ ಧಕ್ಕೆ ತಂದಿದೆ. ಗಾಯತ್ರಿ ಮಂತ್ರೋಪದೇಶವಾಗಿ ಧರಿಸಿರುವ ಜನಿವಾರವನ್ನು ಯಾರೋ ಕತ್ತರಿಸಿ ಬಿಸಾಕುವುದು ಒಂದು ದುಷ್ಕೃತ್ಯ ಇದನ್ನು ಸಮುದಾಯ ಖಂಡಿಸುತ್ತದೆ. ಇಂತ ಸಂದರ್ಭದಲ್ಲಿ ಕೆಲ ವಿದ್ಯಾರ್ಥಿಗಳು ಪರೀಕ್ಷೆ ಬರೆಯದಿದ್ದರೂ ಪರವಾಗಿಲ್ಲ ಜನಿವಾರ ಕತ್ತರಿಸುವುದಿಲ್ಲ ಎಂದು ಹಿಂತಿರುಗಿದ್ದಾರೆ, ಇನ್ನು ಕೆಲವರು ಭಯದಿಂದ ಜನಿವಾರ ಕತ್ತರಿಸಿಕೊಂಡು ಪರೀಕ್ಷೆ ಬರೆದಿದ್ದಾರೆ. ಸರಕಾರ ಕೂಡಲೇ ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಚಿವ ಈಶ್ವರ್ ಖಂಡ್ರೆ ಪರೀಕ್ಷೆ ಬರೆಯದ ವಿದ್ಯಾರ್ಥಿಯನ್ನು ಭೇಟಿ ಮಾಡಿ ತಮ್ಮ ಕಾಲೇಜಿನಲ್ಲೇ ಸೀಟು ನೀಡುವುದಾಗಿ ಭರವಸೆ ನೀಡಿರುವುದು ಸ್ವಾಗತಾರ್ಹ.

ವಿಶ್ವವಾಣಿ ಸಂದರ್ಶನ
ರಂಜಿತ್ ಎಚ್. ಅಶ್ವತ್ಥ

ಜಾತಿ ಗಣತಿಗೆ ಸಂಬಂಧಿಸಿದಂತೆ ಊಹಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ಮಾತಾಡುವುದಕ್ಕಿಂತ, ವರದಿಯನ್ನು ಸಂಪೂರ್ಣವಾಗಿ ಅಧ್ಯಯನ ನಡೆಸಿದ ಬಳಿಕ ಮುಂದೇನು ಮಾಡಬೇಕು ಎನ್ನುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್ ಅಭಿಪ್ರಾಯಪಟ್ಟಿದ್ದಾರೆ. ಕಾಂತಾರಾಜ್ ಹಾಗೂ ಜಯಪ್ರಕಾಶ್ ಹೆಗ್ಡೆ ಅವರು ಸಲ್ಲಿಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ವರದಿಗೆ ಸಂಬಂಧಿಸಿದಂತೆ 'ವಿಶ್ವವಾಣಿ'ಯೊಂದಿಗೆ ಮಾತನಾಡಿರುವ ಅವರು, ಜಾತಿಗಣತಿಯನ್ನು ಯಾವ ರೀತಿ ನೋಡಲಾಗಿದೆ? ಮುಂದಿನ ಹೋರಾಟ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

● ಜಾತಿಗಣತಿಯನ್ನು ಬ್ರಾಹ್ಮಣ ಮಹಾಸಭಾ ಯಾವ ರೀತಿ ನೋಡುತ್ತದೆ?

ರಾಜ್ಯ ಸಚಿವ ಸಂಪುಟದಲ್ಲಿ ಮಂಡನೆಯಾಗಿರುವ ಜಾತಿ ಗಣತಿ ಪೂರ್ಣ ವರದಿಯನ್ನು ನಾವಿಲ್ಲ ಅಧ್ಯಯನ ಮಾಡಿಲ್ಲ. ಅಧ್ಯಯನ ಮಾಡದೇ ಮಾತನಾಡುವುದು ಸರಿಯಲ್ಲ. ಆದ್ದರಿಂದ ಈಗಾಗಲೇ ವರದಿಯನ್ನು ತರಿಸಿಕೊಂಡಿದ್ದು, ಪರಿಶೀಲಿಸುತ್ತಿದ್ದೇವೆ. ಇನ್ನೆರಡು ದಿನಗಳಲ್ಲಿ ಬ್ರಾಹ್ಮಣ ಸಮುದಾಯದ ಶಾಸಕರು, ಸಚಿವರು, ನಾಯಕರ ಸಭೆ ಕರೆಯುತ್ತಿದ್ದೇವೆ. ಸಭೆಯಲ್ಲಿ ವರದಿಯಲ್ಲಿರುವ ಅಂಶಗಳ ಬಗ್ಗೆ ಚರ್ಚಿಸಲಾಗುವುದು. ಬಳಿಕ ಸಾಧಕ-ಬಾಧಕವನ್ನು ನೋಡಿಕೊಂಡು ಮುಖ್ಯಮಂತ್ರಿಗಳಿಗೆ ಬ್ರಾಹ್ಮಣ ಮಹಾಸಭಾದ ನಿಲುವನ್ನು ಪತ್ರದ ಮೂಲಕ ತಿಳಿಸಲಾಗುವುದು. ಮಾಧ್ಯಮದಲ್ಲಿರುವ ಬರುತ್ತಿರುವ ವರದಿಯ ಪ್ರಕಾರ, ಬ್ರಾಹ್ಮಣ ಸಮುದಾಯದ ಸಂಖ್ಯೆ 17.83 ಲಕ್ಷ ಅಂದರೆ ಶೇ.2.89 ರಷ್ಟು ಎಂದು ತೋರಿಸಿದ್ದಾರೆ. ನಮಗಿರುವ ಮಾಹಿತಿ ಪ್ರಕಾರ ಇದು ಬಹಳ ಕಡಿಮೆ ಸಂಖ್ಯೆ.

> ವರದಿಯ ಸಂಪೂರ್ಣ ಪರಿಶೀಲಿಸಿದ ಮೇಲೆ ಉಪಜಾತಿಗಳಿಗೆ ಸಂಬಂಧಿಸಿದಂತೆ ತಿಳಿಯುತ್ತದೆ. ಅದಕ್ಕು ಮೊದಲೇ ಉತ್ತರಿಸಿದರೆ ತಪ್ಪಾಗಬಹುದು. ಆದರೆ ನಮಗೆ ಬಂದಿರುವ ಮಾಹಿತಿಯಲ್ಲಿ 2ಎ, 2ಬಿ ಯಲ್ಲಿ ಕೆಲವು ಜಾತಿಯವರನ್ನು ಬ್ರಾಹ್ಮಣ ಉಪಜಾತಿಯಲ್ಲಿ ಸೇರಿಸಲಾಗಿದೆ ಎಂದು ತಿಳಿದುಬಂದಿದೆ. ಆದರೆ ಅದು ಎಷ್ಟರ ಮಟ್ಟಿಗೆ ಸರಿ ತಪ್ಪು ಎಂಬುದು ನಮಗೆ ತಿಳಿದಿಲ್ಲ.
>
> ಎಸ್.ರಘುನಾಥ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ

● ಈ ಗಣತಿಗೆ ಹಲವು ವಿರೋಧವಿದೆಯಲ್ಲ?

ಬಹುತೇಕರು ಹೇಳುತ್ತಿರುವ ಪ್ರಕಾರ ಇದೊಂದು ವೈಜ್ಞಾನಿಕ ವರದಿಯಲ್ಲ. ಏಕೆಂದರೆ ಮನೆ ಮನೆ ಭೇಟಿ ಮಾಡಿ ಮಾಹಿತಿ ಪಡೆಯುವುದೇ ವೈಜ್ಞಾನಿಕ ಸಮೀಕ್ಷೆ. ಆದರೆ ನಾವು ಸುಮಾರು ಜನರನ್ನು ವಿಚಾರಿಸಿದಾಗ ಅವರು ಮನೆ ಭೇಟಿ ಮಾಡಿ ಮಾಹಿತಿ ಪಡೆದಿಲ್ಲ ಎನ್ನುತ್ತಿದ್ದಾರೆ. ಇದು ಕೆಲವರ ಹೇಳಿಕೆ ಅಲ್ಲ ಬಹುತೇಕರು ಇದನ್ನೇ ಹೇಳುತ್ತಿದ್ದಾರೆ. ಆ ಕಾರಣದಿಂದಾಗಿ ಇದೊಂದು ಅವೈಜ್ಞಾನಿಕ ವರದಿಯಾಗಿದೆ. ಸರಕಾರ ಹೊಸದಾಗಿ ಸಮೀಕ್ಷೆ ನಡೆಸಲು ಶಾಸಕರು ಹಾಗೂ ಸಂಸದರು ಅಧಿವೇಶನಗಳಲ್ಲಿ ಚರ್ಚಿಸಿ ಗಮನ ಸೆಳೆಯಬೇಕಾಗಿದೆ. ಆದ್ದರಿಂದ ನಮ್ಮ ಶಾಸಕ-ಸಚಿವರೊಂದಿಗೆ ಚರ್ಚಿಸಿ ಅವರಿಗೆ ಮಹಾಸಭಾದಿಂದ ಕೆಲವೊಂದಷ್ಟು ಸಲಹೆ-ಸೂಚನೆ ಹಾಗೂ ವರದಿಯ ಬಗ್ಗೆ ಮಾಹಿತಿ ನೀಡುವ ಕೆಲಸ ಮಾಡುತ್ತೇವೆ.

● ಮಹಾಸಭಾ ಪ್ರಕಾರ ಬ್ರಾಹ್ಮಣರ ಜನಸಂಖ್ಯೆ ಎಷ್ಟಿದೆ?

ಹಾಗೇ ನೋಡಿದರೆ, ರಾಜ್ಯದಲ್ಲಿ ಈವರೆಗೆ ಈ ರೀತಿಯ ಸಮುದಾಯದ ಜನಸಂಖ್ಯೆಯ ಸಮೀಕ್ಷೆಯನ್ನು ನಡೆಸಿರಲಿಲ್ಲ. ಕೆಲವರು 50 ಲಕ್ಷ ಎಂದರೆ, ಇನ್ನು ಕೆಲವರು 30ಲಕ್ಷ ಎನ್ನುತ್ತಾರೆ. ಆದರೆ ಸ್ಪಷ್ಟವಾಗಿರುವ ಸಂಖ್ಯೆ ನಮ್ಮ ಬಳಿಯೂ ಇಲ್ಲ. ಆದರೆ ಅಂದಾಜು 17 ಲಕ್ಷ ಎನ್ನುವುದು ಸರಿಯಲ್ಲ. ಹಾಗೇ ನೋಡಿದರೆ, ಅಂದಾಜು ಎಂಬುದೇ ಒಂದು ಅವೈಜ್ಞಾನಿಕವಾಗಿದೆ. ಆದರೆ 17 ಲಕ್ಷ ಎಂಬುದು ತೀರಾ ಕಡಿಮೆ ಸಂಖ್ಯೆ ಎಂಬುದು ನಮ್ಮೆಲ್ಲರ ನಿಲುವು, ಆದ್ದರಿಂದ ಹೊಸತಾಗಿ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು ಎಂಬುದು ನಮ್ಮ ಆಗ್ರಹವಾಗಿದೆ.

● ಮಹಾಸಭಾದಿಂದಲೇ ಸಮೀಕ್ಷೆ ಇದೆಯೇ?

ಬ್ರಾಹ್ಮಣ ಮಹಾ ಸಭಾದಿಂದಲೂ ಬ್ರಾಹ್ಮಣ ಸಮುದಾಯದ ಸಮೀಕ್ಷೆ ನಡೆಸುವ ಯೋಚನೆ ಇದೆ. ಇದರ ಕುರಿತಾಗಿ ಸಮುದಾಯದ ಮುಖಂಡರು ಹೋಬಳಿ ಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿ ಯಾವ ರೀತಿ ಮಾಹಿತಿ ಪಡೆಯಬಹುದು ಎಂದು ಚರ್ಚಿಸಲಾಗುತ್ತಿದೆ. ಗ್ರಾಮೀಣ ಭಾಗಗಳಲ್ಲಿ ಸಮೀಕ್ಷೆ ನಡೆಸುವುದು ಸುಲಭ, ಆದರೆ ಈ ನಗರ ಭಾಗದ ಸಮೀಕ್ಷೆ ನಡೆಸಲು ಸ್ವಲ್ಪ ಕಷ್ಟವಾಗಬಹುದು, ಸ್ವಲ್ಪ ಹೆಚ್ಚಿನ ಸಮಯವೂ ಹಿಡಿಯಬಹುದು. ಇದರ ಬಗ್ಗೆ ಸಂಪೂರ್ಣವಾಗಿ ಚರ್ಚಿಸಿ ಮುಂದಿನ ನಿರ್ಧಾರ ಮಾಡಲಾಗುವುದು.

● ಲಿಂಗಾಯತ ಮತ್ತು ಒಕ್ಕಲಿಗರ ಜತೆ ಹೋರಾಟಕ್ಕೆ ಕೈ ಜೋಡಿಸುತ್ತೀರಾ?

ವರದಿ ಪರಿಶೀಲಿಸಿದ ನಂತರ ನಮಗೆ ಅನ್ಯಾಯವಾಗಿದೆ ಎಂದು ತಿಳಿದರೆ ಖಂಡಿತವಾಗಿಯೂ ನಾವೂ ಅವರ ಜತೆ ಹೋರಾಟಕ್ಕೆ ಕೈ ಜೋಡಿಸುತ್ತೇವೆ, ಅದರಲ್ಲಿ ಯಾವ ತಪ್ಪೂ ಇಲ್ಲ. ಎಲ್ಲಾ ಸಮುದಾಯಗಳು ಇದು ಅವೈಜ್ಞಾನಿಕ ಎಂದು ಪ್ರತಿಭಟನೆ ನಡೆಸಿದರೆ ನಾವು ಅವರೊಂದಿಗೆ ಧ್ವನಿಗೂಡಿಸುತ್ತೇವೆ. ಸರಿಯಾದ ರೀತಿಯಲ್ಲಿ ಸಮೀಕ್ಷೆ ನಡೆಸಲು ಸರಕಾರದ ಮೇಲೆ ಒತ್ತಡ ಹೇರುತ್ತೇವೆ.

ಸಮಾಚಾರ ಸಣ್ಣದಲ್ಲ

ವಿದ್ಯುತ್ ತಂತಿ ತುಳಿದು ನೌಕರ ಸಾವು

ಹಾಸನ: ಗಾಳಿ ಮಳೆಗೆ ತುಂಡಾಗಿ ಬಿದ್ದಿದ್ದ ಹೈಟೆನ್ಷನ್ ವಿದ್ಯುತ್ ತಂತಿಯನ್ನು ತುಳಿದು ಕೆಎಸ್‌ಆರ್‌ಟಿಸಿ ನೌಕರರೊಬ್ಬರು ಸಾವಿಗೀಡಾದ ಘಟನೆ ನಗರದ ಬಿಟಿ ಕೊಪ್ಪಲಿನಲ್ಲಿ ನಡೆದಿದೆ. ಮೃತ ನಂದೀಶ್ (41) ಅವರು ವಾಕಿಂಗ್ ಹೋಗಿದ್ದ ವೇಳೆ ಈ ಅವಘಡ ಸಂಭವಿಸಿದ್ದು, ಈ ಮೂಲಕ ಜಿಲ್ಲೆಯಲ್ಲಿ ಮಳೆಗೆ ಮೊದಲ ಬಲಿಯಾದಂತಾಗಿದೆ. ಶನಿವಾರ ರಾತ್ರಿ ಸುರಿದ ಬಾರಿ ಮಳೆ ಗಾಳಿಗೆ 11 ಕೆವಿ ವಿದ್ಯುತ್ ತಂತಿ ತುಂಡಾಗಿ ಬಿದ್ದಿತ್ತು. ಮುಂಜಾನೆ ವಾಕಿಂಗ್ ಮಾಡುವಾಗ, ನಂದೀಶ್ ತಂತಿ ತುಳಿದ ಪರಿಣಾಮ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈಜಲು ತೆರಳಿದ್ದ ಇಬ್ಬರು ನೀರುಪಾಲು

ಭಾಲ್ಕಿ: ಸ್ನೇಹಿತರೊಂದಿಗೆ ಈಜಲು ಬಾವಿಗೆ ಇಳಿದಿದ್ದ ಇಬ್ಬರು ಯುವಕರು ನೀರು ಪಾಲಾದ ಘಟನೆ ರವಿವಾರ ಮಧ್ಯಾಹ್ನ ತಾಲೂಕಿನ ಮುಚಳಂಬ ಗ್ರಾಮದಲ್ಲಿ ನಡೆದಿದೆ. ಮುಚಳಂಬ ಗ್ರಾಮದ ಅವಿನಾಶ್ ಶರಣಪ್ಪ ಮಚಕೂರೆ (16) ಹಾಗೂ ಭಾಲ್ಕಿ ತಾಲೂಕಿನ ಕೋಟಗೇರಾ ಗ್ರಾಮದ ಭಾಗೇಶ ಕಮಾಲಾಕರ ಮಾನೆ (16) ಮೃತ ಬಾಲಕರು. ಎಸ್ಸೆಸ್ಸೆಲ್ಸಿ ಪರೀಕ್ಷೆ ಬಳಿಕ ರಜೆ ಇರುವುದರಿಂದ ಭಾಗೇಶ ಮಾನೆ ಎಂಬ ಬಾಲಕ ರವಿವಾರ ಮುಚಳಂಬ ಗ್ರಾಮಕ್ಕೆ ಹೋಗಿದ್ದು, ಐದು ಜನ ಸ್ನೇಹಿತರ ಜತೆ‌ಎ ಗ್ರಾಮ ಸಮೀಪದ ಬಾವಿಯೊಂದರಲ್ಲಿ ಈಜಲು ಹೋಗಿದ್ದರು. ಈಜಲು ಬಾರದ ಓರ್ವ ಬಾಲಕ ನೀರಿಗೆ ಇಳಿದಿದ್ದಾನೆ, ಈಜು ಬಾರದ್ದರಿಂದ ಬಾಲಕ ಮುಳುಗುತ್ತಿರುವುದು ಕಂಡು ಆತನ ರಕ್ಷಿಸಲು ಇನ್ನೊಬ್ಬ ಬಾಲಕ ಬಾವಿಗೆ ಜಿಗಿದಿದ್ದಾನೆ. ಈ ವೇಳೆ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಕೊನೆಯುಸಿರೆಳೆದಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಬಸವಕಲ್ಯಾಣ ಗ್ರಾಮೀಣ ಠಾಣೆಯ ಪಿಎಸ್‌ಐ ನಾಗೇಂದ್ರ, ಮಂಠಾಳ ಸಿಪಿಐ ಕೃಷ್ಣಕುಮಾರ್ ಪಾಟೀಲ್ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಬಸವಕಲ್ಯಾಣ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಶೀಘ್ರ ರಸ್ತೆ ವಿಸ್ತರಣೆಗೆ ಚಾಲನೆ: ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್

ನರಸಿಂಹರಾಜಪುರ ರಸ್ತೆ ವಿಸ್ತರಣೆಗೆ 60 ಕೋಟಿ ಅನುದಾನ

ನರಸಿಂಹರಾಜಪುರ: ಪಟ್ಟಣದ ಸುಂಕದಕಟ್ಟೆಯಿಂದ ಪಟ್ಟಣ ಪಂಚಾಯಿತಿ ವೃತ್ತದವರೆಗೆ ಹಾಗೂ ಬಸ್ ನಿಲ್ದಾಣದಿಂದ ಪ್ರವಾಸಿ ಮಂದಿರದ ವರೆಗೆ ಪರಿಹಾರ ನೀಡಿ ಒಂದೇ ಹಂತದಲ್ಲಿ 60 ಕೋಟಿ ರು.ವೆಚ್ಚದಲ್ಲಿ ಆದಷ್ಟು ಬೇಗ ರಸ್ತೆ ವಿಸ್ತರಣೆ ಮಾಡಲಾಗುವುದು ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹೇಳಿದರು.

ಪಟ್ಟಣದಲ್ಲಿ ಭಾನುವಾರ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಎಸ್.ಸತ್ಯನಾರಾಯಣ ಅವರೊಂದಿಗೆ ಮುಖ್ಯ ರಸ್ತೆ ವಿಸ್ತರಣೆ ಮಾಡುವ ಸ್ಥಳದ ಪರಿಶೀಲನೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯ ಅವರು ವಿವಿಧ ಕಾಮಗಾರಿಗಳ ಉದ್ಘಾಟನೆಗೆ ತಾಲೂಕು ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪಟ್ಟಣದ ಮುಖ್ಯರಸ್ತೆ ವೀಕ್ಷಿಸಿ ವಿಸ್ತರಣೆ ಅವಶ್ಯಕತೆಯನ್ನು ಮನಗಂಡಿದ್ದರು. ಹಾಗಾಗಿ ಪ್ರಸ್ತುತ ರಸ್ತೆ ವಿಸ್ತರಣೆಗೆ ಅನುದಾನ ಬಿಡುಗಡೆ ಮಾಡಿದ್ದಾರೆ. ಇದು ಆರ್ಥಿಕ ಇಲಾಖೆಯ ಒಪ್ಪಿಗೆಗೆ ಹೋಗಿದೆ. ರಸ್ತೆ ವಿಸ್ತರಣೆ ಕಾಮಗಾರಿಗೆ ಚಾಲನೆ ನೀಡುವ ನಿಟ್ಟಿನಲ್ಲಿ ಸ್ಥಳ ಪರಿಶೀಲಿಸಿ ಕ್ರಿಯಾಯೋಜನೆ ರೂಪಿಸಿ ಅಂದಾಜು ಪಟ್ಟಿಯ ವರದಿ ನೀಡುವಂತೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗೆ ಮುಖ್ಯಮಂತ್ರಿಗಳು ಸೂಚಿಸಿದ್ದರು.

ಅದರಂತೆ ಲೋಕೋಪಯೋಗಿ ಕಾರ್ಯದರ್ಶಿಗಳು ಭೇಟಿ ನೀಡಿದ್ದಾರೆ ಎಂದರು. ಪಟ್ಟಣದ ಜನರ ಹಲವು ವರ್ಷಗಳ ಬೇಡಿಕೆಯಾಗಿರುವ ರಸ್ತೆ ವಿಸ್ತರಣೆ ಮಾಡುವಾಗ ಸದರಿ ಪ್ರದೇಶದಲ್ಲಿರುವ ಮನೆಗಳಿಗೆ ಪರಿಹಾರ ನೀಡಲಾಗುತ್ತದೆ. ಪ್ರತಿಯೊಬ್ಬರು ರಸ್ತೆ ವಿಸ್ತರಣೆಗೆ ಸಹಕಾರ ನೀಡಬೇಕು. ಯಾರು ಸಹ ಅಪಸ್ವರ ಎತ್ತಬಾರದು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಚರ್ಚಿಸಿ ಶೀಘ್ರದಲ್ಲಿಯೇ ರಸ್ತೆ ವಿಸ್ತರಣೆಗೆ ಚಾಲನೆ ನೀಡಲಾಗುವುದು ಎಂದರು

ಭದ್ರಾಕಾಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ.ಅಂಶುಮಂತ್ ಮಾತನಾಡಿ, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಅವರ ಪ್ರಯತ್ನದಿಂದ ಪಟ್ಟಣದ ಜನರ ಬಹುದಿನದ ಕನಸು ನನಸಾಗುತ್ತಿದೆ ಎಂದರು.

ಕೆಆರ್‌ಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಲಿಂಗಮೂರ್ತಿ, ಎಸ್‌ಇ ಎಸ್.ಗಣೇಶ್ , ಎಂಜಿನಿಯರ್ ಇಇ ಶ್ರೀಧರ್, ಎಇ ದಿನೇಶ್, ಮುಖ್ಯಾಧಿಕಾರಿ ಆರ್.ವಿ.ಮಂಜುನಾಥ್,ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಜುಬೇದಾ, ಉಪಾಧ್ಯಕ್ಷೆ ಉಮಾಕೇಶವ್. ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಶಾಂತ್ ಶೆಟ್ಟಿ, ಸದಸ್ಯ ಸೈಯದ್ ವಸೀಂ, ಮಾಜಿ ಸದಸ್ಯ ಸುನಿಲ್ ಕುಮಾರ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ದೇವಂತ್ ಇದ್ದರು.

ಪಟ್ಟಣದಲ್ಲಿ ಭಾನುವಾರ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಎಸ್.ಸತ್ಯನಾರಾಯಣ ಅವರೊಂದಿಗೆ ಮುಖ್ಯ ರಸ್ತೆ ವಿಸ್ತರಣೆ ಮಾಡುವ ಸ್ಥಳವನ್ನು ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಅವರು ಪರಿಶೀಲನೆ ನಡೆಸಿದರು.

ಚೀಟಿ ಎತ್ತುವ ಮೂಲಕ ನಿವೇಶನ ಹಂಚಿಕೆ

ಪಟ್ಟಣದ ಹಿಳುವಳ್ಳಿ ಗ್ರಾಮದ3.71ಕೋಟಿ ಮೊತ್ತ ಆಶ್ರಯ ಬಡಾವಣೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, ಬಡವಾಣೆ ನಿರ್ಮಾಣಕ್ಕೆ ಈ ಹಿಂದೆಯೇ ಟೆಂಡರ್ ಆಗಿತ್ತು. ಕಾಮಗಾರಿ ಕೈಗೊಳ್ಳುವುದು ವಿಳಂಬವಾಗಿ ದ್ದರಿಂದ ವೆಚ್ಚ ಹೆಚ್ಚಾಗಿದ್ದರಿಂದ ಸರಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿಸಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ರಸ್ತೆ, ಚರಂಡಿ, ಕುಡಿಯುವ ನೀರಿನ ಟ್ಯಾಂಕ್ , ವಿದ್ಯುತ್ ದೀಪ ಅಳವಡಿಕೆಯಂತ ಮೂಲ ಸೌಲಭ್ಯಗಳನ್ನು ಬಡಾವಣೆಯಲ್ಲಿ ನಿರ್ಮಿಸಿ ನಿವೇಶನ ಗುರುತಿಸಿ ಆಯ್ಕೆಯಾದ ಫಲಾನುಭವಿಗಳಿಗೆ ಚೀಟಿ ಎತ್ತುವ ಮೂಲಕ ನಿವೇಶನ ಹಂಚಲಾಗುವುದು ಎಂದು ಹೇಳಿದರು.

> 158 ನಿವೇಶನ ರಹಿತರಿಗೆ ಸೂರು ಕೊಡುವುದು ಪುಣ್ಯದ ಕೆಲಸ. 22 ವರ್ಷಗಳ ನಂತರ ನಿವೇಶನ ನೀಡುತ್ತಿರುವ ಉತ್ತಮ ಕಾರ್ಯ. ಈ ಬಡಾವಣೆಯ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿಸುವಲ್ಲಿ ಪ್ರಶಾಂತ್ ಅವರ ಶ್ರಮ ಸಾಕಷ್ಟಿದೆ. ಹಿಂದಿನ ಸರಕಾರದ ಅವಧಿಯಲ್ಲಿ ವಿ.ಸೋಮಣ್ಣ ಅವರು ಸಹ ಬಡಾವಣೆ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಶಾಸಕ ರಾಜೇಗೌಡ ಅವರ ನೇತೃತ್ವದಲ್ಲಿ ನಿವೇಶನ ನೀಡುತ್ತಿರುವುದು ಉತ್ತಮ ಕಾರ್ಯ
>
> ಎಂ.ಶ್ರೀನಿವಾಸ್ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ

ಹಿರಿಯರನ್ನು ಎಂದಿಗೂ ತಾತ್ಸಾರದಿಂದ ನೋಡಬೇಡಿ

ಈಗಿನ ತಂತ್ರಜ್ಞಾನವು ವೇಗವಾಗಿ ಮುಂದುವರಿಯುತ್ತಿದ್ದು ಮಕ್ಕಳ ಜ್ಞಾನ ಮಟ್ಟವೂ ಸಹ ಬೆಳೆಯುತ್ತಿದೆ ಎಂದು ರಾಜ್ಯ ಪ್ರವಾಸೋ ದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ತಿಳಿಸಿದರು. ಅವರು ಶನಿವಾರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ 5 ಲಕ್ಷ ರು. ವೆಚ್ಚದ ಕುಡಿಯುವ ನೀರಿನ ಘಟಕ ಉದ್ಘಾಟನೆ ನೆರವೇರಿಸಿ ಮಾತನಾಡಿ, ಮಕ್ಕಳು ಎಲ್ಲಾ ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಇಂದು ಮೊಬೈಲ್ ಮೂಲಕ ಅಂಗೈಯಲ್ಲೇ ಪ್ರಪಂಚ ಸುತ್ತಾಡಬ ಹುದು.ಮಕ್ಕಳಿಗೆ ಶಿಕ್ಷಣ ಅಮೂಲ್ಯವಾಗಿದೆ. ಪ್ರಾಥಮಿಕ ಶಿಕ್ಷಣ ಜೀವನದಲ್ಲಿ ಅತಿ ಮುಖ್ಯ ವಾದ ಘಟ್ಟವಾಗಿದೆ. ಮಕ್ಕಳು ಗುರು ಹಿರಿಯರಿಗೆ, ಪಾಠ ಮಾಡಿದ ಶಿಕ್ಷಕರಿಗೆ ಗೌರವ ನೀಡಬೇಕು. ಹಿರಿಯರ ತಮ್ಮ ಅನುಭವದ ನುಡಿಗಳನ್ನು ಕಿರಿಯರು ಕೇಳಬೇಕು.ಹಿರಿಯರನ್ನು ಎಂದಿಗೂ ತಾತ್ಸಾರದಿಂದ ನೋಡಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಜಾತಿಗಣತಿ ಅವೈಜ್ಞಾನಿಕ ಹೇಳಿಕೆಗೆ ಹೆಬ್ಬಾಳ್ಕರ್ ಕಿಡಿ

ಬಿಜೆಪಿಯಿಂದ ದಿಕ್ಕುತಪ್ಪಿಸುವ ಕೆಲಸ

ಬೆಳಗಾವಿ: ಜಾತಿ ಗಣತಿ ವರದಿ ಅವೈಜ್ಞಾನಿಕ ಎಂದಿರುವ ಬಿಜೆಪಿ ವಿರುದ್ಧ ಕಿಡಿಕಾರಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಬಿಜೆಪಿ ನಾಯಕರು ರಾಜ್ಯದ ಜನರನ್ನು ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸಿದ್ದು ಬಿಜೆಪಿ ಸರಕಾರದ ಅವಧಿಯಲ್ಲೇ. ಜಾತಿ ಗಣತಿ ಅಧ್ಯಯನ ಮಾಡಿದ್ದು ಬಿಜೆಪಿ ಸರಕಾರದ ಅವಧಿಯಲ್ಲೇ. ಆಗಲೇ ಬಿಜೆಪಿಯವರೇ ಜಾತಿಗಣತಿಯನ್ನು ತಿರಸ್ಕರಿಸಬಹುದಿತ್ತು. ಆದರೀಗ ಬಿಜೆಪಿ ನಾಯಕರು ಜಾತಿಗಣತಿ ಅವೈಜ್ಞಾನಿಕ ಎಂದು ಹೇಳುತ್ತಿರುವುದು ಹಾಸ್ಯಾಸ್ಪದ ಎಂದರು.

ಪೂರ್ಣ ಚರ್ಚೆಯ ಬಳಿಕವಷ್ಟೇ ಪ್ರತಿಕ್ರಿಯಿಸುವೆ: ಜಾತಿ ಗಣತಿ ವರದಿ ಇನ್ನೂ ಚರ್ಚೆಯ ಹಂತದಲ್ಲಿದೆ. ಮೊನ್ನೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಬಗ್ಗೆ ಚರ್ಚೆಯಷ್ಟೇ ಆಗಿದೆ. ಇದರ ಬಗ್ಗೆ ಇನ್ನಷ್ಟು ಚರ್ಚೆ ಆಗಬೇಕಿದೆ. ಸಂಪೂರ್ಣವಾಗಿ ಕ್ಯಾಬಿನೆಟ್‌ನಲ್ಲಿ ಚರ್ಚೆ ಆದ ಬಳಿಕವಷ್ಟೇ ಪ್ರತಿಕ್ರಿಯಿಸುವುದಾಗಿ ಹೇಳಿದರು.

ತನಿಖೆ ಬಳಿಕ ಸತ್ಯಾಂಶ ಬಯಲು

ಕಳೆದ ಜನವರಿ 14 ರಂದು ಕಾರು ಅಪಘಾತಕ್ಕೆ ಕಾರಣವಾಗಿದ್ದ ಟ್ರಕ್ ಚಾಲಕನನ್ನು ಪೊಲೀಸರು ಬಂಧಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಅಪಘಾತದ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ನಡೆದ ಬಳಿಕವಷ್ಟೇ ಸತ್ಯಾಸತ್ಯತೆ ತಿಳಿಯಲಿದೆ. ನಾನು ಕೂಡ ನಿದ್ದೆಗಣ್ಣಿನಲ್ಲಿದ್ದೆ, ನನಗೆ ಯಾವ ರೀತಿಯ ಅನುಮಾನವಿಲ್ಲ. ಚಾಲಕನನ್ನು ಹಿಡಿಯಲು ಪೊಲೀಸರು ಸಾಕಷ್ಟು ಶ್ರಮ ಹಾಕಿದ್ದಾರೆ. ಚಾಲಕ ಮಹಾರಾಷ್ಟ್ರದ ಪುಣೆ ಮೂಲದವರು ಎಂದು ತಿಳಿದು ಬಂದಿದೆ. ಬೆಳಗಾವಿ ಪೊಲೀಸರು ಬಹಳ ಚುರುಕಾಗಿ ತನಿಖೆ ನಡೆಸಿ ಚಾಲಕನನ್ನು ಹಿಡಿದಿದ್ದಾರೆ. ಅವರಿಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು ಎಂದು ಸಚಿವರು ಹೇಳಿದರು.

ಜಾತಿಗಣತಿ ವಿರುದ್ಧ ಗಟ್ಟಿ ದನಿ ಎತ್ತಬೇಕು

ದಾವಣಗೆರೆ: ರಾಜ್ಯದಲ್ಲಿ ಜಾತಿ ಜನ ಗಣತಿ ನೆಪದಲ್ಲಿ ವೀರಶೈವ-ಲಿಂಗಾಯತರನ್ನು ರಾಜಕೀಯದಿಂದ ದೂರ ಇಡುವ ಹುನ್ನಾರ ನಡೆದಿದ್ದು, ಸಮುದಾಯದ ಶಾಸಕರು ಮತ್ತು ಸಚಿವರು ಇದರ ವಿರುದ್ಧ ಗಟ್ಟಿ ಧ್ವನಿ ಎತ್ತಬೇಕು ಎಂದು ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ನಗರದ ಭಾನುವಾರ ನಡೆದ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ರಜತ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿ, ರಾಜ್ಯದಲ್ಲಿ ವೀರಶೈವ-ಲಿಂಗಾಯತ ಜನಸಂಖ್ಯೆ ಅತಿ ಹೆಚ್ಚಿದೆ. ಆದರೆ, ಜಾತಿ ಜನ ಗಣತಿ ವೇಳೆ ಒಳ ಪಂಗಡಗಳನ್ನು ವರ್ಗೀಕರಣ ಮಾಡಿ, ಸಂಖ್ಯೆ ಕಡಿಮೆ ಮಾಡುವ ಚಾಣಕ್ಷತೆಯನ್ನು ಸರಕಾರ ಪ್ರದರ್ಶಿಸಿದೆ. ಇನ್ನೊಮ್ಮೆ ಮನೆ, ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಿದರೆ ನೈಜ ಅಂಕಿಅಂಶ ಹೊರಬರಲಿದೆ ಎಂದರು.

ಈ ಅವೈಜ್ಞಾನಿಕ ಜಾತಿ ಗಣತಿ ವರದಿ ಶಾಮ ನೂರು ಶಿವಶಂಕರಪ್ಪ ವಿರೋಧಿಸಿದ್ದು, ಮಹಾಸಭಾ ದಿಂದಲೇ ವೀರಶೈವ-ಲಿಂಗಾಯತ ಗಣತಿ ನಡೆಸುವುದಾಗಿ ಹೇಳಿದ್ದಾರೆ. ಇವರ ಧ್ವನಿಗೆ ಸಮುದಾಯದ ಶಾಸಕರು, ಮಂತ್ರಿಗಳು ಧ್ವನಿ ಗೂಡಿಸಬೇಕು ಎಂದು ಹೇಳಿದರು.

ರಾಮೋತ್ಸವ ಕಾರ್ಯಕ್ರಮದಲ್ಲಿ ಸೂಲಿಬೆಲೆ ಕರೆ

ಹಿಂದೂಗಳೇ ಧೈರ್ಯವಾಗಿ ಮತಾಂತರ ಮಾಡಬಹುದು

ಮಂಗಳೂರು: ಹಿಂದೂಗಳೇ ನೀವು ಧೈರ್ಯವಾಗಿ ಮತಾಂತರ ಮಾಡಿ ಎಂದು ಚಿಂತಕ ಚಕ್ರವರ್ತಿ ಸೂಲಿಬೆಲೆ ಕರೆ ನೀಡಿದ್ದಾರೆ.

ಮಂಗಳೂರಿನ ಉಜಿರೆಯಲ್ಲಿ ನಡೆದ ರಾಮೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಯಾರಾದರೂ ನಿಮ್ಮನ್ನು ಮತಾಂತರ ಆಗಿ ಎಂದ ಹೇಳಿದರೆ ನೀವು ನಮ್ಮ ಸಮಾಜ ನಿಮ್ಮನ್ನು ಪ್ರೀತಿಯಿಂದ ಸ್ವಾಗತಿಸುತ್ತೆ ಬನ್ನಿ ಎಂದು ಕರೆಯಿರಿ ಎಂದು ಹೇಳಿದರು.

ಇತ್ತೀಚೆಗೆ ಬಜರಂಗದಳದವರು ಸಂಕಲ್ಪ ತಗೊಂಡಿದ್ದಾರೆ. ಹಿಂದೂಗಳ ಸಂಖ್ಯೆ ಜಾಸ್ತಿ ಮಾಡಲು ಏನು ಐಡಿಯಾ ಇದೆ ಎಂದು ಕೇಳಿದಾಗ ಹೆಚ್ಚು ಮಕ್ಕಳನ್ನು ಮಾಡುವಂತೆ ಮನವಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಆದರೆ ನಮ್ಮ ಜನ ನಾಲ್ಕೈದು ಮಕ್ಕಳನ್ನ ಮಾಡ್ತಾರಾ? ನಮ್ಮ ಜನರಿಗೆ ಅವರ ಮಕ್ಕಳನ್ನು ಪಂಚರ್ ಹಾಕಲು ಕಳುಹಿಸಲು ಇಷ್ಟ ಇಲ್ಲ. ಅವರಿಗೆ ನಮ್ಮ ಮಕ್ಕಳು ಚೆನ್ನಾಗಿ ಓದಿ ಡಾಕ್ಟರ್, ಎಂಜಿನಿಯರ್ ಆಗಿ ಮಾಡಬೇಕು ಅನ್ನೋದಷ್ಟೇ ಇದೆ. ಹಾಗಾಗಿ ಓದಿಸೋ ತಾಕತ್ತು ಇಲ್ಲದ ಕಾರಣ ಒಂದು ಸಾಕು, ಎರಡು ಸಾಕು ಅಂತಾರೆ. ಹಾಗಾಗಿ ಸರಕಾರ ನಮಗಾಗಿ ಮಾಡಿರೋ ಕಾನೂನುಗಳನ್ನು ಬಳಸಿಕೊಳ್ಳಿ ಎಂದು ಕರೆ ನೀಡಿದರು.



> ಬಿಜೆಪಿ ಸರಕಾರ ಇದ್ದಾಗ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತಂದಿತು. ಹೊಸ ಸರಕಾರ ಬಂದು ಆ ಕಾನೂನು ತೆಗೆದು ಹಾಕಿತು. ಅಂದರೆ ಅದರ ಅರ್ಥ ನೀವೂ ಮತಾಂತರ ಮಾಡಬಹುದು ಅಂತ. ಸರಕಾರವೇ ಧೈರ್ಯವಾಗಿ ಹೇಳಿದೆ, ಮತಾಂತರ ಮಾಡಿ ಅಂತ, ಹಾಗಿದ್ದಾಗ ನಾವು ಮಾಡಬೇಕಲ್ವಾ? ಜಗತ್ತಿನ ಯಾವ ರಾಷ್ಟ್ರದಲ್ಲೂ ಈ ರೀತಿಯ ಪರಿಸ್ಥಿತಿ ಇಲ್ಲ. ಹಾಗಾಗಿ ಮತಾಂತರ ಮಾಡಿ, ಸರಕಾರವೇ ಅಧಿಕೃತವಾಗಿ ಹೇಳಿದೆ, ಮಾಡಲು ನಿಮಗೆ ಕಷ್ಟ ಏನು?.
>
> –ಚಕ್ರವರ್ತಿ ಸೂಲಿಬೆಲೆ, ಚಿಂತಕ

ವಿಶ್ವವಾಣಿ

ಸಂಪಾದಕೀಯ

ಒಬ್ಬನಿಗಿಂತ ಮೂವರು ಲೇಸು

ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೇಳಿ ಉದ್ಯಮದ ಹಿನ್ನೆಲೆಯವರು. ಮತ್ತೊಂದು ದೇಶದ ಜತೆಗಿನ 'ವಾಣಿಜ್ಯಿಕ' ಸಂಬಂಧದಿಂದ ತಮ್ಮ ದೇಶಕ್ಕೆ ಒದಗಬಹುದಾದ ಲಾಭದ ಲೆಕ್ಕಾಚಾರ ಹಾಕಿಯೇ ಅವರು 'ರಾಜತಾಂತ್ರಿಕ' ಸಂಬಂಧಕ್ಕೆ ಕೈಚಾಚುವುದು ಎನ್ನುತ್ತಾರೆ ಬಲ್ಲವರು. ತಮ್ಮ ಎರಡನೇ ಅಧಿಕಾರಾವಧಿಯಲ್ಲಿ ಶುರುವಿಟ್ಟುಕೊಂಡಿರುವ 'ಪ್ರತಿಸುಂಕ' ಹೇರಿಕೆಯ ಉಪಕ್ರಮಕ್ಕೆ ಅವರು ತಾತ್ಕಾಲಿಕ ವಿರಾಮ ನೀಡಿದ್ದಾರಾದರೂ, ಅವರ ಚಿತ್ತಸ್ಥಿತಿ ಯಾವಾಗ ಸಂಯಮದಿಂದ ಕೂಡಿರುತ್ತದೆ ಮತ್ತು ಯಾವಾಗ ಕೆರಳುತ್ತದೆ ಎಂಬುದನ್ನು ಮುನ್ನಂದಾಜಿಸಲು ಆಗದು. ಚೀನಾದೊಡನೆ ಸುಂಕಸಮರಕ್ಕೆ ಇಳಿದಿರುವ ಟ್ರಂಪ್ ಆ ದೇಶದ ಮೇಲೆ ಹೇರಿರುವ ಸುಂಕದ ಮಟ್ಟವನ್ನು ಪ್ರಸ್ತುತ ಶೇ.245ಕ್ಕೆ ಏರಿಸಿ ಹಲವರ ಹುಬ್ಬೇರುವಂತೆ ಮಾಡಿದ್ದಾರೆ; ಇಷ್ಟಾಗಿಯೂ ಚೀನಾ ಜಗ್ಗದಿರುವುದಕ್ಕೆ ಟ್ರಂಪ್‌ಗೆ ಕೋಪ ಬಂದಿರಲಿಕ್ಕೂ ಸಾಕು. ಈ ಹಗ್ಗಜಗ್ಗಾಟಕ್ಕೆ ಹೋಲಿಸಿದಾಗ, ಭಾರತದ ಮೇಲೆ ಅವರು ಹೇರಿರುವ ಸುಂಕದ ಪ್ರಮಾಣ ಶೇ.26ರಷ್ಟಿದ್ದು, ಇದಕ್ಕೆ ನಮ್ಮ ದೇಶದೆಡೆಗೆ ಟ್ರಂಪ್ ತಳೆದಿರುವ 'ಮೃದುಧೋರಣೆ'ಯೇ ಕಾರಣ ಎನ್ನುವವರಿದ್ದಾರೆ. ಆದರೆ ಇದನ್ನು ಸಂಪೂರ್ಣ ನಂಬಲಾಗದು ಎಂಬುದು ರಾಜತಾಂತ್ರಿಕತೆಯ ಕೆರೆ ನೀರನ್ನು ಕುಡಿದಿರುವವರ ಅನುಭವದ ಮಾತು. ಹೀಗಾಗಿಯೇ, ಅಮೆರಿಕದ ಸುಂಕಪರ್ವದ ಬಿಕ್ಕಟ್ಟಿನಿಂದ ಬಚಾವಾಗಲು ಇರಬಹುದಾದ ಪರ್ಯಾಯ ಮಾರ್ಗಗಳನ್ನು ತಡಕುವ ಯತ್ನಕ್ಕೂ ಭಾರತ ಮುಂದಾಗಿರುವುದು ಶ್ಲಾಘನೀಯ. ಈ ಕಸರತ್ತಿನ ಒಂದು ಭಾಗವಾಗಿ ಪ್ರಧಾನಿ ನರೇಂದ್ರ ಮೋದಿಯವರು ಮುಂದಿನ ತಿಂಗಳಲ್ಲಿ ಐರೋಪ್ಯ ರಾಷ್ಟ್ರಗಳಾದ ನಾರ್ವೆ, ನೆದರ್ಲ್ಯಾಂಡ್ ಮತ್ತು ಕ್ರೊವೇಷಿಯಾಗೆ ಭೇಟಿ ನೀಡುತ್ತಿದ್ದಾರೆ. ಈ ರಾಷ್ಟ್ರಗಳೊಂದಿಗೆ 'ಮುಕ್ತ ವ್ಯಾಪಾರ ಒಪ್ಪಂದ'ದ ಸಾಧ್ಯಾಸಾಧ್ಯತೆಗಳ ಕುರಿತು ಪರಸ್ಪರ ಚರ್ಚಿಸುವುದು ಹಾಗೂ ಅದು ಸಕಾರಾತ್ಮಕ ಫಲಿತಗಳನ್ನು ಹೊಮ್ಮಿಸಿದರೆ ಒಡಂಬಡಿಕೆಗಳನ್ನು ಮಾಡಿಕೊಳ್ಳುವುದು ಈ ಭೇಟಿಯ ಮುಖ್ಯ ಧ್ಯೇಯ ಎನ್ನಲಾಗಿದೆ. ಭಾರತ ಹಾಗೂ ಮೋದಿಯವರ ಕುರಿತು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಈಗಾಗಲೇ ಮೂಡಿರುವ ಸೌಹಾರ್ದ ಭಾವನೆಯ ಹಿನ್ನೆಲೆಯಲ್ಲಿ ಈ ಭೇಟಿಗಳು ಫಲಪ್ರದವಾಗಲಿವೆ ಎಂಬುದೇ ಬಹುತೇಕರ ಅಂಬೋಣ. ಅದು ನಿಜವಾಗಲಿ...

ಸೊಂಪಾದಕೀಯ

ಎವ್ವೆರಿ ಡೇ ಈಸ್ ನಾಟ್ WED-nesday

ಇತ್ತೀಚೆಗೆ, ಛತ್ರಗಳಲ್ಲಿ ನಡೆಯಬೇಕಾದ ಮದುವೆಗಳು ಕೂಡಾ ನಡೆಯೋದು ಕಷ್ಟ ಅನ್ನೋ ಥರ ಆಗಿದೆ. ಯಾಕಂದ್ರೆ ಎಲ್ಲ ಸುಸೂತ್ರವಾಗಿ ರೆಡಿ ಆದಮೇಲೂ ಕೊನೆಯ ಕ್ಷಣದಲ್ಲಿ ಮದುವೆಗಳು ಕ್ಯಾನ್ಸಲ್ ಆಗುತ್ತಿವೆ. ಇತ್ತೀಚೆಗೆ ಇದೇ ರೀತಿ ಅಂತಿಮ ಕ್ಷಣದಲ್ಲಿ ವಧು ತನ್ನ ಮನಸ್ಸು ಬದಲಾಯಿಸಿದ್ದರಿಂದ ಮದುವೆಯೊಂದು ನಿಂತುಹೋಗಿದೆ. ಅಂದರೆ, ಆಗಬೇಕಾದ ಹುಡುಗನ ಜತೆ ಆಗದೆ, ಬೇರೊಬ್ಬ ಹುಡುಗನ ಜತೆ ವಧುವಿನ ಮದುವೆ ಆಗಿದೆ. ಹಿಂದಿನ ರಾತ್ರಿ ಕೂಡಾ ಯಾರಿಗೂ ಲಗ್ನಕ್ಕೆ ವಿಘ್ನ ಬರುತ್ತೆ ಅಂತ ಗೊತ್ತಾಗಿಲ್ಲ. ಯಾಕಂದ್ರೆ ಆರತಕ್ಷತೆಯಲ್ಲೂ ವಧು ನೀಟಾಗಿ ಅಕ್ಷತೆ ಹಾಕಿಸಿಕೊಂಡು ಕಾರ್ಯಕ್ರಮ ಮುಗಿಸಿದ್ದಾಳೆ. ಮರುದಿನ ಬೆಳಗ್ಗೆ 9 ಗಂಟೆಗೆ ಹಸೆಮಣೆಯಲ್ಲಿ ವರನಿಂದ ತಾಳಿ ಕಟ್ಟಿಸಿಕೊಳ್ಳುವ ಸಮಯ. ವಧು ಅದಕ್ಕೂ ತಯಾರಾಗಿಯೇ ಕುಳಿತಿದ್ದಳು. ಆದರೆ, ಸರಿಯಾಗಿ ತಾಳಿ ಕಟ್ಟೋ ಸಮಯಕ್ಕೆ, 'ತಾಳಿ!' ಅಂತ ಹುಡುಗಿಯ ಪ್ರಿಯಕರ ಎಂಟ್ರಿ ಕೊಟ್ಟಿದ್ದಾನೆ. ಅವನನ್ನು ನೋಡಿದ ವಧು ಕೊನೆಯ ಕ್ಷಣದಲ್ಲಿ 'ನಂಗೆ ಈ ಮದ್ವೆ ಬೇಡ' ಅಂತ ವರಾತ ತೆಗೆದಿದ್ದಾಳೆ. ಹಳೆಯ ಪ್ರೀತಿ ತಾಳಿ ಕಟ್ಟೋ ಸಮಯದಲ್ಲಿ ಮರುಕಳಿಸಿದ ಕಾರಣಕ್ಕೆ ಮದುವೆ ಆಗೋ ಹುಡುಗನನ್ನು ಹೊರಗೆ ಕಳುಹಿಸಿ, ಪ್ರಿಯಕರನಿಂದಲೇ ತಾಳಿ ಕಟ್ಟಿಸಿಕೊಂಡಿದ್ದಾಳೆ ಹುಡುಗಿ. ಹುಡುಗನ ಕಡೆಯವರು ಪಾಪ, 'ನಿಮ್ಮ ಹುಡುಗಿಗಾಗಿ ನಾವು ಮಾಡಿದ ಖರ್ಚನ್ನು ನಮಗೆ ಕೊಡಿ' ಅಂತ ಖರ್ಚಿಗೆ ಕಾಸು ತೆಗೆದುಕೊಂಡವರಂತೆ ಅಲ್ಲಿಂದ ಹೊರಬಂದಿದ್ದಾರೆ. ಒಟ್ಟಿನಲ್ಲಿ ಕೈಯಿಗೆ ಬಂದಿದ್ದು ಬಾಯಿಗೆ ಬರಲಿಲ್ಲ ಎನ್ನುವಂತೆ, ನಿಶ್ಚಿತಾರ್ಥದವರೆಗೆ ಬಂದಿದ್ದು, ಮದುವೆವರೆಗೆ ಬಾರದೆ ವರ ನಿರಾಶನಾಗಿದ್ದಾನೆ. ಇದನ್ನೆಲ್ಲಾ ನೋಡಿದವರು, 'ಹುಡುಗ, ಹುಡುಗಿ ಜಾತಕ ನೋಡಿ, ನಿಶ್ಚಿತಾರ್ಥ ನಡೆದು, ಬೆಳಗ್ಗೆ ಹಸೆಮಣೆ ಏರೋದು ಅಂತ ಫಿಕ್ಸ್ ಆಗಿದ್ದರೂ, ತಾಳಿ ಕಟ್ಟುವ ಶುಭವೇಳೆ ಮುಗಿಯುವವರೆಗೂ ಮದುವೆ ಆಗೋದು ಗ್ಯಾರಂಟಿ ಇಲ್ಲ, ಯಾಕಂದ್ರೆ, ಎವ್ವೆರಿ ಡೇ ಈಸ್ ನಾಟ್ WED-nesday' ಎನ್ನುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಟೋಕಿಯೋದಲ್ಲಿ ಮಕ್ಕಳ ಸುರಕ್ಷತೆ

ಟೋಕಿಯೋ ಬೀದಿಯಲ್ಲಿ ಬೆಳಗಿನ ಸಮಯದಲ್ಲಿ ಓಡಾಡುವಾಗ ಒಂದು ಅಚ್ಚರಿ ದೃಶ್ಯವನ್ನು ಗಮನಿಸಬಹುದು. ಅದೇನೆಂದರೆ, ಐದು ವರ್ಷದ ಪುಟಾಣಿ ಮಕ್ಕಳು ಶಾಲೆಗೆ ಒಬ್ಬರೇ ಹೋಗುವುದನ್ನು ನೋಡಬಹುದು. ಬೆಂಗಳೂರಿನಲ್ಲಿ ತಂದೆ-ತಾಯಂದಿರು 10-15 ವರ್ಷದವರನ್ನೂ ಖುದ್ದಾಗಿ ಶಾಲೆಗೆ ಬಿಟ್ಟು ಬರುವುದು ಸಾಮಾನ್ಯ. ಆದರೆ ಒಂದನೇ ತರಗತಿ ಮಕ್ಕಳೂ ಅಲ್ಲಿ ನಿರಾತಂಕವಾಗಿ ಒಬ್ಬರೇ ಶಾಲೆಗೆ ಹೋಗುತ್ತಾರೆ. ಕೆಲ ವರ್ಷಗಳ ಹಿಂದೆ, ಅಮೆರಿಕದ ಪತ್ರಿಕೆಯೊಂದು ಮುಖಪುಟದಲ್ಲಿ ಈ ವಿಷಯವನ್ನೇ ದೊಡ್ಡದಾಗಿ ಪ್ರಕಟಿಸಿ, 'ಟೋಕಿಯೋ ವಿಶ್ವದಲ್ಲಿಯೇ ಸುರಕ್ಷಿತ ನಗರ' ಎಂದು ಬರೆದಿತ್ತು. ಟೋಕಿಯೋದಲ್ಲಿ ಐದು ವರ್ಷದ ಮಕ್ಕಳು ಸ್ವತಂತ್ರವಾಗಿ ಸಾರ್ವಜನಿಕ ಸಾರಿಗೆಯಲ್ಲಿ ಯಾರ ಸಹಾಯವಿಲ್ಲದೇ ಸಂಚರಿಸುತ್ತಾರೆ. ಅಲ್ಲಿನ ಮಕ್ಕಳು ಒಬ್ಬರೇ ತಮ್ಮ ಮನೆಯಿಂದ ಅರ್ಧ ಕಿ.ಮೀ. ದೂರದಲ್ಲಿರುವ ಬಸ್ ನಿಲ್ದಾಣ ತಲುಪಿ, ಅಲ್ಲಿಂದ ಬಸ್ಸನ್ನೇರಿ ಶಾಲೆಗೆ ಹೋಗಿ, ಮರಳುವುದನ್ನು ನೋಡಬಹುದು. ನಿಜ, ಜಪಾನ್ ವಿಶ್ವದ ಅತ್ಯಂತ ಸುರಕ್ಷಿತ ರಾಷ್ಟ್ರಗಳಲ್ಲಿ ಒಂದಾಗಿದೆ. ಇಲ್ಲಿ ಅಪರಾಧದ ಪ್ರಮಾಣ ಬಹಳ ಕಡಿಮೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳಿಗೆ ಸಹಾಯ ಮಾಡಲು ಸಿದ್ಧರಾಗಿರುವವರು ಹೆಚ್ಚು. ಈ ಕಾರಣದಿಂದ, ಐದಾರು ವರ್ಷದ ಮಕ್ಕಳೂ ಶಾಲೆಗೆ ಸ್ವತಂತ್ರವಾಗಿ ಹೋಗಲು ಸಾಧ್ಯವಾಗುತ್ತದೆ. ಟೋಕಿಯೋದಲ್ಲಿ ರೈಲುಗಳು ಮತ್ತು ಬಸ್ಸುಗಳು ಸಮಯಕ್ಕೆ ಸರಿಯಾಗಿ ಓಡುತ್ತವೆ. ಮಕ್ಕಳಿಗೆ ವಿಶೇಷ ಪಾಸ್‌ಗಳು ಲಭ್ಯವಿದ್ದು, ಇವು ಅವರ ಪ್ರಯಾಣವನ್ನು ಸುಲಭಗೊಳಿಸುತ್ತವೆ. ಬಹುತೇಕ ನಿಲ್ದಾಣಗಳಲ್ಲಿ ಎಲಿವೇಟರ್‌ಗಳು ಮತ್ತು ಶೌಚಾಲಯಗಳ ವ್ಯವಸ್ಥೆ ಇದೆ, ಇದು ಮಕ್ಕಳಿಗೆ ಅನುಕೂಲಕರವಾಗಿದೆ. ಮಕ್ಕಳಿಗೆ ಸಣ್ಣ-ಪುಟ್ಟ ಅನಾನುಕೂಲವಾದರೂ, ಅವರ ಸಹಾಯಕ್ಕೆ ಸಾರ್ವಜನಿಕರು ಧಾವಿಸುವುದು ಅಲ್ಲಿನ ಸಮಾಜ ಜೀವನದಲ್ಲಿ ಹಾಸುಹೊಕ್ಕಾಗಿದೆ. ಜಪಾನಿನ ಶಾಲೆಗಳು ಮಕ್ಕಳಲ್ಲಿ ಸ್ವಾವಲಂಬನೆ ಮತ್ತು ಶಿಸ್ತನ್ನು ಬೆಳೆಸುವತ್ತ ಆದ್ಯತೆ ನೀಡುವುದು ವಿಶೇಷ. ಮೊದಲ ತರಗತಿಯಿಂದಲೇ ಮಕ್ಕಳಿಗೆ ಸ್ವತಂತ್ರವಾಗಿ ಪ್ರಯಾಣ ಮಾಡುವ ತರಬೇತಿ ನೀಡಲಾಗುತ್ತದೆ ಮತ್ತು ಅವರು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಪ್ರೇರೇಪಿತರಾಗುತ್ತಾರೆ. ಈ ನಿಟ್ಟಿನಲ್ಲಿ ಪಾಲಕರು ಯಾವ ರೀತಿ ವರ್ತಿಸಬೇಕು ಎಂಬುದನ್ನೂ ತಿಳಿಸಿಕೊಡಲಾಗುತ್ತದೆ. ಜಪಾನಿನಲ್ಲಿ ಸಮುದಾಯದ ಸಹಕಾರ ಮಹತ್ವಪೂರ್ಣವಾದದ್ದು. ಹಿರಿಯ ನಾಗರಿಕರೂ ಮಕ್ಕಳಿಗೆ ರಸ್ತೆ ದಾಟಲು ಸಹಾಯ ಮಾಡುತ್ತಾರೆ ಮತ್ತು ಅಂಗಡಿಗಳು ಅಥವಾ ಮನೆಗಳು ಮಕ್ಕಳಿಗೆ ತಾತ್ಕಾಲಿಕ ಆಶ್ರಯ ನೀಡಲು ಹಿಂದೇಟು ಹಾಕುವುದಿಲ್ಲ. ತಮ್ಮ ಮಕ್ಕಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದನ್ನು ಪಾಲಕರು ಎಳವೆಯಿಂದಲೇ ರೂಢಿ ಮಾಡಿಸುತ್ತಾರೆ. ಅವರು ಮಕ್ಕಳಿಗೆ ಸುರಕ್ಷಿತವಾಗಿ ಸಾಗಲು ಅಗತ್ಯವಾದ ಮಾರ್ಗದರ್ಶನವನ್ನು ನೀಡುತ್ತಾರೆ ಮತ್ತು ಮಕ್ಕಳ ಮೇಲೆ ನಂಬಿಕೆ ಇಡುತ್ತಾರೆ. ಟೋಕಿಯೋದಲ್ಲಿ ಮಕ್ಕಳಿಗೆಂದೇ ಅನೇಕ ಸೌಲಭ್ಯಗಳಿವೆ. ಉದ್ಯಾನಗಳು, ಆಟದ ಮೈದಾನಗಳು ಮತ್ತು ಮಕ್ಕಳಿಗೆ ಅನುಕೂಲಕರವಾದ ಸಾರ್ವಜನಿಕ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ. ಜಪಾನಿನ ಸಂಸ್ಕೃತಿಯು ಮಕ್ಕಳಲ್ಲಿ ಶಿಸ್ತು, ಸ್ವತಂತ್ರ ಕಾರ್ಯನಿರ್ವಹಣೆ, ಹೊಣೆಗಾರಿಕೆ ಬೆಳೆಸುವತ್ತ ವಿಶೇಷ ಗಮನ ನೀಡುತ್ತದೆ. ಮಕ್ಕಳಿಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಪ್ರೇರೇಪಿಸಲಾಗುತ್ತದೆ ಮತ್ತು ಅವರು ಬಾಲ್ಯದಿಂದಲೇ ಸಮಾಜದಲ್ಲಿ ತಮ್ಮ ಪಾತ್ರವನ್ನು ಅರಿಯುತ್ತಾರೆ. ಜಪಾನಿನಲ್ಲಿ ಈ ಸ್ವಾತಂತ್ರ್ಯದ ಹಿಂದೆ ಬಲವಾದ ಸಾಮಾಜಿಕ ವ್ಯವಸ್ಥೆಯಿದೆ. ರಸ್ತೆಗಳಲ್ಲಿ ಕಟ್ಟುನಿಟ್ಟಿನ ನಿಯಮಾವಳಿಗಳಿದ್ದು, ವಾಹನ ಚಲಾಯಿಸಲು ನಿಖರ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಮಕ್ಕಳು ರಸ್ತೆ ದಾಟುತ್ತಿದ್ದರೆ ದೂರದಿಂದಲೇ ಚಾಲಕರು ವಾಹನವನ್ನು ನಿಲ್ಲಿಸುತ್ತಾರೆ. ಶಾಲೆ ಸಮೀಪದ ಪ್ರದೇಶಗಳಲ್ಲಿ 'ಜುಟ್ ಕೊ' ಅಥವಾ 'ಶಾಲಾ ಪಥ' ಎಂಬ ಸೂಚನೆಗಳು ಇರುತ್ತವೆ. ಶಾಲೆಗಳ ಹೊರಗೆ ಗಸ್ತು ತಿರುಗುವ ಸ್ವಯಂಸೇವಕರಿರುತ್ತಾರೆ. ಅವರು ಶಾಲೆ ಆರಂಭಿಸುವ ಸಮಯದಲ್ಲಿ ಮಕ್ಕಳಿಗೆ ನೆರವಾಗುತ್ತಾರೆ. ಪೊಲೀಸ್ ಇಲಾಖೆ ಕೂಡ ಜನನಿವಾಸಿ ಪ್ರದೇಶದಲ್ಲಿರುವ 'ಕೊಬಾನ್' ಎಂಬ ಸಣ್ಣ ಪೊಲೀಸ್ ಸ್ಟೇಷನ್‌ಗಳನ್ನು ಬಳಸಿಕೊಂಡು ಸ್ಥಳೀಯ ಮಕ್ಕಳ ಚಟುವಟಿಕೆಗಳ ಮೇಲೆ ಗಮನ ಇಡುತ್ತದೆ. ಟೋಕಿಯೋ ಅತ್ಯಂತ ಜನದಟ್ಟಣೆಯ ನಗರ. ಜಗತ್ತಿನ ಉಳಿದವುಗಳಿಗಿಂತ ನಗರ ಜೀವನದ ಒತ್ತಡ ಹೆಚ್ಚು. ಆದರೂ ಎಲ್ಲವೂ ಸುಸೂತ್ರವಾಗಿ, ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ನಡೆಯುತ್ತಿರುತ್ತವೆ.

ಇತಿಹಾಸ ಮರೆಯದ ಕೌತುಕದ ಕ್ಷಣಗಳು...

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಅವತ್ತು ತಮ್ಮ ಪುತ್ರ ಸಂಜಯ್ ಗಾಂಧಿ ಅವರೊಂದಿಗೆ ಕರ್ನಾಟಕಕ್ಕೆ ಬಂದರು. ರಾಜಕೀಯವಾಗಿ ಬಸವಳಿದಿದ್ದ ಅವರಿಗೆ ತುರ್ತು ವಿಶ್ರಾಂತಿ ಬೇಕೆನಿಸಿತ್ತು. ಹೀಗಾಗಿ ಪಕ್ಷದ ಸುಭದ್ರ ನೆಲೆಯಾಗಿದ್ದ ಕರ್ನಾಟಕಕ್ಕೆ ಬಂದ ಅವರು ಕೊಡಗು ಜಿಲ್ಲೆಯಲ್ಲಿದ್ದ ಕಾಂಗ್ರೆಸ್ ನಾಯಕರೊಬ್ಬರ ಎಸ್ಟೇಟ್‌ನಲ್ಲಿ ಉಳಿದುಕೊಂಡರು.

ಅಷ್ಟೊತ್ತಿಗಾಗಲೇ 1977ರ ಲೋಕಸಭಾ ಚುನಾವಣೆ ಮುಗಿದು ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿತ್ತು. ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳು ಕಾಂಗ್ರೆಸ್ಸಿಗೆ 144 ಕ್ಷೇತ್ರಗಳಲ್ಲಿ ಗೆಲುವು ದಕ್ಕಿಸಿಕೊಟ್ಟಿದ್ದರೆ, ಉತ್ತರ ಭಾರತ, ಮಧ್ಯ ಭಾರತದ ರಾಜ್ಯಗಳಲ್ಲಿ ಕಾಂಗ್ರೆಸ್ ಹೀನಾತಿಹೀನ ಸೋಲು ಅನುಭವಿಸಿತ್ತು. ಈ ಸೋಲಿನ ಪರಿಣಾಮ ಹೇಗಿತ್ತೆಂದರೆ ತಮ್ಮ ರಾಜಕೀಯ ಭವಿಷ್ಯ ತಳಕಚ್ಚಿತು, ಇನ್ನು ಮೇಲೇಳುವುದು ಕಷ್ಟ ಅಂತ ಇಂದಿರಾ ಗಾಂಧಿ ಭಾವಿಸಿದ್ದರು. ಇಂಥ ಸಂದರ್ಭದಲ್ಲೇ ಅವರಿಗೆ ಕಂಡಿದ್ದು ಕರ್ನಾಟಕ. ಹೀಗಾಗಿ ಇಲ್ಲಿಗೆ ಬಂದವರು ಕೊಡಗು ಜಿಲ್ಲೆಯಲ್ಲಿರುವ ಹಿರಿಯ ಕಾಂಗ್ರೆಸ್ ನಾಯಕರೊಬ್ಬರ ಎಸ್ಟೇಟಿನಲ್ಲಿ ವಿಶ್ರಾಂತಿಗೆ ಅಂತ ಉಳಿದುಕೊಂಡರು.

ಇಂಥ ದಿನಗಳಲ್ಲೇ ಒಮ್ಮೆ ಇಂದಿರಾ ಗಾಂಧಿಯವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ದೇವರಾಜ ಅರಸರು ಒಂದು ಸಲಹೆ ನೀಡಿದರು. ''ಮೇಡಂ, ಇಲ್ಲೇ ಪಕ್ಕದ ಜಿಲ್ಲೆಯಲ್ಲಿ ಮರಿದೇವರೊಬ್ಬರಿದ್ದಾರೆ. ವಯಸ್ಸಿನಲ್ಲಿ ತುಂಬ ಚಿಕ್ಕವರು. ಅದರೆ ಜ್ಯೋತಿಷ್ಯ ಹೇಳುವುದರಲ್ಲಿ ಪ್ರಕಾಂಡ ಪಂಡಿತರು. ಹೀಗಾಗಿ ನೀವೊಮ್ಮೆ ಅವರನ್ನು ಭೇಟಿ ಮಾಡಿದರೆ ನಿಮ್ಮ ಹಲವು ಪ್ರಶ್ನೆಗಳಿಗೆ ಉತ್ತರ ದೊರೆಯಬಹುದು'' ಎಂದರು. ಎಷ್ಟೇ ಆದರೂ ಇಂದಿರಾ ಗಾಂಧಿ ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಅಪಾರ ನಂಬಿಕೆ. ಹೀಗಾಗಿ ದೇವರಾಜ ಅರಸರು ಈ ಪ್ರಸ್ತಾಪವಿಡುತ್ತಿದ್ದಂತೆಯೇ ''ಓ, ಯಾಕಾಗಬಾರದು? ನೋಡೋಣ'' ಎಂದರು. ಸರಿ, ಇದಾದ ಮರುದಿನವೇ ಅರಸರು ಪಕ್ಕದ ಜಿಲ್ಲೆಗೆ ಇಂದಿರಾ ಗಾಂಧಿ ಅವರನ್ನು ಕರೆದುಕೊಂಡು ಹೋದರು. ಹೀಗೆ ಹೋದವರಿಗೆ ಎದುರಾಗಿದ್ದು ಚಿಕ್ಕ ವಯಸ್ಸಿನ ಯುವಕ. ಆದರೆ ಇಂದಿರಾ ಗಾಂಧಿಯವರ ಜಾತಕವನ್ನು ಕೂಲಂಕಷವಾಗಿ ಪರಿಶೀಲಿಸಿದ ಆ ಮರಿದೇವರು, ''ನೀವು ಯೋಚಿಸುವ ಅಗತ್ಯವಿಲ್ಲ. ಇನ್ನು ಕೆಲವೇ ದಿನಗಳಲ್ಲಿ ನೀವು ರಾಜಕೀಯ ಪುನರ್ಜನ್ಮ ಪಡೆಯುತ್ತೀರಿ'' ಅಂತ ಹೇಳಿದ್ದಲ್ಲದೆ ಇದಕ್ಕೆ ಹೇಗೆ ಅವಕಾಶವಾಗಲಿದೆ? ಅಂತ ಒಗಟೊಂದನ್ನು ಹೇಳಿ ಕಳಿಸಿದರು.

ಹೀಗೆ ಅವರು ಹೇಳಿದ್ದನ್ನು ಕೇಳಿ ವಾಪಸ್ಸು ಬರುವಾಗ ದೇವರಾಜ ಅರಸರು ಅ ಒಗಟಿನ ಸ್ವರೂಪವನ್ನು ಬಿಡಿಸಲು ಯತ್ನಿಸಿದ್ದಲ್ಲದೆ ಆ ಸಂಬಂಧ ಹಲವರ ಜತೆ ಚರ್ಚಿಸಿ, ಆ ಒಗಟಿನ ಅರ್ಥವೇನಿರಬಹುದು? ಅಂತ ಸಮಾಲೋಚಿಸಿದರು. ಈ ಸಂದರ್ಭದಲ್ಲಿ ಅವರಿಗೆ 'ಚಿಕ್ಕಮಗಳೂರು' ಎಂಬ ಉತ್ತರ ದೊರಕಿತು. ಅದೇಕೆ ಹಾಗೆ? ಅಂತ ತುಂಬ ಯೋಚಿಸಿದ ಮೇಲೆ, ಚಿಕ್ಕಮಗಳೂರಿನಿಂದ ಲೋಕಸಭೆಗೆ ಸ್ಪರ್ಧಿಸಿದರೆ ಇಂದಿರಾ ಗಾಂಧಿ ಗೆಲ್ಲುತ್ತಾರೆ. ರಾಜಕೀಯ ಪುನರ್ಜನ್ಮ ಪಡೆಯುತ್ತಾರೆ ಎಂಬ ತೀರ್ಮಾನಕ್ಕೆ ಬಂದರು. ಇದಾದ ನಂತರ ಇಂದಿರಾ ಗಾಂಧಿಯವರಿಗೆ ಈ ಕುರಿತು ಹೇಳಿದಾಗ ಅವರು ತಕ್ಷಣ ಸಹಮತ ವ್ಯಕ್ತಪಡಿಸಿದರು.

ಯಾವಾಗ ಇಂದಿರಾ ಗಾಂಧಿ ಒಪ್ಪಿಗೆ ನೀಡಿದರೋ, ಆ ಕ್ಷೇತ್ರದಲ್ಲಿ ಗೆದ್ದು ಸಂಸದರಾಗಿದ್ದ ಡಿ.ಬಿ.ಚಂದ್ರೇಗೌಡರ ಕೈಲಿ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ಕೊಡಿಸಲಾಯಿತು. ಹೀಗೆ ಅವರ ರಾಜೀನಾಮೆಯಿಂದ ತೆರವಾದ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಕಣಕ್ಕಿಳಿದ ಇಂದಿರಾ ಗಾಂಧಿ ನಿರಾಯಾಸವಾಗಿ ಜಯ ಗಳಿಸಿದರು. ಮುಂದೆ ತಾವು ಬದುಕಿರುವವರೆಗೂ ಇಂದಿರಾ ಗಾಂಧಿ ಅವರು ತಮಗೆ ಭವಿಷ್ಯ ಹೇಳಿದ ಮರಿದೇವರ ಬಗ್ಗೆ ಬಹಳ ಭಕ್ತಿಯಿಂದ ನಡೆದುಕೊಂಡರು. ಇನ್ನು ಅರಸರಾದರೂ ಅಷ್ಟೇ. ಮರಿದೇವರು ಇದ್ದ ಮಠಕ್ಕೆ ದೊಡ್ಡ ಪ್ರಮಾಣದ ದರಖಾಸ್ತು ಭೂಮಿಯನ್ನು ಮಂಜೂರು ಮಾಡಿಕೊಟ್ಟು, ಆ ಮಠಕ್ಕೆ ಬರುವ ಭಕ್ತಾದಿಗಳಿಗೆ ಭೋಜನಾಲಯ ಕಟ್ಟಲು ನೆರವು ನೀಡಿದರು.

ಅರಸರು ಅಧ್ಯಕ್ಷರಾದ ಕತೆ ಇದು

ಕಾಂಗ್ರೆಸ್ ಪಕ್ಷವು ರಾಷ್ಟ್ರ ಮಟ್ಟದಲ್ಲಿ ವಿಭಜನೆಯಾದ ನಂತರ (1969) ಒಂದು ಬಣದ ನಾಯಕಿಯಾಗಿದ್ದ ಇಂದಿರಾ ಗಾಂಧಿ, ವಿವಿಧ ರಾಜ್ಯಗಳಲ್ಲಿ ನಾಯಕರನ್ನು ಹುಡುಕತೊಡಗಿದರು. ಅದರ ಪ್ರಕಾರ ಕರ್ನಾಟಕದಲ್ಲಿ ಅವರ ಹುಡುಕಾಟಕ್ಕೆ ಸಿಕ್ಕವರು ಕೊಲ್ಲೂರು ಮಲ್ಲಪ್ಪ. ಕುರುಬ ಸಮುದಾಯದ ನಾಯಕರಾಗಿದ್ದ ಕೊಲ್ಲೂರು ಮಲ್ಲಪ್ಪ ತಮ್ಮ ಕಾಂಗ್ರೆಸ್ (ಆರ್) ಬಣಕ್ಕೆ ಅಧ್ಯಕ್ಷರಾದರೆ ಬೆಸ್ಟು ಅಂತ ಇಂದಿರಾ ಗಾಂಧಿ ನಿರ್ಧರಿಸಿದರು. ಹಾಗಂತಲೇ ಒಂದು ದಿನ ಕೊಲ್ಲೂರು ಮಲ್ಲಪ್ಪನವರನ್ನು ಸಂಪರ್ಕಿಸಿದ ಅವರು, ''ರಾಜ್ಯದಲ್ಲಿ ನೀವು ಅಧ್ಯಕ್ಷರಾಗಿ. ಚುನಾವಣೆಯಲ್ಲಿ ಪಕ್ಷ ಗೆದ್ದರೆ ನೀವು ಮುಖ್ಯಮಂತ್ರಿಯಾಗುತ್ತೀರಿ'' ಎಂದರು.

ಆದರೆ ಇಂದಿರಾ ಗಾಂಧಿಯವರ ಕೋರಿಕೆಯನ್ನು ನಯವಾಗಿ ತಿರಸ್ಕರಿಸಿದ ಕೊಲ್ಲೂರು ಮಲ್ಲಪ್ಪನವರು, ''ಈ ಜಾಗಕ್ಕೆ ನನ್ನನ್ನು ತರಬೇಡಿ. ಬದಲಿಗೆ ಹಿಂದುಳಿದ ಸಮುದಾಯದಿಂದ ಬಂದ ದೇವರಾಜ ಅರಸರನ್ನು ಅಧ್ಯಕ್ಷರನ್ನಾಗಿ ಮಾಡಿ. ಪಕ್ಷಕ್ಕೂ ಅನುಕೂಲವಾಗುತ್ತದೆ'' ಅಂತ ಸಲಹೆ ನೀಡಿದರು. ಯಾವಾಗ ಕೊಲ್ಲೂರು ಮಲ್ಲಪ್ಪ ಅವರಂಥ ಪವರ್‌ಫುಲ್ ಲೀಡರ್ರೇ ಅರಸರ ಹೆಸರನ್ನು ಸೂಚಿಸಿದರೋ, ಆಗ ಇಂದಿರಾ ಗಾಂಧಿ ಮರುಯೋಚನೆ ಮಾಡಲಿಲ್ಲ. ಮುಂದೆ ರಾಜ್ಯದಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ (ಆರ್) ಅಧ್ಯಕ್ಷರಾದ ಅರಸರು ಇತಿಹಾಸ ಬರೆದರು. 'ಸಾಮಾಜಿಕ ಕ್ರಾಂತಿಯ ಹರಿಕಾರ' ಅನ್ನಿಸಿಕೊಂಡರು.



ಹೆಗಡೆ ಬೆನ್ನಿಗೆ ನಿಂತ ಧರ್ಮಾಧಿಕಾರಿ

ಇನ್ನು 1983ರಲ್ಲಿ ಕರ್ನಾಟಕ ಮೊಟ್ಟ ಮೊದಲ ಕಾಂಗ್ರೆಸ್ಸೇತರ ಸರಕಾರವನ್ನು ನೋಡಿತಲ್ಲ? ಆ ಸಂದರ್ಭದಲ್ಲಿ ಹಲವರು ಮುಖ್ಯಮಂತ್ರಿ ಹುದ್ದೆಯ ರೇಸಿನಲ್ಲಿ ಕಾಣಿಸಿಕೊಂಡರು. ಇದಕ್ಕಿದ್ದ ಬಹುಮುಖ್ಯ ಕಾರಣವೆಂದರೆ 'ಮಿಸಳ್ ಭಾಜಿ' ಫಲಿತಾಂಶ. ಅವತ್ತು ಕಾಂಗ್ರೆಸ್‌ಗೆ ವಿರುದ್ಧವಾಗಿದ್ದ ಜನತಾಪಕ್ಷ ಮತ್ತು ಕ್ರಾಂತಿರಂಗದಿಂದ ಒಟ್ಟು 95 ಮಂದಿ ಗೆದ್ದಿದ್ದರು. ಆದರೆ ಇಷ್ಟು ಸ್ಥಾನಗಳನ್ನಿಟ್ಟುಕೊಂಡು ಸರಕಾರ ರಚಿಸುವುದು ಸಾಧ್ಯವಿಲ್ಲದ್ದರಿಂದ 18 ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಮತ್ತು 22 ಕ್ಷೇತ್ರಗಳಲ್ಲಿ ಗೆಲುವು ಗಳಿಸಿದ ಪಕ್ಷೇತರರ ಪೈಕಿ ಹಲವರ ಬೆಂಬಲ ಪಡೆಯುವುದು ಅನಿವಾರ್ಯವಾಗಿತ್ತು.

ಇದು ಒಂದು ಕಡೆಗಾದರೆ, ಮತ್ತೊಂದು ಕಡೆ ಸಿಎಂ ಗದ್ದುಗೆಗೇರಲು ಹಲವು ನಾಯಕರು ತುದಿಗಾಲಿನಲ್ಲಿ ನಿಂತಿದ್ದರು. ಈ ಪೈಕಿ ಕ್ರಾಂತಿರಂಗದ ನೆಲೆಯಿಂದ ಬಂಗಾರಪ್ಪನವರು, ಜನತಾ ಪಕ್ಷದ ನೆಲೆಯಿಂದ ದೇವೇಗೌಡರು, ಎಸ್.ಆರ್.ಬೊಮ್ಮಾಯಿಯವರು ಕಾಣಿಸಿಕೊಂಡರೆ ಇನ್ನೂ ಕೆಲವರು ಅಬ್ದುಲ್ ನಜೀರ್ ಸಾಬ್ ಅವರನ್ನು ಸಿಎಂ ಹುದ್ದೆಯಲ್ಲಿ ನೋಡಲು ಬಯಸಿದ್ದರು. ಹೀಗೆ ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ಶುರುವಾದ ನಂತರ ಸರ್ವಸಮ್ಮತ ಅಭ್ಯರ್ಥಿಯೊಬ್ಬರನ್ನು ಹುಡುಕಲು ಸರ್ಕಸ್ ನಡೆಯಬೇಕಲ್ಲ? ಆದ್ದರಿಂದ ಈ ಜವಾಬ್ದಾರಿಯನ್ನು ಜನತಾಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಬರಸೆಳೆದು ತಮ್ಮ ಮಡಿಲಿಗೆ ಹಾಕಿಕೊಂಡರು.

ಹೀಗಾಗಿ ಸಿಎಂ ಕ್ಯಾಂಡಿಡೇಟ್ ಅನ್ನು ಆಯ್ಕೆ ಮಾಡಲು ಹೆಗಡೆಯವರ ನಿವಾಸದಲ್ಲೇ ಹೆಚ್ಚು ಸಭೆಗಳು ನಡೆಯತೊಡಗಿದವು. ಇಂಥ ಸಂದರ್ಭದಲ್ಲೇ ಒಮ್ಮೆ ಹೆಗಡೆಯವರ ಮನೆಯಲ್ಲಿ ಮೀಟಿಂಗು ನಡೆಯುವಾಗ ಚೀಟಿಯೊಂದನ್ನು ಕಳಿಸಿದ ಪ್ರಮುಖರೊಬ್ಬರು, ''ನೀವು ಅಬ್ದುಲ್ ನಜೀರ್ ಸಾಬ್ ಸಿಎಂ ಕ್ಯಾಂಡಿಡೇಟ್ ಆಗಿ ಎಮರ್ಜ್ ಆಗುವಂತೆ ಮಾಡಿ'' ಎಂದು ಸೂಚಿಸಿದ್ದರು. ಕುತೂಹಲದ ಸಂಗತಿಯೆಂದರೆ ಮೀಟಿಂಗಿನ ನಡುವೆ ತಮ್ಮ ಆಪ್ತ ಕಾರ್ಯದರ್ಶಿ ತಂದುಕೊಟ್ಟ ಆ ಚೀಟಿಯನ್ನು ನೋಡಿದ ಹೆಗಡೆಯವರು ಮಹಡಿಯಿಂದ ಕೆಳಗಿಳಿದು ಬಂದರು. ಹೀಗೆ ಬಂದವರು ಚೀಟಿ ತಂದುಕೊಟ್ಟವರ ಬಳಿ, ''ನಾನು ನಜೀರ್ ಸಾಬ್ ಅವರ ಪರವಾದ ಅಭಿಪ್ರಾಯ ಹೊರಹೊಮ್ಮಿಸಲು ಯತ್ನಿಸುತ್ತಿದ್ದೇನೆ'' ಅಂತ ಭರವಸೆ ಕೊಟ್ಟು ಕಳಿಸಿದರು.

ಆದರೆ ನೋಡ ನೋಡುತ್ತಿದ್ದಂತೆಯೇ ಚಿತ್ರ ಬದಲಾಯಿತು. 'ದೇವೇಗೌಡರು ಸಿಎಂ ಆಗಿಬಿಟ್ಟರೆ?' ಅಂತ ಬೊಮ್ಮಾಯಿ, 'ಬೊಮ್ಮಾಯಿ ಆಗಿಬಿಟ್ಟರೆ?' ಅಂತ ದೇವೇಗೌಡರು ಮೆಲ್ಲಗೆ ಹೆಗಡೆ ಪರ ವಾಲಿದರು. 'ಯಂಗ್ ಟರ್ಕ್' ಖ್ಯಾತಿಯ ಚಂದ್ರಶೇಖರ್ ಕೂಡಾ ಇದಕ್ಕೆ ಪಾಲು ಕೊಟ್ಟಿದ್ದರು. ಆದರೆ ಕ್ರಾಂತಿರಂಗ, ಜನತಾಪಕ್ಷ ಸೇರಿ ಸರಕಾರ ರಚನೆ ಮಾಡಲು ಸಾಧ್ಯವಿರಲಿಲ್ಲವಲ್ಲ? ಇದ್ದುದರಲ್ಲಿ ಪಕ್ಷೇತರರು ಜತೆಗೆ ನಿಲ್ಲುವುದು ಖಚಿತವಾಗಿದ್ದರೂ ಹದಿನೆಂಟು ಶಾಸಕರ ಬಲ ಹೊಂದಿದ್ದ ಬಿಜೆಪಿ ಬೆಂಬಲ ಯಾರಿಗೆ? ಎಂಬ ಪ್ರಶ್ನೆ ಬಂದಾಗ ಆ ಪಕ್ಷದ ರಾಷ್ಟ್ರೀಯ ನಾಯಕ ವಾಜಪೇಯಿ ಅವರು, ''ಹೆಗಡೆ ಸಿಎಂ ಆಗುವುದಾದರೆ ಮಾತ್ರ ಸರಕಾರಕ್ಕೆ ನಮ್ಮ ಬೆಂಬಲ'' ಅಂತ ಮೆಸೇಜು ಕೊಟ್ಟರು.

ಅಂದ ಹಾಗೆ, ಕರ್ನಾಟಕದ ಕಾಂಗ್ರೆಸ್ಸೇತರ ನಾಯಕರ ಪೈಕಿ ವಾಜಪೇಯಿ ಅವರಿಗೆ ತುಂಬ ಪರಿಚಿತರಾಗಿದ್ದವರು ರಾಮಕೃಷ್ಣ ಹೆಗಡೆ. ತುರ್ತು ಪರಿಸ್ಥಿತಿಯ ಕಾಲದಿಂದ ಹಿಡಿದು ಹಲವು ಸಂದರ್ಭಗಳಲ್ಲಿ ಅವರು ಹೆಗಡೆಯವರ ಜತೆ ಒಡನಾಡಿದ್ದರು. ಆದರೆ ಇಷ್ಟಾದರೂ ಅವರು ಹೆಗಡೆಯವರ ಪರ ಗಟ್ಟಿಯಾಗಿ ನಿಲ್ಲಲು ಕರ್ನಾಟಕದ ಧರ್ಮಾಧಿಕಾರಿಯೊಬ್ಬರು ಕಾರಣರಾಗಿದ್ದರು. ಕಾಂಗ್ರೆಸ್ಸೇತರ ಸರಕಾರ ಇಲ್ಲಿ ಭದ್ರವಾಗಿ ನೆಲೆಯೂರಬೇಕು ಎಂದರೆ ರಾಮಕೃಷ್ಣ ಹೆಗಡೆ ಅದರ ನೇತೃತ್ವ ವಹಿಸಬೇಕು ಅಂತ ಈ ಧರ್ಮಾಧಿಕಾರಿಗಳು ಹೇಳಿದ್ದರಿಂದ ವಾಜಪೇಯಿ ದೂಸರಾ ಮಾತನಾಡದೆ ಹೆಗಡೆಯವರ ಪರವಾಗಿ ನಿಂತಿದ್ದರು. ಪರಿಣಾಮ? ಬಂಗಾರಪ್ಪ, ನಜೀರ್ ಸಾಬ್,ದೇವೇಗೌಡ, ಬೊಮ್ಮಾಯಿ ಅವರೆಲ್ಲ ಸಿಎಂ ಹುದ್ದೆಯ ರೇಸಿನಿಂದ ಹೊರಬಿದ್ದು, ಹೆಗಡೆ ಸಿಂಹಾಸನವೇರಿದರು.

ರೇಸಿಗೆ ಬಂದ ಏಕೈಕ ಮುಸ್ಲಿಂ ನಾಯಕ

ಇನ್ನು ಕರ್ನಾಟಕದ ಸಿಎಂ ಹುದ್ದೆಯ ರೇಸಿನಲ್ಲಿ ಕಾಣಿಸಿಕೊಂಡ ಏಕೈಕ ಮುಸ್ಲಿಂ ನಾಯಕ ಅಬ್ದುಲ್ ನಜೀರ್ ಸಾಬ್ ಅವರನ್ನು ಕಂಡರೆ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿಯವರಿಗೆ ಬಹಳ ಗೌರವ. ಕರ್ನಾಟಕದಲ್ಲಿ ಅಧಿಕಾರ ಹಿಡಿದ ಮೊದಲ ಕಾಂಗ್ರೆಸ್ಸೇತರ ಸರಕಾರದ ಪಾಲಿಗೆ ಟಾನಿಕ್ ಆಗಿದ್ದ ನಜೀರ್ ಸಾಬ್ ಅವರು, ಪಂಚಾಯತ್‌ರಾಜ್ ವ್ಯವಸ್ಥೆಗೆ ನೀಡಿದ ಕಾಣಿಕೆಯಿಂದ ಪ್ರಧಾನಿ ರಾಜೀವ್ ಗಾಂಧಿಯವರ ಗಮನ ಸೆಳೆದಿದ್ದರು. ಮುಂದೆ ಸ್ಥಳೀಯ ಸಂಸ್ಥೆಗಳಿಗೆ ಸಂವಿಧಾನಾತ್ಮಕ ರಕ್ಷಣೆ ನೀಡಲು 64 ಮತ್ತು 65ನೇ ಕಾಯಿದೆಗೆ ತಿದ್ದುಪಡಿ ತರಲು ನಜೀರ್ ಸಾಬ್ ಅವರಿಂದಲೇ ಪ್ರೇರಣೆ ಪಡೆದಿದ್ದ ರಾಜೀವ್ ಗಾಂಧಿ, ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಲು ಮುಂದಾದರು.

ಆದರೆ ಅವರು ಇಂಥ ತೀರ್ಮಾನಕ್ಕೆ ಬರುವ ವೇಳೆಗಾಗಲೇ ನಜೀರ್ ಸಾಬ್ ಅವರ ಆರೋಗ್ಯ ಹದಗೆಟ್ಟಿತ್ತು. ಇಷ್ಟಾದರೂ ರಾಜೀವ್ ಗಾಂಧಿಯವರು ತಮ್ಮ ಸಹಕಾರ ಕೋರಿದಾಗ ನಜೀರ್ ಸಾಬ್ ಇಲ್ಲ ಅನ್ನಲಿಲ್ಲ, ಹಾಗಂತ ಇಂಥ ಸಹಕಾರ ನೀಡಲು ದಿಲ್ಲಿಗೆ ಹಾರಿಹೋಗುವ ಸ್ಥಿತಿಯಲ್ಲೂ ಅವರು ಇರಲಿಲ್ಲ. ಆದರೆ ವಿಷಯ ತಿಳಿದ ರಾಜೀವ್ ಗಾಂಧಿ ಅವರು ತಮ್ಮ ಜತೆಯಲ್ಲೇ ಇದ್ದ ಸಲ್ಮಾನ್ ಖುರ್ಷಿದ್ ಮತ್ತು ಮಣಿಶಂಕರ್ ಅಯ್ಯರ್ ಅವರನ್ನು ಕರ್ನಾಟಕಕ್ಕೆ ಕಳಿಸಿದರು. ಹೀಗೆ ರಾಜೀವ್ ಗಾಂಧಿಯವರ ಸೂಚನೆಯಂತೆ ಕರ್ನಾಟಕಕ್ಕೆ ಬಂದ ಈ ಇಬ್ಬರು ನಾಯಕರು ನಾಲ್ಕು ದಿನ ಸತತವಾಗಿ ನಜೀರ್ ಸಾಬ್ ಹೇಳಿದ್ದನ್ನು ಬರೆದುಕೊಂಡು ದಿಲ್ಲಿಗೆ ಹೋದರು. ಮುಂದೆ ಸ್ಥಳೀಯ ಸಂಸ್ಥೆಗಳಿಗೆ ಸಂವಿಧಾನಾತ್ಮಕ ರಕ್ಷಣೆ ನೀಡುವ ಈ ತಿದ್ದುಪಡಿ ಕಾಯಿದೆಯನ್ನು ರೂಪಿಸಿದರೂ, ಅದನ್ನು ಜಾರಿಗೆ ತರಲು ರಾಜೀವ್ ಗಾಂಧಿಯವರಿಗೆ ಸಾಧ್ಯವಾಗಲಿಲ್ಲ. ಕಾರಣ? ರಾಜಕೀಯ ಸ್ಥಿತ್ಯಂತರಗಳ ನಡುವೆ ಅವರ ಸರಕಾರ ಉರುಳಿತ್ತು.

ಆದರೆ ಅದನ್ನೇ ಮುಂದಿಟ್ಟುಕೊಂಡ ಪಿ.ವಿ.ನರಸಿಂಹರಾವ್ ತಾವು ಪ್ರಧಾನಿಯಾಗಿದ್ದ ಕಾಲದಲ್ಲಿ 74ನೇ ತಿದ್ದುಪಡಿ ಕಾಯಿದೆಯನ್ನು ಜಾರಿಗೆ ತಂದರು. ಹೀಗೆ ಕ್ರಾಂತಿಕಾರಿ ಚಿಂತನೆಗಳ ಮೂಲಕ ಕರ್ನಾಟಕದ ಸಿಎಂ ಹುದ್ದೆಯ ರೇಸಿಗೆ ಬಂದಿದ್ದ ಏಕೈಕ ಮುಸ್ಲಿಂ ನಾಯಕ ನಜೀರ್ ಸಾಬ್ ಎಂಬುದು ಈಗ ಇತಿಹಾಸ.

ಆರ್ಥಿಕ ಸ್ಥಿತಿಗತಿಯ ಸುಧಾರಕ ಮುದ್ರಾ



ಮಾರ್ಗದರ್ಶಿ

ಡಾ. ಸೌಮ್ಯ ಕಾಂತಿ ಘೋಷ್
vveditoped@gmail.com

ಪ್ರಧಾನಿ ನರೇಂದ್ರ ಮೋದಿಯವರು 2015ರ ಏಪ್ರಿಲ್ 8ರಂದು ಪ್ರಾರಂಭಿಸಿದ 'ಪ್ರಧಾನ ಮಂತ್ರಿ ಮುದ್ರಾ ಯೋಜನೆ'ಗೆ (ಪಿಎಂಎಂವೈ) ಒಂದು ದಶಕ ಸಂದಿದೆ. 'ಶಿಶು', 'ಕಿಶೋರ್', 'ತರುಣ್' ಮತ್ತು 2024-25ರಲ್ಲಿ ಪರಿಚಯಿಸಲಾದ 'ತರುಣ್ ಪ್ಲಸ್' ಎಂಬ 4 ವರ್ಗಗಳಡಿ 'ಪಿಎಂಎಂವೈ' ಒಟ್ಟು 20 ಲಕ್ಷ ರುಪಾಯಿಗಳವರೆಗೆ ಮೇಲಾಧಾರರಹಿತ ಸಾಂಸ್ಥಿಕ ಸಾಲವನ್ನು ಖಾತರಿಪಡಿಸಿದೆ. ಈ ಹಿಂದೆ ಸಾಲಗಳನ್ನು ಪಡೆದುಕೊಂಡು ಮತ್ತು ಸಕಾಲಿಕ ಮರುಪಾವತಿ ಮೂಲಕ ತಮ್ಮ ಸಾಲಯೋಗ್ಯತೆಯನ್ನು ಸಾಬೀತುಪಡಿಸಿದ 'ತರುಣ್' ವರ್ಗಕ್ಕಾಗಿ 'ತರುಣ್ ಪ್ಲಸ್' ವರ್ಗವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ.

ಈ ಕ್ರಾಂತಿಕಾರಿ ಯೋಜನೆಯ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಭಾರತ ಸರಕಾರವು ಹಲವು ಕ್ರಮಗಳನ್ನು ಕೈಗೊಂಡಿದ್ದು ಅವುಗಳಲ್ಲಿ, ಸಾಲದ ಅರ್ಜಿಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಬೆಂಬಲ, 'ಪಿಎಸ್‌ಬಿ' ಮತ್ತು 'ಜನಸಮರ್ಥ್' ಪೋರ್ಟಲ್ ಮೂಲಕ ಆನ್‌ಲೈನ್ ಅರ್ಜಿಗಳ ಸಲ್ಲಿಕೆ ಹಾಗೂ 'ಶಿಶು' ಸಾಲಗಳ ಸಕಾಲಿಕ ಮರುಪಾವತಿಗೆ ಶೇ.2ರ ಬಡ್ಡಿ ರಿಯಾಯಿತಿಯಂಥ ಉಪಕ್ರಮಗಳು ಸೇರಿವೆ. ಯೋಜನೆಯ ಪ್ರಾರಂಭದಿಂದಲೂ ಇದು ಭಾರಿ ಆಕರ್ಷಣೆಯನ್ನು ಪಡೆಯುತ್ತಿದ್ದು, ಈ ನಿಟ್ಟಿನಲ್ಲಿನ ಪ್ರಗತಿಯು ಸಾಕಷ್ಟು ಅದ್ಭುತವಾಗಿದೆ ಮತ್ತು ಇದರ ಪರಿಣಾಮವು ಬಹಳ ವ್ಯಾಪಕವಾಗಿದೆ.

ಒಟ್ಟಾರೆಯಾಗಿ (2025ರ ಫೆಬ್ರವರಿವರೆಗೆ), 52 ಕೋಟಿಗೂ ಹೆಚ್ಚು 'ಪಿಎಂಎಂವೈ' ಖಾತೆಗಳನ್ನು ತೆರೆಯಲಾಗಿದ್ದು, ಒಟ್ಟು 32.4 ಲಕ್ಷ ಕೋಟಿ ರು.ಗಳ ಸಾಲ ವಿತರಣೆಯಾಗಿದೆ. ಇದರಲ್ಲಿ 'ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ'ಗಳಿಗೆ (ಎಂಎಸ್‌ಎಂಇ) ನೀಡಿದ ಸಾಲದ ಪಾಲು ಸುಮಾರು ಶೇ.20ರಷ್ಟಿದೆ. ಆದ್ಯತಾ ವಲಯದ ಪೈಕಿ 2024ರ ಹಣಕಾಸು ವರ್ಷದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ (ಎಸ್‌ಸಿಬಿ) ಸರಿಹೊಂದಿಸಿದ 'ನಿವ್ವಳ ಬ್ಯಾಂಕ್ ಸಾಲ'ದಲ್ಲಿ (ಎಎನ್‌ಬಿಸಿ), 'ಎಂಎಸ್‌ಎಂಇ'ಗಳಿಗೆ ನೀಡಿದ ಸಾಲವು ಶೇ.19.3ರಷ್ಟಿದೆ. ಈ ಪ್ರಮಾಣವು 2014ರ ಹಣಕಾಸು ವರ್ಷದಲ್ಲಿ ಕೇವಲ ಶೇ.15.8ರಷ್ಟಿತ್ತು.

ಮೊದಲನೆಯದಾಗಿ, ಈ ಸಾಲ ಒದಗುವ 'ಎಂಎಸ್‌ಎಂಇ' ಘಟಕಗಳನ್ನು ಆರ್ಥಿಕವಾಗಿ ಸ್ವತಂತ್ರಗೊಳಿಸುವುದಲ್ಲದೆ, ಅವುಗಳ ಗಾತ್ರವೂ ಬೆಳೆಯುತ್ತಿದೆ. ದತ್ತಾಂಶದ ವಿಶ್ಲೇಷಣೆಯ ಪ್ರಕಾರ, ಒಟ್ಟು 'ಪಿಎಂಎಂವೈ' ಖಾತೆಗಳಲ್ಲಿ 'ಶಿಶು' ವರ್ಗದ ಪಾಲು 2016ರ ಆರ್ಥಿಕ ವರ್ಷದಲ್ಲಿ ಶೇ.93ರಷ್ಟು ಇದ್ದುದು, 2025ರಲ್ಲಿ ಶೇ.51.7ಕ್ಕೆ ಇಳಿದಿದೆ. ಆದರೆ ಇದೇ ವೇಳೆ, 'ಕಿಶೋರ್' ವರ್ಗದ ಪಾಲು 2016ರಲ್ಲಿದ್ದ ಶೇ.5.9ರ ಮಟ್ಟದಿಂದ 2025ರಲ್ಲಿನ ಶೇ.44.7ರ ಮಟ್ಟಕ್ಕೆ ಏರಿದೆ. ಅನೇಕ 'ಶಿಶು' ಖಾತೆಗಳು ಬೆಳವಣಿಗೆ ಕಂಡಿವೆ ಮತ್ತು ಹೆಚ್ಚಿನ ಸಾಲದ ಮಿತಿಯ 'ಕಿಶೋರ್' ಸಾಲಗಳನ್ನು ಪಡೆದುಕೊಂಡಿವೆ. ಆ ಮೂಲಕ ದೊಡ್ಡ 'ಎಂಎಸ್‌ಎಂಇ' ಘಟಕಗಳಾಗಿ ಮಾರ್ಪಟ್ಟಿವೆ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ. ವಿತರಿಸಲಾದ ಸಾಲದ ಸರಾಸರಿ ಗಾತ್ರವು ಸುಮಾರು 3 ಪಟ್ಟು ಹೆಚ್ಚಾಗಿದೆ; 2016ರಲ್ಲಿ 39,000 ರು. ಗಳಷ್ಟಿದ್ದ ಈ ಪ್ರಮಾಣವು 2025ರಲ್ಲಿ 1.05 ಲಕ್ಷ ರು.ಗೆ ಏರಿಕೆಯಾಗಿದೆ.

ಎರಡನೆಯದಾಗಿ, 'ಪಿಎಂಎಂವೈ'ನ ಮತ್ತೊಂದು ಸಾಧನೆಯೆಂದರೆ, ಮಹಿಳೆಯರು ಮತ್ತು ಸಾಮಾನ್ಯವಲ್ಲದ ಸಾಮಾಜಿಕ ವರ್ಗಗಳ (ಎಸ್‌ಸಿ/ಎಸ್‌ಟಿ/ಒಬಿಸಿ) ಸಬಲೀಕರಣ. 52 ಕೋಟಿ 'ಪಿಎಂಎಂವೈ' ಖಾತೆಗಳಲ್ಲಿ, ಶೇ.50ರಷ್ಟು ಎಸ್‌ಸಿ/ಎಸ್‌ಟಿ ಮತ್ತು ಒಬಿಸಿ ಸಾಮಾಜಿಕ ವರ್ಗಕ್ಕೆ ಸೇರಿವೆ. ಈ ವರ್ಗಗಳು, ವಿತರಿಸಿದ ಒಟ್ಟು ಸಾಲದ ಮೊತ್ತದಲ್ಲಿ ಶೇ.35ರಷ್ಟು ಪಾಲನ್ನು ಹೊಂದಿವೆ.

ಮೂರನೆಯದಾಗಿ, ಮಹಿಳಾ ಉದ್ಯಮಿಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು 'ಪಿಎಂಎಂವೈ' ಬದಲಾಯಿಸುತ್ತಿದೆ. ಏಕೆಂದರೆ ಒಟ್ಟು 'ಪಿಎಂಎಂವೈ' ಖಾತೆಗಳಲ್ಲಿ ಶೇ.68ರಷ್ಟು ಭಾಗವು ಮಹಿಳಾ ಉದ್ಯಮಿಗಳಿಗೆ ಸೇರಿದೆ. ರಾಜ್ಯವಾರು ಪ್ರವೃತ್ತಿಯೂ ಉತ್ತೇಜನಕಾರಿಯಾಗಿದೆ. ರಾಜ್ಯಗಳ ಪೈಕಿ, ಬಿಹಾರದಲ್ಲಿ ಅತಿಹೆಚ್ಚು 'ಪಿಎಂಎಂವೈ' ಮಹಿಳಾ ಉದ್ಯಮಿಗಳು (3.7 ಕೋಟಿ) ಇದ್ದಾರೆ. ತಮಿಳುನಾಡು (4 ಕೋಟಿ) ಮತ್ತು ಪಶ್ಚಿಮ ಬಂಗಾಳ (3.7 ಕೋಟಿ) ನಂತರದ ಸ್ಥಾನದಲ್ಲಿವೆ. ಒಟ್ಟು ಖಾತೆಗಳಲ್ಲಿ ಮಹಾರಾಷ್ಟ್ರವು ಗಣನೀಯ ಮಹಿಳಾ ಖಾತೆದಾರರ ಪಾಲನ್ನು (ಶೇ.79) ಹೊಂದಿದ್ದರೆ, ಜಾರ್ಖಂಡ್ (ಶೇ.75) ಮತ್ತು ಪಶ್ಚಿಮ ಬಂಗಾಳ (ಶೇ.73) ನಂತರದ ಸ್ಥಾನಗಳಲ್ಲಿವೆ.

ನಾಲ್ಕನೆಯದಾಗಿ, 2020ರ ಜುಲೈ 1ರಂದು 'ಉದ್ಯೋಗ್ ಪೋರ್ಟಲ್' ಪ್ರಾರಂಭವಾದಾಗಿನಿಂದ ಅಲ್ಲಿ ನೋಂದಾಯಿಸಲಾದ ಒಟ್ಟು 'ಎಂಎಸ್‌ಎಂಇ'ಗಳ ಸಂಖ್ಯೆಯಲ್ಲಿ ಮಹಿಳಾ ಮಾಲೀಕತ್ವದವು ಶೇ.20.5ರಷ್ಟಿವೆ. ಒಟ್ಟು 'ಉದ್ಯೋಗ್' ನೋಂದಾಯಿತ ಘಟಕಗಳಿಂದ ಸೃಷ್ಟಿಯಾದ ಉದ್ಯೋಗಾವಕಾಶಗಳಿಗೆ ಈ ಮಹಿಳಾ ಮಾಲೀಕತ್ವದ 'ಎಂಎಸ್‌ಎಂಇ'ಗಳ ಕೊಡುಗೆ ಶೇ.18.7ರಷ್ಟಿದೆ. ಮಹಿಳಾ ನೇತೃತ್ವದ 'ಎಂಎಸ್‌ಎಂಇ'ಗಳ ಪೈಕಿ ತಮಿಳುನಾಡಿನಲ್ಲಿ ಅತಿಹೆಚ್ಚು (ಶೇ.15.7) ಉದ್ಯೋಗ ಸೃಷ್ಟಿಯಾಗಿದೆ. ಮಹಾರಾಷ್ಟ್ರ (ಶೇ.12.1), ಕರ್ನಾಟಕ ಮತ್ತು ಉತ್ತರ ಪ್ರದೇಶ (ಶೇ.8) ನಂತರದ ಸ್ಥಾನಗಳಲ್ಲಿವೆ. ಹೀಗಾಗಿ, 'ಪಿಎಂಎಂವೈ'ನಂಥ ಆರ್ಥಿಕ ಒಳಗೊಳ್ಳುವಿಕೆ ಯೋಜನೆಗಳು ಮಹಿಳಾ ನೇತೃತ್ವದ 'ಎಂಎಸ್‌ಎಂಇ'ಗಳನ್ನು ಸಬಲೀಕರಣಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಐದನೆಯದಾಗಿ, ಮಹಿಳೆಯರಿಗೆ ಹೆಚ್ಚಿನ ಸಾಲವನ್ನು ವಿತರಿಸಿದ ರಾಜ್ಯಗಳಲ್ಲಿ ಮಹಿಳಾ ನೇತೃತ್ವದ 'ಎಂಎಸ್‌ಎಂಇ'ಗಳ ಮೂಲಕ ಉದ್ಯೋಗ ಸೃಷ್ಟಿ ಗಮನಾರ್ಹವಾಗಿ ಹೆಚ್ಚಾಗಿರುವುದನ್ನು ನಮ್ಮ ಸಂಶೋಧನೆ ಸೂಚಿಸುತ್ತದೆ. ಇದು ಆರ್ಥಿಕ ಸಬಲೀಕರಣ ಮತ್ತು ಕಾರ್ಮಿಕ ಮಾರುಕಟ್ಟೆಯ ಭಾಗವಹಿಸುವಿಕೆಯನ್ನು ಉತ್ತೇಜಿಸುವಲ್ಲಿ ಉದ್ದೇಶಿತ ಹಣಕಾಸು ಒಳಗೊಳ್ಳುವಿಕೆ ನೀತಿಗಳ ಪರಿಣಾಮಕಾರಿತ್ವವನ್ನು ಬಲಪಡಿಸುತ್ತದೆ.

ಆರನೆಯದಾಗಿ, ನಿರ್ದಿಷ್ಟ ಉದ್ದೇಶದ 'ಮುದ್ರಾ' ಸಾಲ ವಿತರಣೆಗಳು ರಾಜ್ಯಗಳ ಹಣಕಾಸು ಸೇರ್ಪಡೆ ಸ್ಥಿತಿಗತಿಯ ಮೇಲೆ ವಿವಿಧ ಹಂತಗಳಲ್ಲಿ ಹೇಗೆ ಪರಿಣಾಮ ಬೀರಿವೆ ಎಂಬುದನ್ನು ನಾವು ಅನ್ವೇಷಿಸಿದ್ದೇವೆ. 'ಹಣಕಾಸು ಲಭ್ಯತೆ' (ತೆರೆಯಲಾದ ಬ್ಯಾಂಕ್ ಖಾತೆಗಳ ಸಂಖ್ಯೆ ಮತ್ತು 'ರುಪೇ ಕಾರ್ಡ್'ಗಳ ವಿತರಣೆಯ ಮೂಲಕ ಗಣನೆ ಮಾಡಲಾಗಿದೆ), 'ಬಳಕೆ' (ಫಲಾನುಭವಿ ಖಾತೆಗಳಲ್ಲಿನ ಬ್ಯಾಲೆನ್ಸ್ ಮೂಲಕ ಗಣನೆ ಮಾಡಲಾಗಿದೆ) ಹಾಗೂ 'ಸಬಲೀಕರಣ'ವನ್ನು (ಮಹಿಳಾ ಮಾಲೀಕತ್ವದ 'ಎಂಎಸ್‌ಎಂಇ'ಗಳು) ಅಳೆಯುವ ಸೂಚ್ಯಂಕಗಳನ್ನು ಒಳಗೊಂಡಿರುವ 'ಸಂಯೋಜಿತ ಹಣಕಾಸು ಸೇರ್ಪಡೆ ಸೂಚ್ಯಂಕ'ದ ಆಧಾರದ ಮೇಲೆ ವಿಶ್ಲೇಷಣೆ ಮಾಡಲಾಗಿದೆ.

ಅಲ್ಪಸಂಖ್ಯಾತರು ಮತ್ತು ಮಹಿಳಾ ಉದ್ಯಮಿಗಳಿಗೆ ಮೀಸಲಾದ ನಿಧಿಗಳಿಂದ ಕಡಿಮೆ ಆರ್ಥಿಕ ಒಳಗೊಳ್ಳುವಿಕೆ ಮಟ್ಟವನ್ನು ಹೊಂದಿರುವ ರಾಜ್ಯಗಳು ಹೆಚ್ಚಿನ ಪ್ರಯೋಜನ ಪಡೆಯುತ್ತವೆ ಎಂಬುದನ್ನು ಈ ವಿಶ್ಲೇಷಣೆ ಬಹಿರಂಗಪಡಿಸುತ್ತದೆ. ಇದು ಕಡಿಮೆ ಸೇವೆಯ ಪ್ರದೇಶಗಳಲ್ಲಿ ಯೋಜನೆಯ ಸಕಾರಾತ್ಮಕ ಪರಿಣಾಮವನ್ನು ಎತ್ತಿ ತೋರಿಸುತ್ತದೆ.

ಏಳನೆಯದಾಗಿ, ಕಳೆದ 10 ವರ್ಷಗಳಲ್ಲಿ, ರಾಜ್ಯಗಳಿಗೆ ಸಾಲನಿಧಿ ಹಂಚಿಕೆಯಲ್ಲಿ ಹೆಚ್ಚಳವಾಗಿರುವುದನ್ನು ಪ್ರಾದೇಶಿಕ ವಿತರಣೆ ವಿಶ್ಲೇಷಣೆಯು ತೋರಿಸುತ್ತದೆ. ಮುಖ್ಯವಾಗಿ, ಈ ಹೆಚ್ಚಳವು ಕಾರ್ಯತಂತ್ರದ ಬದಲಾವಣೆಯನ್ನು ಸೂಚಿಸುತ್ತದೆ: ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ ನಿಗದಿಪಡಿಸಿದ ನಿಧಿಯ ಪಾಲು ಇಳಿಕೆಯಾಗಿದೆ. ಆದರೆ ಬಿಹಾರ, ಉತ್ತರ ಪ್ರದೇಶ, ಒಡಿಶಾ ಮತ್ತು ಈಶಾನ್ಯ ಭಾರತದಂಥ ಹಿಂದುಳಿದ ಪ್ರದೇಶಗಳಿಗೆ ನಿಧಿಯ ವಿತರಣೆ ಪಾಲು ಹೆಚ್ಚಾಗಿದೆ.

ಈ ಎಲ್ಲಾ ಸಂಶೋಧನೆಗಳು ಒಟ್ಟಾಗಿ, 'ಮುದ್ರಾ' ಸಾಲಗಳು ಆರ್ಥಿಕ ಒಳಗೊಳ್ಳುವಿಕೆಯನ್ನು ಸುಧಾರಿಸುವುದಲ್ಲದೆ ಆರ್ಥಿಕವಾಗಿ ದುರ್ಬಲ ರಾಜ್ಯಗಳನ್ನು ತಲುಪಲು ನೆರವಾಗುತ್ತಿವೆ ಎಂಬುದನ್ನು ಸೂಚಿಸುತ್ತವೆ. ಈ ಅವಳಿ ಪುರಾವೆಗಳು, ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚು ಅಗತ್ಯವಿರುವ ಪ್ರದೇಶಗಳತ್ತ ಹರಿಸುವುದನ್ನು ಖಚಿತಪಡಿಸಿಕೊಳ್ಳುವ ಮೂಲಕ ಎಲ್ಲರನ್ನೂ ಒಳಗೊಂಡ ಬೆಳವಣಿಗೆಯನ್ನು ಉತ್ತೇಜಿಸಲು ಯೋಜನೆಯ ಕಾರ್ಯತಂತ್ರವನ್ನು ಒತ್ತಿಹೇಳುತ್ತವೆ.

ಅಲ್ಲದೆ, 'ಅಕೌಂಟ್ ಅಗ್ರಿಗೇಟರ್ ನೀತಿಯ ಬಳಕೆ' ಮುಂತಾದ 'ಎನ್‌ಬಿಎಫ್‌ಸಿ'ಗಳ 'ಡಿಜಿಟಲ್ ಮೊದಲು' ಕಾರ್ಯವಿಧಾನವು, 'ಎಂಎಸ್‌ಎಂಇ'ಗಳಿಗೆ ಸಾಲದ ಹರಿವಿಗೆ ಮತ್ತಷ್ಟು ಸಹಾಯ ಮಾಡುತ್ತದೆ. 'ಆರ್‌ಬಿಐ'ನ 'ಉದ್ದೇಶಿತ ಏಕೀಕೃತ ಸಾಲ ವ್ಯವಸ್ಥೆ' (ಯುಎಲ್‌ಐ) ಉಪಕ್ರಮದಿಂದ ಇದು ಉತ್ತೇಜನ ಪಡೆಯುವ ನಿರೀಕ್ಷೆಯಿದೆ. 'ಯುಎಲ್‌ಐ'ನ ಪ್ರಾಯೋಗಿಕ ಜಾರಿ ವೇಳೆ, 'ಎಂಎಸ್‌ಎಂಇ'ಗಳಿಗೆ ವಿತರಿಸಲಾದ ಸಾಲಗಳ ಸರಾಸರಿ ಗಾತ್ರವು 9 ಲಕ್ಷ ರು.ಗಳಾಗಿದೆ. ಆದ್ದರಿಂದ ಇದು ವೆಚ್ಚ-ಪರಿಣಾಮಕಾರಿ ರೀತಿಯಲ್ಲಿ ಪ್ರಕ್ರಿಯೆಯ ಸಮಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ.

(ಲೇಖಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಮೂಹ ಮುಖ್ಯ ಆರ್ಥಿಕ ಸಲಹೆಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶೋಷಣೆಗೆ ಕೊನೆಯೆಂದು?

ಹಿಂದಿನ ಅದ್ಯಾವುದೋ ಕಾಲಘಟ್ಟದಲ್ಲಿ ಬ್ರಾಹ್ಮಣರು ಇತರರನ್ನು ಶೋಷಣೆ ಮಾಡಿದರು, ಅದು-ಇದು' ಎಂದೆಲ್ಲಾ ಓದುತ್ತೇವೆ, ಕೇಳುತ್ತೇವೆ. ಆದರೆ ಪ್ರಸಕ್ತ ಕಾಲಘಟ್ಟದಲ್ಲಿ ತೀವ್ರ ಶೋಷಣೆಗೆ ಒಳಗಾಗಿರುವುದು ಬ್ರಾಹ್ಮಣರೇ. ಕಾಲಾನುಕಾಲಕ್ಕೆ ಬರುವ ಸರಕಾರಗಳಿಂದ ಬಿಡಿಗಾಸು ಪ್ರಯೋಜನ ಪಡೆಯದಿರುವ ಈ ಮಂದಿ, ವಿವಿಧ ಕಾರಣಗಳಿಗೆ ನಿರಂತರವಾಗಿ ಅವಮಾನ-ನಿಂದನೆಗೆ ಗುರಿಯಾಗುತ್ತಲೇ ಬಂದಿದ್ದಾರೆ.

ಅಕ್ಷರಶಃ ಸಾಮಾನ್ಯ ವರ್ಗಕ್ಕೆ ಸೇರಿರುವ ಬ್ರಾಹ್ಮಣರಿಗೆ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ, ಸಿಗುವುದೂ ಇಲ್ಲ. ಜನಸಂಖ್ಯೆಯಲ್ಲಿ ಶೇ.2ರಷ್ಟಿದ್ದು ನಿರಂತರ ಶೋಷಣೆಗೆ ಒಳಗಾಗಿರುವ ಈ ಜನಾಂಗದವರು ತುಂಬಾ ಸ್ವಾಭಿಮಾನಿಗಳು ಹಾಗೂ ನಾಚಿಕೆ ಸ್ವಭಾವದವರು. ತಮಗೆ ಬೇಕಾದ ಸವಲತ್ತನ್ನು ಕೇಳಿ ಪಡೆಯಲು ಅಥವಾ ಹೋರಾಟ ಮಾಡಿ ಪಡೆಯಲು ಸಹ ಹಿಂಜರಿಯುವ ಈ ಜನಾಂಗದವರನ್ನು ಎಲ್ಲ ಸರಕಾರಗಳೂ ತುಳಿಯುತ್ತಲೇ ಬಂದಿವೆ. ನನ್ನ ಪ್ರಕಾರ, ಬಿಪಿಎಲ್ ಪಡಿತರ ಚೀಟಿಯನ್ನು ಪಡೆದಿರುವ ಬ್ರಾಹ್ಮಣರು ವಿರಳ. ಇನ್ನು, ವಿದ್ಯಾಭ್ಯಾಸದಿಂದ ಮೊದಲ್ಗೊಂಡು ಯಾವುದಕ್ಕೂ ಮೀಸಲಾತಿ ಕೇಳದ ಜನಾಂಗವಿದು. ಹೀಗಿರುವಾಗ ಮೊನ್ನೆ ಒಂದೆರಡು ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ ನಡೆದಿದೆ. ವಿಪರ್ಯಾಸವೆಂದರೆ ಇದಕ್ಕೂ ರಾಜಕೀಯ ಬಣ್ಣವನ್ನು ಬಳಿಯಲಾಗುತ್ತಿದೆ. ಇದು ನಮ್ಮ ಸಮಾಜದ ದುಸ್ಥಿತಿ. ಈಗಾಗಲೇ ಕೃತ್ಯ ನಡೆದಾಗಿದೆ, ಅದನ್ನು ಖಂಡಿಸಬೇಕು ನಿಜ. ಆದರೆ ಇದರಿಂದ ರಾಜಕೀಯದವರು ಮತ್ತು ಇತರ ಸಂಘಟನೆಗಳು ತಮ್ಮ ಬೇಳೆ ಬೇಯಿಸಿಕೊಳ್ಳುವಂತಾಗಿದೆ. ಇದರಿಂದ ಬ್ರಾಹ್ಮಣರಿಗೆ ಏನೂ ಪ್ರಯೋಜನವಿಲ್ಲ. ಅವರನ್ನು ಅವರ ಪಾಡಿಗೆ ಇರಲು ಬಿಟ್ಟರೆ ಅಷ್ಟು ಸಾಕು!

- ವೆಂಕಟೇಶ್ ಕೆ.ಎಸ್., ಮಂಡ್ಯ

ಇದನ್ನು ಸ್ವಾಗತಿಸೋಣ

ಇನ್ಫೋಸಿಸ್ ಕಂಪನಿಯ ಸಹ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿಯವರು ತಾವು ನ್ಯಾಯಸಮ್ಮತವಾಗಿ ದುಡಿದು ಮಾಡಿರುವ ಆಸ್ತಿಯಲ್ಲಿ ಕೆಲವು ಭಾಗವನ್ನು ತಮ್ಮ ಮೊಮ್ಮಗನಿಗೆ ಉಡುಗೊರೆಯಾಗಿ ಕೊಟ್ಟಿರುವುದು ಆಶ್ಚರ್ಯದ ವಿಷಯವೇನಲ್ಲ. ಎಷ್ಟೋ ಪುಢಾರಿಗಳು ಸಾವಿರಾರು ಕೋಟಿ ರುಪಾಯಿ ಮೌಲ್ಯದ ಆಸ್ತಿ ಮಾಡಿ ತಮ್ಮ ಮಕ್ಕಳಿಗೆ ಕೊಟ್ಟಿಲ್ಲವೇ? ನಮ್ಮದೇ ರಾಜ್ಯದ ರಾಜಕೀಯ ಮುಖಂಡರೊಬ್ಬರು ಹೇಳಿಕೊಂಡಂತೆ (ಅವರನ್ನೂ ಸೇರಿಸಿದಂತೆ) ಸಾಕಷ್ಟು ರಾಜಕಾರಣಿಗಳು 3-4 ತಲೆಮಾರಿಗೆ ಆಗುವಷ್ಟು ಆಸ್ತಿಯನ್ನು ಮಾಡಿಕೊಂಡಿದ್ದಾರೆ. ಇವೆಲ್ಲಾ ನ್ಯಾಯಬದ್ಧವಾಗಿ ದಕ್ಕಿರುವಂಥದ್ದು ಎಂಬುದನ್ನು ನಂಬಲಿಕ್ಕೆ ಸಾಧ್ಯವೇ ಇಲ್ಲ. ಹೀಗಿರುವಾಗ ನಾರಾಯಣಮೂರ್ತಿಯವರು ತಾವು ನ್ಯಾಯಬದ್ಧವಾಗಿ ದುಡಿದು ಮಾಡಿರುವ ಆಸ್ತಿಯಲ್ಲಿ ಒಂದು ಪಾಲನ್ನು ಮೊಮ್ಮಗನಿಗೆ ಕೊಟ್ಟರೆ ಅದನ್ನು ಸಂತೋಷದಿಂದ ಸ್ವಾಗತಿಸಬೇಕಲ್ಲವೇ?

ಇನ್ನು, 'ಉದ್ಯೋಗಿಗಳು ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು' ಎಂಬ ಅವರ ಹೇಳಿಕೆ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿರುವುದರಿಂದ ಅದರ ಬಗ್ಗೆ ಹೆಚ್ಚು ಬರೆಯುವ ಅಗತ್ಯವಿಲ್ಲ. ಆದರೆ ಒಂದು ಮಾತಂತೂ ನಿಜ, ಈ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದವರೂ ಸೇರಿದಂತೆ ಮಾಹಿತಿ ತಂತ್ರಜ್ಞಾನ ವಲಯದ ಸಾಕಷ್ಟು ಉದ್ಯೋಗಿಗಳು ಈಗಲೂ ವಾರಕ್ಕೆ 70 ಗಂಟೆಗೂ ಅಧಿಕವಾಗಿ ಕೆಲಸ ಮಾಡುತ್ತಿದ್ದಾರೆ-ಮುಂದುವರಿದ ದೇಶದವರು ಎಂದು ಹೇಳಿಕೊಂಡಿರುವವರೂ ಸೇರಿದಂತೆ!

- ದಾವಣಗೆರೆ ಮುಕುಂದ, ಬೆಂಗಳೂರು

ಭಟ್ಟರ್ ಸ್ಕಾಚ್

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಶಾಶ್ವತ ಸುಖ ಎಲ್ಲಿದೆ ಮತ್ತು ಅದು ಎಲ್ಲಿ ಸಿಗುತ್ತೆ?
– **ನನ್ನ ಮಟ್ಟಿಗೆ ಶಾಶ್ವತ ಸುಖ ಅಂದ್ರೆ ಐಸ್‌ಕ್ರೀಮ್ ಮತ್ತು ಅದು ಐಸ್ ಕ್ರೀಮ್ ಪಾರ್ಲರ್‌ನಲ್ಲಿ ಸಿಗುತ್ತದೆ!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಸರಕಾರದ ಜಾತಿಗಣತಿ ಬಗ್ಗೆ ನಿಮ್ಮ ಮನೆ ನಾಯಿ ಪ್ರತಿಕ್ರಿಯೆ ಏನು?
– **ಜಾತಿ ನಾಯಿ ಗಣತಿಯನ್ನೂ ಮಾಡಬೇಕಿತ್ತು ಎನ್ನಬೇಕೇ?!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಸರಕಾರದ ಜವಾಬ್ದಾರಿಯನ್ನು ಡಿ.ಕೆ. ಶಿವಕುಮಾರ್ ಕೂಡ ಹೊತ್ತುಕೊಳ್ಳಬೇಕಾದ ಸಮಯ ಇದು ಅಂತ ಅನಿಸ್ತಾ ಇಲ್ಲವಾ?
– **ಅವರು ಸದ್ಯ ಖಾಲಿ ಸಿಲಿಂಡರನ್ನು ಹೆಗಲ ಮೇಲೆ ಹೊತ್ತುಕೊಂಡಿದ್ದಾರಂತೆ!**

- **ಪಿ.ವಿ.ರಘು, ಬೆಂಗಳೂರು**
ಭಟ್ರೇ, ಎಲ್ಲ ಅನಿಷ್ಟಕ್ಕೂ ಬಿಜೆಪಿಯ ಕಡೆಗೇ ಕಾಂಗ್ರೆಸ್ಸಿಗರು ತೋರಿಸ್ತಾರಲ್ಲ?
– **ತಾವು ಅಧಿಕಾರಕ್ಕೆ ಬಂದಿರುವುದಕ್ಕೂ ಬಿಜೆಪಿ ಕಡೆಗೇ ತೋರಿಸಬೇಕಿತ್ತು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ 'ಹೊಟ್ಟೆಗೆ ಹಿಟ್ ಇಲ್ಲದಿದ್ದರೂ ಮೊಬೈಲಲ್ಲಿ ನೆಟ್ ಫ್ಲಿಕ್ಸ್' ಇರಬೇಕು ಅಂತಾನಲ್ಲ?
– **ಅದಕ್ಕಿಂತ ಮುನ್ನ ಮೊಬೈಲಿಗೆ ನೆಟ್ ಇರಬೇಕಪ್ಪ ಅಂತ ಹೇಳಬೇಕಿತ್ತು!**

- **ಶಾಮಲಾ, ಹಾಸನ**
ಭಟ್ರೇ, 'ನಾನು' ಕವನ ನೋಡಿದ ಬಳಿಕ ನಾನು ಯಾರು ಎಂಬುದೇ ಗೊತ್ತಾಗ್ತಾ ಇಲ್ಲವಲ್ಲ?
– **ನಾನು ಕವನದಲ್ಲಿದ್ದಂತೆ ನಾನು ನಾನೇ ಎಂದು ಸುಮ್ಮನಾಗಮ್ಮ!**

- **ಲತಾ ಸಾಗರ, ಶಿವಮೊಗ್ಗ**
ಭಟ್ರೇ, ನನ್ನ ಹೆಸರಿನಲ್ಲಿರುವ 'ಸಾಗರ' ನೋಡಿ ಜನ ನನ್ನನ್ನು ಅನುಮಾನಾಸ್ಪದವಾಗಿ ನೋಡ್ತಾರಲ್ಲ?
– **'ನಾನು' ಆ 'ಸಾಗರ' ಅಲ್ಲ ಅಂತ ಹೇಳಬೇಕಿತ್ತು!**

ವಿಮಾನಯಾನದಲ್ಲಿ ಘನತೆ ಕಾಯ್ದುಕೊಳ್ಳದಿದ್ದರೆ ಹೇಗೆ?!

ವಿಮಾನಯಾನ ಎಂದರೆ ಅಲ್ಲಿ ಸ್ವಲ್ಪ ಗಂಭೀರವಾಗಿರಬೇಕು, ಘನತೆ ಕಾಯ್ದುಕೊಳ್ಳಬೇಕು, ಇತರರಿಗೆ ತೊಂದರೆಯಾಗದಂತೆ ವರ್ತಿಸಬೇಕು ಎಂಬ ಎಲ್ಲ ಪಾಠಗಳ ನಡುವೆಯೂ ಕೆಲವೊಮ್ಮೆ ವಿಚಿತ್ರ ಘಟನೆಗಳು ನಡೆದುಹೋಗುತ್ತವೆ. ಯಾವ ಕಾರಣಕ್ಕೂ ಪ್ರಯಾಣಿಕ ತನ್ನ ಜವಾಬ್ದಾರಿಯನ್ನು ಮರೆಯಬಾರದು, ಅಸಭ್ಯವಾಗಿ ವರ್ತಿಸಬಾರದು.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಇದು ಸುಮಾರು 27 ವರ್ಷದ ಹಿಂದೆ ನಡೆದ ಘಟನೆ. ಸೌದಿ ಅರೇಬಿಯಾದಿಂದ ಭಾರತಕ್ಕೆ ಪ್ರಯಾಣ ಮಾಡುತ್ತಿದ್ದೆ. ನನ್ನೊಂದಿಗೆ ಕೆಲಸ ಮಾಡುತ್ತಿದ್ದ ಇನ್ನೂ ಐದು ಜನ ಅಂದು ನನ್ನ ಜತೆ ಇದ್ದರು. ನಾವೆಲ್ಲ ಸೌದಿ ಅರೇಬಿಯಾದ ದಮಾಮ್‌ನಿಂದ ಬಹ್ರೈನ್‌ಗೆ ಬಂದು ಅಲ್ಲಿಂದ ಮುಂಬೈವರೆಗೆ ವಿಮಾನ, ನಂತರ ನಮ್ಮ ನಮ್ಮ ಊರಿಗೆ ಪ್ರಯಾಣ ಮಾಡಬೇಕಿತ್ತು. ಗಲ್ಫ್ ಏರ್ ವಿಮಾನದಲ್ಲಿ ಪ್ರಯಾಣಿಸುತ್ತಿದ್ದುದರಿಂದ ಬಹ್ರೈನ್‌ಗೆ ಹೋಗುವುದು ಅನಿವಾರ್ಯವಾಗಿತ್ತು. ದಮಾಮ್‌ನಿಂದ ಮುಂಬೈಗೆ ಹೋಗಲು ಸೌದಿಯಾ ಏರ್‌ಲೈನ್ಸ್ (ಸೌದಿ ಅರೇಬಿಯಾದ ರಾಷ್ಟ್ರೀಯ ವಿಮಾನ ಸಂಸ್ಥೆ) ಇದ್ದರೂ ನಾವು ಗಲ್ಫ್ ಏರ್ ಆರಿಸಿಕೊಂಡಿದ್ದೆವು. ಅದಕ್ಕೆ ಪ್ರಮುಖವಾಗಿ ಎರಡು ಕಾರಣಗಳಿದ್ದವು. ಮೊದಲನೆಯದು, ದಮಾಮ್‌ನಿಂದ ಬಹ್ರೈನ್‌ಗೆ ಕಾರಿನಲ್ಲಿ ಹೋಗಬಹುದಾಗಿದ್ದು, ಈ ನೆಪದಲ್ಲಿ ಬಹ್ರೈನ್ ದೇಶ ನೋಡಬಹುದು ಎಂದು. ಎರಡನೆಯದು, ಸೌದಿಯಾ ಏರ್‌ಲೈನ್ಸ್‌ನಲ್ಲಿ ದೊರಕದ ಗುಂಡು (ಮದ್ಯ) ಗಲ್ಫ್ ಏರ್‌ನಲ್ಲಿ ಸಿಗುತ್ತದೆ ಎಂಬುದಾಗಿತ್ತು.

ಈ ಏರ್‌ಲೈನ್ಸ್ ವ್ಯವಹಾರಗಳು ಕೆಲವೊಮ್ಮೆ ನಮ್ಮ ಬಸ್‌ಗಳಂತೆಯೇ. ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವ ಬಸ್‌ಗಳು ತಮ್ಮ ಊರಿನ ಡಿಪೋದಲ್ಲಿ ಒಮ್ಮೆ ನಿಂತು, ತಪಾಸಣೆಗೊಳಪಟ್ಟು, ಡೀಸೆಲ್ ತುಂಬಿಸಿಕೊಂಡು, ಚಾಲಕರು ಬದಲಾಗುವ ಅವಶ್ಯಕತೆ ಇದ್ದರೆ ಬದಲಾಯಿಸಿಕೊಂಡು ಮುಂದೆ ಹೋಗುತ್ತವಲ್ಲ (ಇತ್ತೀಚೆಗೆ ಕೆಲವು ರಾಜ್ಯಗಳು ಇದಕ್ಕೆ ಹೊರತಾದರೂ, ಕೆಲವು ರಾಜ್ಯಗಳಲ್ಲಿ ಈ ಪರಿಪಾಠ ಇಂದಿಗೂ ಮುಂದುವರಿದಿದೆ) ಹಾಗೆ. ಮೂಲಸ್ಥಾನದಿಂದ ಹೊರಡುವ ನೇರ ವಿಮಾನ ಬಿಟ್ಟರೆ, ಬೇರೆ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಬೇಕೆಂದರೆ, ಮೂಲಸ್ಥಾನಕ್ಕೆ ಹೋಗಿಯೇ ಮುಂದುವರಿಯಬೇಕು. ಇಂಥ ಸಂದರ್ಭದಲ್ಲಿ ಹೆಚ್ಚಿನಂಶ ಬೇರೆ ವಿಮಾನದಲ್ಲಿ ಪ್ರಯಾಣ ಮುಂದುವರಿಸಬೇಕು.

ಅಂದು ಬಹ್ರೈನ್‌ನಿಂದ ವಿಮಾನ ಆಕಾಶಕ್ಕೆ ಹಾರಿ ಒಂದು ಗಂಟೆಗಿಂತಲೂ ಸ್ವಲ್ಪ ಹೆಚ್ಚೇ ಆಗಿತ್ತು. ನನಗಿಂತ ಮೂರೋ ನಾಲ್ಕೋ ಸಾಲು ಹಿಂದೆ ಕುಳಿತವನೊಬ್ಬ ಇದ್ದಕ್ಕಿದ್ದಂತೆ ಏರಿದ ಧ್ವನಿಯಲ್ಲಿ ಮಾತನಾಡಲು ಆರಂಭಿಸಿದ. ನೋಡ ನೋಡುತ್ತಿದ್ದಂತೆ ಆತನ ಧ್ವನಿ ತಾರಕಕ್ಕೆ ಏರಿತ್ತು. ಎಲ್ಲರಿಗೂ ಕೇಳುವಂತೆ ಗಲ್ಫ್ ಏರ್ ಸಂಸ್ಥೆ, ಗಗನಸಖಿಯರನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ. ಅದು ಗಗನಸಖಿಯರಿಗಷ್ಟೇ ಅಲ್ಲ, ಉಳಿದ ಪ್ರಯಾಣಿಕರಿಗೂ ಕಿರಿಕಿರಿಯಾಗತೊಡಗಿತು. ಗಗನಸಖಿಯೊಬ್ಬಳು ನನ್ನ ಬಳಿ ಬಂದಾಗ ಆತನ ಕಿರುಚುವಿಕೆಗೆ ಕಾರಣ ಏನೆಂದು ಕೇಳಿದೆ. 'ಆತ ಈಗಾಗಲೇ ನಾವು ಉಚಿತವಾಗಿ ಕೊಡುವ ಎರಡು ಪೆಗ್ ಮುಗಿಸಿ, ಮೇಲಿಂದ ಎರಡು ಪೆಗ್ ಹಣಕೊಟ್ಟು ಕೊಂಡು, ಒಟ್ಟೂ ನಾಲ್ಕು ಸುತ್ತು ಮುಗಿಸಿದ್ದಾನೆ, ಇನ್ನೂ ಬೇಕೆಂದು ಕೇಳುತ್ತಿದ್ದಾನೆ. ನಾವು ಕೊಡುವುದಿಲ್ಲ ಎಂದಿದ್ದಕ್ಕೆ ಈ ರಂಪಾಟ' ಎಂದಳು. ಮನಸ್ಸಿನಲ್ಲಿಯೇ 'ಇದ್ದಿದ್ದರಲ್ಲಿ ಈತ ವಾಸಿ, ದುಡ್ಡುಕೊಟ್ಟು ಖರೀದಿಸಿದ್ದಾನೆ, ಬದಿಗೆ ಕುಳಿತವರಲ್ಲಿ ಕೇಳಲಿಲ್ಲ' ಅಂದುಕೊಂಡೆ (ಏಕೆ ಎಂದು ನಂತರ ಹೇಳುತ್ತೇನೆ). 'ಹಣ ಕೊಟ್ಟು ಕುಡಿಯುವುದಾದರೆ ಕೊಡಬಹುದಲ್ಲ, ನಿಮಗೇನು ತೊಂದರೆ?' ಎಂದೆ. 'ಆತ ತನ್ನ ವಿವರದಲ್ಲಿ ಸಕ್ಕರೆ ಕಾಯಿಲೆ ಇದೆಯೆಂದೂ, ಡಯಾಬೆಟಿಕ್ ತಿನಿಸು ನೀಡಬೇಕೆಂದೂ ಕೇಳಿಕೊಂಡಿದ್ದಾನೆ. ಅಲ್ಲದೆ, ವಿಮಾನದ ಒಳಗೆ ಬರುವುದಕ್ಕಿಂತ ಮೊದಲೇ ಮದ್ಯಪಾನ ಮಾಡಿ ಬಂದಿದ್ದಾನೆ ಎಂಬ ಅನುಮಾನವಿದೆ. ಏನಾದರೂ ಹೆಚ್ಚು ಕಮ್ಮಿ ಆದರೆ ನಾವು ಜವಾಬುದಾರರಾಗುತ್ತೇವೆ, ಆದ್ದರಿಂದ ಇನ್ನೂ ಹೆಚ್ಚು ನೀಡಲು ಸಾಧ್ಯವಿಲ್ಲ, ಇದನ್ನು ಹೇಳಿದರೆ ಆತ ಕೇಳುತ್ತಿಲ್ಲ, ಏನು ಮಾಡೋಣ?' ಎಂದು ಮುಂದೆ ನಡೆದಳು. ನನಗೆ ಪರಿಸ್ಥಿತಿ ಅರ್ಥವಾಗಿತ್ತು. ನನ್ನ ಜತೆಗೆ ಇನ್ನೂ ಐದು ಜನ ಇದ್ದ ಧೈರ್ಯ ಬೇರೆ ಇತ್ತಲ್ಲ, ಎದ್ದು ನಿಂತು ಅವನೆಡೆಗೆ ತಿರುಗಿ, 'ನಮಗೆಲ್ಲ ಬಹಳ ಕಿರಿಕಿರಿಯಾಗುತ್ತಿದೆ, ಬಾಯಿ ಮುಚ್ಚಿ ಸುಮ್ಮನೆ ಕುಳಿತುಕೊಳ್ಳದಿದ್ದರೆ ನಿನ್ನನ್ನು ವಿಮಾನದಿಂದ ಕೆಳಗೆ ಎಸೆಯುತ್ತೇವೆ' ಎಂದು ಏರಿದ ದನಿಯಲ್ಲಿಯೇ ಹೇಳಿದೆ. ಮುಂಬೈ ಬರುವವರೆಗೂ ಆಸಾಮಿ ಗಪ್ಚುಪ್!

ಅದಾಗಿ 3-4 ವರ್ಷವಾಗಿರಬೇಕು, ಎಮಿರೇಟ್ಸ್ ವಿಮಾನದಲ್ಲಿ ಪ್ರಯಾಣಿಸುತ್ತಿದ್ದೆ. ನನ್ನ ಪಕ್ಕದಲ್ಲಿ ಒಬ್ಬ ಬಂದು ಕುಳಿತ. ಆಗಲೇ ಮದ್ಯೋನ್ಮತ್ತನಾಗಿದ್ದುದರಿಂದ, ಕುಳಿತವನೇ ನಿದ್ರಿಸಲು ಆರಂಭಿಸಿದ. ಅರ್ಧ ಗಂಟೆಯ ನಂತರ ವಿಮಾನ ಹೊರಡಲು ಸಿದ್ಧವಾಯಿತು. ಆ ಕ್ಷಣಕ್ಕೆ ಸರಿಯಾಗಿ ನನ್ನ ಪಕ್ಕದಲ್ಲಿದ್ದವನಿಗೆ ಎಚ್ಚರವಾಯಿತು. ಆತ ಕಣ್ಣು ಬಿಡುವಾಗ ವಿಮಾನ ನೋಸ್-ಇನ್ ಪಾರ್ಕಿಂಗ್ (ವಿಮಾನ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ನಿಲ್ಲುವ ಸ್ಥಳ) ನಿಂದ ರನ್‌ವೇಗೆ ಹೋಗುವುದಕ್ಕಾಗಿ ಹಿಂದೆ ಚಲಿಸಲು (ಪುಶ್‌ಬ್ಯಾಕ್) ಆರಂಭಿಸಿತು. ಕೂಡಲೇ ನನ್ನ ಪಕ್ಕದಲ್ಲಿದ್ದವ ಎದ್ದು ನಿಂತು 'ವಿಮಾನ ಹಿಂದಕ್ಕೆ ಹೋಗುತ್ತಿದೆ, ಪೈಲಟ್‌ಗೆ ಹೇಳಿ, ಯಾರಾದರೂ ನಿಲ್ಲಿಸಿ' ಎಂದು ಕೂಗಾಡಲು ಆರಂಭಿಸಿದ. ಗಗನಸಖಿಯರು ಅವನ ಬಳಿ ಬಂದು ಅವನಿಗೆ ಸಾಂತ್ವನ ಹೇಳಿ ವಿವರಿಸಿದ ನಂತರವೇ ಆತ ಶಾಂತನಾಗಿದ್ದು. ಅದಕ್ಕಿಂತ ಮೊದಲು ಗಾಬರಿಗೊಂಡ ಆತ 5-6 ಸಲ ಕೂಗಿ ಆಗಿತ್ತು. ಅದರಿಂದಾಗಿ ವಿಮಾನದಲ್ಲಿ ಉಚಿತವಾಗಿ ಸಿಗಬೇಕಾಗಿದ್ದ ಮದ್ಯವನ್ನು ಕಳೆದುಕೊಂಡಿದ್ದ. ಆತನೇನೂ ಬಹಳ ತಲೆಕೆಡಿಸಿಕೊಳ್ಳಲಿಲ್ಲ, ಐದೇ ನಿಮಿಷದಲ್ಲಿ ಪುನಃ ನಿದ್ರೆಗೆ ಜಾರಿದ್ದ. ಅದು ಆತನ ಮೊದಲ ವಿಮಾನ ಪ್ರಯಾಣವಾಗಿತ್ತು ಎಂದು ನಂತರ ತಿಳಿಯಿತು.

ಮೊದಲೆಲ್ಲ ಒಂದು ವರ್ಗದ ಜನ ಸಿಗುತ್ತಿದ್ದರು. ಬಂದು ಕುಳಿತುಕೊಳ್ಳುತ್ತಿದ್ದಂತೆ ಪರಿಚಯ ಮಾಡಿಕೊಂಡು, 'ನೀವು ಕುಡಿಯುತ್ತೀರಾ?' ಎಂದು ಕೇಳುತ್ತಿದ್ದರು. ಇಲ್ಲ ಎಂದರೆ ಸಾಕು, 'ನಿಮಗೆ ಉಚಿತವಾಗಿ ಸಿಗುವುದನ್ನು ಪಡೆದು ನನಗೆ ಕೊಡಿ' ಎಂದು ಕೇಳುತ್ತಿದ್ದರು. ಹಾಗೆ ಕೇಳಿದವರಿಗೆಲ್ಲ ನಾನು ಕೊಟ್ಟಿದ್ದೂ ಇದೆ. ಒಂದೆರಡು ಬಾರಿ ಹೆಂಡತಿಯ ಜತೆ ಪ್ರಯಾಣಿಸುವಾಗ ಆಕೆಯ ಪಾಲಿನದ್ದನ್ನೂ ಕೇಳಿ ಪಡೆದವರಿದ್ದಾರೆ. ತ್ರಾಸು ಯಾವಾಗ ಎಂದರೆ, ಅವರು ಕಿಟಕಿಯ ಬಳಿ ಕುಳಿತಿದ್ದು, ನಾವು ಪಕ್ಕದಲ್ಲಿದ್ದರೆ. ಅವರು ಮೂತ್ರ ವಿಸರ್ಜನೆಗೆ ಹೋಗುವಾಗಲೆಲ್ಲ ನಾವೂ ಏಳಬೇಕು. ಆ ಕಾರಣಕ್ಕಾದರೂ 'ವಿಂಡೋ ಸೀಟ್' ಪಡೆಯುವುದು ಅನಿವಾರ್ಯವಾಗಿತ್ತು! ನಂತರದ ದಿನಗಳಲ್ಲಿ ನಾನು ಕುಡಿಯುವುದೂ ಇಲ್ಲ, ಕೊಡುವುದೂ ಇಲ್ಲ ಎಂದು ಖಡಾಖಡಿ ಹೇಳುತ್ತಿದ್ದೆ. ಈಗ ಊಟದ ಜತೆಗೇ ಪಾನೀಯವನ್ನೂ ಕೊಡುವುದರಿಂದ, ಮದ್ಯದ ಬದಲಿಗೆ ಟೀ-ಕಾಫಿ ಅಥವಾ ಹಣ್ಣಿನ ರಸವನ್ನು ಆಯ್ದುಕೊಳ್ಳುವ ಅವಕಾಶವೂ ಇರುವುದರಿಂದ ಆ ಪ್ರಮೇಯ ಎದುರಾಗುತ್ತಿಲ್ಲ. ಈ ಹಳೆಯ ವಿಷಯಗಳೆಲ್ಲ ಈಗ ನೆನಪಾಗಿದ್ದಕ್ಕೆ ಕಾರಣ ಏನೆಂದು ಕೇಳಿದರೆ, ಈ ಮೊದಲು ಹೇಳಿದ ಘಟನೆಗಳನ್ನೆಲ್ಲ ಸಹಿಸಿಕೊಳ್ಳಬಹುದು.

ಕೆಲವೊಮ್ಮೆ ಅರಗಿಸಿಕೊಳ್ಳಲಾಗದ ಘಟನೆಗಳು ವಿಮಾನದಲ್ಲಿ ಘಟಿಸುತ್ತವೆ. 2 ವರ್ಷದ ಹಿಂದೆ ಏರ್ ಇಂಡಿಯಾದಲ್ಲಿ ನಡೆದ ಒಂದು ಘಟನೆ ದೇಶದಾದ್ಯಂತ ಸುದ್ದಿ ಮಾಡಿತ್ತು. ಅಮೆರಿಕದ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬ ನ್ಯೂಯಾರ್ಕ್‌ನಿಂದ ದೆಹಲಿಗೆ ಪ್ರಯಾಣ ಮಾಡುತ್ತಿದ್ದ, ಅದೂ ಬಿಜಿನೆಸ್ ಕ್ಲಾಸ್ (ವ್ಯಾಪಾರ ದರ್ಜೆ) ನಲ್ಲಿ. ಆದರೆ ಆತ ಮಾಡಿದ ಕೆಲಸ ಮಾತ್ರ ಥರ್ಡ್ ಕ್ಲಾಸ್‌ನದ್ದು. 74 ವರ್ಷದ ವೃದ್ಧೆಯ ಮೈಮೇಲೆ ಆತ ಮೂತ್ರ ವಿಸರ್ಜನೆ ಮಾಡಿದ್ದ. ಅಂದಿನ ಮಟ್ಟಿಗೆ ಆತ 'ಪೀ'-ಮ್ಯಾನ್ ಆಗಿದ್ದ. ಇದನ್ನು ನೀವು ಹಿಂದಿ ಭಾಷೆಯ ಪೀ (ಕುಡಿಯುವುದು) ಎಂದಾದರೂ ತಿಳಿಯಿರಿ ಅಥವಾ ಇಂಗ್ಲಿಷ್ ಭಾಷೆಯ ಪೀ (ಮೂತ್ರ ವಿಸರ್ಜನೆ) ಎಂದಾದರೂ ತಿಳಿಯಿರಿ, ಅದು ನಿಮಗೆ ಬಿಟ್ಟಿದ್ದು. ಆತ ಮಾಡಿದ 'ದ್ರವ' ಕಾರ್ಯದಿಂದ ವೃದ್ಧೆಯ ಬಟ್ಟೆ, ಪಾದರಕ್ಷೆ, ಸಣ್ಣ ಚೀಲ ಎಲ್ಲವೂ ಮೂತ್ರಮಯವಾಗಿತ್ತು. ಅಷ್ಟೇ ಅಲ್ಲ, ಇಡೀ ಬಿಜಿನೆಸ್ ಕ್ಲಾಸ್ ಮೂತ್ರದ ವಾಸನೆಯಿಂದ ತುಂಬಿಹೋಗಿತ್ತು. ವೃದ್ಧೆ ವಿಮಾನದಲ್ಲಿರುವ ಕರ್ಮಚಾರಿಗಳ ಬಳಿ ಬದಲಿ ಆಸನ ಕೊಡುವಂತೆ ಕೇಳಿಕೊಂಡಳು. ಪ್ರಥಮ ದರ್ಜೆಯಲ್ಲಿ (ಫಸ್ಟ್ ಕ್ಲಾಸ್) ಆಸನಗಳು ಖಾಲಿ ಇದ್ದರೂ ಅಲ್ಲಿ ಪೈಲಟ್ ವಿಶ್ರಾಂತಿ ಪಡೆಯುತ್ತಿದ್ದಾನೆ ಎಂಬ ಕಾರಣ ನೀಡಿ, ಆಕೆ ಕುಳಿತಿದ್ದ ಆಸನದ ಮೇಲೆಯೇ ಕಂಬಳಿ ಹಾಸಿ ಆಕೆಯನ್ನು ಕೂರಿಸಲಾಯಿತು. ಸಾಲದು ಎಂಬಂತೆ, ಸಹ ಪ್ರಯಾಣಿಕರು ಲಿಖಿತ ದೂರು ನೀಡಿದರೂ ಮೂತ್ರ ವಿಸರ್ಜಿಸಿದವನನ್ನು ವಿಚಾರಣೆಗೆ ಒಳಪಡಿಸದೇ ಬಿಟ್ಟು ಕಳುಹಿಸಲಾಯಿತು. ಪ್ರಕರಣ ದೊಡ್ಡದಾಗಿ ದೆಹಲಿ ಪೊಲೀಸರು ಆತನನ್ನು ಹುಡುಕಲು ಆರಂಭಿಸಿ, ನಂತರ ಬೆಂಗಳೂರಿನಲ್ಲಿ ಆತನನ್ನು ಬಂಧಿಸಿದರು. ಆತನನ್ನು ಕೆಲಸದಿಂದ ತೆಗೆಯಲಾಗಿದೆ ಎಂದು ಆತ ಕೆಲಸ ಮಾಡುತ್ತಿದ್ದ ಸಂಸ್ಥೆ ಹೇಳಿತು. ಇದಿಷ್ಟು ವಿಷಯ.

ಹಾಗಂತ ಈ ರೀತಿಯ ಘಟನೆ ಇದೇ ಮೊದಲಲ್ಲ. ಕೆಲ ವರ್ಷದ ಹಿಂದೆ ಬ್ರಿಟಿಷ್ ಏರ್‌ವೇಸ್‌ನಲ್ಲಿ ವ್ಯಕ್ತಿಯೊಬ್ಬ ವಿಮಾನದ ತುಂಬೆಲ್ಲ ಮಲವಿಸರ್ಜನೆ ಮಾಡಿಕೊಂಡು ಓಡಾಡಿದ್ದ ಎನ್ನುವುದನ್ನೂ ನೆನಪಿಸಿಕೊಳ್ಳಬಹುದು. ಇಂಥ ಕೆಲವು ತೀರಾ ಅತಿರೇಕವಲ್ಲದ ಘಟನೆಗಳನ್ನು ನಾನು ವಿಮಾನ ಪ್ರಯಾಣದಲ್ಲಿ ಕಂಡಿದ್ದೇನೆ. ಕೆಲವು ವಿಮಾನದ ಸಿಬ್ಬಂದಿಗಳೊಂದಿಗೆ ಮಾತನಾಡಿ, ಅವರ ಅನುಭವ ಕೇಳಿದ್ದೇನೆ. ಅವರ ಪ್ರಕಾರ, ಇಂಥ ಘಟನೆಗಳು ಪ್ರತಿನಿತ್ಯ ನಡೆಯುವಂಥವಲ್ಲ. ಎಲ್ಲೋ ಅಪರೂಪಕ್ಕೊಮ್ಮೆ ಈ ರೀತಿಯ ಘಟನೆಗಳು ನಡೆದಾಗ ಅವನ್ನು ಹೇಗೆ ನಿಭಾಯಿಸಬೇಕು ಎನ್ನುವುದನ್ನೂ ಅವರಿಗೆ ತಿಳಿಸಿಕೊಡಲಾಗಿರುತ್ತದೆ. ವಿಮಾನಯಾನ ಎಂದರೆ ಅಲ್ಲಿ ಸ್ವಲ್ಪ ಗಂಭೀರವಾಗಿರಬೇಕು, ಘನತೆ ಕಾಯ್ದುಕೊಳ್ಳಬೇಕು, ಇತರರಿಗೆ ತೊಂದರೆಯಾಗದಂತೆ ವರ್ತಿಸಬೇಕು ಎಂಬ ಎಲ್ಲ ಪಾಠಗಳ ನಡುವೆಯೂ ಕೆಲವೊಮ್ಮೆ ಇಂಥ ಘಟನೆಗಳು ನಡೆದುಹೋಗುತ್ತವೆ. ವಿಮಾನದಲ್ಲಿ ಪ್ರಯಾಣಿಸುವಾಗ ಮದ್ಯಪಾನ ಮಾಡುವುದು ತಪ್ಪೂ ಅಲ್ಲ, ಅಪರಾಧವೂ ಅಲ್ಲ. ಹಾಗೇನಾದರೂ ಇದ್ದಿದ್ದರೆ ಅದನ್ನು ವಿಮಾನದಲ್ಲಿ ಪೂರೈಸುತ್ತಲೂ ಇರಲಿಲ್ಲ, ಅಥವಾ ಅಂಥವರನ್ನು ಒಳಗೆ ಬಿಟ್ಟುಕೊಳ್ಳುತ್ತಲೂ ಇರಲಿಲ್ಲ. ಆದರೆ ಏರ್ ಇಂಡಿಯಾ ವಿ(ಪೀ)ಮಾನದ ಘಟನೆಯಲ್ಲಿ ಪೀ-ಮ್ಯಾನ್ ಎಷ್ಟು ತಪ್ಪಿತಸ್ಥನೋ, ಅಷ್ಟೇ ತಪ್ಪು ಕರ್ಮಚಾರಿಗಳದ್ದೂ ಇತ್ತು ಎಂದು ಮೇಲ್ನೋಟಕ್ಕೆ ಕಾಣಿಸುತ್ತದೆ. ಇಂಥ ಘಟನೆಗಳಿಂದ ಸಂಸ್ಥೆಯ ಹೆಸರು ಕುಲಗೆಡುವ ಸಾಧ್ಯತೆಯೂ ಇರುತ್ತದೆ.

ಕೊನೆಯದಾಗಿ, ಯಾವ ಕಾರಣಕ್ಕೂ ಪ್ರಯಾಣಿಕ ತನ್ನ ಜವಾಬ್ದಾರಿಯನ್ನು ಮರೆಯಬಾರದು, ಅಸಭ್ಯವಾಗಿ ವರ್ತಿಸಬಾರದು. ಅದರಲ್ಲೂ ಆಕಾಶದಲ್ಲಿ ಇಂಥ ಘಟನೆ ನಡೆದರೆ ವಿಮಾನಯಾನದಲ್ಲಿ ಮಾನ ಹಾನಿಯಾಗುವುದಕ್ಕೆ ಎಷ್ಟು ಹೊತ್ತೂ ಬೇಡ. ಅದು ರಾಷ್ಟ್ರೀಯ, ಕೆಲವೊಮ್ಮೆ ಅಂತಾರಾಷ್ಟ್ರೀಯ ಸುದ್ದಿಯೂ ಆಗುತ್ತದೆ. ಇದು ವಿಮಾನ ಪ್ರಯಾಣಕ್ಕೆ ಮಾತ್ರ ಸೀಮಿತವಲ್ಲ. ಯಾವ ಪ್ರಯಾಣವಾದರೂ ಸರಿ, ಸುರಕ್ಷತೆಯ ಜತೆ ಪ್ರಯಾಣ ಸುಖಕರವೂ ಆಗಿರಬೇಕು. ಪ್ರಯಾಣದಲ್ಲಿ ನಮ್ಮ ಸುರಕ್ಷತೆ ವಾಹನ ನಡೆಸುವವನ ಕೈಯಲ್ಲಿದ್ದರೆ, ನಮ್ಮ ಸುಖ ಸಹಪ್ರಯಾಣಿಕರನ್ನು ಅವಲಂಬಿಸಿರುತ್ತದೆ.

ದೇಶಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ನೀಡಿದ ಅತಿದೊಡ್ಡ ಗಿಫ್ಟ್ ಇದು!

'ಮೈಕ್ರೋ ಯುನಿಟ್ಸ್ ಡೆವಲಪ್‌ಮೆಂಟ್ ಆ್ಯಂಡ್ ರೀಫೈನಾನ್ಸ್ ಏಜೆನ್ಸಿ' ಎಂದು ಹೇಳಿದರೆ ಎಲ್ಲರಿಗೂ ಅರ್ಥವಾಗಲಿಕ್ಕಿಲ್ಲ. 'ಮುದ್ರಾ' ಅಂದರೆ ಎಲ್ಲರಿಗೂ ತಿಳಿಯುತ್ತದೆ. ದಶಕದ ಹಿಂದೆ ಜಾರಿಗೆ ಬಂದ 'ಮುದ್ರಾ' ಯೋಜನೆ ಇಂದು ಸಾಕಷ್ಟು ಬಡವರಿಗೆ ಸಬಲೀಕರಣದ ಅಸ್ತ್ರವಾಗಿದೆ. ಅನೇಕರ ಹಸಿವನ್ನು ಇದು ನಿವಾರಿಸಿದೆ. ಬಹುಶಃ ಇದು ಸದ್ದಿಲ್ಲದೆ ಈ ದೇಶದಲ್ಲಿ ಉಂಟಾದ ಬಹುದೊಡ್ಡ ಆರ್ಥಿಕ ಕ್ರಾಂತಿ.



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಮಾಧ್ಯಮಗಳು ಇಂದು ಮಿಡ್ಲ್‌ಕ್ಲಾಸ್ ಆಗಿವೆ. ಅವು ಎಲ್ಲಿ ಆತ್ಮಾಭಿಮಾನವನ್ನು ಬಡಿದೆಬ್ಬಿಸುವ ಕೆಲಸ ಮಾಡಿರಲಿಲ್ಲವೋ ಅಲ್ಲಿ ಈ ಮಾತು ಸ್ವಲ್ಪ ತಮಾಷೆಯಾಗಿ ಕಾಣಬಹುದು. ಮುದ್ರಣ ಮಾಧ್ಯಮ ಇಂದಿಗೂ ತನ್ನ ಮೇಲ್ಮಧ್ಯಮ ವರ್ಗದ ಪ್ರಜ್ಞೆಯನ್ನು ಹಾಗೇ ಉಳಿಸಿಕೊಂಡಿದೆ. ಆದರೂ 'ಖಾದಿ-ರಾಷ್ಟ್ರೀಯವಾದ' ಒಂದು ಸಮಯದಲ್ಲಿ ಅತ್ಯುನ್ನತ ರಾಷ್ಟ್ರೀಯವಾದ ಎಂಬ ಮಟ್ಟವನ್ನು ತಲುಪಿತ್ತಲ್ಲವೇ, ಆ ಮಟ್ಟಕ್ಕಿಂತ ಮುದ್ರಣ ಮಾಧ್ಯಮ ಒಂದೆರಡು ಏಣಿ ಮೆಟ್ಟಿಲಿನಷ್ಟು ಕೆಳಗೇ ಇದೆ. ಎಲ್ಲಾ ವಾದಕ್ಕೂ ಅಪಸ್ವರಗಳು ಇದ್ದೇ ಇರುತ್ತವೆ ಬಿಡಿ. ನನ್ನ ವಾದವನ್ನೂ ಕೆಲವರು ಒಪ್ಪದೆ ಇರಬಹುದು. ಆದರೆ, ಮಾಧ್ಯಮದ ಆತ್ಮಸಾಕ್ಷಿಯಲ್ಲಿ ಈ ವ್ಯವಸ್ಥೆ ಹದವಾಗಿ ಮಿಳಿತಗೊಳ್ಳಲು ಯಾವಾಗ ಆರಂಭವಾಯಿತೋ ಆ ಕ್ಷಣವನ್ನು ನಾವು ಗಮನಿಸಬೇಕು. ಮದನ ಮೋಹನ ಮಾಳವೀಯ ಅವರು ಪತ್ರಿಕೆಯನ್ನು ಖರೀದಿಸಿದ ಸಮಯದಿಂದ ಇದು ಆರಂಭವಾಗುತ್ತದೆ. ಬಳಿಕ ಜಿ.ಡಿ.ಬಿರ್ಲಾ ಅವರು ಆ ಪತ್ರಿಕೆಗೆ ಆರ್ಥಿಕ ಶಕ್ತಿ ನೀಡಬೇಕಾಯಿತು. ಪತ್ರಿಕೆಯ ರಾಷ್ಟ್ರೀಯವಾದಿ ಪ್ರಜ್ಞೆಯ ಜತೆಗೆ ಯಾವುದೇ ರಾಜಿ ಮಾಡಿಕೊಳ್ಳದೆ ಅವರು ಪ್ರಸರಣ ಮತ್ತು ಆರ್ಥಿಕ ಆರೋಗ್ಯವನ್ನು ಹೆಚ್ಚಿಸಲು ನೆರವಾದರು. ಐತಿಹಾಸಿಕ ಅಕಾಲಿ ಚಳವಳಿ ಆಗಷ್ಟೇ ಹುಟ್ಟಿದ್ದ ಕಾಲವದು. ಪತ್ರಿಕೆಯ ಸಂಪಾದಕ ಕೆ.ಎಂ.ಪಣಿಕ್ಕರ್ ಆಗ ನಿರ್ವಹಿಸಿದ ಅದ್ಭುತವಾದ ಪಾತ್ರವನ್ನು ಯಾರಾದರೂ ಮರೆಯಲು ಸಾಧ್ಯವೇ? ಮರುಹುಟ್ಟು ಪಡೆದ ಪತ್ರಿಕೆಯನ್ನು 1924ರ ಸೆಪ್ಟೆಂಬರ್ 26ರಂದು ಮಹಾತ್ಮ ಗಾಂಧೀಜಿ ಉದ್ಘಾಟಿಸಿದ್ದರು. ಪಣಿಕ್ಕರ್ ಮತ್ತು ದೇವದಾಸ ಗಾಂಧಿಯವರು ಪತ್ರಿಕೆಯ ಮೂಲಕ ಕೇವಲ ಬ್ರಿಟಿಷರಿಗೆ ಮಾತ್ರ ಸವಾಲೆಸೆಯಲಿಲ್ಲ, ಜತೆಗೆ ಕಲ್ಕತ್ತಾದಲ್ಲಿ ಬ್ರಿಟಿಷ್ ಮೂಲದ ಸ್ಟೇಟ್ಸ್‌ಮನ್ ಪತ್ರಿಕೆ ಹಾಗೂ ಮುಂಬೈನಲ್ಲಿನ 'ಬೆನೆಟ್ ಆ್ಯಂಡ್ ಕೋಲ್ಮನ್' ಸಂಸ್ಥೆಯ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗಳ ವಸಾಹತುಶಾಹಿ ಮೆರೆದಾಟಕ್ಕೂ ಸವಾಲೆಸೆದಿದ್ದರು.

ಶ್ರೀಮಂತಿಕೆಯ ಕಲ್ಪನೆ ಯಾವುದೇ ವಿಷಯ ಅಥವಾ ಕ್ಷೇತ್ರದಲ್ಲಾದರೂ ಇರಲಿ, ಅದಕ್ಕೊಂದು ವಿಶಿಷ್ಟ ಶಕ್ತಿಯಿರುತ್ತದೆ. ಅದು ತನ್ನ ಶ್ರೇಷ್ಠತೆಯನ್ನೂ ಮತ್ತು ಹಣದ ಮೂಲಕ ಗಳಿಸಿರುವ ಆತ್ಮವಿಶ್ವಾಸವನ್ನೂ ಸಣ್ಣದೊಂದು ಅಹಂಕಾರದ ಸ್ಪರ್ಶದ ಜತೆಗೇ ನೋಡುತ್ತದೆಯೇ ಹೊರತು ತಿರಸ್ಕಾರದಿಂದ ನೋಡುವುದಿಲ್ಲ. ತಿರಸ್ಕಾರವೆಂಬುದು ಒರಟು ನಡತೆ, ಅದು ಶ್ರೇಷ್ಠ ಗುಣವಲ್ಲ. ಮಾಧ್ಯಮಗಳಿಗಿರುವ ಈ ಶ್ರೇಷ್ಠತೆಯ ಅಹಂಕಾರದ ಬಗ್ಗೆ ಎಲ್ಲರಿಗೂ ಗೊತ್ತು. ಸ್ವಾತಂತ್ರ್ಯ ಬಂದ ನಂತರ ಹಲವು ದಶಕಗಳವರೆಗೆ ಮಾಧ್ಯಮಗಳು ಸಾರ್ವಜನಿಕ ನೀತಿ ನಿರೂಪಣೆಯ ಪ್ರಮುಖ ಅಂಗಗಳಲ್ಲಿ ತಾವೂ ಒಂದು ಎಂದು ಸರಿಯಾಗಿಯೇ ಬಿಂಬಿಸಿಕೊಂಡಿದ್ದವು. ಟೈಮ್ಸ್ ಆಫ್ ಇಂಡಿಯಾದ ಶಾಮ್ ಲಾಲ್ ಅಥವಾ ಗಿರಿಲಾಲ್ ಜೈನ್ ಅಥವಾ ದಿಲೀಪ್ ಪಡಗಾಂವ್ಕರ್ ಅವರನ್ನೇ ನೋಡಿ. ಅಥವಾ ಇಂಡಿಯನ್ ಎಕ್ಸ್‌ಪ್ರೆಸ್‌ನ ಅದ್ಭುತ ಸಂಪಾದಕ ಫ್ರಾಂಕ್ ಮೊರೇಸ್‌ರನ್ನು ನೋಡಿ. ಅದೂ ಬೇಡ ಅಂದರೆ ಸರ್ದಾರ್ ಖುಷ್ವಂತ್ ಸಿಂಗ್‌ರ ಹಲವು ಮಿದುಳುಗಳ ಒಂದು ಭಾಗವನ್ನು ನೋಡಿ! ಇವರಿಗೆ ಸರಿಸಮವಾಗಿ ಕಲ್ಕತ್ತಾದಲ್ಲಿ ಇವಾನ್ ಶಾರ್ಲ್ಟನ್, ಪ್ರಾಣ್ ಚೋಪ್ರಾ, ಸುರೇಂದ್ರ ನಿಹಾಲ್ ಸಿಂಗ್ ಇದ್ದರು. ಇವರ ಸಂಬಳ ಮೇಲ್ಮಧ್ಯಮ ವರ್ಗದ್ದಾಗಿದ್ದಿರಬಹುದು. ಆದರೆ ಚಿಂತನೆ ಅತ್ಯುನ್ನತ ಮಟ್ಟದ್ದಾಗಿತ್ತು.

ಶಾಮ್ ಲಾಲ್ ತಮ್ಮ ಬೌದ್ಧಿಕ ಅಡಗುದಾಣದಿಂದ ಹೊರಗೆ ಬಂದು ಏನನ್ನಾದರೂ ಹೇಳುವುದು ತೀರಾ ಸಣ್ಣತನವಾಗುತ್ತದೆ ಎಂದು ಭಾವಿಸಿದ್ದರೋ ಏನೋ. ಆದರೆ ಅವರ ಉತ್ತರಾಧಿಕಾರಿ ಫ್ರಾಂಕ್ ಮೊರೇಸ್‌ರಂಥ ಸಂಪಾದಕರು ತಳಮಟ್ಟದ ವಾಸ್ತವಗಳನ್ನು ಸ್ವತಃ ಗಮನಿಸಿ, ಅದನ್ನು ಸೂಕ್ಷ್ಮವಾದ ಭಾಷೆಯಲ್ಲಿ ಸರಕಾರದ ಗಮನಕ್ಕೆ ತರುವುದು ಮಾಧ್ಯಮಗಳ ಕರ್ತವ್ಯವೆಂದೇ ನಂಬಿದ್ದರು. ಉದಾಹರಣೆಗೆ, ಪೊಲೀಸರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಥವಾ ಟ್ರಾಫಿಕ್ ಲೈಟ್‌ಗಳು ಕೆಟ್ಟುಹೋಗಿವೆ ಎಂಬಂಥ ನಾಗರಿಕ ದೂರುಗಳನ್ನು ಪತ್ರಿಕೆಗಳು ಸರಕಾರಕ್ಕೆ ತಲುಪಿಸಬೇಕು ಎಂಬುದು ಅವರ ನಿಲುವಾಗಿತ್ತು. ಹೀಗಾಗಿ ಅವರು ತಮ್ಮ ಮುಖ್ಯ ವರದಿಗಾರರನ್ನು ಟೈಪ್‌ರೈಟರ್ ಕಮಾಂಡೋಗಳ ಜತೆಗೆ ಗ್ರಾಮೀಣ ಪ್ರದೇಶಗಳಿಗೆ ಕಳುಹಿಸುತ್ತಿದ್ದರು. ದಿನಪತ್ರಿಕೆಗೆ ವರದಿ ಮಾಡುವುದು ಅಂದರೆ ಅದನ್ನು ಓದುವ ನಗರ ಪ್ರದೇಶದ ಇಂಗ್ಲಿಷ್ ಜನರ ಬದುಕು-ಬವಣೆಯನ್ನು ಮಾತ್ರ ವರದಿ ಮಾಡುವುದಲ್ಲ, ಭಾರತ ಎಂಬ ಜಗತ್ತನ್ನು ಹಳ್ಳಿಗಳಿಗೆ ಹೋಗಿ ಶೋಧಿಸಿ ಎಲ್ಲರೆದುರು ತೆರೆದಿಡಬೇಕು ಎಂದು ಅವರು ಭಾವಿಸಿದ್ದರು.

ಅವರೆಲ್ಲರೂ ಬಹಳ ಆತ್ಮವಿಶ್ವಾಸ ಹೊಂದಿದ್ದ ಬುದ್ಧಿಜೀವಿಗಳಾಗಿದ್ದರು. ಟೈಮ್ಸ್ ಆಫ್ ಇಂಡಿಯಾ ಕಚೇರಿಯಲ್ಲಿ ನೀಡಿದ್ದ ಸಣ್ಣದೊಂದು ಕ್ಯೂಬಿಕಲ್‌ಗೆ ಅವರು ತೃಪ್ತರಾಗಿದ್ದರು. ಅದೊಂಥರಾ ಜೈಲು ಕೋಣೆಯಂತಿತ್ತು. ಯಾವುದೇ ರೀತಿಯಲ್ಲೂ ಕಚೇರಿಯ ಥರ ಕಾಣಿಸುತ್ತಿರಲಿಲ್ಲ. ಆದರೆ ಅಲ್ಲಿ ಕೆಲಸ ಮಾಡುವವರು ಮಾಧ್ಯಮ ಸನ್ಯಾಸಿಗಳಾದ್ದರಿಂದ ಅವರು ಅದಕ್ಕೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅವರು ತಮ್ಮ ಪ್ರತಿಷ್ಠೆಯನ್ನು ಇನ್ನೂ ದೊಡ್ಡ ಕಾರಣಗಳಿಗೆ ಮೀಸಲಾಗಿಟ್ಟುಕೊಂಡಿದ್ದರು.

ಆದರೆ ಸ್ಟೇಟ್ಸ್‌ಮನ್ ಕಚೇರಿ ಸ್ವಲ್ಪ ದೊಡ್ಡದಾಗಿತ್ತು. ನೋಡುವುದಕ್ಕೆ ಅದ್ದೂರಿಯಾಗೂ ಇತ್ತು. ಅಲ್ಲಿದ್ದವರ ಆತ್ಮವಿಶ್ವಾಸ ಕೂಡ ಟೈಮ್ಸ್ ಆಫ್ ಇಂಡಿಯಾದವರಿಗೆ ಸಮನಾಗಿತ್ತು. ಈ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸಂಪಾದಕೀಯಗಳು ಬೆಂಕಿ ಉಗುಳುತ್ತಿದ್ದವು. ಏಕೆಂದರೆ ಜನರು ಅವುಗಳನ್ನು ಓದುತ್ತಿದ್ದರು. ಜಾಹೀರಾತಿಗೆ ಯಾವಾಗಲೂ ಅದರದೇ ಆದ ಜಾಗವಿತ್ತು. ಪತ್ರಿಕೆಗೆ ಅವು ಅನಿವಾರ್ಯ. ಆದರೆ, ಜಾಹೀರಾತನ್ನು ಯಾವತ್ತೂ ಸುದ್ದಿಯಂತೆ ಬಿಂಬಿಸುತ್ತಿರಲಿಲ್ಲ.

ಇವತ್ತಿನ ಮಿಡ್ಲ್-ಕ್ಲಾಸ್ ಮನಸ್ಥಿತಿಯ ಸಮಸ್ಯೆ ಏನೆಂದರೆ, ಈ ವ್ಯವಸ್ಥೆ ಯಾವಾಗಲೂ ಮೇಲೇ ನೋಡುತ್ತಿರುತ್ತದೆ. ಕೆಳಗೆ ನೋಡಬೇಕು ಅಂದಾಗ ಪೂರ್ವಗ್ರಹಪೀಡಿತವಾಗಿ ನೋಡುತ್ತದೆ. ಮೇಲೆ ನೋಡುವಾಗ ನಿರಾಸಕ್ತಿ. ಕೆಳಗೆ ನೋಡುವಾಗ ತಿರಸ್ಕಾರ. ಮಾಧ್ಯಮಗಳಲ್ಲಿ ಇಂದು ಎಲ್ಲದಕ್ಕೂ ತಮ್ಮದೇ ಆದ ತೀರ್ಪು ನೀಡುವ ಚಟ ಯಾವ ಮಟ್ಟಿಗೆ ಹಾಸುಹೊಕ್ಕಾಗಿದೆ ಅಂದರೆ, ಅದನ್ನು ನೋಡಿ ಸುಪ್ರೀಂಕೋರ್ಟ್ ಕೂಡ ನಾಚಬೇಕು. ಈ ಮೀಡಿಯಾ ನ್ಯಾಯಾಧೀಶರು ತಮ್ಮ ಘೋಷಿತ ಓದುಗರ ಸಂಖ್ಯೆಯಲ್ಲೇ ಎಷ್ಟು ವ್ಯಸ್ತರಾಗಿದ್ದಾರೆ ಅಂದರೆ, ಬಡವರ ಬಡತನವನ್ನು ಪರೋಕ್ಷವಾಗಿ ಖಂಡಿಸುವುದಕ್ಕೂ ಮುನ್ನ ಒಂದಷ್ಟು ಸಾಕ್ಷ್ಯ ಹುಡುಕುವುದಕ್ಕೆ ಸಮಯ ಖರ್ಚುಮಾಡಲು ಇವರು ತಯಾರಿಲ್ಲ. ಬಡವರು ಪತ್ರಿಕೆಗಳನ್ನು ಓದುವ ವರ್ಗ ಅಲ್ಲದ ಕಾರಣ ಆ ವರ್ಗದಿಂದ ಜಾಹೀರಾತು ಕೂಡ ಹುಟ್ಟುವುದಿಲ್ಲ ಮತ್ತು ಜಾಹೀರಾತು ನೀಡುವವರಿಗೆ ಬಡವರು ದೊಡ್ಡ ಗ್ರಾಹಕರೂ ಅಲ್ಲ. ಹೀಗಾಗಿ ಬಡವರು ಸುದ್ದಿಯಾಗುವುದಕ್ಕೆ ಅರ್ಹರಲ್ಲ. ಅವರು ಸುದ್ದಿಯಾಗಬೇಕು ಅಂದರೆ ಅವರಲ್ಲೇನಾದರೂ ರೋಚಕತೆ ಇರಬೇಕು. ಬಡವರು ಭೂಕಂಪದಲ್ಲಿ ಸತ್ತರೆ ಆಗ ಟಿವಿ ನ್ಯೂಸ್ ಚಾನಲ್ಲುಗಳು ಕ್ಯಾಮೆರಾ ಹಿಡಿದು ಓಡುತ್ತವೆ. ಕೊಲೆಯಾದರೆ ಒಳ್ಳೆಯದು. ಸಾಮೂಹಿಕ ಕೊಲೆಯಾದರೆ ಇನ್ನೂ ಒಳ್ಳೆಯದು. ಇದರಲ್ಲಿ ವರದಿಗಾರಿಕೆ ಎಂಬುದಿಲ್ಲ. ಇಲ್ಲಿರುವುದು ಬೇಟೆ. ಹಸಿವು ಯಾವತ್ತೂ ಸುದ್ದಿಯಲ್ಲ. ಏಕೆಂದರೆ ಅದರ ಚಿತ್ರಣವು ಹಣ ಗಳಿಸುವುದಕ್ಕೆ ಪೂರಕವಾದ ಪರಿಸರವನ್ನು ಕೆಡಿಸುತ್ತದೆ.

ಇಷ್ಟೆಲ್ಲ ಯಾಕೆ ಹೇಳಬೇಕಾಯಿತು ಅಂದರೆ, 21ನೇ ಶತಮಾನದ ಅದ್ಭುತ ಯೋಜನೆಗಳಲ್ಲಿ ಒಂದಾದ 'ಮುದ್ರಾ' ಯೋಜನೆಯ 10ನೇ ವರ್ಷಾಚರಣೆಗೆ ಮಾಧ್ಯಮಗಳು ತೋರಿಸಿದ ಅಸೀಮ ಅನಾದರವನ್ನು ನೋಡಿ ಬೇಸರವಾಯಿತು. ರೋಚಕತೆ ಇಲ್ಲದಿದ್ದರೆ ಮಾಧ್ಯಮಗಳಿಗೆ ಅದು ಸುದ್ದಿಯೇ ಅಲ್ಲ ಎನ್ನುವುದಕ್ಕೆ ಇದಕ್ಕಿಂತ ಒಳ್ಳೆ ಉದಾಹರಣೆ ಬೇಕೆ? 'ಮೈಕ್ರೋ ಯುನಿಟ್ಸ್ ಡೆವಲಪ್‌ಮೆಂಟ್ ಆ್ಯಂಡ್ ರೀಫೈನಾನ್ಸ್ ಏಜೆನ್ಸಿ' ಎಂದು ಹೇಳಿದರೆ ಎಲ್ಲರಿಗೂ ಅರ್ಥವಾಗಲಿಕ್ಕಿಲ್ಲ, 'ಮುದ್ರಾ' ಅಂದರೆ ಎಲ್ಲರಿಗೂ ತಿಳಿಯುತ್ತದೆ. ಆಧುನಿಕ ಭಾರತದ ಅತಿದೊಡ್ಡ ಸಾಧನೆಗಳಲ್ಲಿ ಇದೂ ಒಂದು. ಹಸಿವು ಮತ್ತು ಬಡತನವೆಂಬ ಶಾಪಗಳನ್ನು ನಿವಾರಿಸಲು 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ'ಯ ರೀತಿಯಲ್ಲೇ ಈ ಬೃಹತ್ ಯೋಜನೆಯನ್ನು ಕೇಂದ್ರ ಸರಕಾರ ಜಾರಿಗೆ ತಂದಿದೆ. ದೇಶದ ಇತಿಹಾಸದಲ್ಲಿ ದಾಖಲಾಗುವಂಥ ಕಾರ್ಯಕ್ರಮವಿದು. ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರ ನಡೆಸಿದ ಅವಧಿಯ ಬಗ್ಗೆ ಇತಿಹಾಸವನ್ನು ಬರೆದರೆ (ಮೋದಿಯವರ ಜೀವನಚರಿತ್ರೆ ಅಲ್ಲ) ಈ ದೇಶಕ್ಕೆ ಅವರು ನೀಡಿದ ಬಹುದೊಡ್ಡ ಕೊಡುಗೆ ಮುದ್ರಾ ಯೋಜನೆ ಎಂದು ಬರೆಯಬೇಕಾಗುತ್ತದೆ.

1947ರ ಬಳಿಕ ಏಳು ದಶಕಗಳ ಕಾಲ ನಾವು ಬಡತನವನ್ನು ಕೇವಲ ಅಂಕಿ-ಅಂಶಗಳಲ್ಲೇ ಅಳೆಯುತ್ತಿದ್ದೆವು. ಅರ್ಥಶಾಸ್ತ್ರಜ್ಞರಿಗೆ ನೀತಿ ರಚನೆಯಲ್ಲಿ ಮತ್ತು ಬಡವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಯೋಜನೆಗಳನ್ನು ರೂಪಿಸುವಲ್ಲಿ ಈ ಅಂಕಿ-ಅಂಶಗಳು ನೆರವಿಗೆ ಬರುತ್ತಿದ್ದವು. ಅರ್ಥಶಾಸ್ತ್ರಜ್ಞರೆಂದು ಹೇಳಿಕೊಳ್ಳುವ ಅಧಿಕಾರಿಗಳು ತಮ್ಮ ನಿರ್ಧಾರಗಳನ್ನು ರಾಜಕೀಯ ಅನಕ್ಷರಸ್ಥರಂತೆ ಕೇವಲ ನಂಬರ್‌ಗಳಲ್ಲಿ ಕೈಗೊಳ್ಳುತ್ತಿದ್ದರು. ದೇಶದಲ್ಲಿ ಬಡತನದ ಪ್ರಮಾಣ ಶೇ.35ರಿಂದ ಶೇ.30ಕ್ಕೆ ಇಳಿದಿದೆ ಎಂದು ಯಾವುದಾದರೂ ವರದಿಯೊಂದು ಪ್ರತ್ಯಕ್ಷವಾದರೆ ಅದಕ್ಕೆ ತಮ್ಮನ್ನು ತಾವೇ ಹೊಗಳಿಕೊಳ್ಳುವುದೇನು.. ಪದ್ಮಶ್ರೀ ಪ್ರಶಸ್ತಿ ಕೊಟ್ಟುಕೊಂಡು ಸ್ವತಃ ಅಭಿನಂದಿಸಿಕೊಳ್ಳುವುದೇನು..! ಸರಕಾರಿ 'ಭವನ'ಗಳೆಂಬ ಸುರಕ್ಷಿತ ಪ್ರದೇಶಗಳಲ್ಲಿ ಯಾರೂ ಮನುಷ್ಯನ ಮುಖವನ್ನು ದಿಟ್ಟಿಸಿ ನೋಡುತ್ತಲೇ ಇರಲಿಲ್ಲ. ಶತಕೋಟಿ ಭಾರತೀಯರಲ್ಲಿ ಶೇ.30 ಅಂದರೆ 30 ಕೋಟಿ ಮನುಷ್ಯರು ಎಂದು ಯಾರೂ ಯೋಚಿಸುತ್ತಿರಲಿಲ್ಲ. ಈ 30 ಕೋಟಿ ಮನುಷ್ಯರು ಪ್ರತಿದಿನ ಎರಡನೇ ಊಟ ಯಾವಾಗ ಎಂದು ಕಾಯುತ್ತಾ, ಜೀವ ಹಿಡಿದುಕೊಂಡು ಬದುಕುವುದು ಹೇಗೆಂದು ಚಿಂತಿಸುತ್ತಾ, ರೋಗರುಜಿನಗಳಿಂದ ಬೇಗ ಸಾಯುತ್ತಾ, ಅಪೌಷ್ಟಿಕತೆಯಿಂದ ಬಳಲುತ್ತಾ ಬದುಕುವ ನತದೃಷ್ಟರಾಗಿದ್ದರು. ಈ ಕ್ರೌರ್ಯವನ್ನು ಪರಿಣಾಮಕಾರಿಯಾಗಿ ಹೇಳುವ ಪ್ರತ್ಯೇಕ ಪದಗಳು ಇರಬೇಕು ಎಂದೂ ಇವರ ರಾಜಕೀಯ ನಾಯಕರಿಗೆ ಅನ್ನಿಸಲಿಲ್ಲ, ಅಸಾಧ್ಯ ಹಸಿವಿನಿಂದ ಮಕ್ಕಳು ಬಳಲಿ ಬಳಲಿ ಸಾಯುವುದಕ್ಕೆ ಕೇವಲ ಸಾವು ಎಂದು ಕರೆದರೆ ಅದೆಂಥಾ ಅಸೂಕ್ಷ್ಮ ಪದವಾಗುತ್ತದೆಯಲ್ಲವೆ?

ಹಸಿವಿನ ನಿಜವಾದ ಅರ್ಥವನ್ನು ಅರಿತುಕೊಳ್ಳಲು ಸ್ವತಃ ಹಸಿವಿನಿಂದ ಬಳಲಿ ಬೆಳೆದ ಪ್ರಧಾನಿಯೇ ಬರಬೇಕಾಯಿತು.

2015ರ ಏಪ್ರಿಲ್ 8ರಂದು ಜಾರಿಗೆ ಬಂದ ಮುದ್ರಾ ಯೋಜನೆ ಯಾವುದೇ ರೀತಿಯಲ್ಲೂ ಅವಸರದ ಯೋಜನೆ ಆಗಿರಲಿಲ್ಲ. ಅದು ಎಲ್ಲರಿಗೂ ಕೈಗೆಟಕುವ ರೀತಿಯಲ್ಲಿ ವಿನ್ಯಾಸಗೊಂಡ ಸಬಲೀಕರಣದ ಯೋಜನೆಯಾಗಿತ್ತು. ಇದರ ವಿಶೇಷವೆಂದರೆ, ಯೋಜನೆಯ ಫಲಾನುಭವಿಯ ಮೇಲೇ ಯಶಸ್ಸಿನ ಜವಾಬ್ದಾರಿಯೂ ಇರುತ್ತಿತ್ತು. ಹಣ ಕೊಟ್ಟು, ಗೆಲ್ಲಿಸಿಯೂಕೊಡುವ ಜವಾಬ್ದಾರಿ ಯಾವುದೇ ಸರಕಾರಿ ಏಜೆನ್ಸಿಯ ಮೇಲೆ ಇರುತ್ತಿರಲಿಲ್ಲ. ಸರಕಾರಕ್ಕೆ ಇದರಿಂದ ಆರ್ಥಿಕ ಹೊರೆಯೂ ಇರಲಿಲ್ಲ. ಏಕೆಂದರೆ ಸಾಲ ತೆಗೆದುಕೊಂಡವರು ಅದನ್ನು ಅನಿವಾರ್ಯವಾಗಿ ಮರುಪಾವತಿ ಮಾಡಲೇಬೇಕಿತ್ತು. ಬಡವರಿಗೆ ಆದ ದೊಡ್ಡ ಅನುಕೂಲ ಏನೆಂದರೆ, ಬ್ಯಾಂಕಿಗೆ ಯಾವುದೇ ರೀತಿಯ ಖಾತ್ರಿ ನೀಡುವ ತಲೆನೋವು ಇಲ್ಲದೆಯೇ ಅವರಿಗೆ ಸುಲಭವಾಗಿ ಸಾಲ ಸಿಗುತ್ತಿತ್ತು. ಈ ಯೋಜನೆಯಡಿ ಆರ್ಥಿಕ ಅನುಕೂಲ ಬಡವರಿಗಾಯಿತೇ ಹೊರತು ದಪ್ಪ ಹೊಟ್ಟೆಯ ಶ್ರೀಮಂತರಿಗಾಗಲೀ ಅಥವಾ ಮಧ್ಯಮ ವರ್ಗದವರಿಗಾಗಲೀ ಅಲ್ಲ. ಮುದ್ರಾ ಯೋಜನೆಯಡಿ ಸಾಲವು ತರಕಾರಿ ಮಾರುವ ಹೆಂಗಸರಿಗೆ ಸಿಕ್ಕಿತು. ತಳ್ಳುವ ಗಾಡಿಯಲ್ಲಿ ಹಣ್ಣು ಮಾರುವ ಬಡವನಿಗೆ ಸಾಲ ಸಿಕ್ಕಿತು. ಈ ಯೋಜನೆಯ ಶೇ.68ರಷ್ಟು ಫಲಾನುಭವಿಗಳು ಮಹಿಳೆಯರು. ಬೇರೆಲ್ಲಕ್ಕಿಂತ ಇದೊಂದು ಸಂಗತಿಯೇ ಸಾಕು ಈ ಯೋಜನೆ ಅದ್ಭುತ ಯಶಸ್ಸು ಕಂಡಿದೆ ಎಂದು ಹೇಳುವುದಕ್ಕೆ. ಏಕೆಂದರೆ ಮಹಿಳೆಯರು ಪುರುಷರಿಗಿಂತ ಹೆಚ್ಚು ಉದ್ಯಮಶೀಲರು, ಹೆಚ್ಚು ಪ್ರಾಮಾಣಿಕರು ಮತ್ತು ಹೆಚ್ಚು ಜವಾಬ್ದಾರಿವಂತರು. ಆರ್ಥಿಕ ಸಬಲೀಕರಣದ ಜತೆಗೇ ಇದು ಮಹಿಳೆಯರಿಗೆ ಗೌರವವನ್ನೂ, ಆತ್ಮಾಭಿಮಾನವನ್ನೂ ತಂದುಕೊಟ್ಟಿತು. ಕಳೆದ 10 ವರ್ಷಗಳಲ್ಲಿ ಮುದ್ರಾ ಯೋಜನೆಯಡಿ 52 ಕೋಟಿ ಮಂದಿಗೆ ಸಾಲ ನೀಡಲಾಗಿದೆ. ಅಂದರೆ, ಅಂದಾಜು 30 ಕೋಟಿ ಮಹಿಳೆಯರು ಈ ಯೋಜನೆಯಿಂದಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಅರ್ಧಕ್ಕರ್ಧ ಮುದ್ರಾ ಸಾಲ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ವಿತರಣೆಯಾಗಿದೆ. ಶೇ.11ರಷ್ಟು ಫಲಾನುಭವಿಗಳು ಅಲ್ಪಸಂಖ್ಯಾತರಾಗಿದ್ದಾರೆ. ಇದು ಆರ್ಥಿಕ ಒಳಗೊಳ್ಳುವಿಕೆ ಅಲ್ಲ ಅಂತಾದರೆ ಇನ್ನು ಯಾವುದು ಎಂದು ನಾನು ಕೇಳಬೇಕಾಗುತ್ತದೆ. ಮುದ್ರಾ ಯೋಜನೆಯ ಲಾಭವನ್ನು ಅದ್ಭುತವಾಗಿ ಪಡೆದುಕೊಂಡ ಒಂದು ರಾಜ್ಯವೆಂದರೆ ಜಮ್ಮು ಮತ್ತು ಕಾಶ್ಮೀರ. ಕಳೆದ ದಶಕದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಉಂಟಾದ ದೊಡ್ಡ ಪ್ರಮಾಣದ ಆರ್ಥಿಕ ಬದಲಾವಣೆಯ ಹಿಂದೆ ಮುದ್ರಾ ಯೋಜನೆಯ ಪಾತ್ರ ಗಣನೀಯವಾಗಿದೆ. ಒಟ್ಟಾರೆ ದೇಶದಲ್ಲಿ 33 ಲಕ್ಷ ಕೋಟಿ ರೂ. ಮುದ್ರಾ ಸಾಲ ವಿತರಣೆ ಮಾಡಲಾಗಿದೆ. ಅದಕ್ಕೆ ಯಾರಿಂದಲೂ ನಿರ್ವಹಣಾ ಶುಲ್ಕ ಪಡೆದಿಲ್ಲ. ಯಾರೂ ಈ ಸಾಲಕ್ಕೆ ಖಾತ್ರಿ ನೀಡಿಲ್ಲ. ಆದರೆ ಎಲ್ಲರೂ ಮರುಪಾವತಿಯ ಮಾತನ್ನು ಉಳಿಸಿಕೊಂಡಿದ್ದಾರೆ.

ಹಾಗಿದ್ದರೆ, ಬಡವರಿಗೆ ಅನಿವಾರ್ಯವಾಗಿ ಸಾಲ ನೀಡಬೇಕಾಗಿ ಬಂದ ಕಾರಣ ಬ್ಯಾಂಕುಗಳೆಲ್ಲ ನಷ್ಟ ಅನುಭವಿಸಿರಬೇಕಲ್ಲ? ಖಂಡಿತ ಇಲ್ಲ. ಅಂಕಿ-ಅಂಶಗಳಲ್ಲೇ ಹೊರಳಾಡಿ ಸಾಯುವ ಕೆಲ ಸೋಕಾಲ್ಡ್ ಅರ್ಥಶಾಸ್ತ್ರಜ್ಞರಿಗೆ ಇದೇ ದೊಡ್ಡ ಶಾಕ್. ಸಾಮಾನ್ಯವಾಗಿ ಬ್ಯಾಂಕುಗಳು ದೊಡ್ಡ ಹೊಟ್ಟೆಯವರಿಗೇ ಸಾಲ ಕೊಟ್ಟು ಆ ಹೊಟ್ಟೆಯನ್ನು ಇನ್ನಷ್ಟು ದಪ್ಪ ಮಾಡುತ್ತವೆ. ಆದರೆ ಮುದ್ರಾ ಯೋಜನೆಯಡಿ ಬೇರೆ ವಿಧಿಯಿಲ್ಲದೆ ಬ್ಯಾಂಕುಗಳು ಬಡವರಿಗೆ ಸಾಲ ನೀಡಿವೆ. ಅದರಿಂದ ದೇಶದ ಆರ್ಥಿಕತೆಯೂ ಕುಸಿದಿಲ್ಲ, ಬ್ಯಾಂಕುಗಳಿಗೂ ನಷ್ಟವಾಗಿಲ್ಲ. 2015ರಲ್ಲಿ ಬಡವರಿಗಾಗಿ ಈ ಯೋಜನೆ ಜಾರಿಗೆ ತಂದಾಗ ಕಾಂಗ್ರೆಸ್ಸಿಗರು ಮಾಧ್ಯಮಗಳ ಮುಂದೆ ಬಂದು ಆಘಾತದಿಂದ ಕಿರುಚಿಕೊಂಡಿದ್ದು ನನಗಿನ್ನೂ ನೆನಪಿದೆ. ಭಾರತದ ಆರ್ಥಿಕತೆಗೆ ಮುದ್ರಾ ಯೋಜನೆ ಮರಣಶಾಸನ ಇದ್ದಂತೆ ಎಂದು ಅವರು ಚೀರಾಡಿದ್ದರು. ಈಗ ಹತ್ತು ವರ್ಷಗಳ ಬಳಿಕ ಅವರ ದಿವ್ಯಮೌನವನ್ನೂ ನಾನು ನೋಡುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಇರುವ ಅನೇಕ ಸೌಕರ್ಯಗಳಲ್ಲಿ ಪ್ರಧಾನಿಯನ್ನು ಮೆಚ್ಚದೆ ಇರುವ ಮೂಲಭೂತ ಹಕ್ಕು ಕೂಡ ಒಂದು. ನಿಮಗೆ ಅದೇ ಇಷ್ಟವಾದರೆ ಅದನ್ನೇ ಮಾಡಿ. ಮೋದಿಯನ್ನು ನೀವು ಇಷ್ಟಪಡಲೇಬೇಕು ಎಂದು ಹೇಳಿದವರು ಯಾರು? ಆದರೆ, ದೇಶಕ್ಕಂಟಿದ ಐತಿಹಾಸಿಕ ಶಾಪವಾದ ಬಡತನವನ್ನು ನಿರ್ಮೂಲನೆ ಮಾಡಲು ಬ್ಯಾಂಕಿಂಗ್ ವ್ಯವಸ್ಥೆಯನ್ನು ಇಷ್ಟೊಂದು ಚಾಣಾಕ್ಷತೆಯಿಂದ ಬಳಸಿಕೊಂಡ ಸರಕಾರದ ನೀತಿಯನ್ನು ಹೀಗಳೆಯಲು ನಿಮಗೆ ಯಾವ ಹಕ್ಕೂ ಇಲ್ಲ.

ಬಡತನ ನಿರ್ಮೂಲನೆಯ ಉದ್ದೇಶವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು 'ಪಿಎಂ ಗರೀಬ್ ಕಲ್ಯಾಣ ಅನ್ನ ಯೋಜನೆ'ಯಿದೆ. 2022-23ರ ಬಜೆಟ್‌ನಲ್ಲಿ ದೇಶದ ಪ್ರತಿಯೊಬ್ಬರಿಗೂ ಐದು ಕೆ.ಜಿ. ಅಕ್ಕಿ ಮತ್ತು ಬೇಳೆ ನೀಡಲು 2 ಲಕ್ಷ ಕೋಟಿ ರೂ. ತೆಗೆದಿರಿಸಿದಾಗ ಎಲ್ಲಾ ಕೂಗುಮಾರಿಗಳ ಬಾಯಿಯೂ ಶಾಶ್ವತವಾಗಿ ಬಂದ್ ಆಯಿತು. ಹಸಿವು ನೀಗಿಸುವ ಈ ಯೋಜನೆಯೀಗ 80 ಕೋಟಿ ಭಾರತೀಯರನ್ನು ತಲುಪುತ್ತಿದೆ. ಇದು ಬಡವರನ್ನು ಖಾಲಿ ಹೊಟ್ಟೆಯಲ್ಲಿ ಮಲಗುವುದರಿಂದ ಪಾರು ಮಾಡಿದೆ. ಭಾರತಕ್ಕಂಟಿದ ಹಸಿವಿನ ಶಾಪವನ್ನೂ ಇದು ವಿಮೋಚನೆಗೊಳಿಸಿದೆ. ಬಹುಶಃ ಈ ಯೋಜನೆಯನ್ನು ಜಾರಿಗೊಳಿಸುವುದಕ್ಕೂ ಮುನ್ನ ಮೋದಿಯವರು ಯಾವುದೇ ಆರ್ಥಿಕ ತಜ್ಞನನ್ನಾಗಲೀ ಅಥವಾ ಸಂಖ್ಯಾಶಾಸ್ತ್ರಜ್ಞನನ್ನಾಗಲೀ ಕೇಳಿಲ್ಲ. ಕೇಳಿದ್ದರೆ ಇದು ಜಾರಿಗೇ ಬರುತ್ತಿರಲಿಲ್ಲ. ಹಿಂದಿನ ಸರಕಾರಕ್ಕೆ ಅರ್ಥಶಾಸ್ತ್ರಜ್ಞರು ದೇಶದಲ್ಲಿ ಬಡತನ ನಿರ್ಮೂಲನೆ ಮಾಡಬೇಕು ಅಂದರೆ ಪ್ರತಿಯೊಬ್ಬರೂ ದಿನಕ್ಕೆ 32 ರುಪಾಯಿ ದುಡಿಯುವಂತೆ ಮಾಡಬೇಕು ಎಂದು ಹೇಳಿದ್ದರು. ಇಂಥ ತಲೆಬುಡವಿಲ್ಲದ ಅಂಕಿ-ಅಂಶಗಳನ್ನು ನಂಬಿದ್ದರಿಂದಲೇ ನಂತರದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹಿಂದೆಂದೂ ಕಂಡಿರದ ಹೀನಾಯ ಸೋಲು ಕಂಡಿತು. ಆ ಸೋಲಿನಿಂದ ಇನ್ನೂ ಚೇತರಿಸಿಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಗುತ್ತಿಲ್ಲ.

ಈ ವಿಷಯದಲ್ಲಿ ನಾವು ತಮಿಳುನಾಡಿನ ಇತಿಹಾಸವನ್ನು ಕೃತಜ್ಞತೆಯಿಂದ ನೆನೆಯಬೇಕು. ಮಕ್ಕಳಲ್ಲಿರುವ ಅಪೌಷ್ಟಿಕತೆಯನ್ನು ದೂರ ಮಾಡಲು 1925ರಲ್ಲೇ ಅಲ್ಲಿ ಸೀಮಿತ ಪ್ರಮಾಣದಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಆರಂಭಿಸಲಾಗಿತ್ತು. 1962ರಲ್ಲಿ ಅದನ್ನು ಕಾಮರಾಜ್ ಇನ್ನಷ್ಟು ವಿಸ್ತರಿಸಿ, ಕೊನೆಗೆ 1982ರಲ್ಲಿ ಎಂ.ಜಿ.ರಾಮಚಂದ್ರನ್ ಸಾರ್ವತ್ರಿಕಗೊಳಿಸಿದ್ದರು. ಅವರಿಗೆ ಹಸಿವಿನ ನಿಜವಾದ ಅರ್ಥ ಗೊತ್ತಿತ್ತು. ಹೀಗೆ ದೇಶದ ಒಂದು ಭಾಗದಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಿ, ಹಸಿವನ್ನು ನೀಗಿಸಿದ ಯೋಜನೆಯನ್ನು ದೇಶಾದ್ಯಂತ ಇನ್ನೊಂದು ರೀತಿಯಲ್ಲಿ ಸಾರ್ವತ್ರಿಕವಾಗಿ ಜಾರಿಗೊಳಿಸಲು ಸಾಧ್ಯವಿದೆ ಎಂಬುದೇ 2022-23ರ ನರೇಂದ್ರ ಮೋದಿ ಬಜೆಟ್‌ವರೆಗೆ ಯಾರಿಗೂ ಗೊತ್ತಿರಲಿಲ್ಲ.

ಪ್ರಧಾನ ಮಂತ್ರಿ ಮುದ್ರಾ ಯೋಜನೆ ಏಕೆ ನಿಜಕ್ಕೂ ಬಹುದೊಡ್ಡ ಯಶಸ್ವಿ ಯೋಜನೆ ಗೊತ್ತಾ? ಯಾರನ್ನು ಒಳಗೊಳ್ಳಲು ಸಾಧ್ಯವೇ ಇಲ್ಲ ಎಂದು ಬ್ಯಾಂಕಿಂಗ್ ವ್ಯವಸ್ಥೆಯು ದೂರವಿರಿಸಿತ್ತೋ ಆ ವರ್ಗದವರಿಗೆ ಮುದ್ರಾ ಯೋಜನೆ ಕರೆದು ಕರೆದು ಸಾಲ ನೀಡಿತು. ಯೋಜನೆಯನ್ನು ಘೋಷಿಸಿದಾಗ ಮಾಧ್ಯಮಗಳು ಕೂಡ ಹುಚ್ಚೆದ್ದು ಕಿರುಚಾಡಿದ್ದವು. ಬೇಕಿದ್ದರೆ ಆಡಿಯೋ, ವಿಡಿಯೋ ದಾಖಲೆಗಳು ಸಿಗುತ್ತವೆ, ತೆಗೆದು ನೋಡಿ. ಎಲ್ಲವೂ ಇತಿಹಾಸದಲ್ಲಿ ದಾಖಲಾಗಿವೆ. ಅನುಕೂಲಕ್ಕೆ ತಕ್ಕಂತೆ ಸುಳ್ಳು ಹೇಳಿಕೊಂಡು ಪಾರಾಗುವ ಅವಕಾಶ ಈಗ ಯಾರಿಗೂ ಇಲ್ಲ. ಅದೇ ರೀತಿ, ಗರೀಬ್ ಕಲ್ಯಾಣ ಅನ್ನ ಯೋಜನೆಯು ಮೋದಿಯವರನ್ನು ಇತಿಹಾಸದ ಸುವರ್ಣ ಮೈಲುಗಲ್ಲಿನ ಮುಂದೆ ತಂದು ನಿಲ್ಲಿಸಲಿದೆ.

ಪ್ರಧಾನ ಮಂತ್ರಿಯನ್ನು ಅಡಿಯಿಂದ ಮುಡಿಯವರೆಗೆ ವಿರೋಧಿಸುವ ಯಾವುದೇ ಒಬ್ಬ ಮುಖ್ಯಮಂತ್ರಿ ತನ್ನ ರಾಜ್ಯದಲ್ಲಿ ಬಡವರಿಗೆ ಆಹಾರ ಧಾನ್ಯ ವಿತರಿಸುವುದಿಲ್ಲ ಎಂದು ಹೇಳಲಿ ನೋಡೋಣ! ಕೆಲವರು ಕೇಂದ್ರದಿಂದ ಆಹಾರ ಧಾನ್ಯ ಪಡೆದು, ಚೀಲಕ್ಕೆ ತಮ್ಮ ಹೆಸರು ಹಾಕಿಕೊಂಡು ಮೈಲೇಜ್ ಪಡೆಯಲು ಯತ್ನಿಸಿದರು. ಹೋಗಲಿ ಬಿಡಿ. ಮುದ್ರಾ ಯೋಜನೆ ಅತ್ಯಂತ ಕಳಪೆ ಸಾಧನೆ ಮಾಡಿರುವುದು ಯಾವ ರಾಜ್ಯಗಳಲ್ಲಿ ಗೊತ್ತಿದೆಯೇ? ಬಿಹಾರ ಮತ್ತು ಬಂಗಾಳ. ಅದರ ಬಗ್ಗೆ ಹೇಳುವುದು ಸಾಕಷ್ಟಿದೆ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 347

ಸಮಾಚಾರ ಸಣ್ಣದಲ್ಲ

ಸಚಿವ ಕಿಶನ್ ರೆಡ್ಡಿಗೆ ನಿಂದೆ: ಬಿಜೆಪಿ ದೂರು

ಹೈದರಾಬಾದ್: ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ವಿರುದ್ಧ ಕಾಂಗ್ರೆಸ್ ನಾಯಕ, ಮಾಜಿ ಸಂಸದ ಅಂಜನ್ ಕುಮಾರ್ ಯಾದವ್ ಅಶ್ಲೀಲ ಬಳಸಿ ನಿಂದಿಸಿದ್ದು, ಈ ಸಂದರ್ಭದ ವಿಡಿಯೋ ಜಾಲ ತಾಣದಲ್ಲಿ ವೈರಲ್ ಆಗಿದೆ. ಯಾದವ್ ನಡೆ ಖಂಡಿಸಿರುವ ಬಿಜೆಪಿ ತೆಲಂಗಾಣ ಘಟಕ, ಕ್ರಮಕ್ಕೆ ಆಗ್ರಹಿಸಿದೆ. ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕರಣದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯ ದೋಷಾರೋಪ ಪಟ್ಟಿ ಸಲ್ಲಿಸಿರುವುದನ್ನು ಖಂಡಿಸಿ ಹೈದರಾಬಾದ್‌ನಲ್ಲಿನ ಇ.ಡಿ ಕಚೇರಿ ಹೊರಗೆ ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರತಿಭಟನೆ ನಡೆಸುತ್ತಿದ್ದಾಗ ಅಂಜನ್ ಕುಮಾರ್ ಯಾದವ್, 'ಸಚಿವ ಕಿಶನ್ ರೆಡ್ಡಿ ಗಾಂ..' ಎಂದು ನಿಂದಿಸಿದ್ದಾರೆ. ಡಿಸಿಎಂ ಮಲ್ಲು ಭಟ್ಟಿ ವಿಕ್ರಮಾರ್ಕ ಮತ್ತು ಟಿಪಿಸಿಸಿ ಅಧ್ಯಕ್ಷ ಮಹೇಶ್ ಕುಮಾರ್ ಗೌಡ್ ನೇತೃತ್ವದಲ್ಲಿ ಸಚಿವರು ಮತ್ತು ಶಾಸಕರು ಪ್ರತಿಭಟನೆ ನಡೆಸಿದ್ದಾಗಲೇ ಘಟನೆ ನಡೆದಿದೆ. ನಂತರ ಬಿಜೆಪಿ ನಾಯಕರು, ಯಾದವ್ ವಿರುದ್ಧ ಸೈಫಾಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಕ್ರಮಕ್ಕೆ ಆಗ್ರಹಿಸಿದ್ದಾರೆ.

ತಿರುಮಲ ಬೆಟ್ಟದ ಮಾರ್ಗ ಕಾರು ಭಸ್ಮ

ತಿರುಪತಿ: ತಿರುಮಲ ಬೆಟ್ಟದ ಕಡಿದಾದ ತಿರುವು ರಸ್ತೆಯಲ್ಲಿ ಯಾತ್ರಿಕರ ಕಾರು ಭಾನುವಾರ ಬೆಳಗ್ಗೆ ಬೆಂಕಿ ಹೊತ್ತಿಕೊಂಡು ಸಂಪೂರ್ಣವಾಗಿ ಸುಟ್ಟು ಹೋಗಿದೆ. ಅಂಬೇಡ್ಕರ್ ಕೊನಸೀಮಾ ಜಿಲ್ಲೆಯ ರಾವುಲಪಾಲೆಂ ಗ್ರಾಮದ ಕೊವ್ವೂರಿ ಸತೀಶ್ ರೆಡ್ಡಿ ಅವರ ಕಾರು ತಿರುಮಲದ ಎರಡನೇ ಘಾಟ್ ರಸ್ತೆಯಲ್ಲಿ ಹೊತ್ತಿ ಉರಿದು ಭಸ್ಮವಾಗಿದೆ. ಕಾರಿನಲ್ಲಿದ್ದ ನಾಲ್ವರು ಯಾತ್ರಿಕರು ತಕ್ಷಣವೇ ಹೊರಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪತ್ನಿ ಕಿರುಕುಳ: ಉ.ಪ್ರ ಇಂಜಿನಿಯರ್ ಆತ್ಮಹತ್ಯೆ

ಲಖನೌ: ಉತ್ತರ ಪ್ರದೇಶದ ಸಿವಿಲ್ ಇಂಜಿನಿಯರ್ ಮೋಹಿತ್ ಯಾದವ್(33) ಪತ್ನಿಯ ಕಿರುಕುಳ ಸಹಿಸಲಾಗದೇ ಇಟವಾದಲ್ಲಿನ ಹೋಟೆಲ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಿಮೆಂಟ್ ಕಂಪನಿಯಲ್ಲಿ



ಫೀಲ್ಡ್ ಇಂಜಿನಿಯರ್ ಆಗಿದ್ದ ಯಾದವ್ ಮತ್ತು ಪ್ರಿಯಾ 7 ವರ್ಷ ಪ್ರೀತಿಸಿ, 2023ರಲ್ಲಿ ಮದುವೆಯಾಗಿದ್ದರು. ಆದರೆ, ಪತ್ನಿಯ ಕಿರುಕುಳ ಸಹಿಸಲಾಗದೇ ಜೀವ ಕಳೆದುಕೊಳ್ಳುತ್ತಿರುವುದಾಗಿ ಹೇಳಿ ವಿಡಿಯೊ ಮಾಡಿ ಹೋಟೆಲ್ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಮನೆ ಮತ್ತು ಆಸ್ತಿ ಪತ್ನಿ ಹೆಸರಿಗೆ ನೋಂದಾಯಿಸದಿದ್ದರೆ, ನನ್ನ ಕುಟುಂಬವನ್ನು ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಸಿಲುಕಿಸುವುದಾಗಿ ಪತ್ನಿ ಬೆದರಿಕೆ ಹಾಕಿದ್ದಾಳೆ. ನನ್ನ ವಿರುದ್ಧ ಆಕೆಯ ತಂದೆ ಮನೋಜ್ ಕುಮಾರ್ ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡಿದ್ದಾರೆ. ಆಕೆಯ ಸೋದರ ಕೊಲೆ ಬೆದರಿಕೆ ಹಾಕಿದ್ದಾನೆ. ಮರಣದ ನಂತರವೂ ನನಗೆ ನ್ಯಾಯ ಸಿಗದಿದ್ದರೆ ಚಿತಾಭಸ್ಮವನ್ನು ಚರಂಡಿಗೆ ಸುರಿಯಿರಿ ಎಂದು ವಿಡಿಯೋದಲ್ಲಿ ಹೇಳಿದ್ದಾರೆ.

ಟ್ರಂಪ್ ನೀತಿ ವಿರುದ್ಧ ಬೃಹತ್ ಪ್ರತಿಭಟನೆ

ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ನೀತಿಗಳನ್ನು ಖಂಡಿಸಿ ಅಮೆರಿಕದ ವಿವಿಧೆಡೆ ಜನರು ಶನಿವಾರ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಟ್ರಂಪ್ ನೀತಿ ದೇಶದ ಪ್ರಜಾಪ್ರಭುತ್ವದ ಆದರ್ಶಗಳಿಗೆ ಅಪಾಯಕಾರಿಯಾಗಿದೆ. ಟ್ರಂಪ್ ಆಡಳಿತ ಕೊನೆಗೊಳ್ಳಬೇಕು ಎಂದು ಪ್ರತಿಭಟನಾಕಾರರು ಘೋಷಣೆ ಮೊಳಗಿಸಿದರು. ಮಿಡ್‌ಟೌನ್ ಮ್ಯಾನ್‌ಹಟನ್‌ನಲ್ಲಿ ಪ್ರತಿಭಟನಾ ಮೆರವಣಿಗೆ ನಡೆದರೆ, ಶ್ವೇತಭವನದ ಮುಂದೆ ಬೃಹತ್ ರ‍್ಯಾಲಿ ನಡೆಯಿತು. ಅಮೆರಿಕದ ಉದ್ದಗಲಕ್ಕೂ 400 ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಾಕಾರರು ಫೆಡರಲ್ ಉದ್ಯೋಗ ಕಡಿತ, ಆರ್ಥಿಕ ನೀತಿಗಳು ಮತ್ತು ನಾಗರಿಕ ಸ್ವಾತಂತ್ರ್ಯ ಉಲ್ಲಂಘನೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಡೆನ್ವರ್‌ನಲ್ಲಿ ಪ್ರತಿಭಟನಾಕಾರರು ವಲಸಿಗರನ್ನೂ ಸೇರಿಸಿಕೊಂಡು 'ಹ್ಯಾಂಡ್ಸ್ ಆಫ್' ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಕೆಲವರು ಅಮೆರಿಕ ರಾಷ್ಟ್ರಧ್ವಜವನ್ನು ತಲೆಕೆಳಗಾಗಿ ಹಿಡಿದು ಆಕ್ರೋಶ ಹೊರಹಾಕಿದರು.

{ ಕಮಲಹಾಸನ್ } ಬಹುಭಾಷಾ ನಟ

ನಾನು ಒಳ್ಳೆಯ ಬ್ರಾಹ್ಮಣ ಕುಟುಂಬದಿಂದ ಬಂದಿದ್ದರೂ ಏಕೆ 2 ಮದುವೆಯಾದೆ? ಎಂದು ಕೇರಳದ ಸಂಸದ ಮಿತ್ರ ಜಾನ್ ಬ್ರಿಟ್ಟಾಸ್ ಒಮ್ಮೆ ನನ್ನನ್ನು ಕೇಳಿದ್ದರು. ಅದಕ್ಕೆ, 'ನಾನು ಯಾವ ದೇವರನ್ನೂ ಪ್ರಾರ್ಥಿಸುವುದಿಲ್ಲ, ರಾಮನ ಮಾರ್ಗವನ್ನೂ ಅನುಸರಿಸಲ್ಲ. ಬಹುಶಃ ಅವನ ತಂದೆಯ (3 ಹೆಂಡಿರ ದಶರಥ) ಮಾರ್ಗದಲ್ಲಿರುವೆ. ಹಾಗಾಗಿ 2 ಮದುವೆ ಆದೆ' ಎಂದು ಹೇಳಿದ್ದೆ.

ರಂಬನ್ ಜಿಲ್ಲೆಯಲ್ಲಿ ಭಾರೀ ಭೂ ಕುಸಿತ | ಕಲ್ಲು-ಮಣ್ಣಿನಡಿ ಮುಚ್ಚಿಹೋದ ಟ್ರಕ್ | ಪ್ರವಾಹದಲ್ಲಿ ಸಿಲುಕಿದ್ದ ನೂರಾರು ಜನರ ರಕ್ಷಣೆ

ಕಾಶ್ಮೀರ ವರ್ಷಧಾರೆ: ಪ್ರವಾಹ, ಭೂಕುಸಿತಕ್ಕೆ 5 ಬಲಿ

ಶ್ರೀನಗರ: ಹಿಮಪಾತಕ್ಕೆ ಹೆಸರಾದ ಜಮ್ಮು-ಕಾಶ್ಮೀರದಲ್ಲಿ ಈಗ ಭಾರೀ ಮಳೆ-ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಶುಕ್ರವಾರ-ಶನಿವಾರದ ಸುರಿದ ಧಾರಾಕಾರ ಮಳೆಯಿಂದಾಗಿ ರಾಜ್ಯದ ಹಲವೆಡೆ ಭೂಕುಸಿತವಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ 2 ದಿನದಲ್ಲಿ 5 ಜೀವಗಳು ಬಲಿಯಾಗಿವೆ. ರಾಜ್ಯದ ವಿವಿಧೆಡೆ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ 200ಕ್ಕೂ ಅಧಿಕ ಜನರನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಕರೆತಂದು ಬಿಡಲಾಗಿದೆ.

ರಂಬನ್ ಜಿಲ್ಲೆಯಲ್ಲಿ ಭಾರೀ ಪ್ರಮಾಣದಲ್ಲಿ ಭೂಕುಸಿತವಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಭಾರೀ ಪ್ರಮಾಣದಲ್ಲಿ ಮಳೆ ಸುರಿಯುತ್ತಾ ಇರುವುದರಿಂದ ಪ್ರದೇಶದಲ್ಲಿನ ಹಲವು ಮನೆಗಳಿಗೆ ನೀರು ನುಗ್ಗಿದೆ. ಮಕ್ಕಳು, ವೃದ್ಧರು ಮತ್ತು ರೋಗಿಗಳ ಪರಿಸ್ಥಿತಿ ಚಿಂತಾಜನಕವಾಗಿದೆ.

ಸಂಚಾರ ನಿರ್ಬಂಧ: ರಂಬನ್ ಮತ್ತು ಬನಿಹಾಲ್ ನಡುವಿನ ಸಂಪರ್ಕ ರಸ್ತೆಯ ಹಲವೆಡೆ ಭೂಕುಸಿತವಾಗಿದ್ದು, ರಸ್ತೆ ಸಂಪರ್ಕ ಸಂಪೂರ್ಣ ಕಡಿದುಹೋಗಿದೆ. ವಾಹನ ಸಂಚಾರ ಪೂರ್ಣ ಬಂದ್ ಆಗಿದೆ. ಸುರಕ್ಷತೆ ಕ್ರಮವಾಗಿ ಉಧಮ್‌ಪುರದಿಂದ ಶ್ರೀನಗರಕ್ಕೆ ವಾಹನಗಳ ಸಂಚಾರವನ್ನು ಶ್ರೀನಗರ ಜಿಲ್ಲಾಡಳಿತ ನಿರ್ಬಂಧಿಸಿದೆ.ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಭಾನುವಾರ ಸಚಿವರು, ಹಿರಿಯ ಅಧಿಕಾರಿಗಳ ತುರ್ತು ಸಭೆ ನಡೆಸಿದ್ದು, ರಕ್ಷಣಾ ಕಾರ್ಯಕ್ರಮಗಳಿಗೆ ಯೋಜನೆ ರೂಪಿಸಿದ್ದಾರೆ. ಮಳೆ-ಪ್ರವಾಹ ಪರಿಸ್ಥಿತಿ ಉಂಟಾದಾಗ ತಕ್ಷಣವೇ ಸ್ಪಂದಿಸಿರುವ ರಂಬನ್ ಹಾಗೂ ಇತರೆ ಜಿಲ್ಲೆಗಳ ಆಡಳಿತವನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಬಹಳವಾಗಿ ಪ್ರಶಂಸಿಸಿದ್ದಾರೆ.

ರಂಬನ್ ಜಿಲ್ಲೆಯಲ್ಲಿ ಉಂಟಾಗಿರುವ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ವಾಹನಗಳು

ರಂಬನ್‌ನಲ್ಲಿ 200 ಜನರ ರಕ್ಷಣೆ

ಶುಕ್ರವಾರ-ಶನಿವಾರದ ಧಾರಾಕಾರ ಮಳೆ-ಪ್ರವಾಹದಲ್ಲಿ ಇಬ್ಬರು ಸಾವಿಗೀಡಾದರೆ, ಭಾನುವಾರ ಬೆಳಗ್ಗೆ ರಂಬನ್ ಜಿಲ್ಲೆಯ ವಿವಿಧೆಡೆ ಭೂಕುಸಿತ ಘಟನೆಗಳಲ್ಲಿ ಮೂವರು ಜೀವ ಕಳೆದುಕೊಂಡರು. 200 ಜನರನ್ನು ರಕ್ಷಿಸಲಾಯಿತು ಎಂದು ರಾಜ್ಯ ವಿಪತ್ತು ನಿರ್ವಹಣಾ ತಂಡದ(ಎಸ್‌ಡಿಆರ್ ಎಫ್) ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮೃತರಲ್ಲಿ ಇಬ್ಬರನ್ನು ಅಖೀಬ್ ಅಹಮದ್, ಮೊಹಮ್ಮದ್ ಸಾಖಿಬ್ ಎಂದು ಗುರುತಿಸಲಾಗಿದೆ. ಮತ್ತೊಬ್ಬರ ಗುರುತು ಪತ್ತೆಗೆ ಪ್ರಯತ್ನ ನಡೆದಿದೆ ಎಂದು ಜಿಲ್ಲಾಡಳಿತದ ಅಧಿಕಾರಿಗಳು ತಿಳಿಸಿದ್ದಾರೆ. ಜಮ್ಮು ಪ್ರದೇಶದಲ್ಲಿ ಶನಿವಾರ ಮಳೆ ಅವಾಂತರ ಘಟನೆಗಳಲ್ಲಿ ಒಬ್ಬ ಮಹಿಳೆ, ಒಬ್ಬ ಪುರುಷ ಸಾವಿಗೀಡಾಗಿದ್ದಾರೆ. ಒಬ್ಬ ಮಹಿಳೆ ಗಾಯಗೊಂಡಿದ್ದಾರೆ. ಇನ್ನೊಂದೆಡೆ, ಧಾಂಬಾ ಸೇರಿ ಗ್ರಾಮದಲ್ಲಿ ಮೂವರು ಮಕ್ಕಳು ಪ್ರವಾಹದಲ್ಲಿ ಸಿಲುಕಿದ್ದು ರಕ್ಷಣಾ ಕಾರ್ಯ ನಡೆದಿದೆ. ಎಸ್‌ಡಿಆರ್‌ಎಫ್‌ಗೆ ಜತೆಗೆ ರಕ್ಷಣಾ ಕಾರ್ಯದಲ್ಲಿ ಭಾರತೀಯ ಸೇನೆಯೂ ಕೈಜೋಡಿಸಿದೆ. ರಂಬನ್ ಜಿಲ್ಲೆಯ ವಿವಿಧೆಡೆ ಸಿಆರ್‌ಪಿಎಫ್ ಪೊಲೀಸರೂ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಭೂಕುಸಿತ ಕಾರಣ ಮಣ್ಣಿನಡಿ ಸರಕು ಸಾಗಣೆ ಟ್ರಕ್

ಅಗತ್ಯ ವಸ್ತುಗಳ ಕೊರತೆ

ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ(ಎನ್ ಎಚ್-44) ಗುಡ್ಡ ಕುಸಿತವಾಗಿದ್ದು, ಹೆದ್ದಾರಿ ಸಂಪೂರ್ಣವಾಗಿ ಕಲ್ಲು-ಮಣ್ಣಿನಿಂದ ಮುಚ್ಚಿಹೋಗಿದೆ. 250 ಕಿಮೀಗಳಷ್ಟು ಉದ್ದದ ರಾಷ್ಟ್ರೀಯ ಹೆದ್ದಾರಿಯಲ್ಲಿ ನೂರಾರು ವಾಹನಗಳು ಸ್ಥಗಿತಗೊಂಡಿವೆ. ಸರಕು ಸಾಗಣೆ ಟ್ರಕ್‌ವೊಂದು ಭೂಕುಸಿತ ಮಣ್ಣಿನಡಿ ಬಹುತೇಕ ಮುಚ್ಚಿಹೋಗಿದೆ. ಪೆಟ್ರೋಲಿಯಂ ಸಾಗಣೆ ಟ್ರಕ್‌ಗಳೂ ಸೇರಿದಂತೆ 50ಕ್ಕೂ ಅಧಿಕ ಸರಕು ಸಾಗಣೆ ಲಾರಿಗಳು ಭೂಕುಸಿತ ಪ್ರದೇಶದಲ್ಲಿ ಸಿಲುಕಿಕೊಂಡಿವೆ. ಮುಂದಕ್ಕೂ ಹೋಗಲಾಗದೇ, ಹಿಂದಕ್ಕೂ ಚಲಿಸಲಾಗದೇ 2 ದಿನದಿಂದ ಇದ್ದಲ್ಲೇ ಇರುವಂತಾಗಿದೆ. ಪರಿಣಾಮ, ಕಣಿವೆ ರಾಜ್ಯದ ಹಲವೆಡೆ ಅಗತ್ಯ ವಸ್ತುಗಳ ಪೂರೈಕೆ ಪೂರ್ಣ ಸ್ಥಗಿತಗೊಂಡಿದೆ. ಭೂಕುಸಿತ ಪ್ರದೇಶದಲ್ಲಿ ರಸ್ತೆಗಳ ಮೇಲೆ ಬಿದ್ದಿರುವ ಕಲ್ಲುಬಂಡೆ, ಮರಗಳನ್ನು ತೆರವುಗೊಳಿಸುವ ಕಾರ್ಯಕ್ಕೂ ಧಾರಾಕಾರ ಮಳೆ ಅಡ್ಡಿಯಾಗಿದೆ.

ಸತತ ಮಳೆಗೆ ಭೂಕುಸಿತ

ಶನಿವಾರ ಬೆಳಗ್ಗೆಯಿಂದ ಭಾನುವಾರ ಬೆಳಗ್ಗೆವರೆಗೆ, ಅಂದರೆ 24 ಗಂಟೆಗಳ ಅವಧಿಯಲ್ಲಿ ಶ್ರೀನಗರದ ದಕ್ಷಿಣ ಪ್ರದೇಶದಲ್ಲಿ 80ರಿಂದ 100 ಮಿ.ಮೀ.ಗಳಷ್ಟು ದಾಖಲೆ ಪ್ರಮಾಣದಲ್ಲಿ ಮಳೆ ಸುರಿದಿದೆ. ಬನಿಹಾಲ್‌ನಲ್ಲಿ 71 ಮಿ.ಮೀ, ಖಾಜಿ ಕುಂಡ್‌ನಲ್ಲಿ 53 ಮಿ.ಮೀ, ಕೊಕರ್‌ನಾಗ್‌ನಲ್ಲಿ 43 ಮಿ.ಮೀ, ಪಹಲ್‌ಗಾಮ್‌ನಲ್ಲಿ 34 ಮಿ.ಮೀ ಮತ್ತು ಶ್ರೀನಗರದಲ್ಲಿ 12 ಮಿ.ಮೀ. ಮಳೆ ದಾಖಲಾಗಿದೆ. ರಂಬನ್ ಜಿಲ್ಲೆಯ ಸೇರಿ ಬಗ್ನಾ ಗ್ರಾಮದ ಬಳಿ ಪರ್ವತ ಪ್ರದೇಶದಲ್ಲಿ 'ಮೇಘಸ್ಫೋಟ'ವಾಗಿದೆ. ಪರಿಣಾಮ, ರಂಬನ್ ಜಿಲ್ಲೆಯ ಹಲವೆಡೆ ಧಾರಾಕಾರ ಮಳೆ ಸುರಿದಿದೆ. ಇದರಿಂದ ಜಿಲ್ಲೆ ವಿವಿಧ ಪ್ರದೇಶಗಳಲ್ಲಿನ ಭೂಮಿ ಕೊರಕಲು ಬಿದ್ದಿದ್ದು, ಬಹಳಷ್ಟು ಕಡೆ ಭೂಕುಸಿತವಾಗಿದೆ. ರಂಬನ್, ನಶ್ರಿ ಮತ್ತು ಬನಿಹಾಲ್ ಮೊದಲಾದೆಡೆ ಅತ್ಯಧಿಕ ಪ್ರಮಾಣ ದಲ್ಲಿ ಭೂಕುಸಿತ ಪ್ರಕರಣಗಳು ವರದಿಯಾಗಿವೆ. ಪಂತಿಯಾಲ್ ಬಳಿ ನೂರಾರು ಮೀಟರ್‌ಗಳಷ್ಟು ಉದ್ದದ ರಸ್ತೆಯೇ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದು, ಆ ಮಾರ್ಗದ ಸಂಪರ್ಕವೇ ಸಂಪೂರ್ಣ ಕಡಿತಗೊಂಡಿದೆ. ಧರಮ್‌ಕುಂಡ್ ಗ್ರಾಮದಲ್ಲಿ ಅತ್ಯಧಿಕ ಪ್ರಮಾಣದ ಹಾನಿ ಸಂಭವಿಸಿದೆ. 40 ಮನೆಗಳು ಹಾನಿಗೀಡಾಗಿವೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ. ಕಾರುಗಳೂ ಸೇರಿದಂತೆ ಹಲವು ವಾಹನಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ.

ಮಳೆ ಸೃಷ್ಟಿಸಿದ ಪ್ರವಾಹದಲ್ಲಿ ಸಿಲುಕಿದ ಕಾರುಗಳ ಸ್ಥಿತಿ

ಮರಾಠಾ ರಾಜಕಾರಣಕ್ಕೆ ಒಂದೇ ಪಕ್ಷ | ಮಹಾರಾಷ್ಟ್ರ ರಾಜಕಾರಣದಲ್ಲಿ ಸಂಚಲನ

ರಾಜ್-ಉದ್ಧವ್ ಠಾಕ್ರೆ ಮತ್ತೆ ಒಂದಾಗುವರೇ?

ಮುಂಬೈ: ಮಹಾರಾಷ್ಟ್ರ ರಾಜಕಾರಣದಲ್ಲಿ, ಅದೂ ಮರಾಠಿ ಅಸ್ಮಿತೆಯಲ್ಲಿ ಹೊಸ ಗಾಳಿ ಬೀಸಲಾರಂಭಿಸಿದೆ. ಶಿವಸೇನೆ(ಉದ್ಧವ್ ಬಣ)ಯನ್ನು ಮರಳಿ ಬಲಪಡಿಸಲು ಸೋದರ ಸಂಬಂಧಿಗಳಾದ ರಾಜ್ ಠಾಕ್ರೆ ಮತ್ತು ಉದ್ಧವ್ ಠಾಕ್ರೆ ಮತ್ತೆ ಒಟ್ಟಾಗಬಹುದು ಎಂಬ ಮಾತುಗಳು ಮಹಾರಾಷ್ಟ್ರ ರಾಜಕಾರಣದ ಅಂಗಳದಲ್ಲಿ ಕೇಳಿಬರುತ್ತಿವೆ.

2005ರಲ್ಲಿ ಪ್ರತ್ಯೇಕಗೊಂಡಿದ್ದ ಶಿವಸೇನೆ (ಉದ್ಧವ್ ಬಣ) ಮತ್ತು ಸೋದರ ಸಂಬಂಧಿ ರಾಜ್ ಠಾಕ್ರೆ (ಎಂಎನ್‌ಎಸ್) ಮತ್ತೆ ಒಂದಾಗುವ ಸುಳಿವು ಕಾಣುತ್ತಿದೆ. ಇಬ್ಬರೂ ಕಡು ಮರಾಠಾ ನಾಯಕರೂ ರಾಜಕೀಯ ಮತ್ತು ಸಂಘಟನಾತ್ಮಕವಾಗಿ ಅಸ್ತಿತ್ವದ ಪ್ರಶ್ನೆ ಎದುರಿಸುತ್ತಿರುವ ವೇಳೆಯಲ್ಲೇ ಈ ಬೆಳವಣಿಗೆ ಕಾಣಬಂದಿರುವುದು ಗಮನಾರ್ಹ.

ಒಂದೇ ಪಕ್ಷ: 'ನನ್ನ ಮತ್ತು ಉದ್ಧವ್ ಠಾಕ್ರೆ ನಡುವಿನ ವೈಮನಸ್ಯ ಸಣ್ಣದು. ಉಳಿದೆಲ್ಲದ್ದಕ್ಕಿಂತ ಮಹಾರಾಷ್ಟ್ರ ವಿಷಯ ದೊಡ್ಡದು. ನಮ್ಮ ನಡುವಿನ ಭಿನ್ನಾಭಿಪ್ರಾಯ ಮಹಾರಾಷ್ಟ್ರ ಮತ್ತು ಮರಾಠಿ ಜನರ ಅಸ್ತಿತ್ವಕ್ಕೆ ಪೆಟ್ಟು ನೀಡಿದೆ. ಹೀಗಾಗಿ ಇಲ್ಲಿ 'ನಾನು' ಎಂಬುದನ್ನು ಬಿಟ್ಟು ವಿಶಾಲ ದೃಷ್ಟಿಕೋನದಿಂದ ನೋಡಿದರೆ ಎಲ್ಲರೂ ಒಂದಾಗಬಹುದು. ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇರುವ ಮರಾಠಿ ರಾಜಕಾರಣಿಗಳು ಒಂದಾಗಿ ಒಂದೇ ರಾಜಕೀಯ ಪಕ್ಷ ಸ್ಥಾಪನೆ ಮಾಡಬೇಕು' ಎಂದು ರಾಜ್ ಠಾಕ್ರೆ ಸಂದರ್ಶನವೊಂದರಲ್ಲಿ ಇತ್ತೀಚೆಗೆ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದಂತೆ ಮಾತನಾಡಿರುವ ಉದ್ಧವ್ ಠಾಕ್ರೆ, 'ಸಣ್ಣಪುಟ್ಟ ಭಿನ್ನಾಭಿಪ್ರಾಯ ಬದಿಗೊತ್ತಲು ನಾನೂ ಸಿದ್ಧ. ಮಹಾರಾಷ್ಟ್ರದ ಹಿತಾಸಕ್ತಿ ಕಾಪಾಡಲು ಎಲ್ಲಾ ಮರಾಠಿಗರು ಒಂದಾಗಬೇಕು ಎಂದು ಕರೆ ಕೊಡುತ್ತೇನೆ. ಆದರೆ ಒಂದು ಷರತ್ತಿದೆ. ಎಲ್ಲಾ ಕೈಗಾರಿಕೆಗಳನ್ನೂ ಗುಜರಾತ್‌ಗೆ ವರ್ಗಾಯಿಸಲಾಗುತ್ತಿದೆ ಎಂದು ಸಂಸತ್‌ನಲ್ಲಿ ಶಿವಸೇನೆ ಪ್ರಸ್ತಾಪಿಸಿದಾಗ ಮರಾಠಿಗರೆಲ್ಲರೂ ಒಂದಾಗಿದ್ದಿದ್ದರೆ ಮಹಾರಾಷ್ಟ್ರಕ್ಕೆ ಲಾಭ ತರುವ ಸರಕಾರವನ್ನೇ ರಚಿಸಬಹುದಿತ್ತು ಎಂದು ಹೇಳಿದ್ದಾರೆ.

ಒಂದು ದಿನ ಅವರನ್ನು, ಇನ್ನೊಂದು ದಿನ ಬೇರೆಯವರನ್ನು ಬೆಂಬಲಿಸುವುದು, ಬಳಿಕ ವಿರೋಧಿಸುವುದು ಆಗಬಾರದು. ಈ ವಿಷಯದಲ್ಲಿ ಖಚಿತ ನಿಲುವು ಹೊಂದಿದ್ದರೆ ಮುಂದಿನ ಹೆಜ್ಜೆ ಇಡಬಹುದು ಎಂದು ಉದ್ಧವ್ ಠಾಕ್ರೆ ಮಾರ್ಮಿಕವಾಗಿ ನುಡಿದಿದ್ದಾರೆ.

ಏನೂ ವ್ಯತ್ಯಾಸವಾಗದು!

ಈ ಮಧ್ಯೆ, ಮಾಧ್ಯಮದ ಜತೆ ಮಾತನಾಡಿರುವ ಮಹಾರಾಷ್ಟ್ರ ಸರಕಾರದ ಸಂಪುಟ ದರ್ಜೆ ಸಚಿವ ನಿತೇಶ್ ನಾರಾಯಣ ರಾಣೆ, ಉದ್ಧವ್ ಠಾಕ್ರೆ ಮತ್ತು ರಾಜ್ ಠಾಕ್ರೆ ಮತ್ತೆ ಒಂದಾಗುವರೇ? ಎಂಬ ಪ್ರಶ್ನೆಗೆ, 'ಇಬ್ಬರೂ ಒಟ್ಟಿಗೆ ಕಾಣಿಸಿಗುತ್ತಾರೋ ಇಲ್ಲವೋ ಎಂಬುದು ಅವರ ವೈಯಕ್ತಿಕ ವಿಷಯ. ಅವರು ಒಟ್ಟುಗೂಡಿದರೂ ರಾಜ್ಯದ ರಾಜಕೀಯದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಮಹಾರಾಷ್ಟ್ರ ಛತ್ರಪತಿ ಶಿವಾಜಿ ಮಹಾರಾಜರಿಗೆ ಸೇರಿದೆ. ಮಹಾರಾಷ್ಟ್ರದ ಜನತೆ 2024ರಲ್ಲಿ ಎನ್‌ಡಿಎಗೆ ದೊಡ್ಡ ಜನಾದೇಶ ನೀಡಿದ್ದಾರೆ' ಎಂದು ಉತ್ತರಿಸಿದ್ದಾರೆ.

ಮುರ್ಷಿದಾಬಾದ್ ಹಿಂಸೆ: ಐವಿಆರ್‌ಎಸ್ ಸಮೀಕ್ಷೆ

ರಾಷ್ಟ್ರಪತಿ ಆಡಳಿತಕ್ಕೆ ಜನಾಗ್ರಹ

ದೆಹಲಿ: ಹಿಂಸಾಗ್ರಸ್ತ ಪಶ್ಚಿಮ ಬಂಗಾಳದಲ್ಲಿ ತಕ್ಷಣವೇ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು ಎಂಬ ಜನಾಗ್ರಹ ಕೇಳಿಬಂದಿದೆ.

ಮುರ್ಷಿದಾಬಾದ್ ಹಿಂಸಾಚಾರ ಬಳಿಕ ಕಳೆದ 2-3 ದಿನಗಳಲ್ಲಿ ಪಶ್ಚಿಮ ಬಂಗಾಳ ರಾಜ್ಯದ ಜನರ ಅಭಿಪ್ರಾಯವನ್ನು ಐವಿಆರ್‌ಎಸ್ ಮೂಲಕ ಪಡೆಯಲಾಗಿದ್ದು, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ತಕ್ಷಣವೇ ಜಾರಿ ಆಗಬೇಕು ಎಂದು ಶೇ.59ರಷ್ಟು ಜನರು ಆಗ್ರಹಿಸಿದ್ದಾರೆ.

ವಕ್ಫ್ ಕಾಯಿದೆ ವಿರೋಧಿಸಿ ನಡೆದ ಪ್ರತಿಭಟನೆಯ ಸಂದರ್ಭವನ್ನು ಮುರ್ಷಿದಾಬಾದ್‌ನಲ್ಲಿ ಹಿಂದೂಗಳ ಮೇಲೆ ಹಿಂಸಾಚಾರ, ಅತ್ಯಾಚಾರ ನಡೆಸುವುದಕ್ಕೆ ಬಳಸಿಕೊಳ್ಳಲಾಗಿದೆ. ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್‌ನಲ್ಲಿ ಅಲ್ಪಸಂಖ್ಯೆಯಲ್ಲಿ ರುವ ಹಿಂದೂಗಳನ್ನು ಮನೆ ತೊರೆದು ಹೋಗುವಂತೆ ಮಾಡಲಾಗಿದೆ. ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ. ಇದೆಲ್ಲವೂ ಪೊಲೀಸರ ಸಮಕ್ಷಮವೇ ನಡೆದಿದೆ. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಕುಸಿದಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಿಂದೂಗಳ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದು ಹೆಚ್ಚಿನ ಜನರು ಸಮೀಕ್ಷೆಯಲ್ಲಿ ಹೇಳಿದ್ದಾರೆ. ಐವಿಆರ್‌ಎಸ್ ಮೂಲಕ 'ಇಂಕ್ ಇನ್‌ಸೈಟ್' ಸಂಸ್ಥೆ ಪಶ್ಚಿಮ ಬಂಗಾಳದಲ್ಲಿ 3 ದಿನದಲ್ಲಿ ನಡೆಸಿದ ಸಮೀಕ್ಷೆಯಲ್ಲಿ 8,954 ಮಂದಿಯ ಅಭಿಪ್ರಾಯ ಸಂಗ್ರಹಿಸಲಾಗಿದೆ. ಅದರ ವರದಿ ಭಾನುವಾರ ಬಿಡುಗಡೆಯಾಗಿ ದೆ. ಮುರ್ಷಿದಾಬಾದ್ ಹಿನ್ನೆಲೆ ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾಗಬೇಕೆ-ಬೇಡವೇ? ಎಂಬ ಪ್ರಶ್ನೆಗೆ ಶೇ.59 ರಷ್ಟು ಜನರು 'ಜಾರಿ ಆಗಬೇಕು' ಎಂದಿದ್ದಾರೆ. ಶೇ. 28ರಷ್ಟು ಮಂದಿ ರಾಷ್ಟ್ರಪತಿ ಆಳ್ವಿಕೆ ಬೇಡ ಎಂದಿದ್ದಾರೆ. ಸಿಎಂ ಮಮತಾ ಬ್ಯಾನರ್ಜಿ ಬಗ್ಗೆ ಹಿಂದೂಗಳ ವಿಶ್ವಾಸ ಕಡಿಮೆ ಆಗಿದೆಯೇ? ಎಂಬ ಪ್ರಶ್ನೆಗೆ, ಶೇ.58 ಮಂದಿ 'ಹೌದು' ಎಂದಿದ್ದಾರೆ. ಶೇ.22 ಮಂದಿ 'ಇಲ್ಲ' ಎಂದಿದ್ದರೆ, ಶೇ.20 ಜನರು 'ತಿಳಿದಿಲ್ಲ' ಎಂದಿದ್ದಾರೆ.

'ಒಂದು ಮಂದಿರ, ಒಂದೇ ಮಸಣ'

ದೆಹಲಿ: ಹಿಂದೂ ಸಮಾಜದ ಒಗ್ಗಟ್ಟಿಗಾಗಿ ಒತ್ತಾಯಿಸಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು 'ಒಂದು ಮಂದಿರ, ಒಂದೇ ಬಾವಿ, ಒಂದೇ ಮಸಣ(ದಹನ)ಭೂಮಿ' ಎಂಬ ಮಂತ್ರ ಪಠಿಸಿದ್ದಾರೆ.



ಹಿಂದೂ ಸಮಾಜದ ಒಗ್ಗಟ್ಟಿಗಾಗಿ ಭಾಗವತ್ ಕರೆ

ಹಿಂದೂಗಳು ಎಲ್ಲಾ ಜಾತಿ ಭೇದ ಮರೆತು ಒಟ್ಟುಗೂಡಬೇಕು. ಆ ಮೂಲಕ ಬಲಿಷ್ಠ ಹಿಂದೂ ಸಮಾಜವನ್ನು ಕಟ್ಟಿ ಬೆಳೆಸಬೇಕಿದೆ ಎಂದು ಭಾನುವಾರ ಕರೆ ನೀಡಿದ್ದಾರೆ.

ಹಿಂದೂ ಸಮಾಜದ ಅಡಿಪಾಯವೇ 'ಸಂಸ್ಕಾರ' ಆಗಿದೆ. ಅದರ ಮಹತ್ವವನ್ನು ಹಿಂದೂಗಳು ಅರಿಯಬೇಕಿದೆ. ಸಂಪ್ರದಾಯ, ಸಂಸ್ಕೃತಿ, ಪರಂಪರೆ, ನೈತಿಕತೆ ಮೊದಲಾದ ಧನಾತ್ಮಕ ಅಂಶಗಳನ್ನು ಒಳಗೊಂಡ ಬಲಶಾಲಿಯಾದ ಹಿಂದೂ ಸಮಾಜವನ್ನು ಉದ್ದೀಪನಗೊಳಿಸಬೇಕಿದೆ ಎಂದು ಭಾಗವತ್ ಹಿಂದೂಗಳನ್ನು ಜಾಗೃತಗೊಳಿಸಲೆತ್ನಿಸಿದ್ದಾರೆ. ಹಬ್ಬಗಳನ್ನೂ ಹಿಂದೂ ಸಮಾಜ ಒಟ್ಟಾಗಿಯೇ ಆಚರಿಸಬೇಕು. ಹಿಂದೂ ಹಬ್ಬಗಳನ್ನು ರಾಷ್ಟ್ರೀಯವಾಗಿಸಿ ಹೆಮ್ಮೆಯಿಂದ ಆಚರಿಸುವಂತಾಗಬೇಕು. ಆ ಮೂಲಕ ಸಮಾಜದಲ್ಲಿ ಒಗ್ಗಟ್ಟನ್ನು ಪ್ರದರ್ಶಿಸಬೇಕಿದೆ ಎಂದು ಗಮನ ಸೆಳೆದಿದ್ದಾರೆ ಎಂದು ಸಂಘದ ಮೂಲಗಳಿಂದ ತಿಳಿದುಬಂದಿದೆ.

ಆಲಿಗಢದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದ ಭಾಗವತ್ ಅವರು, ಸಮಾಜದ ಎಲ್ಲಾ ವರ್ಗಗಳೊಂದಿಗೂ ಆರ್‌ಎಸ್‌ಎಸ್ ಸ್ವಯಂಸೇವಕರು ಬೆರೆಯಬೇಕಿದೆ. ಸಮಾಜದ ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸಬೇಕಿದೆ. ಸಮಾಜದ ಎಲ್ಲಾ ವರ್ಗ, ಸ್ತರದ ಜನರನ್ನೂ ತಮ್ಮ ಮನೆಗಳಿಗೆ ಆಹ್ವಾನಿಸಿ ಬರಮಾಡಿಕೊಳ್ಳಬೇಕಿದೆ. ಬೇರು ಮಟ್ಟದಲ್ಲಿ ಈ ಕಾರ್ಯಚಟುವಟಿಕೆ ನಡೆದು ಒಗ್ಗಟ್ಟಿನ ಮಂತ್ರವನ್ನು ದೊಡ್ಡದಾಗಿ ಪಠಿಸಬೇಕಿದೆ ಎಂದು ಮಾರ್ಗದರ್ಶನ ಮಾಡಿದ್ದಾರೆ.

ಜೆ.ಡಿ.ವ್ಯಾನ್ಸ್ ಕುಟುಂಬಕ್ಕೆ ಇಂದು ಪ್ರಧಾನಿ ಔತಣ

ದೆಹಲಿ: ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ಪತ್ನಿ ಉಷಾ ಹಾಗೂ ಮೂವರು ಮಕ್ಕಳು ಸೋಮವಾರ ಬೆಳಗ್ಗೆ 10 ಗಂಟೆಗೆ ದೆಹಲಿಯ ಪಾಲಂ ವಾಯುನೆಲೆಯ ವಿಮಾನ ನಿಲ್ದಾಣದಲ್ಲಿ ವಿಶೇಷ ವಿಮಾನದಲ್ಲಿ ಬಂದಿಳಿಯಲಿದ್ದಾರೆ. ರಾತ್ರಿ ವ್ಯಾನ್ಸ್ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿ ವಿಶೇಷ ಔತಣಕೂಟ ಏರ್ಪಡಿಸಿದ್ದಾರೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರ ಈ ಬಾರಿಯ ಪ್ರವಾಸದಲ್ಲಿ ಭಾರತ-ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತು ಹಾಗೂ ವ್ಯಾಪಾರ, ರಕ್ಷಣೆ, ಪ್ರತಿಸುಂಕ ವಿಚಾರಗಳ ಬಗ್ಗೆ ಪ್ರಧಾನಿ ಮೋದಿ ಅವರ ಜತೆ ಸೋಮವಾರ ಸಂಜೆ 6.30ಕ್ಕೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಜತೆಗೆ, ಉಭಯ ದೇಶಗಳ ಮೈತ್ರಿಯನ್ನು ಇನ್ನಷ್ಟು ಗಟ್ಟಿಗೊಳಿಸುವ ವಿಧಾನಗಳತ್ತಲೂ ಅವಲೋಕನ ನಡೆಸುವ ಸಾಧ್ಯತೆ ಇದೆ. ಬಳಿಕ, ವ್ಯಾನ್ಸ್ ಕುಟುಂಬಕ್ಕೆ ವಿಶೇಷ ಔತಣಕೂಟ ಜರುಗಲಿದೆ ಎನ್ನಲಾಗಿದೆ.

ಜೈಪುರ, ಆಗ್ರಾ ಭೇಟಿ: ಔತಣಕೂಟದ ಬಳಿಕ ಅದೇ ರಾತ್ರಿ ಜೆ.ಡಿ.ವ್ಯಾನ್ಸ್ ಹಾಗೂ ಕುಟುಂಬ ಜೈಪುರಕ್ಕೆ ತೆರಳಲಿದ್ದಾರೆ. ಮಂಗಳವಾರ ಜೈಪುರದಲ್ಲಿರುವ ಯುನೆಸ್ಕೋ ವಿಶ್ವ ಪಾರಂಪರಿಕ ತಾಣವೆನಿಸಿದ ಆಮೆರ್ ಕೋಟೆ ವೀಕ್ಷಿಸಲಿದ್ದಾರೆ. ಮಧ್ಯಾಹ್ನ ಜೈಪುರದ ರಾಜಸ್ಥಾನ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ವ್ಯಾನ್ಸ್ ಭಾಷಣ ಮಾಡಲಿದ್ದಾರೆ. ಬುಧವಾರ ಆಗ್ರಾಗೆ ತೆರಳಿ ತಾಜ್ ಮಹಲ್ ವೀಕ್ಷಣೆ, ಶಿಲ್ಪಗ್ರಾಮಕ್ಕೆ ಭೇಟಿಗೆ ಸಮಯ ನಿಗದಿಯಾಗಿದೆ. ಗುರುವಾರ ವ್ಯಾನ್ಸ್ ಹಾಗೂ ಕುಟುಂಬ ಅಮೆರಿಕಕ್ಕೆ ವಾಪಸ್ಸಾಗಲಿದೆ.

ಹಸೀನಾಗೆ ನೋಟಿಸ್: ಇಂಟರ್‌ಪೋಲ್‌ಗೆ ಮನವಿ

ದೆಹಲಿ: ಬಾಂಗ್ಲಾದೇಶದಲ್ಲಿ 2024ರಲ್ಲಿ ವಿದ್ಯಾರ್ಥಿ ದಂಗೆಯಾದ ಬಳಿಕ ದೇಶ ತೊರೆದು ಭಾರತಕ್ಕೆ ಬಂದ ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಇತರೆ 11 ಮಂದಿಯನ್ನು ವಾಪಸ್ ದೇಶಕ್ಕೆ ಕರೆಸಿಕೊಂಡು ಕಾನೂನು ಕ್ರಮ ಜರುಗಿಸಲು ಬಾಂಗ್ಲಾದೇಶದ ಮಧ್ಯಂತರ ಸರಕಾರ, ಇಂಟರ್‌ಪೋಲ್ ನೆರವು ಕೋರಿ ದೆ. ಶೇಖ್ ಹಸೀನಾ ಸಹಿತ 12 ಮಂದಿಗೆ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿ ಸುವಂತೆ ಇಂಟರ್‌ಪೋಲ್‌ಗೆ ಬಾಂಗ್ಲಾ ಮನವಿ ಮಾಡಿದೆ. ಬಾಂಗ್ಲಾದೇಶ ಪೊಲೀಸ್‌ನ ನ್ಯಾಷನಲ್ ಸೆಂಟ್ರಲ್ ಬ್ಯೂರೊ ಈ ಮನವಿ ಸಲ್ಲಿಸಿದೆ ಎಂದು 'ದಿ ಡೈಲಿ ಸ್ಟಾರ್' ಪತ್ರಿಕೆ ವರದಿ ಮಾಡಿದೆ.ದೇಶಭ್ರಷ್ಟ ಶೇಖ್ ಹಸೀನಾ ಮತ್ತು ಇತರೆ 11 ಜನರನ್ನು ಬಂಧಿಸಲು ಇಂಟರ್‌ಪೋಲ್‌ನ ನೆರವು ಪಡೆಯುವಂತೆ ಕಳೆದ ನವೆಂಬರ್‌ನಲ್ಲೇ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಮುಖ್ಯ ಪ್ರಾಸಿಕ್ಯೂ ಟರ್ ಕಚೇರಿ ಬಾಂಗ್ಲಾ ಪೊಲೀಸ್‌ಗೆ ಸೂಚಿಸಿತ್ತು. ಹಸೀನಾ ಅವರು ಭಾರತಕ್ಕೆ ಬಂದು ನೆಲೆಸಿದಾಗಿನಿಂದಲೂ ಮಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ ಮಾಜಿ ಪ್ರಧಾನಿಯನ್ನು ವಶಕ್ಕೆ ಒಪ್ಪಿಸುವಂತೆ ಭಾರತಕ್ಕೆ ಹಲವು ಬಾರಿ ಮನವಿ ಮಾಡಿದೆ. ವಿದ್ಯಾರ್ಥಿಗಳ ದಂಗೆ ಕಾದಲ್ಲಿ ಬಾಂಗ್ಲಾದಲ್ಲಿ ಹಲವು ಸಾವುಗಳಾಗಿದ್ದು, ಹಸೀನಾರನ್ನು ವಿಚಾರಣೆಗೆ ಒಳಪಡಿಸಬೇಕಾಗಿದೆ ಎಂದು ಯೂನುಸ್ ಸರಕಾರ ಹೇಳುತ್ತಿದೆ.

ಸುಪ್ರೀಂ ತೀರ್ಪಿಗೆ ಟೀಕೆ: ದುಬೆ ಹೇಳಿಕೆಯಿಂದ ಬಿಜೆಪಿ ಅಂತರ

ಸಂಸದ ದುಬೆ ವಿರುದ್ಧ ನ್ಯಾಯಾಂಗ ನಿಂದನೆ?

ದೆಹಲಿ: ವಕ್ಫ್(ತಿದ್ದುಪಡಿ) ಕಾಯಿದೆ ವಿರೋಧಿಸಿದ ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಕೇಂದ್ರ ಸರಕಾರವನ್ನು ಪ್ರಶ್ನೆ ಮಾಡಿರುವುದಕ್ಕೆ ಬಿಜೆಪಿ ಸಂಸದ ನಿಶಿಕಾಂತ್ ದುಬೆ, ನ್ಯಾಯಾಂಗವೇ ಕಾನೂನು ಮಾಡುವುದಾದರೆ ಸಂಸತ್ ಅಸ್ತಿತ್ವದಲ್ಲಿರಬೇಕಾದ ಅಗತ್ಯವಿಲ್ಲ ಎಂದು ಶನಿವಾರ ಹೇಳಿದ್ದರು. ಪರಿಣಾಮ ಸಂಸದ ದುಬೆ ಅವರ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ದಾಖಲಾಗುವ ಸಂದರ್ಭ ಎದುರಾಗಿದೆ.

ಅಟಾರ್ನಿ ಜನರಲ್ ಅನುಮತಿಗೆ ವಕೀಲ ಆನಸ್ ತನ್ವೀರ್ ಪತ್ರ

ಗೊಡ್ಡಾ ಕ್ಷೇತ್ರದಿಂದ 4 ಬಾರಿ ಗೆದ್ದಿರುವ ಸಂಸದ ನಿಶಿಕಾಂತ್ ದುಬೆ ಅವರಿಗೆ ಅವರದೇ ವಿವಾದಾತ್ಮಕ ಹೇಳಿಕೆ ಕಾನೂನು ಸಂಕಷ್ಟ ತಂದೊಡ್ಡಿದೆ. ದುಬೆ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ಕೋರಿ ಅಟಾರ್ನಿ ಜನರಲ್‌ಗೆ ಪತ್ರ ಬರೆಯಲಾಗಿದೆ.

ಬಿಜೆಪಿ ಸಂಸದರ ಸಾರ್ವಜನಿಕ ಹೇಳಿಕೆ ನ್ಯಾಯಾಂಗಕ್ಕೆ ತೀವ್ರ ಅವಹೇಳನಕಾರಿಯಾಗಿದೆ, ಅಪಾಯಕಾರಿಯಾಗಿದೆ ಎಂದಿರುವ ವಕೀಲ ಆನಸ್ ತನ್ವೀರ್, ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಿಗೆ ಪತ್ರ ಬರೆದಿದ್ದಾರೆ.

ಸಂಸದ ನಿಶಿಕಾಂತ್ ದುಬೆ ಹೇಳಿಕೆಯಿಂದ ಬಿಜೆಪಿ ಅಂತರ ಕಾಯ್ದುಕೊಂಡಿದೆ. ಸಂಸದರ ಹೇಳಿಕೆ ವೈಯಕ್ತಿಕ. ಪಕ್ಷ ಇಂತಹ ಹೇಳಿಕೆಗಳನ್ನು ಒಪ್ಪುವುದಿಲ್ಲ, ಎಂದಿಗೂ ಬೆಂಬಲಿಸುವುದಿಲ್ಲ ಎಂದು ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಬಿಜೆಪಿ ಸದಾ ನ್ಯಾಯಾಂಗವನ್ನು ಗೌರವಿಸುತ್ತದೆ ಮತ್ತು ಅದರ ಆದೇಶಗಳು ಮತ್ತು ಸಲಹೆಗಳನ್ನು ಸಂತೋಷದಿಂದ ಸ್ವೀಕರಿಸಿದೆ ಎಂದೂ ಹೇಳಿದ್ದಾರೆ.

ದುಬೆ ಹೇಳಿದ್ದೇನು?

ಸುಪ್ರೀಂ ಕೋರ್ಟ್ ತನ್ನ ಅಧಿಕಾರವನ್ನು ಅತಿಕ್ರಮಿಸಿದೆ. ಸಂಸತ್ತು ಜಾರಿಗೆ ತಂದ ಕಾನೂನುಗಳನ್ನು ರದ್ದುಗೊಳಿಸುತ್ತಿದೆ. ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ರಾಷ್ಟ್ರಪತಿಗಳಿಗೇ ಗಡುವು ವಿಧಿಸಿ, ನಿರ್ದೇಶನ ನೀಡುತ್ತಿದೆ. ಸಂವಿಧಾನದ 368ನೇ ವಿಧಿಯಡಿ ಕಾನೂನು ರಚನೆ ಸಂಸತ್ತಿನ ಅಧಿಕಾರವಾಗಿದೆ. ಆ ಕಾನೂನುಗಳನ್ನು ವ್ಯಾಖ್ಯಾನಿಸುವುದಕ್ಕಷ್ಟೇ ನ್ಯಾಯಾಂಗದ ಪಾತ್ರ ಸೀಮಿತವಾಗಿದೆ ಎಂದು ಸಂಸದ ನಿಷಿಕಾಂತ್ ದುಬೆ ಹೇಳಿದ್ದರು.

ಬಿಹಾರ ಚುನಾವಣೆಗೆ ಪ್ರಚಾರ ಆರಂಭಿಸಿದ ಕೈ

ಬಕ್ಸಾರ್: ಬಿಹಾರ ರಾಜಕಾರಣದಲ್ಲಿನ ಜೆಡಿಯು-ಬಿಜೆಪಿ ಮೈತ್ರಿಯನ್ನು 'ಅವಕಾಶವಾದಿ' ರೀತಿಯದಾಗಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ 'ಖುರ್ಚಿ'ಗಾಗಿ ಪಕ್ಷಗಳನ್ನು ಬದಲಾಯಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಟೀಕಿಸಿದ್ದಾರೆ.

ಬಕ್ಸಾರ್‌ನ ದಲ್ಸಾಗರ್ ಕ್ರೀಡಾಂಗಣದಲ್ಲಿ ಪಕ್ಷದ 'ಜೈ ಬಾಪು, ಜೈಭೀಮ್, ಜೈ ಸಂವಿಧಾನ್' ರ‍್ಯಾಲಿಯಲ್ಲಿ ಮಾತನಾಡಿದ ಖರ್ಗೆ, ವರ್ಷಾಂತ್ಯದಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿರುವ ಎನ್‌ಡಿಎ ಮೈತ್ರಿಕೂಟ ಸರಕಾರವನ್ನು ಕಿತ್ತೊಗೆಯಿರಿ ಎಂದು ರಾಜ್ಯದ ಮತದಾರರಿಗೆ ಕರೆ ನೀಡಿದರು. 2015ರ ಆ.18ರಂದು ಪ್ರಧಾನಿ ನರೇಂದ್ರ ಮೋದಿ ಬಿಹಾರ ರಾಜ್ಯಕ್ಕೆ 1.25 ಲಕ್ಷ ಕೋಟಿ ರು. ಪ್ಯಾಕೇಜ್ ನೀಡುವ ಭರವಸೆ ನೀಡಿದ್ದರು. ಅದೇನಾಯಿತು? ಈ ಬಗ್ಗೆ ಬಿಹಾರ ಜನತೆ ಸಿಎಂ ನಿತೀಶ್ ಅವರನ್ನು ಪ್ರಶ್ನಿಸಬೇಕು. ಮೋದಿ ಸುಳ್ಳಿನ ಕಾರ್ಖಾನೆ ನಡೆಸುತ್ತಿದ್ದಾರೆ ಎಂದು ಟೀಕಾಸ್ತ್ರ ಪ್ರಯೋಗಿಸಿದರು. ಬಿಜೆಪಿ-ಆರ್‌ಎಸ್‌ಎಸ್‌ನವರು ಬಡ ಜನರು, ಮಹಿಳೆಯರು ಮತ್ತು ಸಮಾಜದ ದುರ್ಬಲ ವರ್ಗಗಳ ವಿರುದ್ಧವಾಗಿದ್ದಾರೆ. ಸಮಾಜದ ಸುಧಾರಣೆ ಬಗ್ಗೆ ಅವರಿಗೆ ಯೋಚಿಸುವುದಕ್ಕೂ ಸಾಧ್ಯವಿಲ್ಲ. ಧರ್ಮದ ಆಧಾರ ಸಮಾಜ ವಿಭಜಿಸುವುದಷ್ಟೇ ಅವರ ಉದ್ದೇಶ ಎಂದು ಟೀಕಿಸಿದರು.

ಸಮಾಚಾರ ಸಣ್ಣದಲ್ಲ

ಸಂವಿಧಾನ ರಕ್ಷಣೆಗಾಗಿ ಸಮಾವೇಶ 26 ರಂದು

ರಾಯಚೂರು: ಅಪಾಯದಲ್ಲಿರುವ ಸಂವಿಧಾನ ಉಳಿಸಿಕೊಳ್ಳಲು, ಸಮಾನತೆ, ನ್ಯಾಯವನ್ನು ಖಾತ್ರಿ ಪಡಿಸಿಕೊಳ್ಳಲು ಸಂವಿಧಾನ ಸಂರಕ್ಷಣಾ ಪಡೆ ಏ.26 ರಂದು ದಾವಣಗೆರೆಯ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸಂವಿಧಾನ ಸಂರಕ್ಷಕರ ಸಮಾವೇಶ ಆಯೋಜಿಸಲಾಗಿದೆ ಎಂದು ದೇಶ ಪ್ರೇಮಿ ಯುವಾಂದೋಲನದ ಸಂಚಾಲಕ ಸರೋವರ ಬೆಂಕಿಕಟ್ಟಿ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ನೀಡಿರುವ ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಗೆ ರೂಪಿತವಾಗಿರುವ ಸಂವಿಧಾನ ಆಶಯಗಳ ವಿರುದ್ಧವಾಗಿ ನಡೆದುಕೊಳ್ಳಲಾಗುತ್ತಿದೆ. ಶಿಕ್ಷಣ ಹಕ್ಕು ಬದಲು ಮಾರಾಟದ ಸರಕಾರವಾಗಿ ಮಾರ್ಪಟ್ಟಿದೆ. ಜಾತಿ, ಧರ್ಮದ ಹೆಸರಿನಲ್ಲಿ ಯುವಕರನ್ನು ಪ್ರತ್ಯೇಕಿಸಲಾಗುತ್ತಿದೆ. ಬಹುತ್ವದ ಸಂವಿಧಾನವನ್ನು ಉಳಿಸಿಕೊಳ್ಳಲು ಮುಂದೆ ಬರಬೇಕಾದ ಅವಶ್ಯಕತೆಯಿದೆ. ಯುವಕರು ಸಂವಿಧಾನ ಉಳಿಸಲು ಮುಂದಾಗ ಬೇಕಿದೆ. ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಂದು ಕಲಬುರಗಿ ಜಿಲ್ಲೆಯ ವಾಡಿಯಿಂದ ಬೈಕ್ ರ್‍ಯಾಲಿ ಪ್ರಾರಂಭಿಸಲಾಗಿದ್ದು, ವಿವಿಧ ಜಿಲ್ಲೆ, ತಾಲೂಕಗಳಲ್ಲಿ ಸಂಚರಿಸಿ ದಾವಣಗೆರೆಯಲ್ಲಿ ಸಮಾವೇಶಗೊಳ್ಳಲಾಗುತ್ತದೆ. ಸುದ್ದಿಗೋಷ್ಠಿಯಲ್ಲಿ ಕೌಶಲ್ಯ ಮಂಡ್ಯ, ಯಮುನಾ, ಮೈಲಾರಿ, ಮಾರೇಪ್ಪ ಹರವಿ,ಮಹೇಂದ್ರ, ಖಾಜಾ ಅಸ್ಲಂ ಪಾಷಾ, ಆಂಜಿನೇಯ್ಯ ಕುರುಬದೊಡ್ಡಿ, ಶ್ರೀನಿವಾಸ ಕೊಪ್ಪರ, ಇತರರು ಇದ್ದರು.

ಬಸವೇಶ್ವರ ಜಯಂತಿ ಮೇ 2 ರಂದು

ಮಸ್ಕಿ: ಪಟ್ಟಣದ ಗಚ್ಚಿನ ಮಠ ಬಳಿ ಮೇ 2 ರಂದು ಜಗದ್ಗುರು ರೇಣುಕಾಚಾರ್ಯ ಅವರ ರಜತ ಮಹೋತ್ಸವ, ಜಗ ಜ್ಯೋತಿ ಬಸವೇಶ್ವರ ಜಯಂತಿ ಒಟ್ಟಿಗೆ ನಡೆಯಲಿವೆ. ಎಂದು ಗಚ್ಚಿನ ಮಠದ ವರ ರುದ್ರಮುನಿ ಸ್ವಾಮೀಜಿ ಹೇಳಿದರು. ಗಚ್ಚಿನ ಮಠ ಬಳಿಯ ಸಭಾಂಗಣದಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಭಾನುವಾರ ಮಾತನಾಡಿ ದರು. ಇಬ್ಬರು ಶರಣರ ಭಾವ ಚಿತ್ರಗಳ ಮೆರವಣಿಗೆ ಮೇ 2 ರಂದು ಪಟ್ಟಣದ ಮುಖ್ಯ ವೃತ್ತಗಳ ಬಳಿ ಬೆಳಗ್ಗೆ ನಡೆಯಲಿದೆ. ಸಂಜೆ ನಡೆಯುವ ಜನ ಜಾಗೃತಿ ಧರ್ಮ ಸಭೆಯಲ್ಲಿ ಕಾಶೀ ಪೀಠದ ಜಗದ್ಗುರು ಡಾ. ಚಂದ್ರ ಶೇಖರ ಶಿವಾಚಾರ್ಯ ಮಹಾ ಭಗವತ್ಪಾದರು, ಸಂತೆ ಕೆಲ್ಲೂರು ಘನ ಮಠದ ಗುರು ಬಸವ ಸ್ವಾಮೀಜಿ ಇತರ ಮಠಾಧೀಶರು, ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಮಸ್ಕಿ ಗುರು ಮಂದಾರ ಭಕ್ತಿ ಗೀತೆಗಳ ಧ್ವನಿ ಸುರಳಿ ಬಿಡುಗಡೆಯಾಗಲಿದೆ. ಪಟ್ಟಣ ಸೇರಿ ಸುತ್ತಲಿನ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶರಣರ ಜಯಂತಿ, ಧರ್ಮ ಸಭೆ ಯಶಸ್ವಿ ಗೊಳಿಸಬೇಕು ಎಂದು ಸ್ವಾಮೀಜಿ ಹೇಳಿದರು. ಈ ಸಂದರ್ಭದಲ್ಲಿ ಡಾ. ಪಂಚಾಕ್ಷರಯ್ಯ, ಕುಮಾರೆಪ್ಪ ಕಮತರ, ಡಾ. ಮಲ್ಲಿಕಾರ್ಜುನ, ಅಪ್ಪಾಜಿ ಗೌಡ, ಡಾ. ಪಂಪಣ್ಣ ಇದ್ದರು.

ಶರಣಮ್ಮ ತಾಯಿ ಪುರಾಣ ಪ್ರವಚನ

ಮುದಗಲ್: ಐತಿಹಾಸಿಕ ಮುದಗಲ್ ನಗರದ ಕುಂಬಾರಪೇಟೆಯ ಶ್ರೀಬಸವೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಹಾಗೂ ಶ್ರೀ ಬಸವಣ್ಣನವರ ಜಯಂತ್ಯುತ್ಸವ ಅಂಗವಾಗಿ ಸಜ್ಜಲಗುಡ್ಡದ ಜಗನ್ಮಾತೆ ಶರಣಮ್ಮ ತಾಯಿಯವರ ಪುರಾಣ ಪ್ರವಚನ ಕಾರ್ಯಕ್ರಮ ಜರುಗಿತು. ನಂದವಾಡಗಿಯ ಡಾ. ಚೆನ್ನಬಸವಚಾರ್ಯರು ಜ್ಯೋತಿ ಬೆಳಗುವ ಮೂಲಕ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಗುರುಬಸಪ್ಪ ಸಜ್ಜನ, ಮಲ್ಲಪ್ಪ ಮಾಟೂರು, ಜಾತ್ರಾ ಸಮಿತಿಯ ಪದಾಧಿಕಾರಿಗಳು ನಗರದ ಗುರಿಯರು ಉಪಸ್ಥಿತರಿದ್ದರು.

ನಾಗಲಾಪೂರ ಗ್ರಾ.ಪಂ ಎದುರು ಪ್ರತಿಭಟನೆ

ಮುದಗಲ್ಲ: ನಾಗಲಾಪೂರ ಗ್ರಾಮ ಪಂಚಾಯತ ಸದಸ್ಯರು, ಸಾರ್ವಜನಿಕರು ಇದೇ ಏ. 22 ರಂದು ಮಂಗಳವಾರ ಗ್ರಾ.ಪಂ ಕಾರ್ಯಾಲಯದ ಎದುರಿಗೆ ಅನಿರ್ದಿಷ್ಟ ಅವಧಿಗೆ ಪ್ರತಿಭಟಿಸುವುದಾಗಿ ತಿಳಿಸಿದ್ದಾರೆ. 25 ಗ್ರಾಮ ಪಂಚಾಯತ ಸದಸ್ಯರನ್ನು ಹೊಂದಿರುವ ಗ್ರೇಡ್-1 ಪಂಚಾಯತಗೆ ಗ್ರೇಡ್-2 ಕಾರ್ಯದರ್ಶಿ ಯನ್ನು ಪಿಡಿಓ ಆಗಿ ಅಧಿಕಾರಿ ನೀಡಿರುವುದರಿಂದ ವಿವಿಧ ಹಳ್ಳಿಗಳಲ್ಲಿ ಕುಡಿಯುವ ನೀರು ನರೇಗಾ, ವಸತಿ ಯೋಜನೆ, ಹಾಗೂ ಗ್ರಾಮ ಪಂಚಾಯತ ಕಾರ್ಯಾಲಯದಿಂದ ಸಾರ್ವಜನಿಕರಿಗೆ ಕಾಲ ಕಾಲಕ್ಕೆ ಬೇಕಾಗುವ ದಾಖಲಾತಿಗಳು ಸರಿಯಾದ ಸಮಯಕ್ಕೆ ನೀಡದೆ ಸತಾಯಿಸುತ್ತಿದ್ದು, ಈ ಒಂದಿನ ಪಿಡಿಓ ಜ್ಯೋತಿ ಬಾಯಿ ವೈದ್ಯಕೀಯ ರಜೆ ಪಡೆದು ತೆರಳಿದ ನಂತರ ವೀರಭದ್ರಪ್ಪ ಎನ್ನುವವರಿಗೆ ಪಿಡಿಓ ಹುದ್ದೆಗೆ ನೇಮಕ ಮಾಡಿ ಆದೇಶ ನೀಡಿ ಏಕಾಏಕಿ ತರಾತುರಿಯಲ್ಲಿ ಅದೇ ಗ್ರಾಮ ಪಂಚಾಯತಿಯಲ್ಲಿ ಗ್ರೇಡ್-2 ಕಾರ್ಯದರ್ಶಿಯಾಗಿ ನಿರ್ವಹಿಸುತ್ತಿದ್ದ ವೆಂಕಟೇಶ ಅವರಿಗೆ ಪಿಡಿಓ ಚಾರ್ಜನೀಡಿದ್ದು, ಅನೇಕ ಅನುಮಾನಗಳಿಗೆ ಕಾರಣವಾಗಿದೆ. ಗ್ರೇಡ್-2 ಕಾರ್ಯದರ್ಶಿಗೆ ಪಿಡಿಓ ಹುದ್ದೆಗೆ ನೇಮಕ ಮಾಡಲು ಸರಕಾರದ ನಿಯಮಾವಳಿ ಯಲ್ಲಿ ಅವಕಾಶ ಇಲ್ಲದ್ದಿದರೂ, ಸರಕಾರದ ನಿಯಮವನ್ನು ಉಲ್ಲಂಘಿಸಿ ಗ್ರೇಡ್-2 ಕಾರ್ಯ ದರ್ಶಿಗೆ ಪಿಡಿಓ ಚಾರ್ಜ ನೀಡಿದ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಡಿದ್ದಾರೆ.

{ಡಿ.ಕೆ. ಶಿವಕುಮಾರ್} ಡಿಸಿಎಂ

ಧರ್ಮ ಆಚರಣೆ ವಿಚಾರದಲ್ಲಿ ಸರಕಾರ ಮಧ್ಯಪ್ರವೇಶ ಮಾಡುವುದಿಲ್ಲ. ಆಯಾ ಧರ್ಮ ಉಳಿಸಲು ನಮ್ಮ ಸರಕಾರ ಬದ್ಧವಾಗಿದೆ. ಯಾರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ನಮ್ಮ ಸರಕಾರ ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಕೆಲಸ ಮಾಡಲಿದೆ ಎಂದು ತಿಳಿಸಿದರು.

ಬೂದಿ ಬಳಕೆಯಿಂದ ಕಾಣಿಸಿಕೊಳ್ಳುತ್ತಿರುವ ರೋಗಗಳು | ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಕೆಲಸ ಮಾಡುವ ಕಾರ್ಮಿಕರು

ಇಕ್ಕಟ್ಟಿನಲ್ಲಿ ಇಟ್ಟಿಗೆ ಬಟ್ಟಿ ಜನರು!

ಗಂಗಾವತಿ: ತಾಲೂಕಿನ ವೆಂಕಟಗಿರಿ ಗ್ರಾಮದ ಸಮೀಪ, ರಾಜ್ಯ ಹೆದ್ದಾರಿ 20ರಲ್ಲಿನ ಅಕ್ಕಪಕ್ಕದ ಜಮೀನಿನಲ್ಲಿ ಅನಕೃತವಾಗಿ ತಲೆ ಎತ್ತಿರುವ ಇಟ್ಟಿಗೆ 'ಭಟ್ಟ ಕಾರ್ಮಿಕರಿಗೆ ಸಂಕಷ್ಟ ತಂದಿವೆ. ಇಟ್ಟಿಗೆ ಭಟ್ಟಿಯಲ್ಲಿ ಹೆಚ್ಚು ಬೂದಿ ಬಳಕೆ ಮಾಡುತ್ತಿದ್ದರಿಂದ 'ಭಟ್ಟಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಹಾಗೂ ಮಕ್ಕಳು ರೋಗದ ಬೀತಿ ಎದುರಿಸುತ್ತಿದ್ದಾರೆ. ಆದರೆ, ಸಂಬಂಧಿಸಿದ ಅಕಾಧಿರಿಗಳು ಮಾತ್ರ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ.

ತಾಲೂಕಿನ ವೆಂಕಟಗಿರಿ, ಬಸಾಪಟ್ಟಣ, ದಾಸನಾಳ, ಹೊಸಬೆಣಕಲ್, ವಡ್ಡರಹಟ್ಟಿ, ಉಡಮಕಲ್‌ಗಡ್ಡಿ ಸೇರಿದಂತೆ ನಾನಾ ಗ್ರಾಮಗಳಲ್ಲಿ ಹಾಗೂ ದಾಸನಾಳ ಸಮೀಪದ ರಾಜ್ಯ ಹೆದ್ದಾರಿಯ ಅಕ್ಕಪಕ್ಕದಲ್ಲಿಯೇ ನೂರಾರು ಅನಧಿಕೃತ ಇಟ್ಟಿಗೆ ಬಟ್ಟಿಗಳು ತಲೆ ಎತ್ತಿವೆ. 'ಭಟ್ಟಿಗಳ ಮಾಲೀಕರು ಸಂಬಂಧಪಟ್ಟ ಇಲಾಖೆಗಳಿಂದ ಯಾವುದೇ ಪರವಾನಿಗೆಯನ್ನು ಪಡೆದು ಕೊಳ್ಳದೆ ಕೃಷಿ ಉಪಯೋಗಕ್ಕೆ ಯೋಗ್ಯವಾಗಿರುವ ಜಮೀನು ಗಳಲ್ಲಿಯೇ ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಇಟ್ಟಿಗೆ ತಯಾರಿಕೆಯಲ್ಲಿ ಲಾಭಗಳಿಸುವ ಉದ್ದೇಶದಿಂದ ಮಾಲೀಕರು ಮಣ್ಣಿನ ಜತೆಗೆ ಅಕ್ರಮ ಪ್ರಮಾಣದಲ್ಲಿ ರೇಸ್ ಮಿಲ್‌ಗಳಲ್ಲಿ ದೊರೆಯುವ ಬೂದಿಯಲ್ಲಿ ಬಳಕೆ ಮಾಡುತ್ತಿದ್ದಾರೆ. ನೂರಾ ರು ಇಟ್ಟಿಗ ಇದ್ದರೂ ಸಹ ಯಾವುದೇ ರೀತಿಯ ತಡೆಗೋಡೆ ಇಲ್ಲದೆ ಮಾಲೀಕರು ಬೆಟ್ಟದ ಆಕಾರದಲ್ಲಿ ಬೂದಿ ಸಂಗ್ರಹ ಮಾಡಿಕೊಂಡಿದ್ದಾರೆ. ಜೋರಾಗಿ ಗಾಳಿ ಕಾಣಿಸಿಕೊಂಡರೆ ಸಾಕು ಬೂದಿಯು ಗ್ರಾಮಗಳಲ್ಲಿ ಹಾಗೂ ರಾಜ್ಯ ಹೆದ್ದಾರಿ ಸಂಚಾರ ಮಾಡುವ ವಾಹನ ಸವಾರರಿಗೆ ತೊಂದರೆಯನ್ನು ಉಂಟು ಮಾಡುತ್ತಿದೆ. ದುಡಿಮೆಯನ್ನು ಹರಸಿಕೊಂಡು ನಾನಾ ಜಿಲ್ಲೆಗಳಿಂದ ಕುಟುಂಬ ಸಮೇತ ಆಗಮಿಸಿದ ಕಾರ್ಮಿಕರು, ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಪ್ರತಿ ದಿನಾಲೂ ಕಾರ್ಮಿಕರು ಬೂದಿ ಸೇವನೆಯಿಂದ ಅನಾರೋಗ್ಯದ ಬೀತಿಯನ್ನು ಎದುರಿಸುತ್ತಿದ್ದಾರೆ.

ರೋಗಗಳು ಹೆಚ್ಚಳ: ಇಟ್ಟಿಗೆಗಳನ್ನು ತಯಾರಿಸುವಾಗ ಮಣ್ಣಿನ ಜೊತೆಗೆ ರೇಸ್ ಮಿಲ್‌ಗಳಲ್ಲಿ ದೊರೆಯುವ ಬೂದಿಯನ್ನು ಸಹ ಬಳಕೆ ಮಾಡಲಾಗುತ್ತಿದೆ. ಅಕ ಪ್ರಮಾಣ ದಲ್ಲಿ ಬೂದಿ ಅವಶ್ಯಕತೆ ಇರುವ ಕಾರಣಕ್ಕೆ ಮಾಲೀಕರು ರಾಶಿ ಆಕಾರದಲ್ಲಿ ಬೂದಿಯಲ್ಲಿ ಸಂಗ್ರಹ ಮಾಡಿಕೊಳ್ಳುತ್ತಿದ್ದಾರೆ. ಗಾಳಿಯ ಜೊತೆಗೆ ಬೂದಿಯನ್ನು ಸಹ ಕಾರ್ಮಿಕರು ಸೇವನೆ ಮಾಡುತ್ತಿದ್ದಾರೆ. ಹಾಗಾಗಿಯೇ ಕಾರ್ಮಿಕರಿಗೆ ಅಸ್ತಮಾ, ದಮ್ಮು, ಕೆಮ್ಮು ಸೇರಿದಂತೆ ಮೂಳೆ ಸಂಬಂಧಸಿದ ಕಾಯಿಲೆಗಳು, ಚರ್ಮ ಸಬಂ ಕಾಯಿಲೆಗಳು ಕಾರ್ಮಿಕರಿಗೆ ಕಾಣಿಸಿಕೊಳ್ಳುತ್ತಿವೆ. ಬಡತನ ಇರುವ ಕಾರಣಕ್ಕೆ ರೋಗಗಳು ಕಾಣಿಸಿಕೊಳ್ಳುವ ಬೀತಿ ಇದ್ದರು ಸಹ ಸಂಕಷ್ಟದಲ್ಲಿಯೇ ಕಾರ್ಮಿಕರು ಇಟ್ಟಿಗೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಆದರೆ ಸಂಬಂಧಪಟ್ಟ ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ ಅಕಾರಿಗಳು ಮಾತ್ರ ಮೌನ ವಹಿಸಿದ್ದಾರೆ.

ಶಿಕ್ಷಣದಿಂದ ವಂಚಿತರಾಗುವ ಮಕ್ಕಳ: ವೆಂಕಟಗಿರಿ ಹೋಬಳಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಮಕ್ಕಳು ಹೆಚ್ಚಾಗಿ ಇಟ್ಟಿಗೆ ಕೆಲಸ ಮಾಡಲು ಹೋಗುತ್ತಿದ್ದಾರೆ. ಅಷ್ಟೇ ಅಲ್ಲದೆ ನಾನಾ ಜಿಲ್ಲೆಗಳಿಂದ ಬಂದಿರುವ ಕಾರ್ಮಿಕರ ಮಕ್ಕಳು ಸಹ ಶಿಕ್ಷಣ ಪಡೆದುಕೊಳ್ಳದೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. 18 ವರ್ಷಗಳು ಒಳಗೆ ಇರುವ ಮಕ್ಕಳು ಆಪಾಯಕಾರಿ ಸ್ಥಳದಲ್ಲಿ ಕೆಲಸ ಮಾಡುವಂತ್ತಿಲ್ಲ ಎನ್ನುವ ನಿಯಮ ಇದ್ದರು ಸಹ ಯಾವುದು ಇಲ್ಲಿ ಪಾಲನೆಯಾಗುತ್ತಿಲ್ಲ. ಪಾಲಕರು ಮಾತ್ರ ಆರ್ಥಿಕ ಪರಿಸ್ಥಿತಿಯಿಂದಾಗಿ ಮಕ್ಕಳಿಗೆ ತಿಳಿ ಹೇಳಲು ಮುಂದಾಗುತ್ತಿಲ್ಲ. ಇದರ ಲಾಭವನ್ನು ಇಟ್ಟಿಗೆ ಭೆಟ್ಟಿಗಳ ಮಾಲೀಕರು ಪಡೆದುಕೊಳ್ಳುತ್ತಿದ್ದಾರೆ. ಹಣದ ಆಸೆಗೆ ಭೆಟ್ಟಿಗಳಲ್ಲಿ ಕೆಲಸಕ್ಕೆ ಹೋಗುವ ಮೂಲಕ ಬೂದಿ ಸೇವನೆಯಿಂದ ಅನಾರೋಗ್ಯಕ್ಕೂ ತುತ್ತಾಗುತ್ತಿದ್ದಾರೆ. ಅಷ್ಟೆ ಅಲ್ಲದೆ ಶಿಕ್ಷಣದಿಂದ ಕೂಡ ವಂಚಿತರಾಗುತ್ತಿದ್ದಾರೆ ಎನ್ನುವ ಮಾತುಗಳು ಸ್ಥಳೀಯರಿಂದ ಕೇಳಿ ಬರುತ್ತಿದೆ.

> ಇಟ್ಟಿಗೆ ಬೆಟ್ಟಿಗಳಲ್ಲಿ ಮಕ್ಕಳನ್ನು ಬಳಕೆ ಮಾಡುತ್ತಿರುವುದರ ಕುರಿತು ಮಾಹಿತಿ ಇಲ್ಲ, ಕಾರ್ಮಿಕರ ಆರೋಗ್ಯದ ದೃಷ್ಠಿಯಿಂದ ಕೂಡ ಪರಿಶೀಲನೆಯನ್ನು ನಡೆಸಿ, ಕ್ರಮಕ್ಕೆ ಮುಂದಾಗಲಾಗುವುದು.
> – ಯು.ನಾಗರಾಜ. ತಹಸೀಲ್ದಾರ, ಗಂಗಾವತಿ.

> ಇಟ್ಟಿಗೆ ಭೆಟ್ಟಿಗಳಲ್ಲಿ ಅತಿಹೆಚ್ಚು ಬೂದಿ ಬಳಕೆಯಿಂದ ಬೆಳೆಗಳು ಹಾಳಾಗುತ್ತಿವೆ. ವಾಹನ ಸವಾರರು ಪರದಾಡ ಬೇಕಾಗುತ್ತಿದೆ. ಕಾರ್ಮಿಕರು ಅನಾರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಷ್ಟೆಲ್ಲ ಸಮಸ್ಯೆ ಇದ್ದರು ಅಕಾರಿಗಳು ಮಾತ್ರ ಮೌನ ವಹಿಸಿದ್ದಾರೆ.
> – ಶ್ಯಾಮಣ್ಣ, ಸಾಮಾಜಿಕ ಕಾರ್ಯಕರ್ತ.

ಕಲ್ಯಾಣ ಪಥ ಯೋಜನೆಯಡಿ ರಸ್ತೆ ಅಭಿವೃದ್ಧಿಗೆ ಚಾಲನೆ

34 ಕೋಟಿ ರು. ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಹಿಟ್ನಾಳ ಚಾಲನೆ

ತಾಲೂಕು ಬೈರಾಪುರ ಗ್ರಾಮದಲ್ಲಿ ಬೆಟಗೇರಿ-ಬೈರಾಪೂರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಾಘವೇಂದ್ರ ಹಿಟ್ನಾಳ ಭಾನುವಾರ ನೀಡಿದರು.

ಕೊಪ್ಪಳ: ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮೀಣ ಮತ್ತು ಜಿಲ್ಲಾ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಹದಗೆಟ್ಟಿರುವ ಎಲ್ಲ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಕಲ್ಯಾಣ ಪಥ ಯೋಜನೆಯಡಿ ರಸ್ತೆಗಳ ಅಭಿವೃದ್ಧಿಗೆ ಕೊಪ್ಪಳ ಕ್ಷೇತ್ರಕ್ಕೆ 34 ಕೋಟಿ ರು. ಅನುದಾನ ಮಂಜೂರಾಗಿದೆ ಎಂದು ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಹೇಳಿದರು.

ತಾಲೂಕಿನ ಬೈರಾಪುರ ಗ್ರಾಮದಲ್ಲಿ ಬೆಟಗೇರಿ-ಬೈರಾಪೂರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಭಾನುವಾರ ಮಾತನಾಡಿದರು.

ಸದ್ಯ ಕೊಪ್ಪಳ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 200 ಕೋಟಿ ರು. ವೆಚ್ಚದಲ್ಲಿ ಹದಗೆಟ್ಟ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಇದೇ ಆರ್ಥಿಕ ವರ್ಷದಲ್ಲಿ ಎಲ್ಲ ರಸ್ತೆ ಅಭಿವೃದ್ಧಿ ಪಡಿಸಲಾಗುವುದು. ಒಂದೇ ದಿನ ಕಾತರಕಿ, ಹಲವಾಗಲಿ, ಬೋಚನಹಳ್ಳಿ, ಬೈರಾಪುರ ಗ್ರಾಮದಲ್ಲಿ ಸುಮಾರು 10.84 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈಗಾಗಲೇ ಕಾಮಗಾರಿ ಕೂಡ ಆರಂಭ ಮಾಡಲಾಗಿದೆ. ಗುಣಮಟ್ಟದ ಕಾಮಗಾರಿ ಮಾಡುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇನೆ ಎಂದರು.

ಜಿ.ಪಂ ಮಾಜಿ ಅಧ್ಯಕ್ಷ ಎಸ್.ಬಿ. ನಾಗರಳ್ಳಿ, ಮುಖಂಡರಾದ ಹನುಮರಡ್ಡಿ ಅಂಗನಕಟ್ಟಿ, ಭರಮಪ್ಪ ಹಟ್ಟಿ, ಗಾಳೆಪ್ಪ ಪೂಜಾರ್, ವೆಂಕನಗೌಡ್ರು ಹಿರೇಗೌಡ್ರು, ಭೀಮಣ್ಣ ಬೋಚನಹಳ್ಳಿ, ಯಲ್ಲನಗೌಡ್ರು, ಮಂಜುನಾಥ ಹಂದ್ರಾಳ, ತೋಟಪ್ಪ ಸಿಂಟ್ರ, ಬಸವರಾಜ ಇಂದಿರಗಿ, ಅನ್ವರ್ ಗಡಾದ್, ನಿಂಗಪ್ಪ ಮೇಟಿ, ಪರಶುರಾಮ ಬೈರಾಪುರ, ತಹಸೀಲ್ದಾರ್ ವಿಠ್ಠಲ ಚೌಗಲೇ, ತಾಪಂ ಇಒ ದುಂಡಪ್ಪ ತುರಾದಿ, ಮಲ್ಲು ಪೂಜಾರ, ಗವಿಸಿದ್ದನಗೌಡ ಮುದ್ದಾಬಳ್ಳಿ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅಕ್ಬರ ಪಾಷ ಪಲ್ಟಾನ್ ಸೇರಿ ಇತರರು ಇದ್ದರು.

ವಕ್ಫ್ ತಿದ್ದುಪಡಿ ಕಾಯ್ದೆಗೆ ವಿರೋಧ

ಸಿಂಧನೂರು: ಕೇಂದ್ರದ ಎನ್‌ಡಿಎ ಮತ್ತು ರಾಜ್ಯ ಕಾಂಗ್ರೆಸ್ ಸರಕಾರ ಮೇಲಿಂದ ಮೇಲೆ ಪೆಟ್ರೋಲ್, ಡೀಸೆಲ್, ಗ್ಯಾಸ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವುದನ್ನು ವಿರೋಧಿಸಿ ಸಿಪಿಐಎಂಎಲ್ ಲಿಬರೇಷನ್ ತಾಲೂಕು ಘಟಕದಿಂದ ಸ್ಥಳೀಯ ಮಿನಿವಿಧಾನಸೌಧ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ರಾಷ್ಟ್ರಪತಿಗೆ ಬರೆದ ಮನವಿಯನ್ನು ತಹಸೀಲ್ದಾರ್‌ಗೆ ಸಲ್ಲಿಸಲಾಯಿತು. ಪೆಟ್ರೋಲ್ ಇಂದಿನ ದರ 102.92, ರು. ಡೀಸೆಲ್ ದರ 91.02 ರು. ಇದ್ದು, ಪ್ರತಿ ಲೀಟರ್‌ಗೆ 2 ರು. ಹೆಚ್ಚಿಸಲಾಗಿದೆ. ಮನಬಂದಂತೆ ಇಂಧನ ಬೆಲೆ ಹೆಚ್ಚಿಸುವುದರಿಂದ ಸಾರಿಗೆ, ಸರಕು ಸಾಗಣೆ, ವ್ಯಾಪಾರ ವಹಿವಾಟು, ಕೃಷಿ, ಕೈಗಾರಿಕೆ ಸೇರಿ ಇನ್ನಿತರೆ ವಲಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದರಿಂದ ಜನಸಾಮಾನ್ಯರು ಮತ್ತಷ್ಟು ಸಂಕಷ್ಟ ಎದುರಿಸುವಂತಾಗಿದೆ ಎಂದು ಸಿಪಿಐಎಂಎಲ್ ಲಿಬರೇಶನ್ ಮುಖಂಡ ಬಸವರಾಜ ಕೊಂಡೆ ದೂರಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವುದನ್ನು ವಿರೋಧಿಸಿ ಸಿಪಿಐಎಂಎಲ್ ಲಿಬರೇಷನ್ ಮಿನಿವಿಧಾನಸೌಧ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ರೈತರು, ಕಾರ್ಮಿಕರು ಹಾಗೂ ಜನಸಾಮಾನ್ಯರಿಗೆ ಮಾರಕವಾಗಿರುವ ನೀತಿಗಳನ್ನು ಕೈಬಿಡಬೇಕು ಹಾಗೂ ಇಂಧನ ಬೆಲೆ ಏರಿಕೆಯನ್ನು ಸರಕಾರಗಳು ಇಳಿಸಬೇಕು. ವಕ್ಫ್ ತಿದ್ದುಪಡಿ ಕಾಯ್ದೆ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಸಿಪಿಐಎಂಎಲ್ ಲಿಬರೇಶನ್ ಮುಖಂಡ ಆರ್.ಎಚ್. ಕಲಮಂಗಿ, ಶ್ರೀನಿವಾಸ ಬುಕ್ಕನಹಟ್ಟಿ, ಅಜ್ಜು, ಸಾದಿಕ್, ಹುಸೇನ್, ರಹೀಮ್, ಬಸವರಾಜ ಅರಳಹಳ್ಳಿ, ಹುಸೇನಪ್ಪ, ರಮೇಶ್, ಯಮನೂರಪ್ಪ ಇದ್ದರು.

ಜನಿವಾರ ತೆಗೆಸಿದ ಅಧಿಕಾರಿ ವಿರುದ್ಧ ಕ್ರಮಕ್ಕೆಗೊಳ್ಳಿ

ರಾಯಚೂರು: ಸಿಇಟಿ ಪರೀಕ್ಷೆ ಬರೆಯಲು ತೆರಳಿದ್ದ ವಿದ್ಯಾರ್ಥಿಯ ಜನಿವಾರ ತೆಗೆಯುವಂತೆ ಸೂಚುಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ನೇತೃತ್ವದಲ್ಲಿ ಪ್ರತಿಭಟಿಸಿ, ಜಿಲ್ಲಾಧಿಕಾರಿ ಮೂಲಕ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ ಸುಧಾಕರ ಅವರಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟಿಸಿದ ಅವರು, ಜನವಾರ ತೆಗೆಯುವಂತೆ ಹೇಳುವ ಮೂಲಕ ಬ್ರಾಹ್ಮಣ ಸಮಾಜಕ್ಕೆ ಅವಮಾನ ಮಾಡಿದ್ದಾರೆ. ಜನಿವಾರ ತೆಗೆಯುವಂತೆ ಪ್ರತ್ಯೇಕ ಸೂಚನೆಯನ್ನ ಹೊರಡಿಸಲಾಗಿದೆಯಾ ಸಿಇಟಿಗೂ ಬ್ರಾಹ್ಮಣ ಸಮುದಾಯಕ್ಕೆ ಏನಾದರೂ ಸಂಬಂಧವಿದೆಯಾ ಎಂದು ಪ್ರಶ್ನಿಸಿರುವ ಮಹಾಸಭಾದ ಪದಾಧಿಕಾರಿಗಳು, ಕೂಡಲೇ ತೀರ್ಥಹಳ್ಳಿ ಮತ್ತು ಬೀದರ್‌ನ ಸಿಇಟಿ ಪರೀಕ್ಷಾ ಕೇಂದ್ರದ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಪುನಃ ಇಂತಹ ಪ್ರಕರಣ ಮರುಕಳಿಸದಂತೆ ಎಚ್ಚರವಹಿಸವುದರ ಜತೆಗೆ ಪರೀಕ್ಷೆಯಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿ ರಮೇಶ ಕುಲಕರ್ಣಿ, ರಾಮರಾವ್ ಗಣೇಕಲ್, ಡಾ.ಆನಂದ ತೀರ್ಥ್ ಫಡ್ನಾವೀಸ್, ಮುರಳಿಧರ ಕುಲಕರ್ಣಿ, ಪ್ರಾಣೇಶ ಮುತಾಲಿಕ್ ಸೇರಿದಂತೆ ಹಲವರು ಭಾಗಿಯಾಗಿದ್ದರು.



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ನೇತೃತ್ವದಲ್ಲಿ ಡಿಸಿ ಸುಧಾಕರ ಅವರಿಗೆ ಮನವಿ ಸಲ್ಲಿಕೆ.

ಹರೆಟೆ ಕಟ್ಟೆಯಾದ ಸಿಂಧನೂರು ಪ್ರವಾಸಿ ಮಂದಿರ

ರಮೇಶ ನಾಯಕ ಗೋನವಾರ

ಸಿಂಧನೂರು: ರಾಜ್ಯದ 6 ಕೊಟಿ ಜನರಿಗೆ ಉಚಿತವಾಗಿ ಪ್ರವಾಸಿ ಮಂದಿರದ ರೂಮ್ ಬೇಕಾದರೆ ಸೀದ ಬಸ್ ಏರಿ ಸಿಂಧನೂರು ಪ್ರವಾಸಿ ಮಂದಿರಕ್ಕೆ ಬನ್ನಿ ದುಡ್ಡು ಬೇಡ್ ಏನು ಬೇಡ್ ನಾನು ಈ ಪಕ್ಷದ ಅಧ್ಯಕ್ಷ ಯಾವುದೋ ಪಕ್ಷದ ಅಧ್ಯಕ್ಷ ಅಂತಾ ಹೇಳಿ ಯಾರ ಅನುಮತಿ ಪಡೆಯದೇ ರೂಮ್ ಪಡೆಯಬಹುದು.

ಕಟ್ಟಡವು ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಕಾಂಪೌಂಡ್ ಒಳಗಡೆ ಕಸ, ಕಡ್ಡಿ ರಾಶಿ ಬಿದ್ದಿದೆ. ಸಾರ್ವಜನಿಕರ ಬಹಿರ್ದೆಸೆ ತಾಣವಾಗಿ ಮಾರ್ಪಟ್ಟಿದೆ. ಪುಡಾರಿಗಳಿಗೆ ಮತ್ತು ಮದ್ಯವ್ಯಸನಿಗಳೂ ಆಶ್ರಯ ನೀಡಿದೆ. ಕಟ್ಟಡದ ಮೇಲೆ ಗಿಡಗಳು ಬೆಳೆದಿವೆ. ಅವುಗಳ ಬೇರು ಗೋಡೆಯಲ್ಲಿ ಇಳಿದಿರುವುದರಿಂದ, ಚಾವಣಿ ಸೋರುತ್ತಿದ್ದು, ನಿರ್ವಹಣೆ ಇಲ್ಲದೆ ಅನಾಥವಾಗಿದೆ.

ದುರವಸ್ಥೆ: ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಪ್ರವಾಸಿ ಮಂದಿರ ಹಾಳು ಕೊಂಪೆಯಾಗಿದೆ .ಆದರೂ, 40 ವರ್ಷಗಳ ಸುದೀರ್ಘ ಅವಧಿಯಲ್ಲಿ ಅದು ಶಿಥಿಲಾವಸ್ಥೆ ತಲುಪಿದೆ. ಕೊಠಡಿಯ ಗಾಜಿನ ಕಿಟಕಿಗಳು ಪುಂಡರ ಹಾವಳಿಯಿಂದಾಗಿ ಪುಡಿಯಾಗಿವೆ. ಎಲ್ಲೆಂದರಲ್ಲಿ ಮದ್ಯದ ಬಾಟಲಿಗಳು ಕಾಣಸಿಗುತ್ತವೆ. ಮಲ, ಮೂತ್ರ ವಿಸರ್ಜನೆಯಿಂದ ನೀರಿನ ತೊಟ್ಟಿ ದುರ್ನಾತ ಬೀರುತ್ತಿದೆ.

ರಾಜಕೀಯ ಇಚ್ಛಾಶಕ್ತಿಯ ಕೊರತೆ

ಬಹುತೇಕ ಶಾಸಕರ ಸಚಿವರ ಗಮನಕ್ಕೆ ತಂದಿದ್ದರೂ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಕಟ್ಟಡ. ನಿರ್ವಹಣೆ ಮಾಡುವ ಸಾಮರ್ಥ್ಯ ಇಲ್ಲವೆಂದರೆ ಬೇರೆ ಇಲಾಖೆಗೆ ವಹಿಸಿದರೆ ಒಳಿತು ಎಂದು ಸಾರ್ವಜನಿಕರು ಹಾಗೂ ಬುದ್ದಿ ಜೀವಿಗಳ ಅಭಿಪ್ರಾಯವಾಗಿದೆ. ಸಭೆ ಸಮಾರಂಭಗಳ ಬಳಕೆಗೂ ಸಿಗದ ಕಟ್ಟಡ ಕೆಲಸದ ನಿಮಿತ್ತ ಇಲ್ಲಿಗೆ ಬರುವ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಪ್ರವಾಸಿ ಮಂದಿರದಲ್ಲಿ ವಿಶ್ರಾಂತಿ ಪಡೆಯಲು ಅಥವಾ ಸಭೆ ಮಾಡಲು ಉದ್ದೇಶಿಸಿದ್ದರೆ ಅವರಿಗೆ ನಿರಾಸೆ ಖಚಿತ. ಬರೀ ಹರಟೆ ಹೊಡೆಯುವ ಜನರ ಕೊಂಪೆಯಾಗಿದೆ. ಕಳೆದ 4 ವರ್ಷಗಳ ಹಿಂದೆ ಇದೇ ಪ್ರವಾಸಿ ಮಂದಿರಕ್ಕೆ ಲಿಂಗಸೂರು ಎಸಿಯವರು ವಿಶ್ರಾಂತಿ ಪಡೆಯುಲು ಬಂದಾಗ ಸರ್ವಾಜನಿಕರನ್ನು ನೋಡಿ ಗಾಬರಿಯಾಗಿ ಲೋಕಪಯೋಗಿ ಇಲಾಖೆಗೆ ಸಾರ್ವಜನಿಕರಿಗೆ ಅವಕಾಶ ಮಾಡಿಕೊಂಡದಂತೆ ತಾಕೀತು ಮಾಡಿದ್ದರೂ, 2 ವರ್ಷಗಳ ಅವಧಿಯ ವರೆಗೂ ಸಾರ್ವಜನಿಕರಿಗೆ ನಿರ್ಬಂಧ ಹೇರಿದ್ದರು. ಸಿ.ಎಸ್. ಪಾಟೀಲ್ ಲೋಕೋಪಯೋಗಿ ಎಇಇ ಬಂದ ಮೇಲೆ ಸಾರ್ವಜನಿಕರಿಗೆ ಮುಕ್ತವಾಗಿದ್ದರಿಂದ ಪಾಳು ಬಿದ್ದು ಪುಂಡ್ ಪೋಕರಿಗಳ ಮಂದಿರವಾಗಿದೆ.

> ನಿರ್ವಹಣೆಗೆ ಅನುದಾನದ ಕೊರತೆ 'ಪ್ರವಾಸಿ ಮಂದಿರ ನಿರ್ಮಾಣವಾಗಿ ಇಪ್ಪತ್ತು ವರ್ಷಗಳಾಗಿವೆ. ಅಂದಿನಿಂದಲೂ ಅನುದಾನದ ಕೊರತೆಯಿಂದ ಕಟ್ಟಡದ ನಿರ್ವಹಣೆ ಸಾಧ್ಯವಾಗುತ್ತಿಲ್ಲ ಕನಿಷ್ಟ ನಾಲ್ಕೈದು ನೌಕರರು ನಿರ್ವಹಣೆಗೆ ಬೇಕು ಅಂದರೆ 2 ಜನ ನೌಕರರು ಇದ್ದಾರೆ . ವಿದ್ಯುತ್ ಶುಲ್ಕ ಪಾವತಿಯಾಗುತ್ತಿಲ್ಲ, ಇಲ್ಲಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ. ನಿರ್ಭಂದ ಹೇರಲು ಮೇಲಾಧಿಕಾರಿಗಳಿಗೆ ಪತ್ರ ಬರೆದಿದ್ದು, ಅವರು ಅನುಮತಿ ಕೊಟ್ಟ ತಕ್ಷಣ ನಿರ್ಬಂಧಗಳನ್ನು ಹೇರಲಾಗುವುದು.
> -ಹೊನ್ನೇಶ್, ಎಇಇ ಲೋಕೋಪಯೋಗಿ ಇಲಾಖೆ

ಅನಾಥೆಗೆ ಆಸರೆಯಾದ ಸಖಿ ಕೇಂದ್ರ

ಕೊಪ್ಪಳ: ಕೌಟುಂಬಿಕ ಕಲಹದ ಕಾರಣಕ್ಕೆ ಮನೆ ಬಿಟ್ಟು ಬಂದಿದ್ದ ಮಹಿಳೆಯೊಬ್ಬರ ಬಾಳಿಗೆ ಸಖಿ ಒನ್ ಸ್ಟಾಪ್ ಸೆಂಟರ್ ಆಸರೆಯಾಗಿದೆ. ನಗರದ ಜಿಲ್ಲಾಸ್ಪತ್ರೆಯಲ್ಲಿ ಸುಮಾರು ಒಂದೂವರೆ ತಿಂಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಕಾಲ ಕಳೆದ ಶಿಲ್ಪಾ ಇಟಗಿ ಎಂಬ ಮಹಿಳೆಗೆ ಶಸ್ತ್ರ ಚಿಕಿತ್ಸೆ ಮಾಡಿಸುವ ಮೂಲಕ ಮಹಿಳೆ ಬಾಳಿಗೆ ಬೆಳಕಾಗಿದ್ದಾರೆ. ಕೊಪ್ಪಳ ಕಿಮ್ಸ್ ವೈದ್ಯರು ಮತ್ತು ಸಿಬ್ಬಂದಿ ಕುಟುಂಬ ಸದಸ್ಯರಂತೆ ನಿಂತು ಯುವತಿಗೆ ಚಿಕಿತ್ಸೆ ನೀಡಿದ್ದಾರೆ.

ಕುಟುಂಬದವರ ನೆರವಿನ ಕೊರತೆ, ಆರೋಗ್ಯ ಸಮಸ್ಯೆಯಿಂದ ಇಲ್ಲಿನ ಗವಿಮಠಕ್ಕೆ ಬಂದಿದ್ದ ಶಿಲ್ಪಾಗೆ ಅಲ್ಲಿನ ಸಿಬ್ಬಂದಿ ಸಾಂತ್ವನ ಕೇಂದ್ರಕ್ಕೆ ಕಳುಹಿಸಿದ್ದಾರೆ. ಸಖಿ ಒನ್ ಸ್ಟಾಪ್ ಸೆಂಟರ್ ಘಟಕ ಆಡಳಿತಾಧಿಕಾರಿ ಯಮುನಾ ಬೆಸ್ತರ ಶಿಲ್ಪಾರನ್ನು ಸಂಪರ್ಕಿಸಿದ್ದು, ಯಮುನಾ ಇವರನ್ನು ಜಿಲ್ಲಾಸ್ಪತ್ರೆಗೆ ಚಿಕಿತ್ಸೆ ದಾಖಲಿಸಿದ್ದಾರೆ.

ಯುವತಿಗೆ ಶಸ್ತ್ರಚಿಕಿತ್ಸೆ ಅಗತ್ಯವಿದ್ದರೂ ಜವಾಬ್ದಾರಿ ತೆಗೆದುಕೊಳ್ಳುವವರು ಯಾರೂ ಇಲ್ಲದ ಕಾರಣ ವೈದ್ಯರು ಕೂಡ ಅಸಹಾಯಕರಾಗಿದ್ದರು. ಇದೇ ಕಾರಣಕ್ಕೆ ಯುವತಿ ಅನೇಕ ದಿನಗಳಿಂದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಿಲ್ಲದೇ ಇದ್ದಳು. ನಿತ್ಯ ನೋವು ಅನುಭವಿಸುತ್ತಿದ್ದರೂ ಯಾರೂ ನೆರವು ನೀಡದ ಕಾರಣಕ್ಕೆ ಕಾಲಿನ ನೋವು ಅನುಭವಿಸಬೇಕಾಗಿತ್ತು. ಆಗ ಸಖಿ ಘಟಕದ ಸಿಬ್ಬಂದಿ, ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ್ ಎಸ್. ದರಗದ, ಜಿಲ್ಲಾಸ್ಪತ್ರೆಯ ನರರೋಗ ತಜ್ಞ ಡಾ. ವಿಜಯ್ ಸುಂಕದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪರಶುರಾಮ್ ಶೆಟ್ಟಪ್ಪನವರ ಸೇರಿದಂತೆ ಅನೇಕರು ನೆರವು ನೀಡಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ಚೇತರಿಕೊಂಡಿರುವ ಶಿಲ್ಪ ಮತ್ತು ಆಸ್ಪತ್ರೆ ಸಿಬ್ಬಂದಿ.

ಯುವತಿ ಹಿನ್ನೆಲೆ: ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಶಿಲ್ಪಾ ಮತ್ತು ಆಕೆಯ ಕುಟುಂಬ ಕೌಟುಂಬಿಕ ಸಮಸ್ಯೆಯಿಂದ ಕಾರಟಗಿ ತಾಲೂಕು ಸಿದ್ದಾಪುರ ಗ್ರಾಮದ ಅಜ್ಜಿ ಗ್ರಾಮದಲ್ಲಿ ನೆಲೆಸಿದೆ. ಶಿಲ್ಪಾ ವಯಸ್ಕಳಾದ ನಂತರ ತಮ್ಮ ಪಾಲಕರು ಮತ್ತು ಈಕೆ ನಡುವೆ ವೈಮನಸ್ಸು ಉಂಟಾಗಿ, ಮನೆ ಬಿಟ್ಟು ಹೋಗಿದ್ದಾಳೆ. ಶಿಲ್ಪಾ, ಬೆಂಗಳೂರು ಹಾಗೂ ಧಾರವಾಡದಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡಿದ್ದಾರೆ. ಧಾರವಾಡದಲ್ಲಿ ವ್ಯಕ್ತಿಯೊಬ್ಬರ ಆರೋಗ್ಯ ಆರೈಕೆ ಮಾಡಿ, ಅದರಿಂದ ಬಂದ ಹಣದಲ್ಲಿ ಬದುಕು ನಡೆಸುತ್ತಿದ್ದರು. ಈ ಕೆಲಸಕ್ಕೆ ಸೇರಿಕೊಂಡ ಕೆಲ ತಿಂಗಳಲ್ಲಿ ಎರಡನೇ ಮಹಡಿಯಿಂದ ಆಕಸ್ಮಿಕವಾಗಿ ಜಾರಿ ಬಿದ್ದಿದ್ದರಿಂದ ಕಾಲು ಮೂಳೆ ಮತ್ತು ತಲೆಗೆ ಪೆಟ್ಟು ಮಾಡಿಕೊಂಡಿದ್ದಾಳೆ.

ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಶಿಬಿರ ಬಹು ಮುಖ್ಯ

ಲಿಂಗಸುಗೂರು: ಮಕ್ಕಳ ಶಿಸ್ತು ಮತ್ತು ವ್ಯಕ್ತಿತ್ವ ವಿಕಸನಕ್ಕೆ ಶಿಬಿರಗಳು ಬಹು ಮುಖ್ಯ ಎಂದು ಪ್ರೊ. ಬಾಲಪ್ಪ ವಾಂಕ್ದೋತ್ ಹೇಳಿದರು. ತಾಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ಮತ್ತು ಒಳ ಬಳ್ಳಾರಿ ಚೆನ್ನಬಸವೇಶ್ವರ ಶಿಕ್ಷಣ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಲಿಂಗಸೂಗೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಎನ್‌ಎಸ್‌ಎಸ್ ಶಿಬಿರದ ಕುರಿತು ಹಾಗೂ ಹೊನ್ನಳ್ಳಿ ಗ್ರಾಮಸ್ಥರು ನೀಡಿದ ಸಹಕಾರದ ಕುರಿತು ಶ್ಲಾಘಿಸಿದರು.

ಅಮರಗುಂಡಪ್ಪ ಕ್ವಾಟಿ ಮಾತನಾಡಿ, ಎನ್‌ಎಸ್‌ಎಸ್ ಈ ಒಂದು ಯೋಜನೆ ವಿದ್ಯಾರ್ಥಿಗಳಲ್ಲಿ ಮಾನಸಿಕ ಮತ್ತು ದೈಹಿಕ ಶಕ್ತಿ ಸಾಮರ್ಥ್ಯವನ್ನು ನೀಡುವುದರ ಜತೆಗೆ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ. ನಿಮಗಾಗಿ ಹೊನ್ನಳ್ಳಿ ಗ್ರಾಮದ ಜನರು ಏನೇ ಸಹಕಾರ ಸಹಾಯ ಮಾಡಲು ಸಿದ್ದರಿದ್ದೇವೆ ಎಂದು ಹೇಳಿದರು.

ಗ್ರಾಮಸ್ಥರಿಂದ ವಿಸಿಬಿ ಕಾಲೇಜ ಉಪನ್ಯಾಸಕ ಬಳಗಕ್ಕೆ ಹಾಗೂ ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜಡಿಯ ಪ್ಪ ಹೊನ್ನಳಿ, ಗ್ರಾಂ.ಪಂ. ಸದಸ್ಯ ಬಸಪ್ಪ. ಹೂಗಾರ್, ಸಿದ್ದಣ್ಣ ನಾರಾಯಣಪುರ, ಗ್ರಾಮಸ್ಥ, ವಿಜಯಕುಮಾರ್ ಪೇರಿ, ರುದ್ರಪ್ಪ ಕುಂಬಾರ, ಬಸಪ್ಪ ಮಸ್ಕಿ, ಈರಣ್ಣ ಅಂಗಡಿ, ಡಾ. ಸುಜಾತ ನೇಟೆಕಲ್, ಹಾಗೂ ಇತರರು ಇದ್ದರು.

ನಾಟಕ ಕಲೆ ಉಳಿಸಿ: ಮಹಾಂತ ಶ್ರೀಗಳು

ಮುದಗಲ್: ನಾಟಕ ಹೆಚ್ಚೆಚ್ಚು ನೋಡುವುದರ ಮೂಲಕ ನಾಟಕ ಕಲೆ ಉಳಿಸಿ ಬೆಳೆಸಿಕೊಂಡು ಹೋಗ ಬೇಕಾಗಿದೆ ಎಂದು ನ'ಂದ'ವಾ'ಡ'ಗಿಯ ಮಹಾಂತ ಶ್ರೀಗಳು ಹೇಳಿದರು. ಸಮೀಪದ ಸಜ್ಜಲಗುಡ್ಡ ಗ್ರಾಮದ ಶಿವಶರಣೆ ಶರಣಮ್ಮ ತಾಯಿ ಅವರ 45 ನೇ ಪುಣ್ಯಸ್ಮರಣೋತ್ಸವ ನಿಮಿತ್ತ ಶುಕ್ರವಾರ ಹಮ್ಮಿಕೊಂಡಿದ್ದ 'ರೈತನ ರಾಜ್ಯದಲ್ಲಿ ರೌಡಿಗಳ ದರ್ಬಾರ್' ಎಂಬ ಸಾಮಾಜಿಕ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು. ನಾಟಕಗಳು ಸಮಾಜದ ಪ್ರತಿಬಿಂಬವಾಗಿದ್ದು, ಸಮಾಜದಲ್ಲಿ ಮನೆ ಮಾಡಿದ ಮೌಢ್ಯವನ್ನು ಎತ್ತಿ ತೋರಿಸುತ್ತವೆ ಎಂದರು.

ಈ ಸಂದರ್ಭದಲ್ಲಿ ಆಳಂದದ ಸಿದ್ದೇಶ್ವರ ಶ್ರೀಗಳು, ಬಯ್ಯಾಪೂರ ಗ್ರಾ.ಪಂ ಅಧ್ಯಕ್ಷೆ ನಾಗಮ್ಮ ಚಿನ್ನಾಪೂರ, ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ನಾಗಭೂಷಣ ಕೊಮನೂರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಉಪ್ಪಾರ ನಂದಿಹಾಳ, ಗ್ರಾ.ಪಂ. ಸದಸ್ಯರಾದ ಚಂದ್ರಶೇಖರ ಹವಾಲ್ದಾರ್, ಸುಭಾಸ ಕೊಮನೂರು, ಚಂದ್ರಶೇಖರಗೌಡ ಮಲ್ಲನಗೌಡ, ಬೈಯಾಪುರ ಗ್ರಾಮಸ್ಥರು ಬೊಮ್ಮನಾಳ, ತಿಮ್ಮಣ್ಣಾಯರಕೇರಿ, ಸಂಗಪ್ಪನಾಯಕ, ಅಂದಾನಪ್ಪ ಮಾವಿನಬಾವಿ ಇತರರಿದ್ದರು.

ಜೋಳ ಖರೀದಿಗೆ ಸರ್ವರ್ ಸಮಸ್ಯೆ; ಸರಕಾರದ ವಿರುದ್ಧ ಆಕ್ರೋಶ

ಬಸವರಾಜ ನಾಗಡದಿನ್ನಿ

ರಾಯಚೂರು: ಬೆಳಕಿನ ನಾಡು ರಾಯಚೂರಿನಲ್ಲಿ ಜೋಳ ಬೆಳೆದ ರೈತರು ಖರೀದಿ ಕೇಂದ್ರದ ಆರಂಭಕ್ಕಾಗಿ ಕಳೆದ ಒಂದು ತಿಂಗಳಿಂದ ಕಾದು ಕುಳಿತಿದ್ದರು. ಅಂತು ಖರೀದಿ ಕೇಂದ್ರ ಆರಂಭವಾಯಿತು ಎಂದು ಖುಷಿ ಪಟ್ಟಿದ್ದ ರೈತರಿಗೆ ನಿರಾಸೆ ಯಾಗುವಂತಾಗಿದೆ. ಆರಂಭವಾದ ಖರೀದಿ ಕೇಂದ್ರ ಸರಕಾರ ಒಂದೇ ದಿನದಲ್ಲಿ ಬಂದ್ ಮಾಡಿದೆ. ಕಾಟಾಚಾರಕ್ಕೆ ಖರೀದಿ ಕೇಂದ್ರ ಆರಂಭಿಸಲಾಗಿದೆ. ಎಂದು ರೈತರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಖರೀದಿ ಮಾಡುವುದು ತಡವಾದಷ್ಟು ಜೋಳಕ್ಕೆ ಹುಳು ಹತ್ತುವ ಆತಂಕ ರೈತರದ್ದಾಗಿದೆ.

ಜಿಲ್ಲೆಯಲ್ಲಿ ತುಂಗಭದ್ರಾ ಮತ್ತು ನಾರಾಯಣಪುರ ಬಲದಂಡೆ ಕಾಲುವೆಗಳಿಂದ ನೀರಾವರಿಗೊಳಪಟ್ಟ ಜಮೀನುಗಳಲ್ಲಿ ಭತ್ತ, ಹತ್ತಿ ಮತ್ತು ಮೆಣಸಿನಕಾಯಿ ಬೆಳೆದರೆ, ಮಳೆಯಾಶ್ರಿತ ಜಮೀನುಗಳಲ್ಲಿ ಬಿಳಿ ಜೋಳವನ್ನ ಬೆಳೆಯಲಾಗುತ್ತಿದೆ. ನೀರು ಕಟ್ಟಿ ಮೆಣಸಿನಕಾಯಿ, ಹತ್ತಿ, ತೊಗರಿ ಬೆಳೆ ಬೆಳೆದು ಬೆಲೆ ಸಿಗದೆ ಒದ್ದಾಡುವುದೇಕೆ ಅಂತ ಈ ಬಾರಿ ಬಹಳಷ್ಟು ರೈತರು ಜೋಳವನ್ನೇ ನೆಚ್ಚಿಕೊಂಡಿದ್ದಾರೆ. ಸರಕಾರ ಪ್ರತೀವರ್ಷದಂತೆ ಖರೀದಿ ಕೇಂದ್ರ ತೆರೆದು ಜೋಳ ಖರೀದಿಸುತ್ತೆ ಅಂತ ನಂಬಿಕೆಯಲ್ಲೇ ಜೋಳ ಬೆಳೆದ ರೈತರು ದಾರಿ ಕಾಣದಂತಾಗಿದ್ದಾರೆ. ಎರಡು ತಿಂಗಳಿಂದ ಜೋಳದ ರಾಶಿ ಮಾಡಿ ಖರೀದಿ ಕೇಂದ್ರದ ಆರಂಭಕ್ಕೆ ಕಾಯುತ್ತಿದ್ದ ರೈತರಿಗೆ ಸರಕಾರ ನಿರಾಸೆ ಮಾಡಿದೆ. ರಾಯಚೂರಿನಲ್ಲಿ ಏ. 15 ಕ್ಕೆ ಆರಂಭವಾದ ಖರೀದಿ ಕೇಂದ್ರ ಕೇವಲ ನಾಲ್ಕೈದು ಗಂಟೆಗಳಲ್ಲೇ ಬಂದ್ ಆಗಿದೆ. ರೈತರ ನೋಂದಣಿ ಹಾಗೂ ಖರೀದಿ ಟಾರ್ಗೆಟ್ ಮುಗಿದಿದೆ ಅಂತ ಅಧಿಕಾರಿಗಳು ಹೇಳುತ್ತಿದ್ದಾರೆ ಎಂಬುವುದು ರೈತರ ಅಳಲಾಗಿದೆ. ಕೆಲವೇ ಗಂಟೆಗಳಲ್ಲಿ ಖರೀದಿ ಟಾರ್ಗೆಟ್ ಹೇಗೆ ಮುಗಿಯುತ್ತೆ, ಸರಕಾರವನ್ನ ನಂಬಿ ಜೋಳ ಬೆಳೆದ ನಮ್ಮ ಕತೆ ಏನು ಅಂತ ರೈತರು ಕಣ್ಣೀರಿಡುವಂತಾಗಿದೆ.

ರೈತರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜೋಳ ಖರೀದಿ ಕೇಂದ್ರದಲ್ಲಿ ಕ್ವಿಂಟಾಲ್‌ಗೆ 3370 ರು. ನಿಗಧಿಗೊಳಿಸಲಾಗಿದ್ದು, ಹೊರಗಡೆ ಮಾರುಕಟ್ಟೆಯಲ್ಲಿ ಕೇವಲ 1500 ರು. ಗೆ ಖರೀದಿಸಲಾಗುತ್ತಿದೆ. ಹೀಗಾಗಿ ರೈತರು ವೈಜ್ಞಾನಿಕ ಬೆಲೆ ಸಿಗಬೇಕು ಅಂತ ಖರೀದಿ ಕೇಂದ್ರಕ್ಕೆ ಬರುತ್ತಿದ್ದಾರೆ. ಆದರೆ ಇಲ್ಲಿನ ಸಿಬ್ಬಂದಿ ಸರ್ವರ್ ಸಮಸ್ಯೆಯಿರುವುದರಿಂದ ರೈತರ ನೊಂದಣಿ ಆಗುತ್ತಿಲ್ಲ ಅಂತಿದ್ದಾರೆ. ಇದುವರೆಗೆ ಮುಂಗಾರು ಬೆಳೆಗೆ ಕೇವಲ 52 ರೈತರ 5270 ಕ್ವಿಂಟಾಲ್ ನೊಂದಣಿಯಾದರೆ, ಹಿಂಗಾರು ಬೆಳೆಯ 34 ರೈತರ 3780 ಕ್ವಿಂಟಾಲ್ ಖರೀದಿಗೆ ನೊಂದಣಿ ಆಗಿದೆ.

ಸರ್ವರ್ ಬಂದ್ ಆಗಿರುವುದರಿಂದ ನಾವು ಏನೂ ಮಾಡಲು ಆಗಲ್ಲ ಅಂತ ಎರಡು ದಿನಗಳಿಂದ ಅಧಿಕಾರಿಗಳು ಹೇಳುತ್ತಿದ್ದು, ಇನ್ನೂ, ಲಾರಿ ಮಾಲಿಕರ ಮುಷ್ಕರದಿಂದ ಖರೀದಿ ಮಾಡಿದ ಜೋಳದ ಸಾಗಣೆಯೂ ಸಮಸ್ಯೆಯಾಗಿದೆ. ಜೋಳ ಸಾಗಣೆ ಸಮಸ್ಯೆಯಿಂದ ಖರೀದಿಗೆ ವಿಳಂಬವಾಗುತ್ತಿದೆಯಾ ಅನ್ನೋ ಅನುಮಾನಗಳು ಸಹ ರೈತರನ್ನ ಕಾಡುತ್ತಿದೆ. ಏನೇ ಆದ್ರೂ ಖರೀದಿ ಕೇಂದ್ರದ ಮುಂದೆ ಸಾವಿರಾರು ಕ್ವಿಂಟಾಲ್ ಜೋಳ ತಂದು ಕಾಯುತ್ತಿರುವ ರೈತರಿಗೆ ಸರಕಾರ ಕೂಡಲೇ ಸ್ಪಂದಿಸಬೇಕಿದೆ. ಸರಕಾರ ಕೂಡಲೇ ಖರೀದಿ

> ರಾಯಚೂರು ಜಿಲ್ಲೆಯಲ್ಲಿ ಮುಂಗಾರು ಮತ್ತು ಹಿಂಗಾರು ಬಿಳಿ ಜೋಳವನ್ನ ಖರೀದಿಸಲು ಸರಕಾರ 80 ಸಾವಿರ ಕ್ವಿಂಟಾಲ್ ನಿಗಧಿಗೊಳಿಸಿತ್ತು. ನಿಗಧಿತ ಗುರಿ ತಲುಪಿರುವುದರಿಂದ ಈಗ ಜೋಳ ಖರೀದಿಸುವುದು ಬಂದ್ ಮಾಡಲಾಗಿದೆ. ಹೆಚ್ಚುವರಿಯಾಗಿ ಜೋಳ ಖರೀದಿಸಲು ಅನುಮತಿ ನೀಡುವಂತೆ ಸರಕಾರಕ್ಕೆ ಪತ್ರ ಬರೆದು ಕೇಳಲಾಗಿದೆ. ಸರಕಾರ ಅನುಮತಿ ನೀಡಿದರೆ ಪುನಃ ಜೋಳ ಖರೀದಿಸುವುದಾಗಿ ಜಿಲ್ಲಾಧಿಕಾರಿ ನಿತೀಶ್ .ಕೆ. ರೈತರಿಗೆ ಹೇಳಿದ್ದು, ಕೂಡಲೇ ಜೋಳ ಖರೀದಿಗೆ ಮುಂದಾಗದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸುವ ತಿರ್ಮಾನಕ್ಕೆ ಬರಲಾಗಿದೆ.
> – ಮಲ್ಲಿಕಾರ್ಜುನ ಸಿಂಗಡದಿನ್ನಿ, ರೈತ

ಗಾಜಾಪಟ್ಟಿಯಲ್ಲೀಗ ಕಂಬನಿಯ ಕುಯಿಲು, ರಕ್ತರಾತ್ರಿ!

ಯಗಟಿ ರಘು ನಾಡಿಗ್

"ಹೇ ಯುದ್ಧ... ನೀನೇಕೆ ಬರುವೆ ಈ ಭೂಮಿಗೆ, ತೊಲಗಾಚೆ ನೀನು ಧರೆಯಾಚೆಗೆ, ಮಾನವನ ಮಾರಣಹೋಮಕೆ ಸಿದ್ಧ.. ಜಗ ನುಂಗೋ ಯಮದೂತ! ಜನ ನುಂಗೋ ರಣಭೂತ! ನಿನಗಿನ್ನೂ ದಾಹ ಹಿಂಗಿಲ್ವಾ?'' ಎಂದು ಪ್ರಶ್ನಿಸಿದ್ದಾರೆ ಚಿತ್ರಸಾಹಿತಿ ಹಂಸಲೇಖ ಅವರು. ಅಂದ ಹಾಗೆ, ಇದು ಯುದ್ಧದ ಭೀಕರ ಪರಿಣಾಮಗಳನ್ನು ಸಾರುವ 'ಮುತ್ತಿನಹಾರ' ಚಲನಚಿತ್ರಕ್ಕೆ ಅವರು ಬರೆದ ಗೀತೆಯೊಂದರ ಸಾಲು. ಅದು ಈಗ ನೆನಪಾಗಲಿಕ್ಕೆ ಕಾರಣ, ಮಧ್ಯಪ್ರಾಚ್ಯದಲ್ಲಿ ಬಿಟ್ಟೂ ಬಿಡದೆ ಮುಂದುವರಿದಿರುವ ಯುದ್ಧಕಾಂಡ. ಆ ಕುರಿತಾದ ಕಿರುನೋಟ ಇಲ್ಲಿದೆ.

ಜೀವವಿಲ್ಲಿ ತುಂಬಾ ಅಗ್ಗ!

ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವೆ ಶುರುವಾದ ಧರ್ಮಸಂಘರ್ಷ ಇನ್ನೂ ನಿಂತಿಲ್ಲ. 2023ರ ಅಕ್ಟೋಬರ್ 7ರಂದು ಪ್ಯಾಲೆಸ್ತೀನಿನ ಹಮಾಸ್ ಉಗ್ರರು ಇಸ್ರೇಲ್‌ನ ಆಯಕಟ್ಟಿನ ನೆಲೆಗಳ ಮೇಲೆ ಏಕಾಏಕಿಯಾಗಿ ಅಪ್ರಚೋದಿತ ಮಾರಕ ಕ್ಷಿಪಣಿ ದಾಳಿಗೆ ಶುರುವಿಟ್ಟುಕೊಂಡಿದ್ದೇ ಈ ಯುದ್ಧಕಾಂಡಕ್ಕೆ ಮುನ್ನುಡಿಯಾಯಿತು. ಇದರಿಂದ ಕೆರಳಿದ ಇಸ್ರೇಲಿನ ರಕ್ಷಣಾ ವಲಯದವರು ಪ್ಯಾಲೆಸ್ತೀನಿನ ಮೇಲೆ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಗಾಜಾ ಪಟ್ಟಿಯ ಮೇಲೆ ತಮ್ಮ ಭೂಸೇನೆಯಿಂದ ದಾಳಿ ನಡೆಸಿದ್ದೂ ಅಲ್ಲದೆ, ವಾಯುದಾಳಿಗೆ ಕೂಡ ಶುರುವಿಟ್ಟುಕೊಂಡರು. ಈ ದಾಳಿ-ಪ್ರತಿದಾಳಿಗಳಲ್ಲಿ ಸತ್ತವರು, ತೀವ್ರವಾಗಿ ಗಾಯಗೊಂಡವರು ಒಬ್ಬಿಬ್ಬರಲ್ಲ, ನಿರ್ದಿಷ್ಟ ವಯಸ್ಸಿನವರು ಮಾತ್ರವೇ ಅಲ್ಲ. ಕಾರಣ, ಬಂದೂಕಿನ ನಳಿಕೆಗೆ, ಸ್ಫೋಟಕ ಸಾಮಗ್ರಿಗಳ ಸರಮಾಲೆಗೆ ಕಣ್ಣುಗಳು ಇರುವುದಿಲ್ಲ, ಹೃದಯವಂತೂ ನಾಸ್ತಿ! ಈ ಯುದ್ಧಕಾಂಡದಿಂದಾಗಿ ಗಾಜಾ ಪಟ್ಟಿಯು ಮಾರಣಹೋಮದ 'ಯಜ್ಞಕುಂಡ'ವಾಗಿ ಅಕ್ಷರಶಃ ಮಾರ್ಪಟ್ಟಿದೆ.

ಕದನಕ್ಕೆ ವಿರಾಮವಿಲ್ಲ!

ವಿವಿಧ ದೇಶಗಳ ನಡುವೆ ರೂಪುಗೊಳ್ಳಬಹುದಾದ ಅಭಿಪ್ರಾಯಭೇದ, ಸಂಘರ್ಷದ ಚಿತ್ತಸ್ಥಿತಿಯನ್ನು ಶಮನಗೊಳಿಸಿ, ಪರಸ್ಪರ ಸಮಾಲೋಚನೆಗೆ ವೇದಿಕೆ ಕಲ್ಪಿಸಿ, ರಾಜಿ-ಕಬೂಲಿಗೆ ಇಂಬುಕೊಡಬೇಕಿದ್ದ ವಿಶ್ವಸಂಸ್ಥೆ ಸಾಕಷ್ಟು ಕಾಲದವರೆಗೆ ದಿವ್ಯಮೌನಕ್ಕೆ ಶರಣಾಗಿತ್ತು. ಈಗ, 'ಊರಿನ ಲೂಟಿಯಾದ ಮೇಲೆ ಕೋಟೆಯ ದಿಡ್ಡಿ ಬಾಗಿಲು ಹಾಕಿದರಂತೆ' ಎಂಬ ಮಾತಿನಂತೆ ವಿಶ್ವಸಂಸ್ಥೆಯು ಯುದ್ಧವನ್ನು ನಿಲ್ಲಿಸುವಂತೆ ಆಗ್ರಹಿಸಲಾರಂಭಿಸಿದೆ. ಆದರೆ ತಿಂಗಳ ಹಿಂದೆ 'ಕದನ ವಿರಾಮ'ಕ್ಕೆ ಒಡ್ಡಿಕೊಂಡಂತಿದ್ದ ಇಸ್ರೇಲ್ ಈಗ ಮತ್ತೆ ಯುದ್ಧವನ್ನು ಮುಂದುವರಿಸಿದೆ. ಹೀಗಾಗಿ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವಿನ ಸಂಘರ್ಷದ ಬೆಂಕಿಗೆ ನೀರು ಬೀಳುವ ಸಾಧ್ಯತೆ ಸದ್ಯೋಭವಿಷ್ಯದಲ್ಲಂತೂ ಇಲ್ಲ. ಒಟ್ಟಿನಲ್ಲಿ, ಜಗತ್ತಿನ ವಿವಿಧ ದೇಶಗಳು ಹೀಗೆ ಕಚ್ಚಾಡಿಕೊಂಡು 'ಸಾಯುವಂಥ' ವಾತಾವರಣ ಇದ್ದರೆ ಮಾತ್ರವೇ ತಾವು 'ಜೀವಂತ'ವಾಗಿ ಇರಬಹುದು ಎಂಬ ಮನೋಧರ್ಮದ ಹಾಗೂ 'ಸಾವಿನ ವ್ಯಾಪಾರಿಗಳು' ಎಂದೇ ಕರೆಯಲ್ಪಡುವ ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಗಳ ಧಣಿಗಳಿಗೆ ಹಬ್ಬವೋ ಹಬ್ಬ!

ಸಾವಿನ ರೈಲಿಗೆ, ಹೆಣಗಳ ಬೋಗಿ

ಮೊದಲೇ ಹೇಳಿದಂತೆ, ಇಸ್ರೇಲ್-ಪ್ಯಾಲೆಸ್ತೀನ್ ನಡುವಿನ ನಿರಂತರ ಸಂಘರ್ಷದಿಂದಾಗಿ ಉಭಯ ಪಾಳಯಗಳಲ್ಲಿ ಆಗಿರುವ ಸಾವು-ನೋವುಗಳ ಸಂಖ್ಯೆಯು ಹೊರಜಗತ್ತಿಗೆ ಸರಿಯಾಗಿ ಲೆಕ್ಕಕ್ಕೆ ಸಿಗುತ್ತಿಲ್ಲ. ಆದರೆ, ಗಾಜಾಪಟ್ಟಿ ಪ್ರದೇಶವು ಅಕ್ಷರಶಃ ಹೂಳುಗಾಡಾಗಿ ಮಾರ್ಪಟ್ಟಿರುವುದಂತೂ ಖರೆ. ಇಲ್ಲಿ ಕಾಲಿಟ್ಟ ಕಡೆ ಸಿಗುತ್ತಿಲ್ಲ ಹಸಿರು ಹುಲ್ಲು, ಕಾಲಿಗೆ ತೊಡರುತ್ತಿದೆ ಗೋರಿಕಲ್ಲು! ದಿನಗಳೆದಂತೆ ಸಾವಿನ ರೈಲಿಗೆ ಹೆಣಗಳ ಬೋಗಿ ಸೇರ್ಪಡೆಯಾಗುತ್ತಲೇ ಇದೆ. ಇತ್ತೀಚಿನ ಅಂಥ ಕೆಲವು ಬೆಳವಣಿಗೆಗಳನ್ನು ನೋಡುವುದಾದರೆ....

- ದಕ್ಷಿಣ ಗಾಜಾ ಪಟ್ಟಿಯ ಖಾನ್ ಯೂನಿಸ್ ನಗರದ ಮೇಲೆ ಮೊನ್ನೆ ಏ.19ರಂದು ಇಸ್ರೇಲಿ ಸೇನೆ ನಡೆಸಿದ ಭೀಕರ ದಾಳಿಯಲ್ಲಿ ಕನಿಷ್ಠಪಕ್ಷ 11 ಜನರು ಅಸುನೀಗಿದ್ದಾರೆ.
- ಯುದ್ಧದ ವೇಳೆ ಸ್ಥಳಾಂತರಗೊಂಡ ಲಕ್ಷಾಂತರ ಜನರು ಮವಾಸಿ ಪ್ರದೇಶದ ಶಿಬಿರಗಳಲ್ಲಿ ವಾಸವಿದ್ದರು ಮತ್ತು ಇದನ್ನು 'ಮಾನವೀಯ ವಲಯ' ಎಂದೇ ಕರೆಯಲಾಗಿತ್ತು. ಆದರೆ, ಎರಡು ದಿನಗಳ ಹಿಂದೆ ಇಸ್ರೇಲ್ ಸೇನೆ ನಡೆಸಿದ ಪ್ರತ್ಯೇಕ ದಾಳಿಗಳ ಫಲವಾಗಿ ಮಕ್ಕಳು-ಮಹಿಳೆಯರು ಸೇರಿದಂತೆ ಇಲ್ಲಿ ನೆಲೆಸಿದ್ದ 90ಕ್ಕೂ ಹೆಚ್ಚು ಪ್ಯಾಲೆಸ್ತೀನಿಯರು ಮೃತಪಟ್ಟಿದ್ದಾರೆ.
- ರಫಾ ನಗರದಲ್ಲಿ ನಡೆದ ಪ್ರತ್ಯೇಕ ದಾಳಿಗಳಲ್ಲಿ ತಾಯಿ ಮತ್ತು ಮಗಳು ಸೇರಿದಂತೆ ಇತರ ನಾಲ್ವರು ಅಸುನೀಗಿದ್ದಾರೆಂದು ಯುರೋಪಿಯನ್ ಆಸ್ಪತ್ರೆ ತಿಳಿಸಿದೆ.

- ಭೀಕರ ದಾಳಿಯ ಪರಿಣಾಮವಾಗಿ ನಗರದಲ್ಲಿ ಬಹುತೇಕ ಕಡೆ ಕುಸಿದು ಬಿದ್ದಿರುವ ಕಟ್ಟಡಗಳು ಮತ್ತು ಅವುಗಳ ಅವಶೇಷಗಳ ಕೆಳಗೆ ಹೆಣದ ರಾಶಿಗಳು ಕಣ್ಣಿಗೆ ರಾಚುತ್ತಿವೆ.

ಆಸ್ಪತ್ರೆಯನ್ನೂ ಬಿಟ್ಟಿಲ್ಲ

ಗಾಜಾಪಟ್ಟಿ ಪ್ರದೇಶದ 'ಕುವೈತ್ ಫೀಲ್ಡ್' ಎಂಬ ಆಸ್ಪತ್ರೆಯ ಮೇಲೆ ಒಂದು ವಾರದ ಹಿಂದೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಿಂದಾಗಿ ಒಬ್ಬರು ವೈದ್ಯರು ಅಸುನೀಗಿ ಒಂಬತ್ತು ಜನ ರೋಗಿಗಳಿಗೆ ಗಂಭೀರ ಸ್ವರೂಪದ ಗಾಯಗಳಾದವು. ಗಾಜಾ ಪಟ್ಟಿಯ ವಿವಿಧ ಆಸ್ಪತ್ರೆಗಳಲ್ಲಿ ಹಮಾಸ್ ಉಗ್ರರು ಅಡಗಿಕೊಂಡಿದ್ದಾರೆ ಅಥವಾ ಮಿಲಿಟರಿ ಉದ್ದೇಶಗಳಿಗಾಗಿ ಅವನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬ ಶಂಕೆಯೇ ಇಸ್ರೇಲ್‌ನ ಈ ಮಾರಕ ದಾಳಿಗೆ ಕಾರಣ ಎನ್ನಲಾಗಿದೆ. ಈ ಬಗ್ಗೆ ಇಸ್ರೇಲ್‌ನ ಮಿಲಿಟರಿ ಇನ್ನೂ ಸೂಕ್ತವಾಗಿ ಪ್ರತಿಕ್ರಿಯಿಸಿಲ್ಲ. ಆದರೆ ಇಸ್ರೇಲ್‌ನ ಶಂಕಾಭರಿತ ಗ್ರಹಿಕೆಯನ್ನು ಆಸ್ಪತ್ರೆಯ ಆಡಳಿತ ವರ್ಗ ತಳ್ಳಿಹಾಕಿದೆ ಹಾಗೂ ಇಸ್ರೇಲ್‌ನ ಈ ದಾಳಿಯನ್ನು ತೀವ್ರವಾಗಿ ಖಂಡಿಸಿದೆ.

ಮುಗಿಯದ ಯುದ್ಧಕಾಂಡ



ಇಸ್ರೇಲ್ ಹಠ ಕೊನೆಯಾಗುತ್ತಿಲ್ಲ

ಗಾಜಾಪಟ್ಟಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲೇಬೇಕೆಂಬ ಹಠಕ್ಕೆ ಬಿದ್ದಂತೆ ವರ್ತಿಸುತ್ತಿರುವ ಇಸ್ರೇಲ್, ಇದರ ನೆರವೇರಿಕೆಯ ಭಾಗವಾಗಿ ತನ್ನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಈ ಬಯಕೆಯ ಬೆಂಕಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇನ್ನಷ್ಟು ತುಪ್ಪ ಸುರಿಯುತ್ತಿರುವುದರಿಂದಾಗಿ ದಾಳಿ ಅಬಾಧಿತವಾಗಿದೆ. ಗುರುವಾರ ರಾತ್ರಿ ಇಸ್ರೇಲ್ ಪಡೆ ಗಾಜಾ ಪಟ್ಟಿಯ ಮೇಲೆ ನಡೆಸಿದ ದಾಳಿಯಲ್ಲಿ ಒಂದೇ ಕುಟುಂಬದ 10 ಮಂದಿ ಸೇರಿದಂತೆ ಕನಿಷ್ಠಪಕ್ಷ 23 ಮಂದಿ ಸತ್ತಿದ್ದು ದಾಳಿಯ ಮಾರಕತೆಗೆ ಸಾಕ್ಷಿ. ಸಾಲದೆಂಬಂತೆ, ಆಹಾರ ಮತ್ತು ಇತರ ಎಲ್ಲಾ ಅಗತ್ಯ ವಸ್ತುಗಳ ಪೂರೈಕೆಗೆ ಇಸ್ರೇಲ್ ಕಳೆದ 6 ವಾರಗಳಿಂದ ದಿಗ್ಬಂಧನ ವಿಧಿಸಿರುವುದರಿಂದಾಗಿ ಗಾಜಾ ಪಟ್ಟಿ ಪ್ರದೇಶದಲ್ಲಿನ ಪರಿಸ್ಥಿತಿ ಅಸಹನೀಯವಾಗಿದೆ. 2023ರ ಅಕ್ಟೋಬರ್‌ನಲ್ಲಿ ಇಸ್ರೇಲಿಗಳು ಮತ್ತು ಹಮಾಸ್ ಉಗ್ರರ ನಡುವಿನ ಸಂಘರ್ಷ ಶುರುವಾದಾಗಿನ ದಿನಗಳಿಗೆ ಹೋಲಿಸಿದರೆ, ಗಾಜಾಪಟ್ಟಿಯಲ್ಲಿ ಕಳೆದ ಕೆಲ ದಿನಗಳಿಂದ ಅತ್ಯಂತ ಕೆಟ್ಟ 'ಮಾನವೀಯ ಬಿಕ್ಕಟ್ಟು' ತಲೆದೋರಿದೆ.

ಮರಗಳ ಮಾರಣ ಹೋಮ ಮೈಸೂರಿನ ರೂಪ ವಿರೂಪ

ಜಿಲ್ಲಾ ನೋಟ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ಸರಕಾರದ ಕಾಮಗಾರಿಗಳಲ್ಲಿ ಸಿಗುವ ಕಮಿಷನ್ ಬಿಡಿಗಾಸಿನಾಸೆಗೆ ಮೈಸೂರಿನ ಹಚ್ಚಹಸಿರ ಅಮೂಲ್ಯ ಮರಗಳು ಬಲಿಯಾಗಿವೆ..!

ಹೌದು. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸುಂದರ ನಗರ ಕಲ್ಪನೆಯ ಮೈಸೂರು ನಗರದ ಸೌಂದರ್ಯ ಅನೇಕ ದಶಕ ಕಳೆದರೂ ಮಾಸಿ ಹೋಗಿಲ್ಲ, ಅದರ ಹೊರತಾಗಿಯೂ ಹತ್ತಾರು ಅಭಿವೃದ್ಧಿ ಯೋಜನೆಗಳು ಅನುಷ್ಠಾನಗೊಂಡಿವೆ. ಮೈಸೂರಿನ ಚೆಂದ ಮತ್ತಷ್ಟು ಇಮ್ಮಡಿಗೊಳಿಸಿರುವುದೂ ನಿಜ. ಆದರೆ ಕೆಲ ರಾಜಕಾರಣಿಗಳ ಹಣದ ದಾಹಕ್ಕೆ ಕೆಲ ಅನಗತ್ಯ ಯೋಜನೆಗಳು ನಗರದ ಮೂಲ ಅಂದವನ್ನು ವಿರೂಪಗೊಳಿಸುತ್ತಿವೆ. ಇದಕ್ಕೆ ಲೇಟೆಸ್ಟ್ ಸಾಕ್ಷಿ ನಗರದ ಹೈದರ್ ಆಲಿ ರಸ್ತೆಯ ವಿಸ್ತರೀಕರಣ..!

ಎಲ್ಲಿಂದ ಎಲ್ಲಿಗೆ ಎಸ್ಪಿ ಕಚೇರಿ ವೃತ್ತದಿಂದ ಮಾರಮ್ಮ ದೇವಾಲಯದವರೆಗಿನ ರಸ್ತೆ ಸಾಕಷ್ಟು ವಿಸ್ತಾರವಾಗಿದ್ದು ಎರಡೂ ಬದಿಯಲ್ಲಿ ಬೃಹತ್ ಗಾತ್ರದ ಮರಗಳು ಕಂಗೊಳಿಸುತ್ತಿದ್ದವು. ಮೈಸೂರಿನ ಹೃದಯಭಾಗದಲ್ಲಿ ಆಕರ್ಷಕವಾಗಿದ್ದವು ಕೂಡ. ಆದರೆ, ಕೆಲ ವಿವೇಚನೆಯಿಲ್ಲದವರು ರೂಪಿಸಿದ ಅನಗತ್ಯ ಯೋಜನೆ ಜಾರಿಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಮಾಡಿದ ಪಾಪಕೃತ್ಯವೇ 40 ಮರಗಳ ಹನನ.

ಟ್ರೀ ಸರ್ಜಿಕಲ್ ಸ್ಟ್ರೈಕ್

ಶತ್ರು ದೇಶದ ಮೇಲೆ ಮಾಡಬಹುದಾದ ಸರ್ಜಿಕಲ್ ಸ್ಟ್ರೈಕ್ ಮಾದರಿ ರಾತ್ರೋರಾತ್ರಿ 40 ಮರಗಳನ್ನು ಬುಡಸಮೇತ ಕತ್ತರಿಸಿ ಹಾಕಿದ್ದಾರೆ. ಈ ಮೂಲಕ ಇಲ್ಲಿನ ಅಧಿಕಾರಿ ವರ್ಗ ಜನಾಕ್ರೋಶಕ್ಕೆ ಗುರಿಯಾಗಿದ್ದಾರೆ. ಬೇಜವಾಬ್ದಾರಿ ಆಡಳಿತಗಾರರ ಮಾತಿಗೆ ಕಟ್ಟುಬಿದ್ದು ಮಾಡಿದ ಅನಾಹುತಕ್ಕೆ ಮೈಸೂರಿಗರು ತಿರುಗಿ ಬಿದ್ದಿದ್ದಾರೆ.

ಕೋರ್ಟ್ ನಿರ್ದೇಶನ

ಕೆಲ ಅನಿವಾರ್ಯ ಸಂದರ್ಭದಲ್ಲಿ ಒಂದೆರಡು ಮರಗಳ ಕಡಿಯಬಹುದಾದರೂ ಅದಕ್ಕೆ ಪರ್ಯಾಯವಾಗಿ ಹತ್ತು ಪಟ್ಟು ಮರ ಬೆಳೆಸಬೇಕೆಂದು ನ್ಯಾಯಾಲಯದ ನಿರ್ದೇಶನವಿದೆ. ಇದನ್ನು ಉಲ್ಲಂಘಿಸಿ ಏಕಾಏಕಿ ರಾತ್ರೋರಾತ್ರಿ 40 ಮರಗಳನ್ನು ಕಡಿದು ಉರುಳಿಸಿದ್ದಾರೆ. ಪರಿಣಾಮ, ಈ ಘಟನೆ ಇಡೀ ನಾಗರಿಕ ಸಮಾಜವನ್ನು ರೊಚ್ಚಿಗೆಬ್ಬಿಸಿದೆ.

ಕ್ಷುಲ್ಲಕ ಕಾರಣಗಳು

ಈ ನಾಗರಿಕ ಪ್ರಪಂಚದಲ್ಲಿ ಜೀವಿಸುತ್ತಿರುವ ಕೆಲವರಿಗೆ ಮರಗಳಿಂದಾಗುವ ಪ್ರಯೋಜನದ ಬಗ್ಗೆ ಕನಿಷ್ಠ ಅರಿವಿಲ್ಲದಿರುವಿದೇ ಮರಗಳ ಸಂತತಿ ಕ್ಷೀಣಿಸಲು ಕಾರಣ. ಕೆಲ ಅನಾಗರಿಕರು ಸಣ್ಣಪುಟ್ಟ ಕಾರಣಗಳನ್ನು ಇಟ್ಟುಕೊಂಡು ಮರ ತೆರವು ಮಾಡುವಂತೆ ಅರ್ಜಿ ಸಲ್ಲಿಸುತ್ತಿದ್ದಾರೆ. ಮರದಿಂದ ಉದುರುವ ಎಲೆಗಳನ್ನು ತೆರವುಗೊಳಿಸಲು ಸಾಧ್ಯವಾಗುತ್ತಿಲ್ಲ. ಮರ ಇರುವುದರಿಂದ ಇತರೆ ವಸ್ತುಗಳನ್ನು ಇಡಲು ಆಗುತ್ತಿಲ್ಲ, ನಮ್ಮ ಕಾರಿನ ಮೇಲೆ ಮರ ಬೀಳಬಹುದು, ಹೀಗೆ ಕ್ಷುಲ್ಲಕ ಕಾರಣಗಳಿಗೆ ಮರ ಕಡಿಯಲು ಅನುಮತಿ ಕೋರಿ ಅರ್ಜಿ ಸಲ್ಲಿಸುತ್ತಿದ್ದಾರೆ.

ಸಾವಿರಾರು ಅರ್ಜಿಗಳು

ಕ್ಷುಲ್ಲಕ ಕಾರಣ ಮುಂದಿಟ್ಟು ಮರವನ್ನು ತೆರವುಗೊಳಿಸುವಂತೆ ಪಾಲಿಕೆಗೆ ಕಳೆದ ಮೂರು ವರ್ಷದಲ್ಲಿ ಒಟ್ಟು 1,445 ಅರ್ಜಿಗಳು ಬಂದಿವೆ. ಇವುಗಳಲ್ಲಿ 912ಕ್ಕೆ ಅನುಮತಿ ನೀಡಲಾಗಿದೆ. ಇವುಗಳಲ್ಲಿ 2024-25ರಲ್ಲಿ ಹೈದರಾಲಿ ರಸ್ತೆ ವಿಸ್ತರಣೆ ಕಾಮಗಾರಿಗೆ 40 ಮರ ಕಡಿಯಲಾಗಿದೆ. ಇನ್ನುಳಿದ 52 ಮರಗಳನ್ನು ಜನರ ಕೋರಿಕೆ ಮೇರೆಗೆ ಕಡಿಯಲಾಗಿದೆ. 2024ರಲ್ಲಿ ನಗರದ ವಿವಿಧೆಡೆ 93 ಮರಗಳ ಬಲಿ ಕತೆಯನ್ನು ದಾಖಲೆಗಳೇ ದೃಢೀಕರಿಸುತ್ತಿವೆ.

ನಿಯಮಗಳು ಗಾಳಿಗೆ

ಒಂದು ಮರ ಕಡಿದರೆ 10 ಮರ ನೆಡಬೇಕು ಎಂಬ ನಿಯಮವಿದೆ. ಆದರೆ, ಇದನ್ನು ಪಾಲಿಸಬೇಕಾದ ಅಧಿಕಾರಿ ವರ್ಗ ತೂಕಡಿಸುತ್ತಿದೆ. ಪರಿಣಾಮ ನೆಡುವುದಕ್ಕಿಂತ ಕಡಿಯುವುದೇ ಹೆಚ್ಚಾಗಿದೆ. ಇದರಿಂದ ಮರಗಳ ಸಂಖ್ಯೆ ಕುಸಿದು ಪರಿಸರದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತಿದೆ.

ಮತ್ತೊಂದು ಘಟನೆ

ಹೈದರ್ ಅಲಿ ರಸ್ತೆ ವಿಸ್ತರಣೆ ನೆಪದಲ್ಲಿ 40 ಮರಗಳನ್ನು ಕಡಿದ ಬೆನ್ನಲ್ಲೇ ಇದೀಗ ಉತ್ತನಹಳ್ಳಿ ದೇವಸ್ಥಾನ ರಸ್ತೆ ಮಾರ್ಗ ವಿಸ್ತರಣೆಗಾಗಿ 25 ಮರಗಳನ್ನು ಕಡಿಯಲು ಅನುಮತಿ ನೀಡುವಂತೆ ಲೋಕೋಪಯೋಗಿ ಇಲಾಖೆ ಅರಣ್ಯ ಇಲಾಖೆಗೆ ಪತ್ರ ಬರೆದಿರುವ ಅಂಶ ಬೆಳಕಿಗೆ ಬಂದಿದೆ. ಆದರೆ, 40 ಮರಗಳ ಹನನಕ್ಕೆ ಜನಾಕ್ರೋಶ ಸ್ಫೋಟಗೊಳ್ಳುತ್ತಿದ್ದಂತೆ ತಮ್ಮ ಬುಡಕ್ಕೆ ಕೊಡಲಿ ಪೆಟ್ಟು ಬೀಳಬಹುದೆಂದು ಬೆಚ್ಚಿ ಬಿದ್ದ ಅಧಿಕಾರಿಗಳು ಸದ್ಯದ ಮಟ್ಟಿಗೆ ಮತ್ತೊಂದು ಯೋಜನೆಗಾಗಿ ಕೊಡಲಿ ಇಡದಿರಲು ನಿರ್ಧರಿಸಿದಂತಿದೆ.

ಧಾರ್ಮಿಕ ಕ್ಷೇತ್ರದ ರಸ್ತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಕ್ಷೇತ್ರ ವರುಣ ಕ್ಷೇತ್ರ ವ್ಯಾಪ್ತಿಯ ಉತ್ತನಹಳ್ಳಿ ಮೈಸೂರಿನ ಪ್ರಮುಖ ಧಾರ್ಮಿಕ ಕ್ಷೇತ್ರ. ನಿತ್ಯ ಸಾವಿರಾರು ಭಕ್ತರು ಈ ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ರಿಂಗ್ ರಸ್ತೆಯಿಂದ ದೇವಾಲಯಕ್ಕೆ ಸಂಪರ್ಕಿಸುವ ರಸ್ತೆ ವಿಸ್ತರಣೆ ಕಾಮಗಾರಿಗೆ ಟೆಂಡರ್ ಆಗಿದ್ದು, ಗುತ್ತಿಗೆದಾರರು ಕೆಲಸವನ್ನೂ ಶುರು ಮಾಡಿದ್ದಾರೆ. ಸುಮಾರು 5.5 ಮೀಟರ್ ರಸ್ತೆಯನ್ನು 14.5 ಮೀಟರ್ ಗೆ ವಿಸ್ತರಿಸಿ ಜೋಡಿ ರಸ್ತೆ ಮಾಡಲು ಲೋಕೋಪಯೋಗಿ ಇಲಾಖೆ ಹೊರಟಿದೆ. ಕಳೆದ 50 ವರ್ಷಗಳಿಂದ ನೆರಳು, ಗಾಳಿ ನೀಡುತ್ತಿದ್ದ ಮರಗಳ ಕಡಿಯಲು ಇಲಾಖೆ ಮುಂದಾಗಿದೆ. ಆದರೆ, ಸದ್ಯದ ಜನಾಕ್ರೋಶ ಎಲ್ಲವನ್ನೂ ಈಗ ಸುಮ್ಮನಿರಿಸಿದೆ.

ಕಾದು ನೋಡುವ ತಂತ್ರ

ಉತ್ತನಹಳ್ಳಿ ದೇವಸ್ಥಾನ ರಸ್ತೆ ಮಾರ್ಗ ವಿಸ್ತರಣೆಗಾಗಿ ಸುಮಾರು 3.60 ಕೋಟಿ ರೂ. ವೆಚ್ಚದ ಯೋಜನೆ ಕಾಮಗಾರಿ ಶುರುವಾಗಿದೆ. 25 ಮರಗಳನ್ನು ಕಡಿಯಲು ಅನುಮತಿ ನೀಡುವಂತೆ ಅರಣ್ಯ ಇಲಾಖೆಗೆ ಪತ್ರ ಬರೆಯಲಾಗಿದೆ. ಸರ್ವೆ ನಡೆಸಿ ಮರಗಳನ್ನು ಕಡಿಯಲು ಗುರುತು ಮಾಡಿವೆ. ಆದರೆ ಅರಣ್ಯ ಇಲಾಖೆ ಅನುಮತಿ ನೀಡದೆ ಕಾದು ನೋಡುವ ತಂತ್ರ ಅನುಸರಿಸಿದೆ.

ಸಹಿ ಸಂಗ್ರಹ ಅಭಿಯಾನ

ಹೈದರಾಲಿ ರಸ್ತೆಯ 40 ಮರಗಳನ್ನು ಕಡಿದಿರುವುದರ ವಿರುದ್ಧ ಹೋರಾಟ ನಡೆಸಲು ಸಾರ್ವಜನಿಕರನ್ನು ಒಗ್ಗೂಡಿಸುವ ದೃಷ್ಟಿಯಿಂದ ಮೈಸೂರು ಗ್ರಾಹಕ ಪರಿಷತ್ ಆನ್‌ಲೈನ್ ಸಹಿ ಸಂಗ್ರಹ ಅಭಿಯಾನ ಆರಂಭಿಸಿದೆ. ಹೋರಾಟ ಬೆಂಬಲಿಸಿ ಈವರೆಗೆ 8000 ಹೆಚ್ಚು ಮಂದಿ ಸಹಿ ಹಾಕಿದ್ದಾರೆ. ರಾಷ್ಟ್ರೀಯ ಹಸಿರು ನ್ಯಾಯಾಲಯದ ಅಧ್ಯಕ್ಷರಿಂದ ತನಿಖೆ ನಡೆಸುವುದು, ಮರಗಳ ಮಾರಣ ಹೋಮಕ್ಕೆ ಕಾರಣವಾದ ಕಾಮಗಾರಿಯನ್ನು ಸ್ಥಗಿತಗೊಳಿಸುವುದು, ಅಲ್ಲದೆ ಆ ಜಾಗದಲ್ಲಿ ಮತ್ತೆ ಗಿಡಗಳನ್ನು ನೆಟ್ಟು ಮುಂದೆ ಈ ರೀತಿ ಕೃತ್ಯ ನಡೆಯದಂತೆ ತಡೆಯಲು ಕೈಜೋಡಿಸುವಂತೆ ಒತ್ತಾಯಿಸಿ ಸಹಿ ಸಂಗ್ರಹ ಆರಂಭವಾಗಿದೆ.

ಮರಗಳಿಗೆ ತಿಥಿ ಆಚರಣೆ

ರಾತ್ರೋರಾತ್ರಿ ಮರಗಳ ಹನನ ಖಂಡಿಸಿ ಮೈಸೂರಿನ ಹತ್ತಾರು ಪ್ರಜ್ಞಾವಂತ ಪರಿಸರ ಸಂಘಟನೆಗಳು ಶುಕ್ರವಾರ ರಾತ್ರಿ ಬೃಹತ್ ಪಂಜಿನ ಮೆರವಣಿಗೆ ಮೂಲಕ ಪ್ರತಿಭಟನೆ ದಾಖಲಿಸಿವೆ. ಪರಿಸರ ಪ್ರೇಮಿಗಳು ಮರ ಕಡಿದ ಜಾಗದಲ್ಲಿ ಶ್ರದ್ಧಾಂಜಲಿ ಅರ್ಪಿಸುವ ಮೂಲಕ ದುರಾಡಳಿತವನ್ನು ಅಣಕಿಸಿದರು. ಕ್ರಿಯಾ ಸಮಿತಿ ಆಶ್ರಯದಲ್ಲಿ ಹತ್ತಾರು ಸಂಘ-ಸಂಸ್ಥೆಗಳು ಕೂಡಿ ಕ್ರಿಯಾ ಸಮಿತಿ ರಚಿಸಿವೆ. 7 ಜನ ತಜ್ಞರ ಸಮಿತಿಯೂ ಸಿದ್ಧವಾಗಿದೆ. ಮರ ಕಡಿದ 11 ದಿನಕ್ಕೆ ತಿಥಿ ಆಚರಣೆ (ಏ.24) ಮಾಡಲು ನಿರ್ಧರಿಸಲಾಗಿದೆ.

ಹಲವು ಸಂಘಟನೆಗಳ ದನಿ

ಮೈಸೂರು ಗ್ರಾಹಕರ ಪರಿಷತ್, ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಕಾರ್ಯಾಚರಣೆ, ರೈತ ಕಲ್ಯಾಣ ಸಂಘ, ಮೈಸೂರು ಸೈಕ್ಲಿಂಗ್ ಟೀಂ, ಮೈಸೂರು ಅಥ್ಲೆಟಿಕ್ ಕ್ಲಬ್, ಟೀಮ್ ಮೈಸೂರು ಸಂಘಟನೆಗಳ ಕಾರ್ಯಕರ್ತರು ಮೇಣದ ಬತ್ತಿ ಹಿಡಿದು ಮರಗಳಿಗೆ ಪೂಜೆ ಸಲ್ಲಿಸಿ ಮರುಕ ವ್ಯಕ್ತಪಡಿಸಿದರಲ್ಲದೆ ಮರಗಳ ಹನನ ಖಂಡಿಸಿದರು.

ಸೂಪರಬ್ ಹೆಲ್ತ್‌ಹಬ್ ನಗರಿ ಕಲ್ಯಾಣ ಕರ್ನಾಟಕದ ಕಲಬುರಗಿ

ಜಿಲ್ಲಾ ನೋಟ

ದೇವೇಂದ್ರ ಜಾಡಿ, ಕಲಬುರಗಿ

ಕಲಬುರಗಿ ಎಂದಾಕ್ಷಣ, ಹಿಂದುಳಿದ ಪ್ರದೇಶ, ಬಿಸಿಲ ನಗರಿ, ಶಿಕ್ಷಣದಲ್ಲಿ ಹಿನ್ನಡೆಯ ಜಿಲ್ಲೆ ಎಂದೇ ಥಟ್ಟನೇ ನೆನಪಾಗುವುದು ಖರೆ. ಆದರೆ, ಅದೆಲ್ಲದರ ಮಧ್ಯ, ಕಲಬುರಗಿ ಜಿಲ್ಲೆ ಇತ್ತೀಚಿನ ದಿನಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆ ಕಂಡಿದ್ದು, ಶ್ರೀಸಾಮಾನ್ಯರ, ಬಡವರ ಅನುಕೂಲಕ್ಕಾಗಿ ಸುಸಜ್ಜಿತ ಸರಕಾರಿ ಆಸ್ಪತ್ರೆಗಳ ನಿರ್ಮಾಣ, ಅತ್ಯಾಧುನಿಕ ಸೌಲಭ್ಯ ಹಾಗೂ ಗುಣಮಟ್ಟದ ಚಿಕಿತ್ಸೆ ಒದಗಿಸುವ ಮೂಲಕ ಕಲ್ಯಾಣ ಕರ್ನಾಟಕದ 'ಹೆಲ್ತ್ ಹಬ್' ಸಿಟಿ ಆಗಿ ಪರಿವರ್ತನೆಗೊಳ್ಳುತ್ತಿದೆ.

ಸರಕಾರಿ ಸವಲತ್ತು

ಜಿಲ್ಲೆಯ ಆರೋಗ್ಯ ಕ್ಷೇತ್ರವೂ ಕಳೆದ ಕೆಲ ವರ್ಷಗಳಿಂದ ಗಣನೀಯ ಪ್ರಗತಿ ಕಂಡಿದೆ. ಸಾಮಾನ್ಯರು, ಬಡವರು ಸೇರಿ ಅನೇಕ ವರ್ಗದ ಜನರಿಗೆ ಅತಿ ಕಡಿಮೆ ದರದಲ್ಲಿ ಸರಕಾರಿ ಸವಲತ್ತು ನೀಡಬೇಕು ಎಂದೇ ಸರಕಾರ ಕಲಬುರಗಿಯಲ್ಲಿ ಅತ್ಯಾಧುನಿಕ ಆಸ್ಪತ್ರೆಗಳ ನಿರ್ಮಾಣ, ತಂತ್ರಜ್ಞಾನದ ಸೌಲಭ್ಯ ನೀಡುತ್ತಿದೆ. ಜಿಲ್ಲೆಯ ಜನ ಬೇರೆ ಊರುಗಳಿಗೆ ಹೋಗಿ ಪರದಾಡುವುದನ್ನು ತಪ್ಪಿಸಲು ಸಾಕಷ್ಟು ಕೆಲಸವಾಗುತ್ತಿವೆ. ಇದಕ್ಕೆ ಇಲ್ಲಿನ ಜನಪ್ರತಿನಿಧಿಗಳ ಮುತುವರ್ಜಿಗಳೇ ಕಾರಣ ಎಂದರು ತಪ್ಪಾಗಲಾರದು.

ಆರೋಗ್ಯ ಸೌಲಭ್ಯಗಳು

» ಜಿಲ್ಲಾ ಆಸ್ಪತ್ರೆ
- ಜಿಮ್ಸ್

» ಇಎಸ್‌ಐಸಿ ಆಸ್ಪತ್ರೆ

» ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ

» ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ

» ಟ್ರಾಮ್ ಕೇರ್ ವಿಭಾಗ

» ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಉದ್ಘಾಟನೆಗೆ ಸಿದ್ಧ

» ತಾಯಿ ಮಕ್ಕಳ ಆಸ್ಪತ್ರೆ
- ಅಡಿಗಲ್ಲು

» ಸುಟ್ಟ ಗಾಯಗಳ ವಿಭಾಗ
- ಅಡಿಗಲ್ಲು

» ನಿಮಾನ್ಸ್ ಆಸ್ಪತ್ರೆಯ ಘಟಕ
- ಬಜೆಟ್ ಘೋಷಣೆ

ಆಸ್ಪತ್ರೆಗಳ ಹಬ್ ಸಿಟಿ

ಈಗಾಗಲೇ, ಕಲಬುರಗಿ ನಗರದಲ್ಲಿ ಇಎಸ್‌ಐಸಿ ಆಸ್ಪತ್ರೆ, ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಜಿಮ್ಸ್ ಆಸ್ಪತ್ರೆ, ಟ್ರಾಮಾ ಕೇರ್ ವಿಭಾಗಗಳು, ಖಾಸಗಿ ಆಸ್ಪತ್ರೆಗಳಿಗೆ ತೀವ್ರ ಪೈಪೋಟಿ ಒಡ್ಡುತ್ತಿವೆ. ಇದರ ಜತೆಗೆ, ತಾಯಿ-ಮಕ್ಕಳ ಆಸ್ಪತ್ರೆ, ಸುಟ್ಟ ಗಾಯಗಳ ವಿಭಾಗಕ್ಕೆ ಮೊನ್ನೆಯಷ್ಟೇ ಸಿಎಂ ಅಡಿಗಲ್ಲು ನೆರವೇರಿಸಿದ್ದಾರೆ. ಇದಲ್ಲದೇ, ಭವಿಷ್ಯದಲ್ಲಿ ಕಲಬುರಗಿಯಲ್ಲಿ ನಿಮಾನ್ಸ್ ಆಸ್ಪತ್ರೆಯ ಘಟಕ ಸಹ ಸ್ಥಾಪನೆಯಾಗಲಿದ್ದು, ಇವೆಲ್ಲವೂ ಮುಂದಿನ ದಿನಗಳಲ್ಲಿ ಜಿಲ್ಲೆಯ ಆರೋಗ್ಯ ಸೇವೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿವೆ.

ಸಚಿವರ ಕಾಳಜಿ ಫಲ

ಬೆಂಗಳೂರು, ಹೈದ್ರಾಬಾದ್, ಸೊಲ್ಲಾಪುರ್ ಸೇರಿ ಇತರೆ ದೂರದ ಊರುಗಳಿಗೆ ಹೋಗಿ ಹೆಚ್ಚು ಹಣ ನೀಡಿ ಪರದಾಡುವ ಪರಿಸ್ಥಿತಿ ಜಿಲ್ಲೆಯ ಜನರಿಗಿತ್ತು. ಜಿಲ್ಲೆಯ ಜನಪ್ರತಿನಿದಿನಗಳು ನಮ್ಮ ಭಾಗದ ಜನರಿಗೆ ನಮ್ಮಲ್ಲೇ ಅತ್ಯುತ್ತಮ ಚಿಕಿತ್ಸೆ ದೊರೆಯುವಂತೆ ಮಾಡಬೇಕು. ಬೆಂಗಳೂರು, ಮೈಸೂರು, ಮಂಗಳೂರಲ್ಲಿ ಸಿಗುವ ಆರೋಗ್ಯ ಸೌಲಭ್ಯ ಕಲಬುರಗಿಯಲ್ಲೂ ಸಿಗಬೇಕು ಎನ್ನುವ ಸದುದ್ದೇಶದಿಂದ ವೈದ್ಯಕೀಯ ಶಿಕ್ಷಣ ಸಚಿವರಾಗಿ ಡಾ. ಶರಣಪ್ರಕಾಶ್ ಪಾಟೀಲ್ ಅವರು ಕಲಬುರಗಿಗೆ ಅನೇಕನೇಕ ಸೌಲಭ್ಯ ಒದಗಿಸಿದ್ದಾರೆ. ಇವರ ಜತೆಗೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್ ಅವರ ಮುತುವರ್ಜಿ ಕೂಡ ಮರೆಯುವಂತಿಲ್ಲ.

ಹಾಸಿಗೆಗಳ ಸುಟ್ಟ ಗಾಯಗಳ ವಿಭಾಗಕ್ಕೂ ಶಂಕುಸ್ಥಾಪನೆ ಪೂರ್ಣಗೊಂಡಿದ್ದು, ಗಂಭೀರ ಗಾಯಾಳುಗಳಿಗೆ ವಿಶೇಷ ಚಿಕಿತ್ಸೆ ನೀಡಲು ಇದು ಸಹಕಾರಿ ಆಗಲಿದೆ. ಈಗಾಗಲೇ, ಕಲಬುರಗಿಯಲ್ಲಿ ನಿಮಾನ್ಸ್ ಆಸ್ಪತ್ರೆಯ ಸ್ಥಾಪನೆಗೆ ಬಜೆಟ್‌ನಲ್ಲಿ ಅನುಮೋದನೆ ದೊರಕಿದ್ದು, ಭವಿಷ್ಯದಲ್ಲಿ ಮಾನಸಿಕ ಆರೋಗ್ಯ ಸೇವೆಗಳು ಕೂಡ ಲಭ್ಯವಾಗಲಿವೆ.

ಖಾಸಗಿಗೆ ಸರಿ ಸಮಾನ

ಕಲಬುರಗಿಯ ಸರಕಾರಿ ಆಸ್ಪತ್ರೆಗಳು ಸುಸಜ್ಜಿತ ಸೌಲಭ್ಯಗಳಿಂದ ಕೂಡಿದ್ದು, ಖಾಸಗಿ ಆಸ್ಪತ್ರೆಗಳಿಗೆ ಸರಿಸಮಾನವಾಗಿವೆ. ಸಚಿವ ಡಾ. ಶರಣಪ್ರಕಾಶ ಪಾಟೀಲರಂಥ ಜನಪ್ರತಿನಿಧಿಗಳ ಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ಆದರೆ, ಜಿಮ್ಸ್‌ನಂತಹ ಕೆಲವು ಆಸ್ಪತ್ರೆಗಳಲ್ಲಿ ವೈದ್ಯಕೀಯ ಸಿಬ್ಬಂದಿ ಕೊರತೆ, ಔಷಧಿಗಳ ಕೊರತೆ ಮತ್ತು ಇತರೆ ಕುಂದುಕೊರತೆಗಳ ಬಗ್ಗೆ ದೂರುಗಳಿವೆ. ಈ ಸವಾಲುಗಳನ್ನು ಎದುರಿಸಿ, ಸಿಬ್ಬಂದಿ ನೇಮಕಾತಿ ಮತ್ತು ನಿರ್ವಹಣೆಯನ್ನು ಸುಧಾರಿಸಿದರೆ, ಕಲಬುರಗಿಯ ಆರೋಗ್ಯ ಕ್ಷೇತ್ರ ಇನ್ನಷ್ಟು ಗಟ್ಟಿಯಾಗಲಿದೆ. ನಗರದ ಈ ಆರೋಗ್ಯ ಕ್ರಾಂತಿಯು ಬಡವರಿಗೆ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸುವ ಜತೆಗೆ, ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಉತ್ತಮ ಆರೋಗ್ಯದ ಭರವಸೆ ನೀಡುತ್ತಿದೆ.

ಜಯದೇವ ಹೃದ್ರೋಗ ಆಸ್ಪತ್ರೆ

ಶ್ರೀಜಯದೇವ ಹೃದ್ರೋಗ ಆಸ್ಪತ್ರೆಯು 371 ಹಾಸಿಗೆಗಳೊಂದಿಗೆ ಕಳೆದ 2024ರ ಡಿಸೆಂಬರ್ 22ರಂದು ಲೋಕಾರ್ಪಣೆಗೊಂಡಿದೆ. ಕೆಕೆಆರ್‌ಡಿಬಿ ಅನುದಾನದಿಂದ ನಿರ್ಮಿತವಾದ ಈ ಕಟ್ಟಡ ಬೆಂಗಳೂರಿನ ಜಯದೇವ ಆಸ್ಪತ್ರೆಯ ಒತ್ತಡ ಕಡಿಮೆ ಮಾಡಿದೆ. ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ 150 ಹಾಸಿಗೆಗಳ ವಿಸ್ತರಣಾ ಕಟ್ಟಡ ಕ್ಯಾನ್ಸರ್ ರೋಗಿಗಳಿಗೆ ಸ್ಥಳೀಯವಾಗಿ ಚಿಕಿತ್ಸೆ ಒದಗಿಸುತ್ತಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಶೀಘ್ರದಲ್ಲೇ ಸಾರ್ವಜನಿಕರಿಗೆ ಲಭ್ಯವಾಗಲಿದ್ದು, ಇದು ಗಂಭೀರ ರೋಗಗಳ ಚಿಕಿತ್ಸೆಗೆ ದೊಡ್ಡ ಆಸರೆಯಾಗಲಿದೆ. ಟ್ರಾಮಾ ಕೇರ್ ಸೆಂಟರ್‌ನ ಉದ್ಘಾಟನೆಯಿಂದ ತುರ್ತು ಚಿಕಿತ್ಸೆಯ ಸಾಮರ್ಥ್ಯ ಗಣನೀಯವಾಗಿ ಹೆಚ್ಚಿದೆ.

ತಾಯಿ-ಮಕ್ಕಳ ಆಸ್ಪತ್ರೆ

ಮೊನ್ನೆಯಷ್ಟೇ ಸಿಎಂ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರು ತಾಯಿ-ಮಕ್ಕಳ ಆಸ್ಪತ್ರೆಗೆ ಅಡಿಗಲ್ಲು ಹಾಕಿದ್ದಾರೆ. ಇದು ಗರ್ಭಿಣಿಯರಿಗೆ ಮತ್ತು ನವಜಾತ ಶಿಶುಗಳಿಗೆ 24/7 ಆರೋಗ್ಯ ಸೇವೆ ಒದಗಿಸಲಿದೆ. ಇದೇ ರೀತಿ, 50

ಕಾರ್ಮಿಕ (ಇಎಸ್‌ಐ) ಆಸ್ಪತ್ರೆ

ಕಲಬುರಗಿಯ ಇಎಸ್‌ಐಸಿ (ಕಾರ್ಮಿಕ ರಾಜ್ಯ ವಿಮಾ ನಿಗಮ) ಆಸ್ಪತ್ರೆಯು ಕಾರ್ಮಿಕ ವರ್ಗಕ್ಕೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಆಗಿನ ಕಾರ್ಮಿಕ ಸಚಿವರಾಗಿದ್ದ ಡಾ.ಮಲ್ಲಿಕಾರ್ಜುನ ಖರ್ಗೆ ಅವರು ಮುತುವರ್ಜಿ ವಹಿಸಿ, 100 ಹಾಸಿಗೆಗಳ ಸಾಮರ್ಥ್ಯದ ಬೃಹತ್ ಕಟ್ಟಡ ಸ್ಥಾಪಿಸಲು ಕಾರಣರಾಗಿದ್ದರು. ಈ ಆಸ್ಪತ್ರೆಯು ಸಾಮಾನ್ಯ ಚಿಕಿತ್ಸೆಯಿಂದ ಹಿಡಿದು ಶಸ್ತ್ರಚಿಕಿತ್ಸೆಯವರೆಗೆ ಸೇವೆಗಳನ್ನು ನೀಡುತ್ತದೆ. ಆಧುನಿಕ ಎಕ್ಸ್-ರೇ, ಅಲ್ಟ್ರಾಸೌಂಡ್, ಲ್ಯಾಬ್ ಸೌಲಭ್ಯಗಳು ಮತ್ತು 24/7 ತುರ್ತು ಚಿಕಿತ್ಸೆಯ ಸೌಲಭ್ಯವು ಇದರ ವಿಶೇಷತೆಯಾಗಿದೆ.

ಆರಾಮ

ವಿಶ್ವವಾಣಿ
@vishwavaninews
ಅನುದಿನವೂ ವಿರಾಮಕ್ಕೆ ಒಂದು ನೆಪ
ಸೋಮವಾರ 21-04-2025 ಬೆಂಗಳೂರು

ಮಲೆನಾಡಿನ ವಿಶೇಷ ತಂಬುಳಿ. ಈ ಪಾನೀಯವು ಆರೋಗ್ಯಕರವೂ ಹೌದು, ಅಗತ್ಯಬಿದ್ದಾಗ ಮನೆ ಔಷಧವೂ ಹೌದು. ಇಂತಹ ತಂಬುಳಿಯನ್ನು 'ತಂಬುಳಿ ಮನೆ' ಮೂಲಕ ಬೆಂಗಳೂರಿನ ವಿವಿಧ ಕಡೆ ಸರಬರಾಜು ಮಾಡುತ್ತಿರುವ ಕೆಲಸವನ್ನು ಒಂದು ಅಭಿಯಾನವೆಂದೇ ಕರೆಯಬಹುದು!

ಹೊಟ್ಟೆ ತಂಪು ರುಚಿ ಸೊಂಪು ಈ ತಂಬುಳಿ ಮನೆ!

● ಸುಷ್ಮಾ ಸಂದೇಶ್

ಆಹಾ..! ಹೆಸರೇ ಹೇಳುವಂತೆ ಇದು ತಂಬುಳಿಯ ಮನೆ. ಇಲ್ಲಿ 50 ಹೆಚ್ಚು ತಂಬುಳಿಗಳನ್ನು ಮಾಡುತ್ತಾ ಇಡೀ ಬೆಂಗಳೂರಿಗರಿಗೆ ಕುಡಿಸುತ್ತಾ ಬಂದಿರುವ 'ತಂಬುಳಿ ಮನೆ', ಬರಿ ತಂಬುಳಿಗಳಿಗಷ್ಟೇ ಸೀಮಿತ ಅಲ್ಲ. ಮಲೆನಾಡಿನ ಪರಂಪರೆಯ ಆಹಾರವನ್ನು ಯಾವುದೇ ಸಂರಕ್ಷಕ ಇಲ್ಲದೆ, ಸಂಪೂರ್ಣ ಕೊಬ್ಬರಿ ಎಣ್ಣೆ ಬಳಸಿ ಅಡುಗೆ ಮಾಡಿ ಇಡೀ ಬೆಂಗಳೂರಿನಾದ್ಯಂತ ಬಾಳೆ ಎಲೆ ಹಾಗು ಪ್ಲೇಟ್ ಮೀಲ್ಸ್ ಅನ್ನು ಸಹ ಉಣಬಡಿಸುತ್ತಿದ್ದಾರೆ. ಇವರ ಔಟ್ಲೆಟ್‌ನಲ್ಲಿ ಆರೋಗ್ಯಕರವಾದ ಸ್ಯಾಂಡ್ವಿಚ್, ಸಲಾಡ್, ಮಲೆನಾಡ ಪ್ರಸಿದ್ಧ ಮಂಜುಗುಣಿ ಸಣ್ಣಕ್ಕಿ ಕೇಸರಿ, ತೋಡದೇವು ಮುಂತಾದ ಸಿಹಿ ಪದಾರ್ಥಗಳು ಸಹ ಲಭ್ಯ.

ಇತ್ತೀಚೆಗೆ ಸದ್ದು ಮಾಡಿದ ತಂಬುಳಿ ಪುರಿ ಸಹ ಇವರ ಆರೋಗ್ಯ ಚಿಂತನೆಗೆ ಹಿಡಿದ ಕನ್ನಡಿ. ಗೋಧಿ ರವೆಯಲ್ಲಿ ತಯಾರಿಸಿ, ಒಂದೇ ಒಂದು ಹನಿ ಎಣ್ಣೆಯನ್ನು ಬಳಸದೆ ಕೇವಲ ಹಪ್ಪಳ ಸುಡುವ ರೀತಿಯಲ್ಲಿ ಪುರಿಯನ್ನು ತಯಾರಿಸಿ, ಅದಕ್ಕೆ ಬೇಯಿಸಿದ ಮೊಳಕೆ ಕಾಳುಗಳನ್ನು ಹಾಕಿ ತಂಬುಳಿಯನ್ನು ಪಾನಿ ರೀತಿಯಲ್ಲಿ ಕೊಡುವುದು ಇವರ ಹೆಗ್ಗಳಿಕೆ. ಯಾವುದೇ ಅಡ್ಡ ಪರಿಣಾಮ ಇಲ್ಲ, ಯಾವುದೇ ಟೇಸ್ಟಿಂಗ್ ಪೌಡರ್ ಇಲ್ಲ, ಬ್ಲಾಕ್ ಸಾಲ್ಟ್, ಹಸಿ ಮೆಣಸು ಸಹ ಇಲ್ಲದೆ ಕೊಡುವುದು ಇವರ ಸ್ಟೈಲ್.

ಕಾರ್ತಿಕ್ ಶ್ರೀಧರ್ – ಇದರ ಸಂಸ್ಥಾಪಕರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಮಲೆನಾಡಿನ ಹೃದಯ ಭಾಗದ ಸಾಗರದ ಹಂಸಗಾರು ಎಂಬ ಊರಿನಲ್ಲಿ ಹುಟ್ಟಿ, ಅಲ್ಲೇ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಮುಂದೆ ಸಾಗರದಲ್ಲಿ ಪದವಿ ಪೂರ್ವ ಶಿಕ್ಷಣ ಮುಗಿಸಿ, ಆಮೇಲೆ ಶಿವಮೊಗ್ಗದ ನ್ಯಾಷನಲ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್‌ಲಿ ಪದವಿ ಮುಗಿಸಿ, ಕ್ಯಾಂಪಸ್ ಇಂಟರ್ವ್ಯೂನಲ್ಲಿ ಪ್ರತಿಷ್ಠಿತ ವಿಪ್ರೊ ಕಂಪನಿಯಲ್ಲಿ ಸೈನ್ಸ್ ಡಿಪಾರ್ಟ್ಮೆಂಟ್ ಇಂದ ಒಬ್ಬರೇ ಸೆಲೆಕ್ಟ್ ಆಗಿ ಮುಂದೆ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಜೊತೆಗೆ ಸಾಫ್ಟ್‌ವೇರ್ ಇಂಜಿನಿಯರಿಂಗ್ ಅಲ್ಲಿ ಬಿಟ್ಸ್ ಪಿಲಾನಿ ಎಜುಕೇಶನ್ ಲಿ ಇಂದ ಎಂ ಎಸ್ ಮಾಡಿ ಅಲ್ಲಿಂದ ಮುಂದೆ 16 ವರುಷಗಳ ಕಾಲ ಸಾಫ್ಟ್‌ವೇರ್‌ನಲ್ಲಿ ಒರಾಕಲ್, ಡಾಯ್ಚ್ ಬ್ಯಾಂಕ್ ಲಿ ಎಲ್ಲ ಕೆಲಸ ಮಾಡಿ ಜೂನ್ 2024 ರಂದು ಸಾಫ್ಟ್‌ವೇರ್ ಬಿಟ್ಟು ಫುಲ್ ಟೈಮ್ ಆಹಾರೋದ್ಯಮಕ್ಕೆ ಇಳಿದಿರುತ್ತಾರೆ.

ಪ್ರಶಾಂತ್ ಕೆ ಜಿ – ಸಹ ಸಂಸ್ಥಾಪಕರು ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ. ತಲವಾಟದ ಕೆರೆಕೈ ಇವರ ಊರು. ಇವರು ಕೃಷಿ ಹಿನ್ನೆಲೆ ಹೊಂದಿದ್ದು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಸ್ಟಾಫ್ ಮ್ಯಾನೇಜ್ಮೆಂಟಸ್ ಹಾಗೂ ದಿನನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ.

ಅನುಷಾ ಬಿ ವಿ – ಸಹ ಸಂಸ್ಥಾಪಕರು ಹಾಗೂ ಮುಖ್ಯಗುಣಮಟ್ಟದ ಅಧಿಕಾರಿ. ಕಾರ್ತಿಕ್ ಅವರ ಧರ್ಮ ಪತ್ನಿ ಯಾದ ಅನುಷಾ ಅವರು ಸಹ ಸಾಫ್ಟ್‌ವೇರ್ ಕಂಪೆನಿಯಲ್ಲಿ 16 ವರುಷ ಕೆಲಸಮಾಡಿ ಇದೀಗ ತಂಬುಳಿ ಮನೆಯಲ್ಲಿ ಮುಖ್ಯ ಗುಣಮಟ್ಟದ ಅಧಿಕಾರಿಯಾಗಿ ಸಂಪೂರ್ಣ ಅಡುಗೆಮನೆಯನ್ನು ನಿರ್ವಹಿಸುತ್ತಿದ್ದಾರೆ.

ಕಾರ್ತಿಕ್ ಅವರು ಕೋವಿಡ್ ಸಮಯದಲ್ಲಿ ಊರಿಗೆ ಶಿಫ್ಟ್ ಆಗಿ ತಮ್ಮ ಸ್ನೇಹಿತ ಪ್ರಶಾಂತ್ ಅವರೊಂದಿಗೆ ಸೇರಿ 13ನೇ ಜೂನ್, 2021 ರಂದು ರಾಗ್ರಾನ್ಯೂಲ್ಸ್ ಎಂಬ ಕಂಪನಿಯನ್ನು ಸ್ಥಾಪಿಸಿ ಅದರ ಕಲಬೆರಿಕೆ ಮುಕ್ತ ಆಹಾರವನ್ನು ಅಂತರ್ಜಾಲ ಹಾಗು ಸ್ಟೋರ್‌ನ ಮುಖಾಂತರ ಮಾರಾಟ ಮಾಡುತ್ತಿರುತ್ತಾರೆ. ಮುಂದುವರಿದ ಭಾಗವಾಗಿ ಸ್ನೇಹಿತ ಪ್ರಶಾಂತ್ ಹಾಗೂ ಧರ್ಮಪತ್ನಿ ಅನುಷಾರೊಂದಿಗೆ ಸೇರಿ 'ತಂಬುಳಿ ಮನೆ' ಎಂಬ ಒಂದು ಕಲ್ಪನೆಯನ್ನು ಕಾರ್ಯರೂಪಕ್ಕೆ ತಂದಿರುತ್ತಾರೆ.

ಆಮೇಲೆ ಅದನ್ನು ರಾಜಧಾನಿಯಲ್ಲಿ ಮಾಡಬೇಕೆಂಬ ಮಹದಾಸೆ ತಮ್ಮ ಸ್ನೇಹಿತರ ಸಹಕಾರದಿಂದ ತಂಬುಳಿ ಮನೆಯ ಮೊದಲನೇ ಮಳಿಗೆಯನ್ನು ದಿನಾಂಕ 14/ಜನವರಿ/2024 ರಂದು ಪ್ರಾರಂಭಿಸುತ್ತಾರೆ. ಆಮೇಲೆ ಜನರ ಒಳ್ಳೆ ರೆಸ್ಪಾನ್ಸ್ ನೋಡಿ ದಿನಾಂಕ 05/ಏಪ್ರಿಲ್/2024 ರಂದು 2ನೇ ಮಳಿಗೆಯನ್ನು ತೆರೆಯುತ್ತಾರೆ. ಆಮೇಲೆ ದಿನಾಂಕ 28/ಜೂನ್/2024 ರಂದು 4500 ಚದರಡಿ ಜಾಗದಲ್ಲಿ ಕಮರ್ಷಿಯಲ್ ಕಿಚನ್ ಸ್ಥಾಪಿಸಿ ನಂತರ ಫ್ರಾಂಚೈಸ್ ಮುಖಾಂತರ 11 ಮಳಿಗೆಗಳನ್ನು ಬೆಂಗಳೂರಿನಾದ್ಯಂತ ತೆರೆದಿರುತ್ತಾರೆ.

ಇವರ ತಂಬುಳಿ ಅಭಿಯಾನದ ಮುಂದುವರಿದ ಭಾಗವಾಗಿ, ವಿವಿಧ ರೀತಿಯ ತಂಬುಳಿಗಳನ್ನು ಟೆಟ್ರಾ ಪ್ಯಾಕ್ ಮಾಡಿ ಮಾರಾಟ ಮಾಡುವ ಯೋಜನೆಯನ್ನು ಹೊಂದಿದ್ದಾರೆ. ಟೆಟ್ರಾ ಪ್ಯಾಕ್ ಮಾಡಿದಾಗ, ಹಲವು ದಿನಗಳ ಕಾಲ ತಾಜಾ ತಂಬುಳಿಯನ್ನು ಗ್ರಾಹಕರಿಗೆ ನೀಡಬಹುದು. ಈ ಯೋಜನೆ ಸಂಪೂರ್ಣಗೊಂಡಲ್ಲಿ ಈ ದೇಶಾದ್ಯಂತ ಆರೋಗ್ಯಕರವಾದ ತಂಬುಳಿಗಳನ್ನು ಮಾರಾಟ ಮಾಡಬೇಕೆಂಬುದು ಇವರ ಆಶಯ.

ಹಾಗೆಯೇ ಇವರು ನಿಮ್ಮ ಮನೆಯ ಕಾರ್ಯಕ್ರಮಕ್ಕೆ, ಮದುವೆ ಮುಂಜಿ ಮುಂತಾದ ಸಮಾರಂಭಗಳಿಗೆ ತಂಬುಳಿಗಳನ್ನು ವೆಲ್‌ಕಂ ಡ್ರಿಂಕ್ ಆಗಿ ನೀಡುತ್ತಾರೆ. ಸಕ್ಕರೆ ಹಾಕಿರುವ ಅಥವಾ ಎಸ್ಸೆನ್ಸ್ ಹಾಕಿರುವ ಕಾರ್ಬೋನೇಟೆಡ್ ಪಾನೀಯಗಳಿಗೆ ಹೋಲಿಸಿದರೆ ಇವರ ತಂಬುಳಿ ನಿಜಕ್ಕೂ ಉತ್ತಮ. ಆರ್ಡರ್ ಮಾಡಲು ಇವರ ಕಂಪನಿ ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಹಾಗೂ ಗೂಗಲ್ ನಂಬರ್‌ಗೆ ಕರೆ ಮಾಡಿ.

ನೀವಿನ್ನೂ ತಂಬುಳಿಯ ರುಚಿ ನೋಡಿಲ್ಲವೇ? ಹಾಗಿದ್ದರೆ ಈಗಲೇ 'ತಂಬುಳಿ ಮನೆ'ಗೆ ಭೇಟಿ ಕೊಡಿ, ಈ ಸವಿ ರುಚಿಯ ಪಾನೀಯದ ರುಚಿಯನ್ನು ಒಮ್ಮೆ ನೋಡಿ!

ವೆಬ್ಸೈಟ್: www.tambulimane.in
ಇನ್ಸ್ಟಾಗ್ರಾಮ್ ಖಾತೆ: tambulimane

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಅತಿ ಕಡಿಮೆ ಅವಧಿಯಲ್ಲಿ ಆಹಾರ ಮತ್ತು ಪಾನೀಯ ಉದ್ಯಮದಲ್ಲಿ ಶಿಸ್ತು ಮತ್ತು ಆರೋಗ್ಯ ಪೂರ್ಣ ಸೇವೆಯೊಂದಿಗೆ ಸಾಧನೆಯ ಪಥದಲ್ಲಿರುವ ತಂಬುಳಿ ಮನೆ ಸಂಸ್ಥೆಯನ್ನು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ರಷ್ಯಾದ ರಾಜಧಾನಿ ಮಾಸ್ಕೋದಲ್ಲಿ ಇದೇ 24ರಂದು 'ವಿಶ್ವವಾಣಿ'ಯ ಆಶ್ರಯದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಅನೇಕ ಗಣ್ಯಮಾನ್ಯರ ಸಮ್ಮುಖದಲ್ಲಿ ತಂಬುಳಿ ಮನೆಯ ಕಾರ್ತಿಕ್ ಅವರಿಗೆ ಪ್ರದಾನ ಮಾಡಲಾಗುವುದು.

ಇಲ್ಲಿ ನಡೆದಿದೆ 'ತಂಬುಳಿ ಅಭಿಯಾನ'!

ತಂಬುಳಿ ಮನೆ ಔಟ್ಲೆಟ್‌ಗಳು

ಕಿಯೋಸ್ಕ್ (ಕ್ಯುಎಸ್‌ಆರ್)
ಜೆಪಿ ನಗರ, ಆರ್ ಆರ್ ನಗರ, ಸೀತಾ ಸರ್ಕಲ್, ಬನಶಂಕರಿ 2ನೇ ಹಂತ, ಬೊಮ್ಮನಹಳ್ಳಿ, ಬೇಗೂರ್, ವಿದ್ಯಾರಣ್ಯಪುರ, ಸಂಜಯ್ ನಗರ್, ಹಂಪಿನಗರ.
ಔಟ್ಲೆಟ್ (ಫೈನ್‌ಡೈನ್ - ಬಾಳೆ ಎಲೆ ಊಟ) ಬನಶಂಕರಿ 6ನೇ ಹಂತ, ಜಯನಗರ 7ನೇ ಬ್ಲಾಕ್ ಹಾಗು ಕನಕಪುರ ಮುಖ್ಯ ರಸ್ತೆ (ಆರ್ಟ್ ಆಫ್ ಲಿವಿಂಗ್ ಹತ್ತಿರ).

ಸುಳ್ಳು ಸುಲಭವಾದರೂ, ಸತ್ಯದ ದಾರಿ ಗೌರವದ್ದು

ಒಮ್ಮೆ ಒಬ್ಬ ರಾಜ ಸೆರೆಮನೆಯಲ್ಲಿರುವ ಕೈದಿಗಳನ್ನು ವೀಕ್ಷಿಸಲು ಕಾರಾಗೃಹಕ್ಕೆ ಬಂದ. ಅಲ್ಲಿರುವ ಒಬ್ಬ ಕೈದಿಯನ್ನು ಕಂಡು ನೀನು ಯಾವ ಅಪರಾಧ ಮಾಡಿರುವೆ? ಎಂದು ಪ್ರಶ್ನೆ ಮಾಡಿದ. ಆಗ ಕೈದಿ ಮಹಾಸ್ವಾಮಿ, ನಾನು ಯಾವ ಅಪರಾಧವನ್ನು ಮಾಡಿಲ್ಲ ಆದರೂ ನನ್ನನ್ನು ಇವರು ಸುಮ್ಮನೆ ದಂಡಿಸಿದ್ದಾರೆ ಎಂದ. ಇನ್ನೊಬ್ಬ ಕೈದಿಯನ್ನು ವಿಚಾರಿಸಿದ , ನೀನು ಯಾವ ಅಪರಾಧ ಮಾಡಿರುವೆ ಎಂದು. ಪ್ರಭೂ ನಾನು ಯಾವ ಅಪರಾಧವನ್ನೂ ಮಾಡಿಲ್ಲ. ನನ್ನ ಮೇಲೆ ಸುಳ್ಳು ಆರೋಪ ಹೊರಿಸಿ ದಂಡನೆಗೆ ಗುರಿ ಮಾಡಿದ್ದಾರೆ ಎಂದ. ಹಾಗೆಯೇ ಇನ್ನೊಬ್ಬ ಕೈದಿಯನ್ನು ವಿಚಾರಿಸಿದ. ಅವನು ಪ್ರಭೂ, ನಾನು ಯಾವ ತಪ್ಪನ್ನು ಮಾಡಿಲ್ಲಾ, ಅಪರಾಧ ನಡೆದ ದಿನ, ನಾನು ಊರಿನಲ್ಲೇ ಇರಲಿಲ್ಲ , ಆದರೂ ನನ್ನ ಮೇಲೆ ಸುಳ್ಳು ಆಪಾದನೆ ಹೊರಿಸಿ ಕಾರಾಗೃಹಕ್ಕೆ ತಳ್ಳಿದ್ದಾರೆ, ಎಂದು ಉತ್ತರಿಸಿದ.

ಹೀಗೆ ರಾಜ ಎಲ್ಲಾ ಕೈದಿಗಳನ್ನು ವಿಚಾರಿಸುತ್ತಾ ಹೋದಾಗ ಎಲ್ಲರೂ ತಾವು ನಿರ್ದೋಷಿಗಳೆಂದು, ತಾವೇನೂ ತಪ್ಪೇ ಮಾಡಿಲ್ಲವೆಂದು ಹೇಳುತ್ತಿದ್ದರು. ಕೊನೆಯಲ್ಲಿ ಒಬ್ಬ ಕೈದಿಯನ್ನು ರಾಜ ವಿಚಾರಿಸಿದಾಗ ಅವನು ಮಾತ್ರ ಹೌದು ಪ್ರಭೂ, ನಾನು ನಿಜವಾಗಿಯೂ ಅಪರಾಧ ಮಾಡಿದೆ. ಒಮ್ಮೆ ನನಗೆ ಬಹಳ ಹಸಿವಾಯಿತು, ಎಲ್ಲೂ ಊಟ ಸಿಗಲಿಲ್ಲ.ಆಹಾರ ಖರೀದಿಸಲು ನನ್ನ ಬಳಿ ಹಣವೂ ಇರಲಿಲ್ಲ, ಆದ್ದರಿಂದ ಒಂದು ಅಂಗಡಿಯಲ್ಲಿ ಹಣವನ್ನು ಕದ್ದು ಇನ್ನೇನು ಓಡಿ ಹೋಗಬೇಕೆನ್ನುವಷ್ಟರಲ್ಲಿ, ಸಿಕ್ಕಿಬಿದ್ದೆ. ನನಗೆ ಸರಿಯಾಗಿ ದಂಡನೆ ಆಯಿತು. ಎಂದು ಹೇಳಿದ.

ಇದನ್ನು ಕೇಳಿ ರಾಜನಿಗೆ ಬಹಳ ಸಂತೋಷವಾಯಿತು. ಸದ್ಯ ಒಬ್ಬನಾದರೂ ಸತ್ಯವನ್ನು ನುಡಿದನಲ್ಲ ಎಂದು. ಆ ಕೈದಿಯ ಪ್ರಾಮಾಣಿಕತೆಗೆ ಬೆರಗಾಗಿ, ಈ ನಿರ್ದೋಷಿಗಳ ಮಧ್ಯದಲ್ಲಿ ನಿನ್ನಂತಹ ಅಪರಾಧಿ ಇರಕೂಡದು ಎಂದು ಹೇಳುತ್ತಾ, ನಿನ್ನನ್ನು ಈ ಕೂಡಲೇ ಬೇರೆ ಸ್ಥಳಕ್ಕೆ ಕರೆದುಕೊಂಡು ಹೋಗುವಂತೆ ಸೇವಕರಿಗೆ ಹೇಳುತ್ತೇನೆ ಎಂದ. ಆನಂತರ ಸತ್ಯವನ್ನು ನುಡಿದ ಆ ಅಪರಾಧಿಯನ್ನು ಕಾರಾಗೃಹದಿಂದ ಮುಕ್ತನನ್ನಾಗಿ ಮಾಡಿ,ತನ್ನ ಅರಮನೆಯ ಉದ್ಯಾನವನದಲ್ಲಿ ಗಿಡಗಳಿಗೆ ನೀರು ಹಾಕುವ ಕೆಲಸವನ್ನು ಕೊಟ್ಟು ಅಲ್ಲೇ ಇರಿಸಿದ. ನಮ್ಮ ದೈನಂದಿನ ಬದುಕಿನಲ್ಲಿ ಬೆಳಗಿನ ರಾತ್ರಿಯವರೆಗೆ, ನಾನಾ ವಿಷಯಗಳಿಗೆ ನಾನಾ ಪರಿಸ್ಥಿತಿಗಳಲ್ಲಿ ಸಲೀಸಾಗಿ ಹೇಳುವುದನ್ನು ಸುಳ್ಳು ರೂಢಿ ಮಾಡಿಕೊಂಡಿರುತ್ತೇವೆ. ಆಫೀಸಿಗೆ ಲೇಟಾಗಿ ಹೋದರೆ, ರಸ್ತೆಯಲ್ಲಿ ಯಾವುದು ಆಕ್ಸಿಡೆಂಟ್ ಆಗಿತ್ತು, ಅಥವಾ ಮತ್ಯಾವುದೋ ತುರ್ತು ಪರಿಸ್ಥಿತಿ ಎಂದು ಯೋಚಿಸದೇ ಹೇಳಿಬಿಡುತ್ತೇವೆ. ಯಾರಿಗೂ ಯಾವುದೇ ಸಮಯದಲ್ಲಿ ಕರೆ ಮಾಡುವುದು ಮರೆತು ಹೋದರೆ, ಪ್ರಾಮಾಣಿಕವಾಗಿ ಮರೆತೆ ಎಂದು ಹೇಳುವ ಬದಲು ಅದಕ್ಕೊಂದು ಕಥೆ ಕಟ್ಟುತ್ತೇನೆ. ಮಕ್ಕಳ ಜೊತೆ ಮಾತನಾಡುವಾಗ ಕೂಡ ಚಿಕ್ಕ ಚಿಕ್ಕ ವಿಷಯಕ್ಕೂ ನಾವು ಹೇಳುವ ಸುಳ್ಳು ನಮಗೆ ಮರೆತುಹೋಗಿದ್ದರೂ ಕೂಡ ಮಕ್ಕಳಿಗೆ ಸಂಪೂರ್ಣವಾಗಿ ನೆನಪಿರುತ್ತದೆ.

ಸುಳ್ಳು ಹೇಳಿದಾಗ ಪ್ರತಿ ಬಾರಿಯೂ ನಾವದನ್ನು ನೆನಪಿಸಿಕೊಂಡು ಅದಕ್ಕೆ ತಕ್ಕಂತೆ ಮುಂದೆ ಮಾತನಾಡುತ್ತಾ ಹೋಗಬೇಕಾಗುತ್ತದೆ. ಮತ್ತೆ ಮತ್ತೆ ಅದನ್ನು ನಿರೂಪಿಸಲಿಕ್ಕೆ, ಅದರ ಜೊತೆಗೆ ಮತ್ತೊಂದು ಮಗದೊಂದು ಸುಳ್ಳು ಸೇರಿಸುತ್ತಲೇ ಇರಬೇಕಾಗುತ್ತದೆ. ಈ ಗೊಂದಲದಲ್ಲಿ ನಾವು ಹೇಳಿದ ಸುಳ್ಳು ಖಂಡಿತ ಬಯಲಾಗಿರುತ್ತದೆ. ಚಿಕ್ಕ ಪುಟ್ಟದಕ್ಕೂ, ಸುಳ್ಳು ಹೇಳುವ ವ್ಯಕ್ತಿಯನ್ನು ಯಾರು ಕೂಡ ಗಂಭೀರವಾಗಿ ಪರಿಗಣಿಸುವುದಿಲ್ಲ. ನಾವು ಚಿಕ್ಕ ಸುಳ್ಳಿಗೆ ಸಿಕ್ಕಿ ಹಾಕಿಕೊಂಡಿದ್ದರು ಸಹ, ಅದು ನಮ್ಮ ವ್ಯಕ್ತಿತ್ವವನ್ನೇ ಎದುರುಗಿರುವವರ ಮುಂದೆ ಬದಲಾಯಿಸಿಬಿಡುತ್ತದೆ. ಸಾಧ್ಯವಾದಷ್ಟೂ ನಿಜ ಹೇಳುವ ಪ್ರಯತ್ನ ಮಾಡುವುದರಿಂದ ನಮ್ಮ ಮಟ್ಟಿಗೆ ಸುಳ್ಳು ನಮ್ಮ ಜೀವನದಿಂದ ಕಡಿಮೆಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಾವು ಯಾರ ಜೊತೆ ಒಡನಾಡುತ್ತೇವೋ ಅಲ್ಲಿ ಗೌರವ ಉಳಿಸಿಕೊಳ್ಳುತ್ತೇವೆ. ಸತ್ಯವನ್ನು ನುಡಿಯುವುದಕ್ಕೂ ಧೈರ್ಯ ಬೇಕು, ಸತ್ಯವನ್ನು ನುಡಿಯುವವರಿಗೆ ಯಾವು ದೇ ರೀತಿಯ ಅಂಜಿಕೆಯೂ ಇರುವುದಿಲ್ಲ. ಅಂತವರು ಎಲ್ಲೇ ಇರಲಿ ಧೈರ್ಯದಿಂದ ಖುಷಿಯಾಗಿಯೇ ಇರಬಹುದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಜಾಗೃತಿ ಮತ್ತು ಅನುಕಂಪದ ಸುಸಂಬದ್ಧತೆ

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಈ ಭೂಮಿಯ ಮೇಲೆ ಓಡಾಡಿದ ಪ್ರತಿಯೊಬ್ಬ ಜ್ಞಾನಿಯ ಬೋಧನೆಗಳ ತಿರುಳು ಸಮ ತ್ವವೇ ಆಗಿದೆ ಮಾತು ಭಾಷೆ ವಿಧಾನ ಬೇರೆ ಬೇರೆಯಾ ದರೂ ಸಂದೇಶ ಮಾತ್ರ ಸಮತ್ವವನ್ನು ಹೊಂದುವುದಾ ಗಿದೆ. ಇದಕ್ಕೆ ವಿರುದ್ಧವಾದ ಯಾವುದೇ ಬೋಧನೆ ಅಥವಾ ಆಚರಣೆ ಮತ ಸಿದ್ಧಾಂತಕ್ಕೆ ವಿರೋಧವಾಗಿದೆ.

ಮನಸ್ಸಿನ ವಿಷಯದಲ್ಲಿ ಹೇಳುವುದಾದರೆ ಒಂದು ಬದಿ ಇಂದ್ರಿಯಗಳು ಮತ್ತೊಂದು ಬದಿ ಬುದ್ಧಿ ಇವುಗಳ ನಡುವಿನ ಸಮತೋಲನವಾಗಿದೆ. ವ್ಯಕ್ತಿ ಇಂದ್ರಿಯಗಳಿಗೆ ವಾಲಿದಾಗ ಅವನು ಆಸೆಗಳಲ್ಲಿ ಮುಳುಗಿ ಹೋಗುತ್ತಾನೆ. ಬುದ್ಧಿಯು ಮೇಲಾದಾಗ ವ್ಯಕ್ತಿ ಜಾಗೃತನಾಗುತ್ತಾನೆ. ಆದರೆ ಉಳಿದವರನ್ನು ಅನುಕಂಪ ಇಲ್ಲದವರೆಂದು ಉಪೇಕ್ಷಿಸಬಹುದು. ಆದ್ದರಿಂದ ಕೃಷ್ಣ ಹೇಳುತ್ತಾನೆ ಯಾರು ದುಃಖವಿರಲಿ, ಸುಖವಿರಲಿ ಉಳಿದವರ ಬಗ್ಗೆ ಅನುಕಂಪ ಹೊಂದಿರುತ್ತಾರೋ, ತನ್ನ ಹಾಗೆಯೇ ಎಂದು ತಿಳಿಯುತ್ತಾರೋ ಅವರೇ ಅತ್ಯುತ್ತಮ ಯೋಗಿಗಳು (6.32). ಇದು ಜಾಗೃತಿ ಮತ್ತು ಅನುಕಂಪದ ಸುಸಂಬದ್ಧತೆಯಾಗಿದೆ.

ಬಂಗಾರ, ಕಲ್ಲು, ಆಕಳು, ಆನೆ ಮತ್ತು ನಾಯಿಗಳನ್ನು ಒಂದೇ ರೀತಿ ನೋಡಬೇಕೆಂದು ಕೃಷ್ಣ ಹೇಳುತ್ತಾನೆ. ನಂತರ ಮಿತ್ರರು ಶತ್ರುಗಳು ಸಹಿತ ಎಲ್ಲ ಜನರನ್ನು ಸಮತ್ವದಿಂದ ಕಾಣಬೇಕೆಂದು ತಿಳಿಸಿದ್ದಾನೆ. ಇದನ್ನು ಅರ್ಥ ಮಾಡಿಕೊಳ್ಳುವ ಇನ್ನೊಂದು ಮಾರ್ಗವೆಂದರೆ ಜನರನ್ನು ನಡೆಸಿಕೊ ಳ್ಳುವ ಮೂರು ಬೇರೆ ಬೇರೆ ಹಂತಗಳಿವೆ. ಮೊದಲ ನೆಯದು ಕಾನೂನಿನ ಮುಂದೆ ಎಲ್ಲರೂ ಒಂದೇ ಎಂಬುದು. ಇಲ್ಲಿ ಎರಡು ವ್ಯಕ್ತಿಗಳಿಗೆ ಸಮಾನತೆ ಹೊಂದುವ ಹಕ್ಕಿದೆ. ಎರಡನೆಯದೆಂದರೆ ಎರಡು ವ್ಯಕ್ತಿಗಳನ್ನು ಅಥವಾ ಗುಣಗಳನ್ನು ಸಮೀಕರಿಸು ವುದು. ಇಲ್ಲಿ ಒಬ್ಬ ನಮಗೆ ಆತ್ಮೀಯನಾಗಿದ್ದರೆ ಇನ್ನೊಬ್ಬ ಹಾಗಿರುವುದಿಲ್ಲ. ಪಾಲಕರನ್ನು ಮತ್ತು ಸಂಬಂಧಿಗಳನ್ನು ಸಮಾನವಾಗಿ ನಡೆಸಿಕೊಳ್ಳುವುದು ಇದಾಗಿದೆ. ಮೂರನೇ ಹಂತವೆಂದರೆ ನಮ್ಮನ್ನು ಇತರರೊಡನೆ ಸಮೀಕರಿಸಿ ಕೊಳ್ಳುವುದು. ಇಲ್ಲಿ ಇತರರ ದುಃಖ ನಮ್ಮದು ಹಾಗೂ ನಮ್ಮ ಸಂತೋಷ ಅವರದು ಎಂಬ ಭಾವನೆ ಇರುತ್ತದೆ. ಇದು ಸಮತ್ವ ದಿಂದ ಉಂಟಾಗುವ ಶುದ್ಧ ಅನುಕಂಪವಾಗಿದೆ. ಕೃಷ್ಣ ಇದನ್ನು ಪರಮಾನಂದ ಎಂದು ಕರೆಯುತ್ತಾನೆ. ಮನಸ್ಸು ಸಂಪೂರ್ಣವಾಗಿ ಸಂತೃಪ್ತಿ ಹೊಂದಿ ಉದ್ವೇಗ ಶಾಂತವಾದಾಗ ಇದನ್ನು ನಾವು ಪಡೆಯುತ್ತೇವೆ. (6.27)

ಇದನ್ನು ಸಾಧಿಸಲು ನಾವು ದೃಢ ನಿಶ್ಚಯದಿಂದ ನಿಯಮಿತವಾಗಿ ಅಭ್ಯಾಸ ಮಾಡಬೇಕೆಂದು ಕೃಷ್ಣ ತಿಳಿಸುತ್ತಾನೆ. (6.23) ನಮ್ಮ ಅಸ್ಥಿರ ಹಾಗೂ ಆತಂಕಗೊಂಡ ಮನಸ್ಸು ಅತ್ತಿತ್ತ ಅಲೆದಾಡಿದರೂ ನಾವು ಅದನ್ನು ನಮ್ಮ ನಿಯಂತ್ರಣಕ್ಕೆ ಒಳಪಡಿಸಿ ಕೊಳ್ಳಬೇಕು. (6.26) ಇದನ್ನು ನಿಯಮಿತವಾಗಿ ಅಭ್ಯಾಸ ಮಾಡಿದರೆ ನಮಗೆ ಪರಮಾನಂದ ದೊರೆಯು ತ್ತದೆ ಎಂಬುದು ಕೃಷ್ಣನ ಭರವಸೆಯಾಗಿದೆ. (6.28)

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

■	■	1			■	2	■	3
4			■	■	5			
■	■	6	7		■		■	
8	■	■		■	9		10	■
11	12	■	13			■	14	15
■	16	17		■		■	■	
18	■		■	19		20	■	■
21				■	■	22		
	■		■	23			■	■

ಎಡದಿಂದ ಬಲಕ್ಕೆ

1. ಚಿನ್ನದ ಗಣಿಗೆ ಹೆಸರಾದ ಜಿಲ್ಲೆ (3)
4. ಕೂಸು ಹುಟ್ಟುವ ಮೊದಲೇ ಹೊಲಿದಿಟ್ಟ ಟೋಪಿ (3)
5. ಅವನು ತೋರಿದ ಸಂಶಯ (3)
6. ಮನವಿಟ್ಟು ಮಾಡಿದ ಹತೋಟಿ (3)
9. ಲೋಹದ ಹಾಳೆ (3)
11. ಧ್ಯಾನ ಮಾಡುತ್ತಿರುವಂತೆ ನಟಿಸಿದ ಕೊಕ್ಕರೆ (2)
13. ಚಿನ್ನ ಅಥವಾ ಬಂಗಾರಕ್ಕೆ ಮತ್ತೊಂದು ಹೆಸರಿದು (3)
14. ಎರಡೇ ಅಕ್ಷರದಲ್ಲಿ ಕಾಣುವ ಸ್ವರ್ಗ (2)
16. ಮತ್ತೊಂದು ಹಾರದ ನಡುವೆ ಸಿಲುಕಿದ ಯುದ್ಧ (3)
19. ವಾಹನ ನೆನಪಿಸುವ ಹನುಮಂತ (3)
21. ಪ್ರತಿದಿನ ಬರುವ ಸೂರ್ಯ (4)
22. ಸೀಮೆಯೇ ಇಲ್ಲದಷ್ಟು ಚತುರ (3)
23. ನಿದಿರೆಯಲ್ಲಿ ಕಂಡ ಸ್ವಪ್ನ (3)

ಮೇಲಿಂದ ಕೆಳಕ್ಕೆ

1. ಪಂಡಿತನೇಕೆ ಕೋವಿಯೊಂದಿಗೆ ಬಂದಿದ್ದಾನೆ (3)
2. ಅವನು ರಾಗವಾಗಿ ಹಾಡುತ್ತಾ ವ್ಯಕ್ತಪಡಿಸಿದ ಪ್ರೀತಿ (4)
3. ಕಾಡು ಅಥವಾ ಅರಣ್ಯ (3)
7. ಬೆಲೆಬಾಳುವ ಮಾಲೆ (4)
8. ತಿರುಗಿ ಬಂದಿರುವ ಕಾಡು (2)
9. ಅಡ್ಡಿ, ಆಕ್ಷೇಪ (4)
10. ತಿರುಗಿ ಬಂದಿರುವ ಪ್ರದೇಶ (2)
12. ಬೇಡವೆಂದು ಎಸೆಯುವ ವಸ್ತು (2)
15. ಪದ್ಯ ಬರೆಯುವಾತ (2)
17. ಮತ್ತೇರಿದ ಆನೆ (4)
18. ಸೂರ್ಯನಿಗೆ ಮತ್ತೊಂದು ಹೆಸರು (3)
20. ತಿನ್ನುವ ಪದಾರ್ಥ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಕೋಲಾರ 4. ಕುಲಾವಿ 5. ಅನುಮಾನ 6. ದಮನ 9. ತಗಡು 11. ಬಕ 13. ಹಾಟಕ 14. ನಾಕ 16. ಸಮರ 19. ಮಾರುತಿ 21. ದಿನಕರ 22. ನಿಸ್ಸೀಮ 23. ಕನಸು

ಮೇಲಿಂದ ಕೆಳಕ್ಕೆ
1. ಕೋವಿದ 2. ಅನುರಾಗ 3. ಕಾನನ 7. ಮಣಿಹಾರ 8. ನಬ 9. ತಕರಾರು 10. ಡುನಾ 12. ಕಸ 15. ಕವಿ 17. ಮದಕರಿ 18. ಆದಿತ್ಯ 20. ತಿನಿಸು

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು ಬಿದಿಯ ಬಾಯಿಗೆ ಕವಳವಾಗದುಳಿಯುವನೆ ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು ನೀ ನೆದುರು ನಿಲೆ ಬಿದಿಯೊಲಿವ – ಮಂಕುತಿಮ್ಮ॥

ಸವಾಲುಗಳಿಗೆ ಹೆದರಿ ಓಡಿಹೋಗಬಾರದು

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಈ ಹುಟ್ಟಿನಿಂದ ಲಾಗಾಯ್ತು ಸಾಯುವತನಕವೂ ಈ ಬದುಕು ಎಂಬುದು ಸವಾಲುಗಳ ಸರಮಾಲೆ. ಈ ಬದುಕೊಂದು ಕದನ. ಈ ಬದುಕುವ ಭರದ ಬದುಕಿನಲ್ಲಿ ಈ ಬದುಕೆಂಬುದು ಕದನ ಎಂದು ಬೆನ್ನು ತೋರಿಸಿ ವಿಮುಖನಾದರೆ ಸೋಲು ಎಂಬುದು ಖಚಿತವಾಗುವುದಲ್ಲದೆ ಸೋತ ನಂತರದೆ ನಾವೂ ಸೇರಿದಂತೆ ನಮ್ಮಯ ಬದುಕು ವಿಧಿಯ ಬಾಯಿಗೆ ಕವಳ (ಊಟ) ವಾಗದೆ ಉಳಿಯಲು ಸಾಧ್ಯವೇ? ಅಂಥಹ ಸಮಯದಲ್ಲಿ ಮನಸ್ಸನ್ನು ಉಕ್ಕಿನ ರೀತಿಯಲ್ಲಿಯೂ, ಬುದ್ಧಿಯನ್ನು ಗದೆಯನ್ನಾಗಿಸಿಕೊಂಡು ಹೋರಾಟ ನಡೆಸಿದಲ್ಲಿ ವಿಧಿ ಎನ್ನುವ ಸಮಯವೂ ನಿನಗೆ ಶರಣಾಗಿ ಗೆಲುವನ್ನು ಕಾಣುತ್ತೀಯೆ ಎಂಬುದು ಈ ಕಗ್ಗದ ಅರ್ಥವಾಗಿದೆ.

ಈ ಮಾನವನ ಬದುಕು ಎಂಬುದೇ ಒಂದು ಕದನ. ಅರಿಷಡ್ವರ್ಗಗಳ, ಷಡೋರ್ಮಿಗಳ ನಿತ್ಯದ ಅಟ್ಟಹಾಸದಲಿ ಪ್ರತಿದಿನವೂ, ದಿನದ ಅನುಕ್ಷಣವೂ ಹೊಸ ಹೊಸ ಹೊಸ ಪೈಪೋಟಿಗಳು, ಹೊಸ ಹೊಸ ಸ್ಪರ್ಧೆಗಳು ಇದ್ದೇ ಇರುತ್ತವೆ. ಅರಿತೋ ಅರಿದೆಯೋ ಹೊಸ ಹೊಸ ಸವಾಲುಗಳು ಬಂದೊದಗಿ ಒದಗಿ ಬರುತ್ತಲೇ ಇರುತ್ತವೆ. ಸವಾಲುಗಳನ್ನು ಮನಸ್ಸಿದ್ದೋ ಇಲ್ಲದೆಯೋ ಅನಿವಾರ್ಯವಾಗಿ ಸ್ವೀಕರಿಸಿ ಎದುರಿಸಲೇಬೇಕು. ಈ ಬದುಕು ಎಂಬುದು ಯಾವಾಗಲೂ ಅನಿಶ್ಚತತೆಯಿಂದ ಕೂಡಿದ್ದು ಎಂಥಹ ಧೀರನನ್ನೂ ಅಧೀರನನ್ನಾಗಿ ಮಾಡಬಲ್ಲದು. ಬದುಕೆಂಬ ಈ ಅನಿಶ್ಚಿತತೆಯ ಕದನದಲ್ಲಿ ನಾವು ಅನುಕ್ಷಣವೂ, ಅನುದಿನವೂ ಹೋರಾಟ ಮಾಡುತ್ತಲೇ ಇರಬೇಕು. ಈ ಹೋರಾಟಕ್ಕೆ ಅಂಜಿಕೊಂಡು ಬೆನ್ನುತೋರಿಸಿ ವಿಮುಖನಾದರೆ ಸೋಲು ಕಟ್ಟಿಟ್ಟ ಬುತ್ತಿಯಾಗುವುದಲ್ಲದೆ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಗುತ್ತದೆ. ಸಮಯ ಎನ್ನುವ ವಿಧಿಗೆ ನಾವು ಕವಳ (ಊಟ)ವಾಗದೆ ಇರಲು ಸಾಧ್ಯವೇ ಇಲ್ಲದಂತಾಗುತ್ತದೆ. ಜತೆಗೆ ಬದುಕಿನ ಯಾನದಲ್ಲಿ ಭರಪೂರ ನೋವಲ್ಲದೆ ಮತ್ತೇನೂ ಇರಲು ಸಾಧ್ಯವೇ ಇರುವುದಿಲ್ಲ. ಈ ಬದುಕು ಎಂಬ ಮಹಾಯುದ್ಧವನ್ನು ಎದುರಿಸುವಾಗ ನಮ್ಮ ಎದೆಯನ್ನು ಉಕ್ಕನ್ನಾಗಿಸಿಕೊಂಡು, ನಿನ್ನ ಬುದ್ಧಿ ಎನ್ನುವ ಮತಿಯನ್ನು ಗದೆಯನ್ನಾಗಿಸಿಕೊಳ್ಳುವ ದೃಢ ಸಂಕಲ್ಪದೊಂದಿಗೆ ಈ ಬದುಕಿನ ಹೋರಾಟದಲ್ಲಿ ನೀ ತೊಡಗುವಂತನಾದರೆ ನಿನಗೆ ಆ ವಿಧಿಯೂ (ಸಮಯ) ಒಲಿದು ಬದುಕಿನ ಹೋರಾಟದಲ್ಲಿ ಜಯವು ನಿನಗೆ ಪ್ರಾಪ್ತವಾಗಿ ನೀನು ಜಯಶಾಲಿಯಾಗುತ್ತೀ. ಆದುದರಿಂದ ಯಾವುದೇ ಕಾರಣಕ್ಕೂ ಈ ಬದುಕು ಎಂಬ ಯುದ್ಧಕ್ಕೆ ಅಂಜಬಾರದು, ನಿನ್ನ ಹೃದಯ, ಮನಸ್ಸು, ಎದೆಯನ್ನು ಉಕ್ಕಿನಂತೆ ಸಜ್ಜಾಗಿಸಿಕೊಂಡು, ಬುದ್ಧಿಮತ್ತೆಯನ್ನೇ ಗದೆಯನ್ನಾಗಿಸಿಕೊಂಡು ಹೋರಾಟ ಮಾಡಿದರೆ ಆ ವಿಧಿಯೇ ನಿನಗೊಲಿದು ಜಯವು ನಿನ್ನದಾಗುತ್ತದೆ.

ನಮ್ಮ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರ ಜೀವನಗಾಥೆಯನ್ನೇ ಉದಾಹರಿಸಿಕೊಂಡರೆ ಅವರು ತುಳಿತಕ್ಕೊಳಗಾದ ದಲಿತ ಸಮಾಜದಿಂದ ಬಂದವರಾಗಿದ್ದುಕೊಂಡು ಈ ಸಮಾಜದಲ್ಲಿ ತುಳಿತಕ್ಕೊಳಗಾಗಿದ್ದರೂ, ವಿಧಿ ಎನ್ನುವ ಸಮಯವು ಅವರ ವಿರುದ್ಧವಾಗಿದ್ದರೂ ಅವರು ಬದುಕನ್ನು ಹೋರಾಟ ಎಂದುಕೊಂಡು, ತಾನು ಜೀವಿಸುವುದೇ ತುಳಿತಕ್ಕೊಳಗಾದವರ ಉದ್ಧಾರಕ್ಕಾಗಿ ಎಂದು ದೃಢ ಸಂಕಲ್ಪ ಮಾಡಿಕೊಂಡು, ಅವರ ಎದೆ ಹಾಗೂ ಹೃದಯವನ್ನು ಉಕ್ಕಿನಂತಾಗಿಸಿಕೊಂಡು, ಅವರು ಪಡೆದ ವಿದ್ಯೆ ಮತ್ತು ಜ್ಞಾನದಿಂದ ಮನಸ್ಸನ್ನು ಗದೆಯನ್ನಾಗಿಸಿಕೊಂಡು ಹೋರಾಟ ಮಾಡಿದ ಪರಿಣಾ ಮವಾಗಿಯೇ ಅವರು ರೂಪಿಸಿದ ಸಂವಿಧಾನದ ಮುಖಾಂತರ ಇಂದು ಭಾರತದಲ್ಲಿ ಸಮತೆ, ಸಮಾನತೆ, ಭ್ರಾತೃತ್ವಗಳ ಚಿಗುರು ಬಂದಿದ್ದಲ್ಲದೆ ತುಳಿತಕ್ಕೊಳಗಾದವರ ಬದುಕೂ ಸಹ ಹಸನಾಗುವಂತಿದೆ. ಅಬ್ರಹಾಂ ಲಿಂಕನ್ ಅವರೂ ಹೋರಾಟದಿಂದಲೇ ಮೇಲೆ ಬಂದವರು. ಥಾಮಸ್ ಆಲ್ವಾ ಎಡಿಸನ್ ಅವರೂ ಸುಮಾರು 2600 ಬಾರಿ ಪ್ರಯೋಗ ವಿಫಲಗೊಂಡರೂ ಕೊನೆಗೆ ಬಲ್ಬ್ ಕಂಡುಹಿಡಿದು ಈ ಜಗತ್ತಿಗೆ ಬೆಳಕು ನೀಡಿದರು.

ನೀವೂ ಬರೆಯಬಹುದು
ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಇಂದಿನ ಪಂದ್ಯ

7.30 PM

ಕೋಲ್ಕತ್ತಾ ನೈಟ್ ರೈಡರ್ಸ್ VS ಗುಜರಾತ್ ಟೈಟನ್ಸ್

ಈಡೆನ್ ಗಾರ್ಡನ್ಸ್ ಕ್ರೀಡಾಂಗಣ ಕೋಲ್ಕತ್ತಾ

IPL ರಂಗು 2025

ಲಖನೌ ಜೈಂಟ್ಸ್ ತಂಡದ ವಿರುದ್ಧ ಎದುರಾದ ಕೇವಲ 2 ರನ್‌ಗಳ ಸೋಲು ನಿಜಕ್ಕೂ ನನಗೆ ಬಹಳ ಬೇಸರ ತಂದಿದೆ. ನಮ್ಮ ರಾಜಸ್ಥಾನ ತಂಡವು ಅಂತಿಮ ಓವರ್‌ನಲ್ಲಿ ಅತ್ಯಧಿಕ ರನ್ ನೀಡಿತ್ತು, ಅದುವೇ ಸೋಲಿಗೆ ಪ್ರಮುಖ ಕಾರಣ ಎಂದು ನನಗನಿಸಿದೆ. ನಮ್ಮ ತಂಡದ ಉತ್ತಮ ಬೌಲರ್ ಆಗಿದ್ದ ಸಂದೀಪ್ ಶರ್ಮಾ ತನ್ನ 20ನೇ ಓವರ್‌ನಲ್ಲಿ ಬರೋಬ್ಬರಿ 27 ರನ್‌ಗಳನ್ನು ಲಖನೌ ತಂಡದ ಬ್ಯಾಟ್ಸ್‌ಮ್ಯಾನ್‌ಗಳಿಗೆ ಬಿಟ್ಟು ಕೊಟ್ಟರು, ಅದು ನಮಗೆ ಭಾರೀ ಹಿನ್ನಡೆಯಾಯಿತು. ಒಂದೊಮ್ಮೆ ಅವರು ಕನಿಷ್ಠ 15 ರನ್ ಬಿಟ್ಟುಕೊಟ್ಟಿದ್ದರೂ ಕೂಡಾ ನಾವು ಪಂದ್ಯ ಗೆಲ್ಲಬಹುದಾಗಿತ್ತು. ನಮ್ಮ ಕೈ ಚೆಲ್ಲಿ ಹೋದ ಪಂದ್ಯಗಳ ಕಹಿನೆನಪು ನಮ್ಮನ್ನು ಆಗಾಗ ಕಾಡುತ್ತಿದ್ದರೂ ಕೂಡಾ, ಮುಂದೆ ಬಹಳಷ್ಟು ಪಂದ್ಯಗಳು ನಮ್ಮ ತಂಡದ ಮುಂದಿವೆ. ಆ ನಿಟ್ಟಿನಲ್ಲಿ ಅವುಗಳ ನ್ನೆಲ್ಲಾ ಗೆಲ್ಲುವ ಪ್ರಯತ್ನವನ್ನು ಖಂಡಿತಾ ಪ್ರಾಮಾಣಿಕವಾಗಿ ಇಡೀ ತಂಡವು ಬಹಳ ಶ್ರದ್ಧೆ ಮತ್ತು ಬದ್ಧತೆಯಿಂದ ಮಾಡಲಿದೆ.

–ರಿಯಾನ್ ಪರಾಗ್, ರಾಜಸ್ಥಾನ ತಂಡದ ನಾಯಕ

ಸ್ಕೋರ್ ಬೋರ್ಡ್

157/6 (20 ಓವರ್)

ಪಂಜಾಬ್ ಕಿಂಗ್ಸ್

ಬ್ಯಾಟರ್	ಔಟ್	ರನ್	ಎಸೆತ
ಪ್ರಿಯಾಂಶ್	ಬೌಲರ್ ▸▸ ಪಾಂಡ್ಯ, ಕ್ಯಾಚ್ ▸▸ ಡೇವಿಡ್	22	15
ಪ್ರಭ್ಸಿಮ್ರಾನ್	ಬೌಲರ್ ▸▸ ಪಾಂಡ್ಯ, ಕ್ಯಾಚ್ ▸▸ ಡೇವಿಡ್	33	17
ಶ್ರೇಯಸ್	ಬೌಲರ್ ▸▸ ಶೆಫರ್ಡ್, ಕ್ಯಾಚ್ ▸▸ ಪಾಂಡ್ಯ	6	10
ಜೆ. ಇಂಗ್ಲಿಸ್	ಬೌಲ್ಡ್-ಬೌಲರ್: ಸುಯಶ್	29	17
ವಧೇರಾ	ರನೌಟ್ ▸▸ ಶರ್ಮಾ	5	6
ಶಶಾಂಕ್	▸▸ ನಾಟೌಟ್*	31	33
ಸ್ಟೊಯಿನಿಸ್	ಬೌಲ್ಡ್-ಬೌಲರ್ ▸▸ ಸುಯಶ್	1	2
ಜಾನ್ಸೆನ್	▸▸ ನಾಟೌಟ್*	25	20
ಇತರೆ		1	

ಬೆಂಗಳೂರು

	ಓವರ್	ರನ್	ವಿಕೆಟ್
ಭುವನೇಶ್ವರ್	4	26	0
ದಯಾಳ್	2	22	0
ಹ್ಯಾಝುಲ್‌ವುಡ್	4	39	0
ಕೃನಾಲ್ ಪಾಂಡ್ಯ	4	25	2
ಶೆಫರ್ಡ್	2	18	1
ಸುಯಶ್	4	26	2

ಪಂಜಾಬ್

	ಓವರ್	ರನ್	ವಿಕೆಟ್
ಅರ್ಷದೀಪ್	3	26	1
ಬಾರ್ಟ್ಲೆಟ್	3	28	0
ಬ್ರಾರ್	4	27	1
ಜಾನ್ಸೆನ್	3	20	0
ಚಹಾಲ್	4	36	1
ಸ್ಟೊಯಿನಿಸ್	1	13	0
ವಧೇರಾ	0.5	9	0

159/3 (18.5 ಓವರ್)

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಬ್ಯಾಟರ್	ಔಟ್	ರನ್	ಎಸೆತ
ಸಾಲ್ಟ್	ಬೌಲರ್ ▸▸ ಅರ್ಶದೀಪ್, ಕ್ಯಾಚ್ ▸▸ ಇಂಗ್ಲಿಸ್	1	3
ಕೊಹ್ಲಿ	▸▸ ನಾಟೌಟ್*	73	54
ಪಡಿಕ್ಕಲ್	ಬೌಲರ್ ▸▸ ಬ್ರಾರ್, ಕ್ಯಾಚ್ ▸▸ ವಧೇರಾ	61	35
ಪಾಟಿದಾರ್	ಬೌಲರ್ ▸▸ ಚಾಹಲ್, ಕ್ಯಾಚ್ ▸▸ ಜಾನ್ಸೆನ್	12	13
ಜಿತೇಶ್	▸▸ ನಾಟೌಟ್*	11	8
ಇತರೆ		5	

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	07	05	02	10
ಡೆಲ್ಲಿ	07	05	02	10
ಬೆಂಗಳೂರು	08	05	03	10
ಪಂಜಾಬ್	08	05	03	10
ಲಖನೌ	08	05	03	10
ಕೋಲ್ಕತ್ತಾ	07	03	04	06
ಮುಂಬೈ	07	03	04	06
ರಾಜಸ್ಥಾನ್	08	02	06	04
ಹೈದರಾಬಾದ್	07	02	05	04
ಚೆನ್ನೈ	07	02	05	04

ಪರ್ಪಲ್ ಕ್ಯಾಪ್ ರೇಸ್‌ನಲ್ಲಿ ಕನ್ನಡಿಗ

ದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್‌ನ ಮೊದಲಾರ್ಧದ ಪಂದ್ಯಗಳು ಈಗಾಗಲೇ ಮುಕ್ತಾಯ ಗೊಂಡಿದೆ. ಮೊದಲ ಸುತ್ತಿನ 7 ಪಂದ್ಯಗಳಲ್ಲಿ ಅತ್ಯಧಿಕ ವಿಕೆಟ್ ಪಡೆದಿರುವುದು ಕನ್ನಡಿಗ ಎಂಬುದು ಕರ್ನಾಟಕದ ಕ್ರಿಕೆಟ್ ಪ್ರೇಮಿಗಳಿಗೆ ಖುಷಿಯ ವಿಚಾರ. ಗುಜರಾತ್ ಟೈಟಾನ್ಸ್ ಪರ ಕಣಕ್ಕಿಳಿಯುತ್ತಿರುವ ಕರ್ನಾಟಕ ವೇಗಿ ಪ್ರಸಿದ್ಧ್ ಕೃಷ್ಣ ಈ ಸಲದ ಐಪಿಎಲ್‌ನಲ್ಲಿ ಅತ್ಯದ್ಭುತ ಬೌಲಿಂಗ್ ಪ್ರದರ್ಶನ ಮುಂದುವರೆಸಿದ್ದಾರೆ. 7 ಪಂದ್ಯಗಳಲ್ಲಿ 27 ಓವರ್‌ಗಳನ್ನು ಎಸೆದಿರುವ ಪ್ರಸಿದ್ಧ್ ಕೃಷ್ಣ ಒಟ್ಟು 201 ರನ್ ನೀಡುವ ಮೂಲಕ 14 ವಿಕೆಟ್‌ಗಳನ್ನು ಕಬಳಿಸಿದ್ದು, ಪ್ರತಿ ಓವರ್‌ನಲ್ಲಿ ಕೇವಲ 7.44 ಎಕಾನಮಿಯಲ್ಲಿ ರನ್ ಬಿಟ್ಟು ಕೊಡುವ ಮೂಲಕ ಎಂಬುದು ವಿಶೇಷ. ಈ ಮೂಲಕ ಪರ್ಪಲ್ ಕ್ಯಾಪ್ ರೇಸ್‌ನಲ್ಲಿ ಪ್ರಸಿದ್ಧ್ ಕೃಷ್ಣ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ.

ಇತರೆ ಸುದ್ದಿ

ತಟಸ್ಥ ಸ್ಥಳಕ್ಕೆ ಪಾಕ್ ಬೇಡಿಕೆ

ಲಹೋರ್: ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳಲು ಪಾಕಿಸ್ತಾನ ತಂಡವು ಭಾರತಕ್ಕೆ ಪ್ರವಾಸ ಕೈಗೊಳ್ಳುವುದಿಲ್ಲ ಎಂದು ಪಾಕ್ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧ್ಯಕ್ಷ ಮೊಹಿನ್ ನಖ್ವಿ ತಿಳಿಸಿದ್ದಾರೆ. ಇದೇ ವರ್ಷ ಐಸಿಸಿ ಪುರುಷರ ಏಕದಿನ ಕ್ರಿಕೆಟ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯು ಪಾಕಿಸ್ತಾನದ ಅತಿಥ್ಯದಲ್ಲಿ ಆಯೋಜನೆಗೊಂಡಿತ್ತು. ರಾಜತಾಂತ್ರಿಕ ಬಿಕ್ಕಟ್ಟಿನ ಕಾರಣ, ಪಾಕ್‌ಗೆ ಪ್ರಯಾಣಿಸಲು ನಿರಾಕರಿಸಿದ್ದ ಭಾರತ ತಂಡ ತನ್ನ ಪಾಲಿನ ಪಂದ್ಯಗಳನ್ನು ಹೈಬ್ರಿಡ್ ಮಾದರಿಯಲ್ಲಿ ದುಬೈಯಲ್ಲಿ ಆಡಿತ್ತು. ಆ ಕುರಿತು ನಡೆದ ಮಾತುಕತೆ ಸಂದರ್ಭದಲ್ಲಿ, ಮುಂದೆ ಭಾರತದ ಆತಿಥ್ಯದಲ್ಲಿ ನಡೆಯುವ ಟೂರ್ನಿಗಳ ವೇಳೆ ತನ್ನ ಪಾಲಿನ ಪಂದ್ಯಗಳನ್ನು ತಟಸ್ಥ ಸ್ಥಳಗಳಲ್ಲಿ ಆಡುವುದಾಗಿ ಪಾಕಿಸ್ತಾನ ಪಟ್ಟುಹಿಡಿದಿತ್ತು, ಅದಕ್ಕೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸಮ್ಮತಿಸಿತ್ತು. ಮಾತುಕತೆಗೆ ಅನುಗುಣವಾಗಿ ಇದೀಗ ಪಾಕ್ ಮಹಿಳಾ ತಂಡ ತನ್ನ ಪಾಲಿನ ಪಂದ್ಯಗಳನ್ನು ಹೈಬ್ರಿಡ್ ಮಾದರಿಯಲ್ಲಿ ಆಡಲಿದೆ ಎಂದು ನಖ್ವಿ ಹೇಳಿದ್ದಾರೆ.

ಮಿಶ್ರಾ ವಿರುದ್ಧ ಪತ್ನಿಯ ಆರೋಪ

ಮುಂಬೈ: ಟೀಮ್ ಇಂಡಿಯಾದ ಮಾಜಿ ಕ್ರಿಕೆಟಿಗ ಅಮಿತ್ ಮಿಶ್ರಾ ಅವರ ವೈಯಕ್ತಿಕ ಬದುಕಿನಲ್ಲಿ ಬಿರುಕು ಸೃಷ್ಟಿಯಾಗಿದೆ. ಅವರ ಪತ್ನಿ ಗರಿಮಾ ಮಿಶ್ರಾ, ಅಮಿತ್ ಮಿಶ್ರಾ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದು, ಈ ಕುರಿತು ಪೊಲೀಸ್ ಆಯುಕ್ತರ ಬಳಿ ದೂರು ನೀಡಿರುವುದಾಗಿ ವರದಿಯಾಗಿದೆ. ಸದ್ಯಕ್ಕೆ ಲಭ್ಯವಾಗಿರುವ ಮಾಹಿತಿ ಪ್ರಕಾರ, ತನ್ನ ಪತಿ ಮತ್ತು ಅತ್ತೆ ಮಾವ ಹಣಕ್ಕಾಗಿ ಕಿರುಕುಳ ನೀಡುತ್ತಿದ್ದಾರೆ. ಪತಿ ಅಮಿತ್ ಮತ್ತು ಅವರ ಕುಟುಂಬದವರು ಹೋಂಡಾ ಸಿಟಿ ಕಾರು ಮತ್ತು 10 ಲಕ್ಷ ರೂಪಾಯಿಗಾಗಿ ಕಿರುಕುಳ ನೀಡುತ್ತಿದ್ದಾರೆ. ಇದಲ್ಲದೆ, ಅಮಿತ್ ಮಿಶ್ರಾ ಅನೇಕ ಮಹಿಳೆಯರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾರೆ ಎಂದು ಅವರು ಆರೋಪಿಸಿದ್ದಾರೆ ಎಂದು ವರದಿಯಾಗಿದೆ. ಅಮಿತ್ ಮಿಶ್ರಾ ಮತ್ತು ಗರಿಮಾ ಏಪ್ರಿಲ್ 26, 2021ರಂದು ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದರು. ಅಮಿತ್ ಪ್ರಸ್ತುತ ಕ್ರಿಕೆಟ್‌ನಿಂದ ದೂರವಿದ್ದು ಕಾನ್ಪುರದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಮಿತ್ ಮಿಶ್ರಾ 2003ರಲ್ಲಿ ಟೀಮ್ ಇಂಡಿಯಾ ಪರ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಆ ಬಳಿಕ 2008ರಲ್ಲಿ ಟೆಸ್ಟ್ ಮಾದರಿಗೆ ಪದಾರ್ಪಣೆ ಮಾಡಿದ ಅಮಿತ್, 2010ರಲ್ಲಿ ಟಿ20 ಮಾದರಿಯಲ್ಲಿ ಆಡುವ ಅವಕಾಶ ಸಿಕ್ಕಿತು.

ಮಿಂಚಿದ ದೇವದತ್ ಪಡಿಕ್ಕಲ್, ವಿರಾಟ್ ಕೊಹ್ಲಿ | ಅಂಕಪಟ್ಟಿಯಲ್ಲಿ ಬೆಂಗಳೂರಿಗೆ 3ನೇ ಸ್ಥಾನ

ಸೇಡು ತೀರಿಸಿದ ಆರ್‌ಸಿಬಿ

ಚಂಡೀಗಢ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತವರಿನಲ್ಲಿ ಮುಗ್ಗರಿಸುತ್ತಿದ್ದರೂ, ಎದುರಾಳಿ ಮೈದಾನದಲ್ಲಿ ಬೇಟೆಯಾಡುವುದನ್ನು ಮುಂದುವರಿಸಿದೆ. ಇಲ್ಲಿನ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಅತಿಥೇಯ ಪಂಜಾಬ್ ಕಿಂಗ್ಸ್ ನೀಡಿದ್ದ 158 ರನ್‌ಗಳ ಸಾಧಾರಣ ಗುರಿಯನ್ನು 7 ಎಸೆತಗಳು ಬಾಕಿ ಇರುವಂತೆ ಸುಲಭವಾಗಿ ಬೆಂಬತ್ತಿ ಗೆಲುವು ಸಾಧಿಸಿದೆ. ಇದು ಆರ್‌ಸಿಬಿಗೆ ಈ ಐಪಿಎಲ್ ಆವೃತ್ತಿಯಲ್ಲಿ ದೊರೆತ 5ನೇ ಗೆಲುವಾಗಿದ್ದು, ಈ ಜಯದೊಂದಿಗೆ ಬೆಂಗಳೂರು ತಂಡವು ಅಂಕಪಟ್ಟಿಯಲ್ಲಿ 3ನೇ ಸ್ಥಾನಕ್ಕೆ ಲಗ್ಗೆಯಿಟ್ಟಿದೆ.

ಕೊಹ್ಲಿ ದಾಖಲೆ

ಭಾನುವಾರ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಅರ್ಧ ಶತಕ ಸಿಡಿಸುವ ಮೂಲಕ ಐಪಿಎಲ್ ಇತಿಹಾಸದಲ್ಲೇ ಅತಿ ಹೆಚ್ಚು ಸಲ 50ಕ್ಕೂ ಹೆಚ್ಚು ರನ್ ಗಳಿಸಿದ (ಶತಕ ಸೇರಿದಂತೆ) ಬ್ಯಾಟರ್ ಎಂಬ ದಾಖಲೆಗೆ ಕೊಹ್ಲಿ ಭಾಜನರಾಗಿದ್ದಾರೆ. ಈ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ದಾಖಲೆಯನ್ನು ಭಾನುವಾರ ಬಿರುಸಿನ ಬ್ಯಾಟಿಂಗ್ ಮೂಲಕ ಕೊಹ್ಲಿ ಮುರಿದು, ಇದು ಅವರ 59ನೇ ಅರ್ಧಶತಕದ ಸಾಧನೆಯಾಗಿದ್ದು, ಒಟ್ಟು 67 ಸಲ 50ಕ್ಕೂ ಹೆಚ್ಚು ರನ್ ಗಳಿಸಿದ ದಾಖಲೆ ಬರೆದರು.

ಆರ್‌ಸಿಬಿ ತಂಡಕ್ಕೆ ಭಾನುವಾರ ಉತ್ತಮ ಆರಂಭ ಸಿಗಲಿಲ್ಲ. ಸ್ಫೋಟಕ ಆಟಗಾರ ಫಿಲ್ ಸಾಲ್ಟ್ ಕೇವಲ 1 ರನ್ ಗಳಿಸಿ ಔಟ್ ಆದರು. ಆದರೆ 2ನೇ ವಿಕೆಟ್‌ಗೆ ದೇವದತ್ ಪಡಿಕ್ಕಲ್ ಹಾಗೂ ಕೊಹ್ಲಿ 69 ಎಸೆತಗಳಲ್ಲಿ 103 ರನ್‌ಗಳ ಜತೆಯಾಟ ನೀಡಿದರು. ಕಳೆದ ಪಂದ್ಯದಲ್ಲಿ ತಂಡದಿಂದ ಹೊರಗಿದ್ದ ಪಡಿಕ್ಕಲ್ ಭಾನುವಾರ ಅಬ್ಬರದ ಬ್ಯಾಟಿಂಗ್ ನಡೆಸಿ ಕೇವಲ 35 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್‌ಗಳ ನೆರವಿನಿಂದ 61 ರನ್ ಗಳಿಸಿದರು. ನಂತರ ಬಂದ ನಾಯಕ ರಜತ್ ಪಾಟೀದಾರ್ ಕೊಹ್ಲಿ ಜೊತೆಗೆ 34 ರನ್ ಸೇರಿಸಿ 12 ಎಸೆತಗಳಲ್ಲಿ 12 ರನ್ ಗಳಿಸಿ ಔಟ್ ಆದರು.

ಕೊಹ್ಲಿ-ಜಿತೇಶ್ ಜತೆಯಾಟ: 3ನೇ ವಿಕೆಟ್ ಜೊತೆಯಾಟದಲ್ಲಿ ಕೊಹ್ಲಿ ಹಾಗೂ ಜಿತೇಶ್ ಶರ್ಮಾ ಉತ್ತಮ ಜತೆಯಾಟ ಪ್ರದರ್ಶಿಸದರು. ಜಿತೇಶ್ ಅಜೇಯ 11 ರನ್ ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ವಿರಾಟ್ ಕೊಹ್ಲಿ 54 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 73 ರನ್ ಗಳಿಸಿದರು, ಇದು ಕೊಹ್ಲಿಯ 4ನೇ ಅರ್ಧಶತಕವಾಗಿದೆ.

ಟಾಸ್ ಸೋತು ಮೊದಲು ಇನ್ನಿಂಗ್ಸ್ ಆರಂಭಿಸಿದ ಪ್ರಭ್‌ಸಿಮ್ರಾನ್ ಸಿಂಗ್ ಮತ್ತು ಪ್ರಿಯಾಂಶ್ ಆರ್ಯ ಪಂಜಾಬ್ ಕಿಂಗ್ಸ್‌ಗೆ ಬಿರುಸಿನ ಆರಂಭ ನೀಡಿದರಾದರೂ, ದೊಡ್ಡ ಮೊತ್ತದ ಜತೆಯಾಟ ನೀಡುವಲ್ಲಿ ವಿಫಲರಾದರು. ಐದನೇ ಓವರ್‌ನಲ್ಲಿ ಕೃನಾಲ್ ಪಾಂಡ್ಯ ಪ್ರಿಯಾಂಶ್ ಆರ್ಯ (22) ಅವರನ್ನು ಔಟ್ ಮಾಡುವ ಮೂಲಕ ಆರ್‌ಸಿಬಿಗೆ ಮೊದಲ ಯಶಸ್ಸನ್ನು ನೀಡಿದರು. ನಂತರ ಪಾಂಡ್ಯ ಆರನೇ ಓವರ್‌ನಲ್ಲಿ ಪ್ರಭ್‌ಸಿಮ್ರಾನ್ ಸಿಂಗ್ (33)



ಅವರನ್ನೂ ಔಟ್ ಮಾಡಿದರು. ಪಂಜಾಬ್ ಕಿಂಗ್ಸ್ ತಂಡವು 68 ರನ್ ಗಳಿಸಿದ್ದ ವೇಳೆ ನಾಯಕ ಶ್ರೇಯಸ್ ಅಯ್ಯರ್ ಕೇವಲ 6 ರನ್ ಗಳಿಸಿ ರೊಮಾರಿಯೋ ಶೆಫರ್ಡ್‌ಗೆ ಕ್ಯಾಚ್ ನೀಡಿ ಔಟ್ ಆದರು. ಇದಾದ ನಂತರ, ವಿರಾಟ್ ಕೊಹ್ಲಿ 9ನೇ ಓವರ್‌ನ ಕೊನೆಯ ಎಸೆತದಲ್ಲಿ ನೆಹಾಲ್ ವಧೇರಾ (5) ಅವರನ್ನು ರನೌಟ್ ಮಾಡಿದರು.

ಸುಯಾಶ್ ಮೊನಚಿನ ದಾಳಿ: ಪಂಜಾಬ್ ಕಿಂಗ್ಸ್ ತಂಡ 112 ರನ್‌ಗಳ ಸ್ಕೋರ್‌ನಲ್ಲಿದ್ದಾಗ, ಸುಯಾಶ್ ಶರ್ಮಾ ಒಂದೇ ಓವರ್‌ನಲ್ಲಿ ಡಬಲ್ ಶಾಕ್ ನೀಡಿದರು. 17 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 29 ರನ್ ಗಳಿಸಿದ್ದ ಜೋಸ್ ಇಂಗ್ಲಿಸ್ ವಿಕೆಟ್ ಪಡೆದರೆ, ಅದೇ ಓವರ್‌ನಲ್ಲಿ ಮಾರ್ಕಸ್ ಸ್ಟೋಯಿನಿಸ್ ವಿಕೆಟ್ ಪಡೆದು ಮಿಂಚಿದರು.

ನಂತರ 14ನೇ ಓವರ್‌ನಿಂದ 20ನೇ ಓವರ್ ವರೆಗೆ ಆರ್‌ಸಿಬಿ ಬೌಲರ್‌ಗಳು ಪಂಜಾಬ್ ಕಿಂಗ್ಸ್ ಬ್ಯಾಟರ್‌ಗಳನ್ನು ದೊಡ್ಡ ಹೊಡೆತ ಬಾರಿಸದಂತೆ ಕರಾರುವಾಕ್ ಬೌಲಿಂಗ್ ಮೂಲಕ ತಡೆದರು. ಶಶಾಂಕ್ ಸಿಂಗ್ ಹಾಗೂ ಮಾರ್ಕೊ ಜಾನ್ಸನ್ ಜೋಡಿ 37 ಎಸೆತಗಳಲ್ಲಿ ಕೇವಲ 43 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಆರ್‌ಸಿಬಿ ಕೊನೆಯ 7 ಓವರ್‌ಗಳಲ್ಲಿ ಕೇವಲ 2 ಸಿಕ್ಸರ್ ಮಾತ್ರ ಬಿಟ್ಟುಕೊಟ್ಟಿತು, ಅದರಲ್ಲೂ ಶಶಾಂಕ್ ಸಿಂಗ್ ಬ್ಯಾಟಿಂಗ್ ಮಾಡಲು ಪರದಾಡಿ 33 ಎಸೆತಗಳಲ್ಲಿ ಕೇವಲ ಒಂದೇ ಒಂದು ಬೌಂಡರಿ ಸಹಿತ 31 ರನ್ ಗಳಿಸಿದರು. ಜಾನ್ಸನ್ 20 ಎಸೆತಗಳಲ್ಲಿ 2 ಬೌಂಡರಿ ಸಹಿತ ಅಜೇಯ 25 ರನ್ ಗಳಿಸಿ ಪಂಜಾಬ್ ಮೊತ್ತವನ್ನು 150ರ ಗಡಿ ದಾಟುವಂತೆ ಮಾಡಿದರು. ಆರ್‌ಸಿಬಿ ಪರ ಕೃನಾಲ್ ಪಾಂಡ್ಯ, ಸುಯಾಸ್ ಶರ್ಮಾ ತಲಾ 2 ವಿಕೆಟ್ ಪಡೆದರೆ, ರೊಮಾರಿಯಾ ಶೆಫರ್ಡ್ 1 ವಿಕೆಟ್ ಪಡೆದರು.

ಮಿಂಚಿದ ಮುಂಬೈ ಬೌಲರ್‌ಗಳು | ಜಡೇಜಾ, ಶಿವಂ ದುಬೆ ಅರ್ಧ ಶತಕ

ಮುಂಬೈಗೆ 177 ರನ್ ಗುರಿ

ಮುಂಬೈ: ಇಲ್ಲಿ ಭಾನುವಾರ ನಡೆದ ಐಪಿಎಲ್ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ವಿರುದ್ಧ ಮೊದಲು ಬ್ಯಾಟ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿ, ಪಂದ್ಯ ಗೆಲ್ಲಲು ಮುಂಬೈಗೆ 177 ರನ್‌ಗಳ ಗುರಿ ನೀಡಿದೆ.

ಟಾಸ್ ಗೆದ್ದ ಮುಂಬೈ ತಂಡವು ಮೊದಲು ಚೆನ್ನೈ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು. ಆರಂಭಿಕ ಬ್ಯಾಟ್ಸ್‌ಮ್ಯಾನ್ ಶೇಕ್ ರಶೀದ್ ಹಾಗೂ ರಚಿನ್ ರವೀಂದ್ರ, ಸಿಎಸ್‌ಕೆ ತಂಡಕ್ಕೆ ಭದ್ರ ಬುನಾದಿ ಹಾಕುವಲ್ಲಿ ಸಫಲರಾಗಲಿಲ್ಲ. 9 ಬಾಲ್‌ಗಳಲ್ಲಿ ಕೇವಲ 5 ರನ್ ಗಳಿಸಿದ ರಚಿನ್ ರವೀಂದ್ರ, ಅಶ್ವನಿ ಕುಮಾರ್ ಬೌಲಿಂಗ್‌ನಲ್ಲಿ ತಂಡದ ಮೊತ್ತ 16 ಆಗಿದ್ದಾಗ ರಿಕೆಲ್ಟನ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು.

ಆಯುಶ್ ದಾಖಲೆ

ಭಾನುವಾರದ ಮುಂಬೈ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಕಳಪೆ ಫಾರ್ಮ್‌ನಲ್ಲಿರುವ ರಾಹುಲ್ ತ್ರಿಪಾಠಿಯ ಬದಲಿಗೆ ಆಯುಷ್ ಮ್ಹಾತ್ರೆಗೆ ಅವಕಾಶ ನೀಡಲಾಯಿತು. ಚೆನ್ನೈ ಸೂಪರ್ ಕಿಂಗ್ಸ್ ಪರ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಬ್ಯಾಟ್ಸ್‌ಮ್ಯಾನ್ ಎಂಬ ದಾಖಲೆಗೆ ಅವರು ಪಾತ್ರರಾದರು. ಆಯುಷ್ 17 ವರ್ಷ 278 ದಿನಗಳಲ್ಲಿ ಸಿಎಸ್‌ಕೆ ಪರ ಇದೀಗ ಪದಾರ್ಪಣೆ ಮಾಡಿದ್ದಾರೆ.

ಆ ಬಳಿಕ ಎರಡನೇ ವಿಕೆಟ್ ಜತೆಯಾಟ ರಚಿನ್-ಆಯುಷ್ ಮ್ಹಾತ್ರೆ ಮಧ್ಯೆ ನಡೆಯಿತು. ತನ್ನ ಚೊಚ್ಚಲ ಪಂದ್ಯವನ್ನಾಡಿದ ಆಯುಷ್ ಮ್ಹಾತ್ರೆ ಕೇವಲ 15 ಬಾಲ್‌ಗಳಲ್ಲಿ 30 ರನ್ ಬಾರಿಸಿ ಮಿಂಚಿದರು. ಅವರ ಇನ್ನಿಂಗ್ಸ್‌ನಲ್ಲಿ 4 ಬೌಂಡರಿ ಮತ್ತು 2 ಸಿಕ್ಸರ್ ಇತ್ತು. ಅವರು ಔಟ್ ಆದಾಗ ತಂಡದ ಮೊತ್ತ 57 ರನ್ ಆಗಿತ್ತು. ಆ ಬಳಿಕ ಚೆನ್ನೈ ಮೊತ್ತ 63 ರನ್ ಆಗಿದ್ದಾಗ 20 ಬಾಲ್‌ಗಳಲ್ಲಿ 19 ರನ್ ಗಳಿಸಿದ್ದ ಶೇಕ್ ರಶೀದ್ ಅವರು ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ರಿಕೆಲ್ಟನ್ ಸ್ಟಂಪ್ ಔಟ್ ಮಾಡಿದರು.

ರವೀಂದ್ರ ಜಡೇಜಾ ಮತ್ತು ಶಿವಂ ದುಬೆ ಅವರ ಜತೆಯಾಟ ಸಾಗಿತು. ದುಬೆ 32 ಬಾಲ್‌ಗಳಲ್ಲಿ 50 ರನ್ ಗಳಿಸಿ ಬುಮ್ರಾ ಬೌಲಿಂಗ್‌ನಲ್ಲಿ ವಿಲ್ ಜಾಕ್ಸನ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 2 ಬೌಂಡರಿ ಮತ್ತು 4 ಸಿಕ್ಸರ್‌ಗಳಿದ್ದವು. ದುಬೆ ಔಟಾದಾಗ ಚೆನ್ನೈ ಸ್ಕೋರ್ 142 ರನ್ ಆಗಿತ್ತು.

ಆ ಬಳಿಕ ಎಂಎಸ್ ಧೋನಿ ಮತ್ತು ಜ್ಯಾಮಿ ಓವರ್‌ಟನ್ ನಡುವಿನ ಜತೆಯಾಟ ಸ್ವಲ್ಪ ಹೊತ್ತು ಮುಂದುವರಿಯಿತು. ಕಳೆದ ಪಂದ್ಯದಲ್ಲಿ ಚೆನ್ನೈಯನ್ನು ಗೆಲುವಿನ ಹಳಿಗೆ ತಂದಿದ್ದ ತಂಡದ ನಾಯಕ ಎಂಎಸ್ ಧೋನಿ ಈ ಸಲ ಬ್ಯಾಟಿಂಗ್ ವೈಫಲ್ಯ ಕಂಡರು. 6 ಬಾಲ್‌ಗಳನ್ನು ಎದುರಿಸಿದ ಧೋನಿ ಕೇವಲ ನಾಲ್ಕು ರನ್ ಗಳಿಸಿ ಬುಮ್ರಾ ಬೌಲಿಂಗ್‌ನಲ್ಲಿ ತಿಲಕ್ ವರ್ಮಾಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ತೆರಳಿದರು. ಜ್ಯಾಮಿ ಓವರ್‌ಟನ್ 3 ಬಾಲ್‌ಗಳಲ್ಲಿ 4 ರನ್ ಗಳಿಸಿ ಅಜೇಯರಾಗಿ ಉಳಿದರು.

ಕೋಲ್ಕತ್ತಾ

- ರಹಾನೆ ▸▸ ನಾಯಕ
- ಕ್ವಿಂಟನ್ ಡಿ ಕಾಕ್
- ವೆಂಕಟೇಶ್ ಅಯ್ಯರ್
- ರಿಂಕು ಸಿಂಗ್
- ಎ. ರಘುವಂಶಿ
- ಸುನಿಲ್ ನರೈನ್
- ಆಂಡ್ರೆ ರಸೆಲ್
- ರಮನ್‌ದೀಪ್
- ಸ್ಪೆನ್ಸರ್ ಜಾನ್ಸನ್
- ಹರ್ಷಿತ್ ರಾಣಾ
- ವರುಣ್ ಚಕ್ರವರ್ತಿ
- ಆರ್. ಪೊವೆಲ್
- ಎಲ್. ಸಿಸೋಡಿಯಾ
- ಮನೀಶ್ ಪಾಂಡೆ

ಗುಜರಾತ್

- ಶುಭ್‌ಮನ್ ▸▸ ನಾಯಕ
- ಸಾಯಿ ಸುದರ್ಶನ್
- ಜೋಸ್ ಬಟ್ಲರ್
- ಶಾರುಖ್ ಖಾನ್
- ರಾಹುಲ್ ತೆವಾಟಿಯಾ
- ಅರ್ಷದ್ ಖಾನ್
- ರಶೀದ್ ಖಾನ್
- ಸಾಯಿ ಕಿಶೋರ್
- ಮೊಹಮ್ಮದ್ ಸಿರಾಜ್
- ಪ್ರಸಿದ್ಧ್ ಕೃಷ್ಣ
- ಇಶಾಂತ್ ಶರ್ಮಾ
- ಕುಮಾರ್ ಕುಶಾಗ್ರ
- ವಾಷಿಂಗ್ಟನ್ ಸುಂದರ್
- ಜಯಂತ್ ಯಾದವ್

ಗಿಲ್ ಪಡೆಗೆ ನಾಗಾಲೋಟ ಮುಂದುವರಿಸುವಾಸೆ | ರಹಾನೆ ತಂಡಕ್ಕೆ ತವರಲ್ಲಿ ಗೆಲ್ಲುವಾಸೆ

ಕೋಲ್ಕತ್ತಾಗೆ ತವರಲ್ಲಿಂದು ಗುಜರಾತ್ ಸವಾಲು

ಕೋಲ್ಕತ್ತಾ: ಐಪಿಎಲ್ ಕ್ರಿಕೆಟ್ ಟೂರ್ನಿಯ ಸೋಮವಾರದ ಪಂದ್ಯದಲ್ಲಿ ಅತಿಥೇಯ ಕೋಲ್ಕತ್ತಾ ತಂಡವು ಇಲ್ಲಿನ ಈಡೆನ್ ಗಾರ್ಡನ್ಸ್ ಮೈದಾನದಲ್ಲಿ ಗುಜರಾತ್ ತಂಡವನ್ನು ಎದುರಿಸಲಿದೆ. ಕೋಲ್ಕತ್ತಾ ತಂಡಕ್ಕೆ ಹೋಲಿಸಿದರೆ, ಈ ಬಾರಿ ಗುಜರಾತ್ ತಂಡವು ಐಪಿಎಲ್‌ನಲ್ಲಿ ಅತ್ಯುತ್ತಮ ನಿರ್ವಹಣೆಯನ್ನು ತೋರಿ ಕ್ರಿಕೆಟ್ ಪ್ರೇಮಿಗಳ ಹುಬ್ಬೇರಿಸಿದೆ. ಹಾಗಾಗಿ ಕೋಲ್ಕತ್ತಾ ತಂಡವು ಉತ್ತಮ ನಿರ್ವಹಣೆ ತೋರಿದರೆ ಗುಜರಾತ್‌ಗೆ ಪ್ರಬಲ ಪೈಪೋಟಿ ನೀಡಲು ಸಾಧ್ಯ.

ಮಾರ್ಚ್ 22ರಂದು ನಡೆದ ಈ ಸಲದ ಐಪಿಎಲ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ತಂಡವು ಅತಿಥೇಯ ಕೋಲ್ಕತ್ತಾ ತಂಡವನ್ನು 7 ವಿಕೆಟ್‌ಗಳಿಂದ ಸೋಲಿಸಿತ್ತು. ಆದರೆ ತನ್ನ ಎರಡನೇ ಪಂದ್ಯದಲ್ಲಿ ಕೆಕೆಆರ್ ತಂಡವು ರಾಜಸ್ಥಾನ ತಂಡ ನೀಡಿದ್ದ 151 ರನ್‌ಗಳ ಗುರಿಯನ್ನು ಕೇವಲ 2 ವಿಕೆಟ್ ಕಳೆದುಕೊಂಡು ಭರ್ಜರಿಯಾಗಿ ಗೆದ್ದಿತ್ತು.

ಮಾಚ್ 31ರಂದು ನಡೆದ ಪಂದ್ಯದಲ್ಲಿ ಮತ್ತೆ ಕೋಲ್ಕತ್ತಾ ತಂಡವು ಮುಂಬೈ ಎದುರು ಮುಗ್ಗರಿಸಿತ್ತು. ಆದರೆ ಏಪ್ರಿಲ್ 3ರಂದು ಹೈದರಾಬಾದ್ ವಿರುದ್ಧದ ಪಂದ್ಯ ದಲ್ಲಿ ಮತ್ತೆ ಕೋಲ್ಕತ್ತಾ ತಂಡವು 80 ರನ್‌ಗಳ ಭಾರೀ ಅಂತರ ದಿಂದ ಗೆಲುವು ಸಾಧಿಸಿ ಪುಟಿದೆದ್ದಿತ್ತು. ಏಪ್ರಿಲ್-8ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಲಖನೌ 239 ರನ್‌ಗಳ ಗುರಿಯನ್ನು ಕೋಲ್ಕತ್ತಾಕ್ಕೆ ನೀಡಿದರಾದರೂ, ಕೆಕೆಆರ್ 234 ರನ್ ಗಳಿಸಿ ಲಖನೌ ವಿರುದ್ಧ 4 ರನ್‌ಗಳ ಅಂತರದಿಂದ ಸೋತಿತ್ತು.

ಏಪ್ರಿಲ್-11ರಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಚೆನ್ನೈ 103 ರನ್ ಗಳಿಸಿತ್ತು, ಆದರೆ ಆ ಬಳಿಕ ಕೋಲ್ಕತ್ತಾ ತಂಡವು ಕೇವಲ 2 ವಿಕೆಟ್‌ಗಳನ್ನು ಕಳೆದುಕೊಂಡು, 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು. ಏಪ್ರಿಲ್ 15ರಂದು ನಡೆದಿದ್ದ ಪಂದ್ಯದಲ್ಲಿ ಪಂಜಾಬ್ ತಂಡವು ಕೋಲ್ಕತ್ತಾವನ್ನು 16 ರನ್‌ಗಳಿಂದ ಮಣಿಸಿ ತನ್ನ ಪ್ರಾಬಲ್ಯ ಮೆರೆದಿತ್ತು.

ಗಿಲ್‌ಗೆ 12 ಲಕ್ಷ ದಂಡ

ಅಹಮದಾಬಾದ್: ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಓವರ್ ರೇಟ್ ಕಾಯ್ದುಕೊಳ್ಳಲು ವಿಫಲರಾದ ಕಾರಣಕ್ಕೆ ಗುಜರಾತ್ ಟೈಟಾನ್ಸ್ ತಂಡದ ನಾಯಕ ಶುಭ್‌ಮನ್ ಗಿಲ್‌ಗೆ 12 ಲಕ್ಷ ರು.ದಂಡ ವಿಧಿಸಲಾಗಿದೆ.

ಇದರೊಂದಿಗೆ ಗಿಲ್ ಈ ಬಾರಿಯ ಐಪಿಎಲ್‌ನಲ್ಲಿ ದಂಡದ ಶಿಕ್ಷೆಗೆ ಗುರಿಯಾದ 7ನೇ ನಾಯಕ ಎನಿಸಿಕೊಂಡಿದ್ದಾರೆ. ಅವರು ಎರಡನೇ ಬಾರಿಗೆ ಈ ತಪ್ಪು ಮರುಕಳಿಸಿದರೆ, 24 ಲಕ್ಷ ರು. ದಂಡಕ್ಕೆ ಗುರಿಯಾಗಲಿದ್ದಾರೆ. ಜತೆಗೆ ತಂಡದ ಇನ್ನುಳಿದ ಆಟಗಾರರಿಗೆ ತಲಾ 6 ಲಕ್ಷ ರು. ಅಥವಾ ಪಂದ್ಯ ಶುಲ್ಕದ ಶೇ. 25ರಷ್ಟು ದಂಡವನ್ನು ವಿಧಿಸಲಾಗುತ್ತದೆ. ಈ ಆವೃತ್ತಿಯಲ್ಲಿ ಸಂಜು ಸ್ಯಾಮ್ಸನ್ 24 ಲಕ್ಷ ರು. ದಂಡಕ್ಕೆ ಗುರಿಯಾಗಿದ್ದರು. ಮೂರನೇ ಬಾರಿಗೆ ತಪ್ಪನ್ನು ಮಾಡಿದರೆ ನಾಯಕರಿಗೆ ದಂಡ ವಿಧಿಸಿ, 1 ಡಿಮೆರಿಟ್ ಅಂಕ ನೀಡಲಾಗುತ್ತದೆ. ಡಿಮೆರಿಟ್ ಅಂಕದ ಅವಧಿ 3 ವರ್ಷ ಇರಲಿದ್ದು, ಈ ಅವಧಿಯಲ್ಲಿ 4 ಡಿಮೆರಿಟ್ ಅಂಕ ಪಡೆದರೆ ನಾಯಕನಿಗೆ ಪಂದ್ಯದ ಸಂಭಾವನೆಯ ಶೇ.100ರಷ್ಟು ದಂಡ ವಿಧಿಸಲಾಗುತ್ತದೆ.

ಈ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಗಿಲ್ ನಾಯಕತ್ವದ ಗುಜರಾತ್ ತಂಡವು ಈ ಆವೃತ್ತಿಯ ಮೊದಲ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಮಾರ್ಚ್ 25ರಂದು ನಡೆದಿದ್ದ ಪಂದ್ಯದಲ್ಲಿ 11 ರನ್‌ಗಳಿಂದ ಸೋತಿತ್ತು. ಆದರೆ ಆ ನಂತರ ಮೈಗೊಡವಿ ನಿಂತು, ಮಾರ್ಚ್ 29ರಂದು ನಡೆದ ಪಂದ್ಯದಲ್ಲಿ ಮುಂಬೈ ವಿರುದ್ಧ 36 ರನ್‌ಗಳ ಜಯ ಸಾಧಿಸಿ ತನ್ನ ಪ್ರಾಬಲ್ಯ ಮೆರೆಯಲಾರಂಭಿಸಿತು.

ಏಪ್ರಿಲ್ 2ರಂದು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ 170 ರನ್‌ಗಳ ಗುರಿ ನೀಡಿದ್ದ ಆರ್‌ಸಿಬಿಯನ್ನು 8 ವಿಕೆಟ್‌ಗಳ ಅಂತರದಲ್ಲಿ ಗುಜರಾತ್ ಸೋಲಿಸಿತ್ತು. ಏಪ್ರಿಲ್-6ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡ ಗುಜರಾತ್‌ಗೆ 153 ರನ್‌ಗಳ ಗುರಿ ನೀಡಿದ್ದನ್ನು ಬೆಂಬತ್ತಿ, 7 ವಿಕೆಟ್‌ಗಳ ಜಯ ದಾಖಲಿಸಿತು. ಏಪ್ರಿಲ್-9ರಂದು ಆಯೋಜಿಸಿದ್ದ ಪಂದ್ಯದಲ್ಲಿ ಗುಜರಾತ್ ತಂಡವು ರಾಜಸ್ಥಾನ ವಿರುದ್ಧ 58 ರನ್‌ಗಳ ಭಾರೀ ಅಂತರದ ಗೆಲುವನ್ನೂ ಪಡೆದಿತ್ತು.

ಏಪ್ರಿಲ್ 12ರಂದು ನಡೆದ ಪಂದ್ಯದಲ್ಲಿ ಗುಜರಾತ್ ತಂಡವು 180 ರನ್ ಗಳಿಸಿದ್ದರೂ, ಲಖನೌ ತಂಡವು ಅದನ್ನು 6 ವಿಕೆಟ್‌ಗಳ ಅಂತರದಲ್ಲಿ ಸೋಲಿಸಿತ್ತು. ಏಪ್ರಿಲ್ 19ರಂದು ನಡೆದಿದ್ದ ಪಂದ್ಯದಲ್ಲಿ ಡೆಲ್ಲಿ ತಂಡವು ನಿಡಿದ್ದ 204 ರನ್‌ಗಳ ಗುರಿಯನ್ನು 19.2 ಓವರ್‌ಗಳಲ್ಲಿ ತಲುಪಿ 7 ವಿಕೆಟ್‌ಗಳ ಭರ್ಜರಿ ಗೆಲುವನ್ನು ಪಡೆದಿತ್ತು.

ಇದೀಗ ಗುಜರಾತ್ ತಂಡ ಒಟ್ಟು 7 ಪಂದ್ಯಗಳನ್ನು ಆಡಿದ್ದು 5ರಲ್ಲಿ ಗೆಲುವು ಸಾಧಿಸಿ 10 ಅಂಕಗಳನ್ನು ಪಡೆದಿದೆ. ಹಾಗಾಗಿ ಸದ್ಯಕ್ಕೆ ಬಲಿಷ್ಠ ತಂಡ ಎಂದೆನಿಸಿರುವ ಗಿಲ್ ಪಡೆಯನ್ನು ಕೋಲ್ಕತ್ತಾ ತನ್ನ ತವರಲ್ಲಿ ಹೇಗೆ ಎದುರಿಸುತ್ತದೆ ಎಂದು ಕಾದು ನೋಡಬೇಕಾಗಿದೆ.